ಹಾಗೂ ಇತರೆ ಯಾವುದಾದರೂ ಒಳಬರುವ ವಸ್ತುಗಳು'' ಎಂಬ ಪದಗಳನ್ನು ಪರಿಭಾಷಿಸಿ, ದಿನಾಂಕ ೧೯–೬–೧೯೮೫ ರಂದು ಹೊರಡಿಸಲಾದ F D ೮೩, C E T F ೪ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು).—ಅಧ್ಯಕ್ಷರೇ, ೧೯೪೮ನೇ ಇಸವಿಯ ವಿದ್ಯುತ್ ಸರಬರಾಜು ಕಾಯ್ದೆಯ ೭೫ನೇ ಕಲಮಿನ ಮೇರೆಗೆ—

೧೯೮೪–೮೫ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ಮಂಡಲಿಯ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ರಮೇಶ್ ಚಂದ್ರಪ್ಪ ಜಿಗಜಿಣಗಿ(ಅಬಕಾರಿ ರಾಜ್ಯ ಮಂತ್ರಿಗಳು).—ಅಧ್ಯಕ್ಷರೇ, ೧೯೬೫ನೇ ಇಸವಿಯ ಕರ್ನಾಟಕ ಅಬಕಾರಿ ಕಾಯ್ದೆಯ ೭೧ (೩) ಹಾಗೂ (೪)ನೇ ಕಲಮುಗಳ ಮೇರೆಗೆ—

೧೯೮೫ನೇ ಇಸವಿಯ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ, ದಿನಾಂಕ ೧೯–೮–೧೯೮೫ರಂದು ಹೊರಡಿಸಲಾದ ಎಫ್ ಡಿ ೧೪೨ ಇಡಿಸಿ ೮೪ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು. ಈಗ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ.

ವಿತ್ತೀಯ ಕಾರ್ಯಕಲಾಪಗಳು

೧೯೮೫–೮೬ನೇ ಸಾಲಿಗೆ ಸಂಬಂಧಪಟ್ಟ ಮುಖ್ಯಮಂತ್ರಿಗಳ ಬೇಡಿಕೆ ಕ್ರ. ಸಂ. ೧೫, ೧೬, ೧೭, ೧೮, ೨೦, ೩೮, ೩೯, ೪೦, ೪೧, ಮತ್ತು ೪೨ ಮೇಲಿನ ಚರ್ಚೆಗೆ ಉತ್ತರ.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಖಾತೆಗಳ ಬೇಡಿಕೆಗಳ ಮೇಲೆ ಈ ಸಲ ಸಾಕಷ್ಟು ಚರ್ಚೆಯಾಗಿಲ್ಲವೆಂದು ಹೇಳಬೇಕು. ಎದುರುಗಡೆ ಕುಳಿತಿರತಕ್ಕ ಅನೇಕ ಮಾನ್ಯ ಹಿರಿಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ಮನಸ್ಸನ್ನು ತಿಳಿದುಕೊಂಡು ತಾವು ಉತ್ತರವನ್ನು ಕೊಡುತ್ತೀರಿ ಎನ್ನುವ ಖಾತ್ರಿ ನಮಗೆ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಆ ಕಷ್ಟ ನನಗೆ ಗೊತ್ತಿದೆ. ಅವಕಾಶ ಸಿಕ್ಕಿದ್ದರೆ ಅವರ ವಿಚಾರಗಳನ್ನು ತಿಳಿದುಕೊಳ್ಳತಕ್ಕ ಮತ್ತು ಅವುಗಳ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕ ಅವಕಾಶ ನನಗೆ ಸಿಗುತ್ತಾ ಇತ್ತು. ಆ ಅವಕಾಶ ಈ ಸಲ ತಪ್ಪಿಹೋಯಿತೆಂದು ನಾನು ಭಾವಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ನಷ್ಟವನ್ನು ತುಂಬಿಕೊಡುವುದರಲ್ಲಿ ಬಹಳ ಯಶಸ್ವಿಯಾಗುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸರಳವಾಗಿ ಹೋಗತಕ್ಕದ್ದಕ್ಕೆ ಏನಾದರೂ ಅಡ್ಡಿ ಇಡುತ್ತೀರಿ.

ಅಧ್ಯಕ್ಷರು.—ಕಾಂಟ್ರವರ್ಸಿ ಮಾಡುವುದು ಬೇಡ ಎಂದು ಹೇಳುತ್ತೀರಾ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅವರು ಬ್ರಾಡ್‌ಗೇಜ್ ಮೇಲೇ ಹೋಗಲಿ ಎಂಬುದು ನಮ್ಮೆಲ್ಲರ ಇಚ್ಛೆ.

ಶ್ರೀ ಎಸ್. ಬಂಗಾರಪ್ಪ.—ಅದು ಬ್ರಾಡ್‌ಗೇಜ್‌ಗೆ ಕನ್‌ವರ್ಷನ್ ಆಗಬೇಕು. ಹಾಗೆ ಆಗಲು ಅದು ತನ್ನದೇ ಆದ ವೇಳೆಯನ್ನು ತೆಗೆದುಕೊಳ್ಳುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ದೀರ್ಘವಾಗಿ ಮಾತನಾಡಿದರು. ಸುಮಾರು ಎರಡೂವರೆ ಗಂಟೆಗಳ ಕಾಲ ಮಾತನಾಡಿದರು. ನಾನು ಸ್ವಲ್ಪ ಖೇದದಿಂದಲೇ ಹೇಳುತ್ತೇನೆ, ಅವರ ಭಾಷಣದಲ್ಲಿ ಯಾವುದಾದರೂ ಒಂದು ಹೊಸ ಮತ್ತು ರಾಜ್ಯದ ಅಭಿವೃದ್ಧಿಗೆ, ಆರ್ಥಿಕ ಪರಿಸ್ಥಿತಿಗೆ ಸಂಬಂಧಪಟ್ಟಂತಹ ಅಥವಾ ಕನಿಷ್ಟ ಪಕ್ಷ ಈ ಬೇಡಿಕೆಗಳಿಗೆ ಸಂಬಂಧಪಟ್ಟಂತಹ ನಾಲ್ಕು ವಿಚಾರಗಳು ಬರಬಹುದೆಂದು ನಿರೀಕ್ಷೆ ಮಾಡಿದ ನಾನು ನಿರಾಸೆಯನ್ನು ಅನುಭವಿಸಬೇಕಾಯಿತು. ಅವರ ಭಾಷಣದ ಗಜಗರ್ಭದಿಂದ ಮೂರು ಸಣ್ಣ ಇಲಿಗಳು ಹೊರಟವು. ಅವರ ಭಾಷಣವಾದ ಮರುದಿವಸ ಎಲ್ಲಾ ವೃತ್ತಪತ್ರಿಕೆಗಳಲ್ಲಿ ದಪ್ಪ ದಪ್ಪ ಅಕ್ಷರಗಳ ಶಿರ್ಷಿಕೆಗಳು ಪ್ರಕಟವಾದವು. ಕೇವಲ ಬೆಂಗಳೂರಿನ ಪತ್ರಿಕೆಗಳಲ್ಲಿ ಅಷ್ಟೇ ಅಲ್ಲ, ನಮ್ಮ ದೇಶದ ಇನ್ನೂ ಬೇರೆ ಬೇರೆ ಕೇಂದ್ರಗಳಿಂದ ಪ್ರಕಟವಾಗುವ ಪತ್ರಿಕೆಗಳಲ್ಲೂ ಸಹಾ ಅದು ಪ್ರಕಟವಾಯಿತು. ಈ ಶೀರ್ಷಿಕೆಗಳ ಒಂದೆರಡು ಉದಾಹರಣೆಗಳನ್ನು ನಾನು ಇಲ್ಲಿ ಕೊಡುತ್ತೇನೆ. "Government accused of Nepotism" "Government accused of Corruption", "Government accused of Favouritism". ಈ ಸುದ್ಧಿ ಅಥವಾ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗಿ ಅನೇಕ ದಿನಗಳು ಕಳೆದುಹೋದವು.

ಇದರಿಂದ ಮಾನ್ಯ ವಿರೋಧಪಕ್ಷದ ನಾಯಕರ ಉದ್ದೇಶ, ಈ ಸರ್ಕಾರದ ಅಥವಾ ಸರ್ಕಾರವನ್ನು ನಡೆಸತಕ್ಕ ಮಂತ್ರಿಗಳ ಚಾರಿತ್ರ್ಯ ವಧೆ ಮಾಡಬೇಕೆಂದು ಇದೆಯೆಂದು ನಾನು ತಿಳಿದುಕೊಂಡರೆ ಅದು ತಪ್ಪು ಎಂದು ನಾನು ಭಾವಿಸುತ್ತೇನೆ. ಆದರೆ ಆ ಉದ್ದೇಶ ಅವರದ್ದು ಇಲ್ಲದೆ ಇದ್ದರೂ ತುಸು ಮಟ್ಟಿಗಾದರೂ ಆ ಉದ್ದೇಶ ಕೈಗೂಡಿದೆ. ಏಕೆಂದರೆ, ಇಲ್ಲಿಯವರೆಗೆ ಅವರು ಮಾಡಿದ ಆಪಾದನೆಗಳಲ್ಲಿ ಎಷ್ಟು ಸತ್ಯ ಇದೆ ಎನ್ನುವುದು ಇನ್ನೂ ಜನರಿಗೆ ಗೊತ್ತಿಲ್ಲ. ಜನರ ಮನಸ್ಸಿನಲ್ಲಿ ವಿರೋಧ ಪಕ್ಷದ ನಾಯಕರು ಈ ರೀತಿ ಹೇಳಿದ್ದಾರೆ, ಆಪಾದನೆ ಮಾಡಿದ್ದಾರೆ, ಇದರಲ್ಲಿ ಸ್ವಲ್ಪ ಮಟ್ಟಿಗಾದರೂ ಸತ್ಯ ಇರಬಹುದು ಎಂದು ಹೇಳತಕ್ಕ ಸಂದೇಹ ಉಂಟಾದರೆ ಅದು ಅಸ್ವಾಭಾವಿಕ ಅಲ್ಲ. ನನ್ನ ಮೊದಲ ಕರ್ತವ್ಯ ಆ ಸಂದೇಹವನ್ನು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ನಿವಾರಿಸುವುದು. ಮೊದಲನೆಯ ಆಪಾದನೆ ನನ್ನ ಒಬ್ಬ ಸಂಬಂಧೀಕ ಅಧಿಕಾರಿಗೆ ಹೈಕೋರ್ಟಿನ ಆಜ್ಞೆಗೆ ವಿರುದ್ಧವಾಗಿ ಔಟ್ ಆಫ್ ಟರ್ನ್ಸ್ ಭಡ್ತಿಯನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದುದು......

ಶ್ರೀ ಎಸ್. ಬಂಗಾರಪ್ಪ.—ಕೊಡುತ್ತೀರಿ ಎಂದು ಹೇಳಿದ್ದುದು ಕೊಟ್ಟಿದ್ದೀರಿ ಎಂದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಅವರ ಭಾಷಣದ ಪೂರ್ತಿ ಪ್ರತಿ ನನ್ನ ಹತ್ತಿರ ಇದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಸ್ಪಷ್ಟಪಡಿಸುತ್ತೇನೆ. ಅವರಿಗೆ ಭಡ್ತಿಯನ್ನು......

ಅಧ್ಯಕ್ಷರು.—ನಿಮಗೆ ಕೊನೆಯಲ್ಲಿ ಅವಕಾಶ ಕೊಡುತ್ತೇನೆ. ತಾವು ಕುಳಿತುಕೊಳ್ಳಿ. ಈಗ ಮಧ್ಯೆ ಮಾತನಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ರಾಂಗ್ ಅಸಂಷನ್ ಇಲ್ಲಿ ಬೇಕಾಗಿಲ್ಲ. ಕೊಡುತ್ತೀರಿ ಎನ್ನುವ ಉದ್ದೇಶದಿಂದ ನೀವು ಪ್ರಮೋಷನ್ ಕೊಡದೇ ಹಾಗೇ ಇಟ್ಟಿದ್ದೀರಿ ಎಂದು ನನ್ನ ಸ್ಪಷ್ಟವಾದ ಆಪಾದನೆ. ಹಾಗೇನಾದರೂ ತಪ್ಪು ವರದಿಯಾಗಿದ್ದರೆ ಅದನ್ನು ಕರೆಕ್ಷನ್ ಮಾಡಬೇಕಾಗುತ್ತದೆ. ಅಷ್ಟೇ ನನ್ನ ಪಾಯಿಂಟ್.

ಅಧ್ಯಕ್ಷರು.—ತಾವು ಭಾಷಣ ಮಾಡುವಾಗ ಅವರು ಸುಮ್ಮನೆ ಇದ್ದರು. ನೀವು ಕೊನೆಯಲ್ಲಿ ಕ್ಲಾರಿಫಿಕೇಷನ್ಸ್ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾತನಾಡುವ ಸಂದರ್ಭದಲ್ಲಿ ಏನಾದರೂ ಕರೆಕ್ಷನ್ಸ್ ಇದ್ದರೆ ಅದನ್ನು ಹೇಳತಕ್ಕದ್ದು ಇದೆ. ನೀವು ಮಾಡಿದ್ದೀರಿ ಎಂದು ನಾನು ಹೇಳಲಿಲ್ಲ. ನಮ್ಮ ಭಾಷಣದ ಪ್ರತಿ ಆಮೇಲೆ ಕರೆಕ್ಷನ್ಸ್‌ಗೆ ನಮಗೆ ಬರುತ್ತದೆ. ಆಗ ಕರೆಕ್ಷನ್ಸ್ ಮಾಡುತ್ತೇವೆ. ನಾನು ಹೇಳಿದ್ದು ಇಷ್ಟೇ, ನೀವು ಪ್ರಮೋಷನ್ ಕೊಡದೆ, ಹಾಗೆ ಇಟ್ಟುಕೊಂಡಿದ್ದೀರಿ Inspite of High Court judgement ಎಂದು ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಕರೆಕ್ಷನ್ಸ್ ಮಾಡುವಷ್ಟು ಹೊತ್ತಿಗೆ ಅದು ಏನೇನೋ ಆಗಿರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ಅವರು,......

ಅಧ್ಯಕ್ಷರು.—ನೀವು ಆಮೇಲೆ ಮಾತನಾಡಿ. ಈಗ ಕುಳಿತುಕೊಳ್ಳಿ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧ ಪಕ್ಷದ ನಾಯಕರು, ಸತ್ಯಕ್ಕೆ ಅತ್ಯಂತ ದೂರವಾದ ಮಾತುಗಳನ್ನು ಒಂದರ ಮೇಲೆ ಒಂದು ಹೇಳುತ್ತಾ ಬಂದರು. ಆಗ ನಾನು ಸುಮ್ಮನೆ ಕುಳಿತಿದ್ದೆ, ನನ್ನ ಪಾಳಿ ಬಂದಾಗ ಅದಕ್ಕೆ ಉತ್ತರ ಕೊಡೋಣ ಎಂದು. ಈಗಲೂ ಕೂಡಾ ಅಷ್ಟೆ ಕನಿಷ್ಟ ಪಕ್ಷದ ಸೌಜನ್ಯವನ್ನು ಅವರು ತೋರಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಕೊರತೆ ಇಲ್ಲ, ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಒನ್ ವೇ ಟ್ರಾಫಿಕ್ ಆಗಬಾರದು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಮಾನ್ಯ......

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನೀವು ಕಲ್ಲು ದೇವರು ಕುಳಿತ ಹಾಗೆ ಕೂಡಿ.

ಶ್ರೀ ಎಸ್. ಬಂಗಾರಪ್ಪ.—ದೇವರನ್ನು ಕಲ್ಲು ಮಾಡುವವರು ನೀವು.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ನಮ್ಮ ಪೂರ್ವಜರು ಒಂದು ಮಾತನ್ನು ಹೇಳಿದ್ದಾರೆ.

"ಅತಿಕರತರ ಅಗಟರೇ ಪೋಯಿ
ಜನಪ್ರಕಟ ಚಂದನಸೇ ಹೋಯಿ
ಅತಿ ರಗಡ ಕಡೇ ಜೋ ಪೋಯಿ"

ಈ ಚಂದನ ಬಹಳ ತಂಪು.

ಶ್ರೀ ಎಸ್. ಬಂಗಾರಪ್ಪ.—ಯಾವ ಭಾಷೆ ಸ್ವಾಮಿ ಅದು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ತಾವು ತುಟಿ ಪಿಟಿಕ್ ಎನ್ನದೇ ಕೂಡಿ.

ಶ್ರೀ ರಾಮಕೃಷ್ಣ ಹೆಗಡೆ.—ಚಂದನ ತಂಪು. ಗಾಯವಾದರೆ ಅದಕ್ಕೆ ಚಂದನವನ್ನು ತೇದು ಹಚ್ಚುತ್ತಾರೆ. ಚಂದನವನ್ನೂ ಕೂಡಾ ಬಹಳ ಜೋರಾಗಿ ರಗಳೆಗರೆದರೆ ಘರ್ಷಣೆ ಮಾಡಿದರೆ ಅದರಿಂದ ಬೆಂಕಿ ಬಂದು ಅದು ಪರಿಪೂರ್ಣವಾಗುತ್ತದೆ. ಆದುದರಿಂದ ಚಂದನವನ್ನು ಅತಿಯಾಗಿ ಘರ್ಷಣೆ ಮಾಡುವುದಕ್ಕೆ ಹೋಗಬೇಡಿ, ಆದರಿಂದ ಬೆಂಕಿ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಚಂದನದಿಂದ ಬೆಂಕಿ ಬರುವುದನ್ನು ನಾನು ಕೇಳೇ ಇರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಈ ವಿಚಾರ ಗೊತ್ತಿಲ್ಲ. ಗೊತ್ತಿಲ್ಲದ ವಿಚಾರವನ್ನು ತಿಳಿದುಕೊಳ್ಳಲಿ ಎಂದು ಹೇಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ಈ ಅಧಿಕಾರಿ ಭಡ್ತಿಯ ವಿಚಾರದಲ್ಲಿ ನಾನು ಇಲ್ಲಿ ಸ್ಪಷ್ಟೀಕರಣ ಮಾಡಬೇಕಾಗಿದೆ. ದಿನಾಂಕ ೮-೯-೮೨ರಲ್ಲಿ ಕರ್ನಾಟಕದ ಹೈಕೋರ್ಟ ಎದುರುಗಡೆ ಇದ್ದಂತಹ ಕೆಲವು ರಿಟ್ ಪಿಟಿಷನ್‌ಗಳ ಮೇಲೆ ನಿರ್ಣಯ ಕೊಟ್ಟಿದೆ. ಆ ನಿರ್ಣಯ ಏನೆಂದರೆ, ಆ ಆಜ್ಞೆ ಏನೆಂದರೆ, ಕೆಎಎಸ್ ಗ್ರೇಡೇಷನ್ ಲಿಸ್ಟ್ ಡೈರೆಕ್ಟ್ ರೆಕ್ರೂಟ್ಸ್ ಕ್ಲಾಸ್ (೧) ಜೂನಿಯರ್ ಸ್ಕೇಲ್ ಆಫೀಸರ್ ಮತ್ತು ಡೈರೆಕ್ಟ್ ರೆಕ್ರೂಟ್ ಪ್ರೊಮೋಷನಲ್ ವೇಕೆನ್ಸಿಗೆ ಸಂಬಂಧಪಟ್ಟಂತಹ ಗ್ರೇಡೇಷನ್ ಲಿಸ್ಟ್ ಇದೆ. "By limiting the carry forward of the direct recruits and promotional vacancies in that cadre to a maximum of 3 years in regard to the periods subsequent to 1-1-1972. Therefore, as per the High Court direction a provisional Gradtion List was published on 18-4-1983 calling for objections, After considering the objections a provisional list was confirmed on 3-9-1983 and

on the same day the promotions of K.A.S. Junior Scale Officers to K.A.S. Senior Scale was effected as per the ranking in the Gradation List. The Departmental Promotion Committee met on 2-5-1983 and cleared 27 officers.'' ೨೭ ಜನ ಅಧಿಕಾರಿಗಳಲ್ಲಿ ಯಾವ ಅಧಿಕಾರಿ ನಮ್ಮ ಸಂಬಂಧಿ ಎಂದು ಹೇಳಿದ್ದಾರೋ? ಎಂದರೆ ಎಸ್.ಜಿ. ಹೆಗಡೆ ಅವರ ಸಂಖ್ಯೆ ೧೩. ''The Proceedings were approved by the Chief Minister on 27-5-1983 with the following observations.

> ''Approved. However, in respect of Sri C. Krishnappa supersession may not be justifiable as the C.Rs of other officers cleared are not very much different from his C.Rs. Therefore, Sri C. Krishnappa may be cleared for promotion.''

ಹೈಕೋರ್ಟಿನ ಆಜ್ಞೆಗನುಸಾರವಾಗಿ ಹೊಸ ಗ್ರೇಡೇಷನ್ ಲಿಸ್ಟ್‌ನ್ನು ತಯಾರು ಮಾಡಿ, ಕಾಯಿದೆ ಪ್ರಕಾರ ಅಬ್‌ಜಕ್ಷನ್ ಕರೆದು, ಡಿಪಿಸಿಯವರು ಮೀಟ್‌ಮಾಡಿ ಅವರ ಪದ್ಧತಿಯಂತೆ ೨೭ ಜನ ಅಧಿಕಾರಿಗಳಿಗೆ ಪ್ರೊಮೋಟ್ ಮಾಡಬಹುದು ಎಂದು ನನ್ನ ಹತ್ತಿರ ಕಳಿಸಿಕೊಟ್ಟಿದ್ದರು. ಈ ೨೭ ಜನರಲ್ಲಿ ಈ ಅಧಿಕಾರಿಯೂ ಇದ್ದಾರೆ. ಬಿಟ್ಟವರನ್ನು ನಾನು ಸೇರಿಸುವುದಕ್ಕೆ ಹೋಗಿಲ್ಲ. ಬಿಟ್ಟಿರತಕ್ಕವರಲ್ಲಿ ಒಬ್ಬರನ್ನು ಸೇರಿಸಿದ್ದೇನೆ. ಡಿ.ಪಿ.ಸಿ. ಪ್ರೊಸೀಡಿಂಗ್ಸ್ ನೋಡಿ ನನಗೆ ಅನ್ನಿಸಿತು, ಶ್ರೀ ಸಿ. ಕೃಷ್ಣಪ್ಪ ಅವರ ಗುಪ್ತ ವರದಿ ಏನಿತ್ತು, ಅದು ಸಮರ್ಪಕವಾಗಿರಲಿಲ್ಲ. ಅದೇ ಧಾಟಿಯಲ್ಲಿ ಬರೆದಂತಹ ಗುಪ್ತ ವರದಿಯನ್ನು ನೋಡಿ ಈ ಅಧಿಕಾರಿಗೂ ಕೂಡ ಪ್ರೊಮೋಟ್ ಮಾಡಬಹುದೆಂದು ಸೂಚನೆ ಮಾಡಿದ್ದೇನೆ. ಅವರನ್ನು ಸೂಪರ್‌ಸೀಡ್ ಮಾಡತಕ್ಕಂಥಾದ್ದು ನ್ಯಾಯವಲ್ಲ ಎಂದು ಬರೆದ್ದೀನೆ. ಸಿ. ಕೃಷ್ಣಪ್ಪ ನನ್ನ ಸಂಬಂಧಿಯಲ್ಲ. ಅವರ ಜಾತಿ ಹೇಳುವುದಾದರೆ ಒಕ್ಕಲಿಗರು. ನನ್ನ ಜಾತಿಯ ಯಾವ ಅಧಿಕಾರಿಗೂ, ಸಂಬಂಧಿಕನಿಗೂ ಪ್ರೊಮೋಟ್ ಮಾಡಿಲ್ಲ. ಔಟ್ ಆಫ್ ಟರ್ನ್ ಯಾರನ್ನೂ ಪ್ರೊಮೋಟ್ ಮಾಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರೊಮೋಟ್ ಮಾಡಿದ್ದೀರಿ ಎಂದು ಏನು ಹೇಳಿದ್ದಾರೆ, ಅದು ೧೯೮೩ರಲ್ಲಿಯೇ ಆಗಿದೆ. ಈ ವಿಷಯ ಸರ್ಕಾರದ ಮುಂದೆ ಇಲ್ಲ. ಅನಂತರ ಹೈಕೋರ್ಟಿನಲ್ಲಿ ಮತ್ತೊಂದು ನಿರ್ಣಯ ಆಯಿತು. ಈ ನಿರ್ಣಯಕ್ಕೂ, ಮೊದಲಿನ ನಿರ್ಣಯಕ್ಕೂ ವ್ಯತ್ಯಾಸವಿದೆ. ಆದ್ದರಿಂದ, ಈ ವಿಚಾರದಲ್ಲಿ ಏನು ಮಾಡಬೇಕೆಂಬ ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇವೆ. ಈ ನಿರ್ಣಯವನ್ನು ಪುನಃ ರಿವ್ಯೂ ಮಾಡಬೇಕು. ಮೊದಲು ಕೊಟ್ಟಂತಹ ಆಜ್ಞೆಗೂ, ಇತ್ತೀಚೆಗೆ ಕೊಟ್ಟಂತಹ ನಿರ್ಣಯಕ್ಕೂ ವ್ಯತ್ಯಾಸವಿರುವುದರಿಂದ, ಬೇಧ ಇರುವುದರಿಂದ ದಯವಿಟ್ಟು ಸ್ಪಷ್ಟೀಕರಣ ಕೊಡಿ, ರಿವ್ಯೂ ಮಾಡಿ ಎಂದು ಹೈಕೋರ್ಟಿಗೆ ಹೋಗಿದ್ದೇವೆ. ಅದಕ್ಕಾಗಿ ಈ ವಿಷಯದಲ್ಲಿ ಕೊನೆಯ ನಿರ್ಣಯ ತೆಗೆದುಕೊಳ್ಳುವುದಕ್ಕೆ ತಡವಾಗಿದೆ. ಇಷ್ಟು ಹೇಳಿದರೆ ಬಹುಶಃ ನೆಪೋಟಿಸಂ ಆರೋಪ ನನ್ನ ಮೇಲೆ ಏನು ಇದೆ, ಅದು ಸರಿಯಲ್ಲವೆಂದು ಹೇಳಬೇಕಾಗುತ್ತದೆ. ಇನ್ನು ಮಾನ್ಯ ನಜೀರ್ ಸಾಹೇಬರ ಅಳಿಯನಿಗೆ ಪ್ರೊಮೋಷನ್ ಕೊಟ್ಟಿದ್ದೀರಿ ಎನ್ನುವ ವಿಚಾರವನ್ನೂ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಆ ಅಧಿಕಾರಿಗೆ ಪ್ರೊಮೋಷನ್ ಡ್ಯೂ ಇದೆ. ಪರಿಸ್ಥಿತಿ ಹೀಗೆ ಇರುವುದರಿಂದ ನಿರ್ಣಯ ತೆಗೆದುಕೊಂಡಿಲ್ಲ. ಅವರ ಅಳಿಯನಿಗೆ ಪ್ರೊಮೋಷನ್ ಸಿಗುತ್ತಿತ್ತು.

ಶ್ರೀ ಎಸ್. ಬಂಗಾರಪ್ಪ.—ಎಸ್. ಜಿ. ಹೆಗಡೆ ಮತ್ತು ನಜೀರ್‌ಸಾಬ್‌ರ ಅಳಿಯ ಇವರಿಗೆ ಪ್ರೊಮೋಷನ್ ಕೊಡುವುದಕ್ಕಾಗಿ ಬೇರೆಯವರ ಪ್ರೊಮೋಷನ್ಸ್ ನಿಲ್ಲಿಸಿದ್ದೀರಿ ಎಂದು ಹೇಳಿದ್ದೇನೆ.

ಅಧ್ಯಕ್ಷರು.—ಮಧ್ಯೆ ಮಧ್ಯೆ ಮಾತನಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ನೀವು ಮಾಡಿದ್ದೀರಿ ಎಂದು ನಾನು ಹೇಳಿದೆ ಎಂದು ನೀವು ಅಂದು ಕೊಂಡರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ತಾವು ಎರಡೂವರೆ ಗಂಟೆ ಮಾತನಾಡಿದೀರಿ. ಮುಖ್ಯಮಂತ್ರಿಗಳಾಗಲೀ, ಅವರ ಸಹೋದ್ಯೋಗಿಗಳಾಗಲಿ ಮಧ್ಯೆ ಮಾತನಾಡಲಿಲ್ಲ. ತಾವು ತಮ್ಮ ಅಸ್ಖಲಿತ ವಾಣಿಯಿಂದ ಮಾತನಾಡಿದಿರಿ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅಸ್ಖಲಿತ ವಾಣಿಯಿಂದ ಮಾತನಾಡಲು ಅವಕಾಶ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಅವರು ಹಿಂದೆ ಯಾವಾಗಲೂ ಎದ್ದು ನಿಂತು ಮಾತನಾಡಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ೨ನೇ ಆಪಾದನೆ, ನಿರ್ಲಾನ್ ಪ್ರಾಜೆಕ್ಟ್ ಕಂಪನಿಗೆ ಟೆಂಡರ್ ಕರೆಯದೆ ಕೊಟ್ಟಿದ್ದೀರಿ, ಗುಪ್ತವಾಗಿ ವ್ಯವಹಾರ ನಡೆಸಿದ್ದೀರಿ, ಅವ್ಯವಹಾರಗಳು ನಡೆದಿವೆ, ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಈ ವಿಚಾರದಲ್ಲಿ ಇಷ್ಟು ಮಾತ್ರ ಹೇಳ ಬಲ್ಲೆ. ನಿರ್ಲಾನ್ ಕಂಪನಿ, ಈ ಫರ್ಮ್ ನಮ್ಮ ದೇಶದಲ್ಲಿ ನೈಲಾನ್ ಕಾರ್ಖಾನೆ ಸರ್ವೆ ಪ್ರಥಮ ವಾಗಿ ೧೯೬೨ನೇ ಇಸವಿಯಲ್ಲಿ ಸ್ಥಾಪನೆಯಾದಂತಹ ಫರ್ಮ್. ನಮ್ಮ ದೇಶದಲ್ಲಿ ಶೇಕಡಾ ೨೫ರಷ್ಟು ಉತ್ಪಾದನೆ ಈ ಫರ್ಮ್‌ನಿಂದ ಆಗುತ್ತದೆ. ಗುಪ್ತಗುಪ್ತವಾಗಿ ಏನಾದರೂ ವ್ಯವಹಾರ ನಡೆದಿದೆಯೋ ಎಂಬುದನ್ನು ಅರಿಯಲು ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೂ, ಇನ್ನಿತರ ಸದಸ್ಯರಿಗೂ ಇದನ್ನು ಕಳಿಸಿಕೊಡುತ್ತೇನೆ. ಒಂದು ಸಲ ಅಲ್ಲ, ಎರಡು ಸಲ ಅಲ್ಲ ಎಲ್ಲಾ ಪತ್ರಿಕೆಗಳಲ್ಲಿಯೂ ಇದರ ಬಗ್ಗೆ ಜಾಹೀರಾತನ್ನು ಕೊಡಲಾಗಿದೆ.

ಮೊದಲನೆಯದು ತಾ. ೭-೬-೧೯೮೩ನೇ ಇಸವಿಯಲ್ಲಿ

"The Karnataka State Industrial Investment Devlopment Corporation invites prospective entreprenuers for establishing a nylon filament yarn project in Joint Sector. The brief details of the poject are Capacity, approximate investment. technical callaboration, project report, Government Clearence, equity development on private sector party, etc., etc.,

Interested parties may write within 15 days from the date of this advertisement to the Managing Director, KSIIDC giving details of the background, last three years audited balance sheet of their main and associated companies, related provisional management experience in the manufacturing of nylon filament yarn, sources of funds to bring in Rs. 5 crores towards equiry share capital, ability to make the product, ability to abtain renowned foreign collaboration, captive consumption if any etc., etc. ಆದಾದಮೇಲೆ......

ಶ್ರೀ ಎಸ್. ಬಂಗಾರಪ್ಪ.—ಇದು ಯಾವ ಪೇಪರ್‌ನಲ್ಲಿ ?

ಶ್ರೀ ರಾಮಕೃಷ್ಣ ಹೆಗಡೆ.—ಆಗಸ್ಟ್ ತಿಂಗಳ ಡೆಕ್ಕನ್ ಹೆರಾಲ್ಡ್‌ನಲ್ಲಿ, ಮತ್ತೆ ಅದೇ ಆಗಸ್ಟ್‌ನಲ್ಲಿ ೨ನೇ ದೊಡ್ಡ ಜಾಹಿರಾತು......

ಶ್ರೀ ಎಸ್. ಬಂಗಾರಪ್ಪ.—ಯಾವ ತಾರೀಖಿನ ಪೇಪರ್‌ನಲ್ಲಿ ?

ಶ್ರೀ ರಾಮಕೃಷ್ಣ ಹೆಗಡೆ.—೩ನೇ ತಾರೀಖು. ಆಗಸ್ಟ್ ತಿಂಗಳು, ಡೆಕ್ಕನ್ ಹೆರಾಲ್ಡ್ ಪತ್ರಿಕೆ. ನಂತರ ೭-೬-೮೩ರ ಪ್ರಜಾವಾಣಿಯಲ್ಲಿ ಈಗ ತಾನೆ ನಾನು ಏನು ಓದಿದೆ ಅದೇ ವಿಚಾರ ಕನ್ನಡ ಪತ್ರಿಕೆ ಯಲ್ಲೂ ಬಂದಿದೆ. ಇದಾದ ನಂತರ Financial Express Delhi and Madras Editions. Business Standard, Calautta Edition. Economic Times, Delhi and Bombay Editions. These are all the paper in which we have advertised- ಇಷ್ಟು ಪೇಪರ್‌ಗಳಲ್ಲಿ ಜಾಹಿರಾತನ್ನು ಕೊಟ್ಟಿದೆ. ಒಂದು ಸಾರಿ ಅಲ್ಲಎಂದು ಎರಡು ಸಾರಿ ಜಾಹಿರಾತನ್ನು ಕೊಟ್ಟಿದೆ. ಅಂದ ಮೇಲೆ ಇದು ಯಾವರೀತಿ ಗುಪ್ತ ಆಗುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ. ಇದಾದ ಮೇಲೆ ಸುಮಾರು ೨೦ ಅರ್ಜಿಗಳು ಬಂದುವು. ಈ ಅರ್ಜಿಗಳು ಸರ್ಕಾರದ ಹತ್ತಿರ ಬರುವುದಿಲ್ಲ. ಸರಕಾರದ ಹತ್ತಿರ ಫೈಲ್ ಮಾತ್ರ ಬಂದಿತ್ತು. ಕೆ.ಎಸ್.ಐ.ಐ.ಡಿ.ಸಿ, ಒಂದು ಸ್ವತಂತ್ರ, ಸ್ವಾಯತ್ತ ಸಂಸ್ಥೆ ಇದರಲ್ಲಿ ಯಾವುದೇ ಅನುಮಾನ ಇಲ್ಲ. ಆದರೆ ಈ ನಿರ್ಣಯವನ್ನು ನೂರಕ್ಕೆ ನೂರರಷ್ಟು ತಜ್ಞರ ಅಭಿಪ್ರಾಯದಂತೆ ತೆಗೆದುಕೊಳ್ಳಲಾಗಿದೆಯೇ ಹೊರತು ಇದರಲ್ಲಿ ರಾಜಕೀಯ ಹಸ್ತಕ್ಷೇಪವಾಗಲಿ, ಅಥವಾ ಬೇರೆ ಯಾರ ಹಸ್ತಕ್ಷೇಪವಾಗಲಿ ಇಲ್ಲ.

ಇದರಿಂದ ನಮ್ಮ ಕೈಮಗ್ಗದ ನೇಕಾರರಿಗೆ ತುಂಬಾ ಅನುಕೂಲವಾಗುತ್ತದೆ. ನಮ್ಮ ದೇಶದಲ್ಲಿ ಅತ್ಯಂತ ಫೈನೆಸ್ಟ್ ಸಿಂಥೆಟಿಕ್ ಯಾರೆನ್ ಮ್ಯಾನುಫ್ಯಾಕ್ಚರಿಂಗ್ ಯೂನಿಟ್ ಇದು. ೧೯೬೨ನೇ ಇಸವಿಯಿಂದ ಇದು ಪ್ರಾರಂಭವಾಗಿದೆ. ಇದು ಇಡೀ ದೇಶದಲ್ಲೇ ಮೊದಲನೆಯದು. ಇದಾದಮೇಲೆ ಇಲ್ಲಿ ಟಾಪ್ ಎಕ್ಸಿಕ್ಯುಟಿವ್ ಆಫೀಸರ್ಸ್ ಯಾರಿದ್ದಾರೆ ಅವರ ನಮ್ಮ ಕರ್ನಾಟಕದವರೇ ಇರಬೇಕೆಂದು ನಾವು ಒತ್ತಾಯ ಮಾಡಿದ್ದರಿಂದ ಇವತ್ತು ಅಲ್ಲಿರತಕ್ಕ ಎಲ್ಲ ಟಾಪ್ ಎಕ್ಸಿಕ್ಯುಟವ್ ಅಧಿಕಾರಿಗಳೂ ಕೂಡ ನಮ್ಮ ಕರ್ನಾಟಕದವರೇ ಆಗಿದ್ದಾರೆ. ಸುಮಾರು ೬೦ ಕೋಟಿ ರೂಪಾಯಿಯಷ್ಟು ಬಂಡವಾಳ ಇದಕ್ಕೆ ಬೀಳುತ್ತದೆ. ಒಂದು ವೇಳೆ ನಾವು ಇಲ್ಲಿ ಏನಾದರೂ ಅವ್ಯವಹಾರ ಅಥವಾ ದುರ್ವ್ಯವಹಾರ ಮಾಡಿ ಯಾರಿಗಾದರೂ ಕೊಟ್ಟರೆ ನಮಗಿಂತಲೂ ಮೇಲೆ ಕೇಂದ್ರ ಸರ್ಕಾರದವರಿದ್ದಾರೆ. ಅವರು ಎಲ್ಲವನ್ನೂ ನೋಡುತ್ತಿರುತ್ತಾರೆ. ಇದು ಅವರ ಕೈಯಲ್ಲಿದೆಯೋ ಹೊರತು ನಮ್ಮ ಕೈಯಲ್ಲಿಲ್ಲ. ನಾನು ಒಂದು ಮಾತನ್ನು ಹೇಳಿದರೆ ಅವರಿಗ ಬೇಸರವಾಗಬಹುದು. ಸುಮಾರು ಒಂದೂವರೆ–ಎರಡು ಸಾವಿರ ಕೋಟಿ ರೂಪಾಯಿಗಳ GAS PIPE LINE ಏನಿದೆ ಅದನ್ನು ಕಾಂಟ್ರಾಕ್ಟ್ ಕೊಡಬೇಕು. ಆದರೆ ಅದಕ್ಕೆ ಯಾವುದೇ ಅಪ್ಲಿಕೇಷನ್‌ನ್ನೂ ಕರೆದಿಲ್ಲ, ಟೆಂಡರನ್ನೂ ಕರೆದಿಲ್ಲ, ಏನೂ ಮಾಡಿಲ್ಲ......

SRI VEERAPPA MOILY.—I take strong objection to it: ಇದರ ಬಗ್ಗೆ ಇನ್ನೊಂದು ವಿಚಾರ ಹೇಳಲಿಕ್ಕೆ no-body is here to defend.

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೆ ಅವರು ಹೇಳುವುದನ್ನು ತಾವು ಸ್ವಲ್ಪ ಕೇಳಿ......

ಶ್ರೀ ಎಂ. ವಿರಪ್ಪಮೊಯ್ಲಿ.—ಪಾಯಿಂಟ್ ಆಫ್ ಆರ್ಡರ್, ಯಾವುದೇ ವಿಚಾರವನ್ನಾಗಲಿ ಇಲ್ಲಿ ಎತ್ತಿದಾಗ ಅದಕ್ಕೆ ಉತ್ತರವನ್ನು ಕೊಡಲಿಕ್ಕೆ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಇಲ್ಲಿ ಇಲ್ಲ. ಆದ್ದರಿಂದ ಈಸಂದರ್ಭದಲ್ಲಿ ತಾವು ಅದನ್ನು ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಟ್ಟರೆ ಕೇಂದ್ರಸರ್ಕಾರದ ವಿಚಾರದಲ್ಲಿ ಏಕಮುಖವಾಗಿ ಹೇಳುವುದಾದರೆ ಅದು ಕಾನೂನುಬದ್ಧವಾಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯದಲ್ಲಿ ಮೊದಲು ಅವರು ಹೇಳಿದ್ದುದು ಇರಬಹುದು. ಆದರೆ ಈಗ ಟೆಂಡರ್ ಕರೆದಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ದಯವಿಟ್ಟು ತಾವು if you are really on facts you can stick on to it. I am talking with regard to global tenders.

ಶ್ರೀ ರಾಮಕೃಷ್ಣ ಹೆಗಡೆ.—ಇದು ಬೇರೆಯವರಿಗೆ ಮೊದಲು ಕೊಡಲ್ಪಟ್ಟಿತ್ತು. ಆದರೆ ಅದು ಹಸ್ತಾಂತರ ಆಯಿತು. ನಾನು ಈಗಾಗಲೇ ಹೇಳಿದಂತೆ ೨೦ ಬೇರೆ ಬೇರೆ ಫರ್ಮ್‌ನದು ಇದಕ್ಕೆ ರೆಸ್ಪಾಂಡ್ ಮಾಡಿ ಇದರಲ್ಲಿ ೧೪ ಜನರು ಯಾರು ಅರ್ಹತೆಯನ್ನು ಪಡೆದಿರುವವರಿದ್ದರೆ ಅವರನ್ನು ಆರಿಸಿದರು. ಅನಂತರ ಅವರ ಪೈಕಿ ಶಿನ್ನು ಬೋರ್ಡ್‌ನ ಮುಂದೆ ಇಟ್ಟರು. ಕೊನೆಗೆ ಬೋರ್ಡ್‌ನಲ್ಲಿ ಈ ರೀತಿ ತೀರ್ಮಾನವಾಗಿದೆ. ಈ ತೀರ್ಮಾನ ಅದುದು ೧೯೮೩ನೇ ಇಸವಿ ಡಿಸೆಂಬರ್ ೨೯ರಂದು......

ಶ್ರೀ ಎಂ. ರಾಮಪ್ಪ,—ಆಗ ಚುನಾವಣೆ ಇತ್ತೆ ?

ಶ್ರೀ ರಾಮಕೃಷ್ಣ ಹೆಗಡೆ.—ಆಗ ಇನ್ನೂ ಚುನಾವಣೆ ಕಾಲ ಆಗಿರಲಿಲ್ಲ. ಇದಕ್ಕೆ ಪ್ರತಿಯಾಗಿ ನಾನು ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ಅದ್ಯಕ್ಷರೆ, ಅವರು ಮಾತು ಮಾತಿಗೂ ಮೌಲ್ಯಾಧಾರಿತ ರಾಜಕಾರಣ ಮಾಡುತ್ತೀರಾ, ಮೌಲ್ಯಾಧಾರಿತ ರಾಜಕಾರಣ ಮಾಡುತ್ತಿರಾ? ಎಂದು ನಮ್ಮನ್ನು ಮೂದಲಿಸುತ್ತಿರುತ್ತಾರೆ ಇದು ಮಾನ್ಯ ರಾಮಪ್ಪನವರಿಗೆ ಹೇಗೆ ಗೊತ್ತಾಗಬೇಕು...

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಮಾನ್ಯ ರಾಮಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ. ತಾವು ಮಾತನಾಡುವುದು ಬೇಡ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೀವು ಮಾತನಾಡುವಾಗ ಅವರು ಒಬ್ಬರೂ ಕೂಡ ಇಂಟರ್‌ಫಿಯರ್ ಮಾಡಲಿಲ್ಲ. ಒಬ್ಬರೂ ಮಧ್ಯೆ ಪ್ರವೇಶ ಮಾಡದಂತೆ ನಿಮ್ಮ ಮಾತನ್ನು ಅವರು ಕೇಳಿದ್ದಾರೆ. ಆದ್ದರಿಂದ ತಾವೂ ಕೂಡ ಅವರು ಏನು ಹೇಳುತ್ತಾರೆಂಬುದನ್ನು ಕೇಳಿ. ಅನಂತರ ಕ್ಲಾರಿಫಿಕೇಷನ್ ಕೇಳುವುದಕ್ಕೆ ಎಲ್ಲರಿಗೂ ಅವಕಾಶನ್ನು ಕೊಡುತ್ತೇನೆ,

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೆ ಪ್ರತಿಯಾಗಿ ಮತ್ತೊಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ನಮ್ಮ ಸರ್ಕಾರ ಈ ಮೊದಲು ಅಧಿಕಾರಕ್ಕೆ ಬಂದಾಗ ಬಹುಶಃ ೪–೫ ತಿಂಗಳು ಇತ್ತು. ಆಗ ಮಾನ್ಯ ಬೊಮ್ಮಾಯಿಯವರು ಕೈಗಾರಿಕಾ ಮಂತ್ರಿಗಳಾಗಿದ್ದರು. ಅವರು ಒಂದು ದಿವಸ ನನ್ನ ಹತ್ತಿರ ಬಂದು ಈ ರೀತಿ ಇಲ್ಲಿ ಫಾಲಿಸ್ಟರ್ ಫೈಬರ್‌ಗೆ ಸಂಬಂಧಪಟ್ಟಂತೆ ಒಂದು ಸಮಸ್ಯೆ ಇದೆ, ಸುಮಾರು ೮೦ ಕೋಟಿ ರೂಪಾಯಿಗಳ ಒಂದು ದೊಡ್ಡ ಪ್ರಾಜೆಕ್ಟ್ ಇದು. ಕೆ.ಎಸ್.ಐ.ಡಿ.ಡಿ.ಸಿ. ಮತ್ತಿತರ ಸಂಬಂಧಪಟ್ಟ ಸಂಸ್ಥೆಗಳು ಬಾಂಬೆ ಡೈಯಿಂಗ್ ಫರ್ಮ್‌ಗೆ ಇದನ್ನು ಕೊಡಬೇಕೆಂದು ತೀರ್ಮಾನ ಮಾಡಿತ್ತು, ಆದರೆ ೧೯೮೨ನೇ ಇಸವಿ ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ಅಂದಿನ ಮುಖ್ಯಮಂತ್ರಿಗಳ ಹತ್ತಿರ ಇದನ್ನು ರೀ ಕನ್ಸಿಡರ್ ಮಾಡಬೇಕೆಂದು ಫೈಲು ಹೋದಾಗ ಅದು ವಾಪಸ್ಸು ಬರುವಾಗ ಲಿಸ್ಟ್‌ನಲ್ಲಿ ೧೦ನೇ ನಂಬರ್‌ನಲ್ಲಿದ್ದಂಥ ಮತ್ತೊಂದು ಫರ್ಮ್‌ಗೆ ಕೊಡಬಹುದೆಂದು ರೆಕಮೆಂಡ್ ಮಾಡಿ ಸರ್ಕಾರ ಕಳುಹಿಸಿ ಅದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳತಕ್ಕ ಸಂಧರ್ಭದಲ್ಲಿ ಆ ಸರ್ಕಾರ ಬದಲಾವಣೆ ಆಯಿತು.

ಮಾನ್ಯ ಕೈಗಾರಿಕಾ ಮಂತ್ರಿಗಳು ನನ್ನ ಹತ್ತಿರ ಬಂದು ಹೇಳಿದರು. ನಾವು ಹಿಂದೆ ಮೊದಲು ಮಾಡಿದಂಥ ಏನು ಎಕ್ಸ್‌ಪರ್ಟ್ ಕಮಿಟಿಯ ರೆಕಮೆಂಡೇಷನ್ಸ್ ಇದೆ ಅದನ್ನು ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸಿಕೊಡಬೇಕೇ, ಆಮೇಲೆ ಬದಲಾವಣೆಯನ್ನು ಮಾಡಿ ಸರ್ಕಾರದವರು ಏನು ಹೇಳಿದ್ದಾರೆ ಅದನ್ನು ಕಳುಹಿಸಿಕೊಡಬೇಕೇ ಎಂದು ಕೇಳಿದರು. ಅದಕ್ಕೆ ನಾನು ಎಕ್ಸ್‌ಪರ್ಟ್ ಕಮಿಟಿಯವರು ಏನು ಹೇಳಿರುತ್ತಾರೆ, ಏನು ರೆಕಮೆಂಡೇಷನ್ಸ್ ಕೊಟ್ಟಿರುತ್ತಾರೆ, ಅದನ್ನು ಗೌವರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸಿಕೊಡಿ ಎಂದು ಹೇಳಿದೆ. ಅದೇರೀತಿ ಅವರು ತಿಳಿಸಿದರು. ಕೆ.ಎಸ್.ಐ.ಐ.ಡಿ.ಸಿ.ಯವರು ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸಿಕೊಟ್ಟರು,

ಮಾನ್ಯ ಅಧ್ಯಕ್ಷರೇ, ಈ ಒಂದು ಪ್ರಾಜೆಕ್ಟ್ ೧೯೮೫ ಜನವರಿವರೆಗೆ ಕ್ಲಿಯರ್ ಆಗಲಿಲ್ಲ. ೧೯೮೫ನೇ ಜನವರಿ ಕೊನೆಯ ವಾರದಲ್ಲಿ ಅಲ್ಲಿಯವರೆಗೂ ಕ್ಲಿಯರ್ ಆಗಲಿಲ್ಲ. ಕೈಗಾರಿಕಾ ಮಂತ್ರಿಗಳು ಡೆಲ್ಲಿಗೆ ಹೋದಾಗ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ, ನಾನು ಅನೇಕ ಪತ್ರಗಳನ್ನು ಬರೆದೆ. ಕೊನೆಗೆ ಎಲ್ಲಿಯವರೆಗೆ ಈ ಪ್ರಸಂಗ ಬಂದಿತು ಎಂದರೆ ಯಾರಿಗಾದರೂ ಕೊಟ್ಟು ಬಿಡಿ, ಆದರೆ ದಯವಿಟ್ಟು ಪ್ರಾಜೆಕ್ಟ್ ನಮ್ಮಲ್ಲೇ ಪ್ರಾರಂಭ ಮಾಡಿ ಎಂದು ಹೇಳಬೇಕಾಯಿತು. ಏತಕ್ಕೆಂದರೆ ಲೆಟರ್ ಆಫ್ ಇಂಡೆಂಟ್ ಗಡುವು, ಅವಧಿ ಹೊರಟುಹೋಗಿಬಿಡುತ್ತದೆಂದು. ಈಗ ತಾವು ಪ್ರಶ್ನೆ ಕೇಳಿದಿರಿ.

ಶ್ರೀ ಎಸ್. ಬಂಗಾರಪ್ಪ.—ನೀವು ಯಾರಿಗಾದರೂ ಕೊಟ್ಟುಬಿಡಿ ಎಂದು ಹೇಳಿರುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಯಾರಿಗಾದರೂ ಕೊಡಿ ಎಂದು ಬರೆದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಇಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ಟನ್ಲಿ. ಇದರಲ್ಲಿ ಹಿಂದೆ ಏನು ಕೈವಾಡ ಇದೆ ಎಂದು ನನಗೆ ಗೊತ್ತಿಲ್ಲ. ಅದನ್ನು ಉದಾಹರಣೆ ಕೊಟ್ಟೆ. ಇಲ್ಲಿಯವರೆಗೂ ಅದರ ಬಗ್ಗೆ ಪ್ರಸ್ತಾಪ ಮಾಡಿರಲಿಲ್ಲ. ಅದರ ಅಗತ್ಯವೂ ಇರಲಿಲ್ಲ. ಹಿಂದಿನ ಸರ್ಕಾರದ ಮೇಲೆ ನಾನು ಏನು ಆರೋಪ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಯಾರಿಗೆ ಕೊಟ್ಟರು ಏನು ಎನ್ನುವುದು ಮುಗಿದು ಹೋದ ಕಥೆ, ಆದರೆ ಇಂದು ವಿನಾ ಕಾರಣ ವಿಷಯ ಗೊತ್ತಿಲ್ಲದೆ ಸರ್ಕಾರದ ಮೇಲೆ ಅವ್ಯವಹಾರ ಮಾಡಿದ್ದಾರೆ, ದುರ್ವ್ಯವಹಾರ ಮಾಡಿದ್ದಾರೆ, ಕರಪ್ಷನ್ ಮಾಡಿದ್ದಾರೆಂದು ವಿವರಗಳು ಇಲ್ಲದೆ ಕೇಳುತ್ತಿರುವುದರಿಂದ ನಾನು ಇದನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮೊಯಿಲಿಯವರೇ ತಾವು ದಯವಿಟ್ಟು ಕೇಳಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಇಲ್ಲಿ ನನ್ನನ್ನು ತಪ್ಪು ಹಾದಿಗೆ ಎಳೆಯುತ್ತಿದ್ದರೆ ನಾವೂ ಮಾತನಾಡಬೇಕಾಗುತ್ತದೆ. ಏತಕ್ಕೆಂದರೆ ಅವರು ಇಂಥ ವಾದವನ್ನು ಇಲ್ಲಿ ಕೊಡುವುದಾದರೆ ನಾವು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.—ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ವಿಷಯದಲ್ಲಿ ಕೈವಾಡ ಇದೆ ಎಂದು ಕೇಂದ್ರಸರ್ಕಾರದ ಮೇಲೆ ಆಪಾದನೆ ಮಾಡಿ ಹೇಳಿದರೆ, ಮತ್ತೆ ವಿರೋಧ ಪಕ್ಷದವರ ಬಗ್ಗೆ ಬಹಳ ಸ್ವಚ್ಛವಾಗಿ ಮಾ

ನಾಡಿದ್ದಾರೆ. ಇದರೊಳಗೆ ಏನೋ ಕೈವಾಡ ಇದೆ ಎಂದು ಮನಸ್ಸಿನಲ್ಲಿ ಕಲ್ಮಷವಾಡಿ ಹೇಳುವುದಾದರೆ that loses importance. ಇದರಲ್ಲಿ ಏನೋ ಕೈವಾಡ ಇದೆ ಎಂದು ವಿರೋಧಪಕ್ಷದವರ ಮೇಲೆ ಏತಕ್ಕೆ ಆಪಾದನೆ ಮಾಡುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗೆ ನಾನು ಹೇಳಲಿಲ್ಲ. ಸರಿಯಾಗಿ ಕೇಳಿ. ವಿರೋಧಪಕ್ಷದವರ ಕೈವಾಡವಿದೆ ಎಂದು ಹೇಳಲಿಲ್ಲ. ಇದರಲ್ಲಿ ಏನೋ ಒಂದು ನಮಗೆ ಗೊತ್ತಾಗದೆ ಇರತಕ್ಕಂಥ ವಿಚಾರ ಇರಬಹುದು ಎಂದು ಹೇಳಿದೆ. I have written a letter to the Government of India, which says thus:

> "As the matter has been pending with the Government of India for a long time, I request you kindly to look into this immeditely. If for any reason our proposal is not acceptable to Government of India we may kindly Inform so that we can select same other joint sector partner out of this shorlisted earlier far this purpose."

SRI S. BANGARAPPA.—You have said you have received about 20 applications: It is according to the statement of the expert Committee. Your letter does not pertain to 20 applications.

ಶ್ರೀ ರಾಮಕೃಷ್ಣ ಹೆಗಡೆ.—೨೦ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—೨೦ ಅಪ್ಲಿಕೇಷನ್ ಬಂದಿದೆ ಎಂದು ಹೇಳಿದಿರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳುತ್ತಿರತಕ್ಕಂಥದ್ದು ಪಾಲಿಸ್ಟರ್ ಕಂಪನಿ ೧೯೮೨ನೇ ಇಸವಿಯಲ್ಲಿ ಆದಂಥದ್ದು ಎಂದು.

ಶ್ರೀ ಎಸ್. ಬಂಗಾರಪ್ಪ.—ನಾನು ಕೇಳುತ್ತಿರತಕ್ಕಂಥದ್ದು ನಿರಲಾನ್, ಶಿಂತಟಿಕ್ ಫೈಬರ್‌ದು. ನೀವು ಯಾವುದೋ ಬೇರೆ ಓದುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—೧೯೮೨ನೇ ಇಸವಿಯಲ್ಲಿ ಆದಂಥದ್ದು ಇಡಿ ಎಂದು ಹೇಳಿದಿರಲ್ಲ ಅದಕ್ಕೋಸ್ಕರವಾಗಿ ಇಟ್ಟೆ. ನಿರ್ಲಾನ್ ಬೇರೆ ವಿಚಾರ, ಅದಕ್ಕೆ ಹಿಂದೆ ಯಾವ ರೀತಿ ನಡೆದಿದೆ ಎಂದು ಹೇಳಿದೆ. ನಾನು ಅಷ್ಟನ್ನೂ ಹೇಳಿಬಿಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮೊದಲು ಇಂಥ ವಿಚಾರದಲ್ಲಿ ಪತ್ರಿಕೆಯಲ್ಲಿ ಅಡ್ವರ್‌ಟೈಸ್ ಕೊಡದೆ ಅರ್ಜಿ ತೆಗೆದುಕೊಂಡು ನಿರ್ಣಯ ಮಾಡುತ್ತಿದ್ದರು. ನಾನು ಕೈಗಾರಿಕಾ ಮಂತ್ರಿಯಾದ ಮೇಲೆ ಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟು ಜಾಯಿಂಟ್ ಪಾರ್ಟನರ್ ಯಾರು ಯಾರು ಎನ್ನುವುದನ್ನು ತಿಳಿದುಕೊಂಡು ಅದರ ಮೇಲೆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಅಪ್ಲಿಕೇಷನ್ ಬರುವುದಕ್ಕೆ ಪ್ರಾರಂಭವಾಯಿತು. ಪತ್ರಿಕೆಗಳಲ್ಲಿ ಬಂದುದನ್ನು ಸ್ಕ್ರೂಟಿನಿ ಮಾಡಿ ಕೇಂದ್ರಕ್ಕೆ ಕೊಟ್ಟಿದ್ದೇವೆ. ಈ ಪದ್ಧತಿಯನ್ನು ನಾವೇ ಅಳವಡಿಸಿಕೊಂಡದ್ದು. ಇದಕ್ಕೂ ಮೊದಲು ಈ ವಿಚಾರ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಕೇಳುತ್ತಿರತಕ್ಕಂಥದ್ದು ನಿರ್ಲಾನ್ ವಿಚಾರ. ನಿರ್ಲಾನ್‌ಗೆ ಕೊಟ್ಟಿರತಕ್ಕಂಥ ವ್ಯವಹಾರ ಇದೆಯಲ್ಲ ಅದು ೧೯೮೩ರಲ್ಲಿ ತೀರ್ಮಾನವಾಯಿತೇ ? ಯಾವಾಗ ಆಯಿತು ಎನ್ನುವ ಪಾಯಿಂಟ್ ಕೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಹೌದು.

ಶ್ರೀ ಎಸ್. ಬಂಗಾರಪ್ಪ.—ಮತ್ತೆ ಇಲ್ಲವೆಂದು ಹೇಳುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಪ್ರಾಜೆಕ್ಟ್ ಯಾವುದು ಇದೆ ಅದನ್ನು ೧೯೮೨ನೇ ಇಸವಿ ಆಗಸ್ಟ್, ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ಹಿಂದಿನ ಸರ್ಕಾರ ತೆಗೆದುಕೊಂಡಂಥಾದ್ದು. ಆಗ ಇದ್ದಂಥ ಎಕ್ಸ್‌ಪರ್ಟ್ ಕಮಿಟಿಯವರು ಇದಕ್ಕೆ ರೆಕಮೆಂಡೇಷನ್ಸ್ ಮಾಡಿದ್ದರು. ಅದನ್ನು ಕೇಂದ್ರಸರ್ಕಾರಕ್ಕೆ

ಕಳುಹಿಸಿ ಕೊಟ್ಟಿದ್ದರೂ ಅದಕ್ಕೆ ಕ್ಲಿಯರೆನ್ಸ್ ಬಂದಿಲ್ಲ. ನಾನು ಹೇಳತಕ್ಕಂಥದ್ದು ಇದು, ನೀವು ಹೇಳತಕ್ಕಂಥದ್ದು ಬೇರೆ. ಬಂದಂಥ ಅರ್ಜಿಗಳೆಲ್ಲವನ್ನು ಕಳುಹಿಸಿಕೊಡುವುದಕ್ಕೆ ಆಗುವುದಿಲ್ಲ. ಅವರ ಹಿನ್ನೆಲೆ ಏನು ಎನ್ನುವುದನ್ನೆಲ್ಲಾ ಪರಾಮರ್ಷಿಸಿ ಯಾರಿಗೆ ಅರ್ಹತೆ ಇದೆ, ಯಾರಿಗೆ ಶಕ್ತಿ ಇದೆ ಎನ್ನುವುದನ್ನೆಲ್ಲ ನೋಡಿ ಕಳುಹಿಸಿಕೊಡುತ್ತೇವೆ. ೧೫–೨೦ ಅಪ್ಲಿಕೇಷನ್ ಬಂದಿರತಕ್ಕಂಥದ್ದರಲ್ಲಿ ೪–೫ಕ್ಕೆ ಸಂಬಂಧಪಟ್ಟವರನ್ನು ಕರೆಯಿಸಿ ಮಾತನಾಡಿ ಎಂದು ಹೇಳಿ ಕಾಗದ ಬರೆದು ಕಳುಹಿಸಿ ಕೊಟ್ಟಿರುತ್ತೇವೆ. ಎರಡು ವರ್ಷಗಳಾದರೂ ಇನ್ನೂ ಅದು ಕ್ಲೀಯರ್ ಆಗಿಲ್ಲ. ಬೇರೆ ಯಾರಿಗಾದರೂ ಕೊಡಬಹುದು ಎಂದು ಹೇಳಿದ್ದೇವೆ. ಪತ್ರದಲ್ಲಿ ಕೂಡ ಬರೆದಿದ್ದೇವೆ. ಸಾಮಾನ್ಯವಾಗಿ ಈ ಮಾತನ್ನು ಹೇಳುತ್ತಿರಲಿಲ್ಲ. ಈ ವಿಚಾರವನ್ನು ನೀವು ಎತ್ತಿದ್ದರಿಂದ ಹೇಳಬೇಕಾಯಿತು. ಕೇಂದ ಸರ್ಕಾರಕ್ಕೆ ಯಾವ ಹೆಸರುಗಳನ್ನು ನಾವು ಕಳುಹಿಸಿಕೊಟ್ಟೆವೋ ಅವುಗಳಿಗೆ ಎರಡು ವರ್ಷಗಳಾದರೂ ಕೂಡ ನಿರ್ಣಯ ಬರಲಿಲ್ಲ. ಕೆ.ಎಸ್.ಐ.ಐ.ಡಿ.ಸಿ. ಪತ್ರ ಹೋದಮೇಲೆ ನಾವು ಪ್ರಪೋಸಲ್ಸ್ ಕಳುಹಿಸಿಕೊಟ್ಟಿದ್ದೇವೆ. ಇಲ್ಲಿಯವರೆಗೂ ಕೈಗಾರಿಕಾ ಮಂತ್ರಿಗಳನ್ನು ಬಿಟ್ಟು ನಾನು ಮಾಡಿದ್ದುದು ಏನೂ ಇಲ್ಲ. ನನ್ನ ಬಿಟ್ಟು ಕೈಗಾರಿಕಾ ಮಂತ್ರಿಗಳು ಮಾಡಿದ್ದುದು ಏನೂ ಇಲ್ಲ. ಅವರು ಜನವರಿ ತಿಂಗಳಲ್ಲಿ ಯಾವುದೋ ಕಾರಣಕ್ಕಾಗಿ ಬೆಂಗಳೂರಿಗೆ ಬಂದಿದ್ದಾಗ ಭೇಟಿಯಾಗಿದ್ದೆವು. ನಾನು ಅಕ್ಷರಶಃ ಅವರು ಹೇಳಿದ್ದನ್ನು ಹೇಳುತ್ತೇನೆ. ಅವರು ಏನು ಹೇಳಿದರು ಎಂದರೆ, ಇವತ್ತಿನವರೆವಿಗೂ ನನ್ನ ಎಕ್ಸ್‌ಪೀರಿಯನ್ಸ್‌ನಲ್ಲಿ ಇಂಡಸ್ಟ್ರಿಯಲಿಸ್ಟನ್ನು ಕರೆಯದೆ ಕೇವಲ ಕಾಗದ ಪತ್ರದ ಮೇಲೆ, ಮೆರಿಟ್ ಮೇಲೆ ನಿರ್ಣಯ ತೆಗೆದುಕೊಂಡದ್ದು ಇದೆ ಮೊದಲು ಎಂದು ಅವರು ಹೇಳಿದರು. ಅವರನ್ನು ಕರೆಯಲಿಲ್ಲ, ಮಾತುಕತೆಯನ್ನೂ ಆಡಲಿಲ್ಲ ನಾವು. ಅವರ ಮುಖವನ್ನೂ ನಾನು ನೋಡಿಲ್ಲ, ''Without calling industrialist you have given it on merit, This is the first time I am seeing this type of Government'' ಎಂದು ಹೇಳಿದರು the Eyperh commettee of the Board hes recommended his name, I told my colleague Sri Bommai that whatever is the recommendation of the Expert Committee we should forward to the Government of India, we shall not interfere ಅವರು ಇಲ್ಲಿ ಬಂದಾಗ ನನ್ನ ಹತ್ತಿರ ಏನು ಹೇಳಿದರು, ಅದನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಆಮೇಲೆ, ಮೂರನೆಯ ಆಪಾದನೆ ಎಂದರೆ, ಇಲ್ಲಿ ಬಹಳಷ್ಟು ಸೊಸೈಟಿಗಳಲ್ಲಿ ಅವ್ಯವಹಾರ ನಡೆದಿದೆ, ಸೊಸೈಟಿಗಳಿಗೆ ಜಮೀನು ಕೊಟ್ಟಿದ್ದೀರಿ ಎಂದು. ಗ್ರೀನ್ ಬೆಲ್ಟ್‌ಗೆ ಒಳಪಟ್ಟಿರತಕ್ಕಂಥ ಜಮೀನನ್ನು ಅವರಿಗೆ ಕೊಟ್ಟಿದ್ದೀರಿ ಎಂದು. ಆಪಾದನೆ ಮಾಡಿದ್ದಾರೆ. ನಾನು ಮಾನ್ಯ ಬಂಗಾರಪ್ಪನವರಿಗೆ ಇಷ್ಟು ಹೇಳಲಿಕ್ಕೆ ಬಯಸುತ್ತೇನೆ ಏನೆಂದರೆ,......

ಶ್ರೀ ಎಂ. ವೀರಪ್ಪ ಮೊಯಿಲಿ.—ಕೇಂದ್ರಸರ್ಕಾರ ಯಾವಾಗ ಕ್ಲಿಯರ್ ಮಾಡಿತು ಎಂದು ಹೇಳಿಬಿಡಿ. ಬಹುಶಃ ನಿಮಗೆ ಹೇಳಲಿಕ್ಕೆ ಕಷ್ಟವಾಗಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಕಷ್ಟವಾಗುವುದಿಲ್ಲ. ಕ್ಲಿಯರ್ ಮಾಡಿದ ಬಗ್ಗೆ ಹೇಳಿದ್ದೇನೆ. ೩೧–೧–೮೫ ರಂದು ಕ್ಲಿಯರ್ ಮಾಡಿದರು. ಜನವರಿ ಕೊನೆಯ ವಾರ ಕ್ಲಿಯರ್ ಆಗಿದೆಯೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಜನವರಿ ಕೊನೆಯವಾರ ಎಂದು ಹೇಳಿದರು, ತಮ್ಮ ಬೆನ್ನನ್ನು ತಾವು ಚಪ್ಪರಿಸಿಕೊಳ್ಳುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರದ ಬಗ್ಗೆ ಒಂದು ಮಾತೂ ಆಡಿಲ್ಲ. ಕೇಂದ್ರಸರ್ಕಾರದವರನ್ನು ಅಭಿನಂದಿಸುತ್ತೇನೆ ಎಂದು ಹೇಳಿದ್ದರೆ ಅವರಿಗೆ ಗೌರವ ಬರುತ್ತಿತ್ತು. ಇವರು ಇನ್ನೂ ಅದನ್ನು ಕಲಿಯಬೇಕಾಗಿದೆ......

ಶ್ರೀ ರಾಮಕೃಷ್ಣ ಹೆಗಡೆ.—ನನಗೂ ಮತ್ತು ಶ್ರೀ ಬಂಗಾರಪ್ಪನವರಿಗೂ ಇರತಕ್ಕಂಥ ಬೇದ ಇಷ್ಟೆ. ಅವರು ನಮ್ಮನ್ನು ತಾನು ಸರ್ವಜ್ಞ ಎಂದು ತಿಳಿದುಕೊಂಡಿದ್ದಾರೆ. ನಾನು ಜೀವನದಾದ್ಯಂತ ಒಬ್ಬ ವಿದ್ಯಾರ್ಥಿ ಎಂದು ತಿಳಿದು ಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಸರ್ವಜ್ಞ ಎಂದು ತಿಳಿದುಕೊಂಡಿಲ್ಲ. ಬೆಕ್ಕು ಹಾಲು ಕುಡಿಯ ಬೇಕಾದರೆ, ಕಣ್ಣುಮುಚ್ಚಿಕೊಂಡು ಹಾಲು ಕುಡಿಯುತ್ತದೆ. ಹಾಗೆ ಮಾಡುತ್ತೀರಿ ನೀವು. ನಿರ್ಲಾನ್ ವಿಚಾರ ಏನು ಈಗ ನಾನು ಹೇಳತಕ್ಕದ್ದು......

ಶ್ರೀ ರಾಮಕೃಷ್ಣ ಹೆಗಡೆ.—ಈ ಎರಡೂ ವಿಚಾರಗಳಲ್ಲಿ ತಮಗೆ ಇನ್ನು ಏನಾದರೂ ಅನುಮಾನ ಇದ್ದರೆ ಸದನದ ಕಮಿಟಿ ಮಾಡೋಣವೇ ?

ಶ್ರೀ ಎಸ್. ಬಂಗಾರಪ್ಪ.—ಅದು ನಿಮಗೇ ಬಿಟ್ಟದ್ದು, ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಪಿ.ಯು.ಸಿ. ಚೇರ್ಮನ್ನರೂ ಇದ್ದಾರೆ.......

ಶ್ರೀ ಎಸ್. ಬಂಗಾರಪ್ಪ.—ಇದನ್ನು ಯಾರಿಗೆ ಒಪ್ಪಿಸಿದರೂ ಸಂತೋಷವೇ ! ಬಹಳ ಒಳ್ಳೆಯದು, ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಒಪ್ಪಿಕೊಂಡು ಬಿಟ್ಟರೆ... ಔದಾರ್ಯದ ಗುಣ ನಮ್ಮದು. ಇದರಲ್ಲಿ ಕೇಂದ್ರ ಸರ್ಕಾರಕ್ಕೆ ಏಕೆ ಧನ್ಯವಾದ ಕೊಡಲಿಲ್ಲ ಎಂದು ಅಂತ ತಾವು ಕೇಳಿದಿರಿ ಎಲ್ಲೆಲ್ಲಿ ಧನ್ಯವಾದಗಳನ್ನು ಕೊಡಬೇಕಾಗುತ್ತದೆಯೋ, ಅಲ್ಲೆಲ್ಲಾ ನಾನು ಕೊಟ್ಟಿದ್ದೇನೆ. ಅಂದರೆ ಮಾನ್ಯ ವಿರೋಧ ಪಕ್ಷದ ನಾಯಕರ ಹಾಗೆ ನಾವು ಹೊಗಳು ಭಟ್ಟಂಗಿ ಆಗುವುದಕ್ಕೆ ಸಾಧ್ಯವಿಲ್ಲ......

ಶ್ರೀ ಎಸ್. ಬಂಗಾರಪ್ಪ.—ನೀವೇನು ನಿರೀಕ್ಷೆ ಮಾಡಿದ್ದೀರಿ ಅದು ನಡೆಯುತ್ತಿಲ್ಲ. ಹೊಗಳು ಭಟ್ಟರನ್ನು ಇಟ್ಟುಕೊಂಡು ಬಂದವರು ನೀವು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಹಿಂದೆ ನೀವು ಒಳ್ಳೆಯ ಮಾತನ್ನೂ ಆಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಒಳ್ಳೆಯ ಮಾತನಾಡಿದ್ದರೆ ಅದು ನಿಮ್ಮ ಮುಖ ನೋಡಿ, ಅಧ್ಯಕ್ಷರೇ, ಅವರ ಮುಖ ನೋಡಿದರೆ ಒಳ್ಳೆಯ ಮಾತು ಆಡಲಿಕ್ಕೆ ಮನಸ್ಸು ಬರುತ್ತದೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಭಾಷಣ ನನ್ನದೋ ಅವರದ್ದೊ? ಇದು ಚರ್ಚೆ ಆಗುವುದಿಲ್ಲ; ಈ ರೀತಿ ಮಧ್ಯೆಮಧ್ಯೆ ಎದ್ದುನಿಂತರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಬೇರೆಯವರು ಭಾಷಣ ಮಾಡಬೇಕಾದರೆ ಮಧ್ಯೆ ಮಾತು ಬರುವುದಿಲ್ಲ. ನೀವು ಮಾತನಾಡಿದರೆ ಮಾತ್ರ ಬರುತ್ತದೆ. There must be something wrong with you.

ಶ್ರೀ ರಾಮಕೃಷ್ಣ ಹೆಗಡೆ.—ಕಾರಣ ಇಷ್ಟೆ, ಯಾವ ಸಹನ ಶೀಲತೆ ನನ್ನಲ್ಲಿದೆಯೋ ಅದು ನಿಮ್ಮಲ್ಲಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೊಮ್ಮಾಯಿಯವರು ಮಾತನಾಡಿದರು, ದೇವೇಗೌಡರು ಮಾತನಾಡಿದರು. ಆದರೆ ಅವರ ಮಧ್ಯೆ ಮಾತು ಬರಲಿಲ್ಲ. ನೀವು ಮಾತನಾಡಿದರೆ ಮಾತ್ರ, ನಾನೊಬ್ಬನೇ ಅಲ್ಲ, ಎಲ್ಲರೂ ಮಾತನಾಡುತ್ತಾರೆ. ಇದಕ್ಕೆ ಏನು ಕಾರಣ ? Better you get them rectified.

(Interruptions)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಈ ವಿಚಾರ ಪ್ರಸ್ತಾಪ ಮಾಡಕೂಡದು ಎಂದು ಇದ್ದೆ, ಇದು ಅಷ್ಟೊಂದು ವಿಷಯಕ್ಕೆ ಸಂಬಂಧಪಟ್ಟಿದ್ದುದು ಅಲ್ಲ. ಹೇಳ ಬೇಕೆಂದರೆ ಹೇಳುತ್ತೇನೆ. ಏತಕ್ಕೆ ಎರಡು ವರ್ಷ ಇದನ್ನು ಕ್ಲಿಯರ್ ಮಾಡಲಿಲ್ಲ ? ನಾನು ಹೋದಾಗ ಸಂಬಂಧಪಟ್ಟ ಮಂತ್ರಿಗಳು ಸ್ಪಷ್ಟವಾಗಿ ಹೇಳಿದರು, ನಾನು ಹೆಸರು ಹೇಳಲಾರೆ, ಅವರು ನನ್ನ ಸ್ನೇಹಿತರು, ಕೇಂದ್ರದ ಮಂತ್ರಿಗಳು. ಹೇಳಿದರು, ಈ ಹೆಸರನ್ನು ನೀವು ಎಲ್ಲಿಯವರೆಗೆ ಇಡುತ್ತೀರಿ, ಅಲ್ಲಿಯ ವರೆಗೆ ಇದು ಕ್ಲಿಯರ್ ಆಗುವುದಿಲ್ಲ ಎಂದು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಕೇಳಿ, ಹೇಳುತ್ತೇನೆ. ಜನವರಿ ೩೦, ೧೯೮೫ ರಂದು ಕ್ಲಿಯರ್ ಆಗಿ ಬಂತಲ್ಲ, ಇದನ್ನು ಮೆಚ್ಚಿ ನಾನು ಪತ್ರ ಬರೆದಿದ್ದೇನೆ. ಅದಕ್ಕಾಗಿ ನಾನು ಈಗಿನ ಪ್ರಧಾನ ಮಂತ್ರಿಗಳ ವಿಚಾರದಲ್ಲಿ ''ಇವರು ಹಿಂದಿನವರಿಗಿಂತ ಭಿನ್ನ'' ಎಂದು ಹೇಳಿದ್ದೇನೆ. ಒಳ್ಳೆಯ ಕೆಲಸ ಮಾಡಿದಾಗ ''ಒಳ್ಳೆಯ ಕೆಲಸ ಮಾಡಿದ್ದೀರಿ'' ಎಂದು ಹೇಳಿದ್ದೇನೆ ಮತ್ತು ಅವರನ್ನು ಅಭಿನಂದಿಸಿದ್ದೇನೆ. ಆದರೆ, ಹಗಲುರಾತ್ರಿ ಅಭಿನಂದನೆ ಮಾಡತಕ್ಕದ್ದು ಸಾಧ್ಯವಿಲ್ಲ. ನಾನು ಜೀತದಾಳು ಅಲ್ಲ.......

ಶ್ರೀ ಎಸ್. ಬಂಗಾರಪ್ಪ.—ಈ ಪದ ನಿಮಗೆ ನೆನಪಿಗೆ ಬರುತ್ತದೆಯಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರು, ಒಂದು ಸೊಸೈಟಿಯ ಹೆಸರನ್ನು ಮಾನ್ಯ ವಿರೋಧ ಪಕ್ಷದನಾಯಕರು ಎತ್ತಿದರು. ಅದು ಒಂದು ಸೊಸೈಟಿ ಅಲ್ಲ, ನಾವು ಅಧಿಕಾರಕ್ಕೆ ಬಂದಾಗ ಸುಮಾರು ಹದಿನಾರು ಗೃಹನಿರ್ಮಾಣ ಸಹಕಾರ ಸಂಘಗಳಮೇಲೆ ಹಿಂದಿನ ಸರ್ಕಾರ ಇದ್ದಾಗ, ಲ್ಯಾಂಡ್ ಅಕ್ವಿಸಿಷನ್ ಬಗ್ಗೆ ಗ್ರೀನ್ ಬೆಲ್ಟ್ ಇದೆ, ಅದರ ಒಳಗಡೆ ಇತ್ತು ಎಂಬ ಕಾರಣಕ್ಕಾಗಿ. ಏನು ಕ್ರಮ ತೆಗೆದು ಕೊಂಡಿತ್ತು, ಈ ವಿಚಾರದಲ್ಲಿ ಚರ್ಚೆ ಮಾಡಿದಾಗ ಶ್ರೀಮಾನ್ ಕೃಷ್ಣನ್‌ರವರು ಇಲ್ಲಿ ಇದ್ದರು ನನ್ನನ್ನು ಅವರು ಬಹಳ ಸಲ ಭೇಟಿಯಾಗಿದ್ದಾರೆ. ಆದೇರೀತಿ ಕಾರ್ಮಿಕ ಮುಖಂಡರನೇಕರು ಭೇಟಿ ಯಾದರು. ಅವರು ಹೇಳಿದರು ಏನೆಂದರೆ, ಹೇಗಿದ್ದರೂ ಹಿಂದಿನಸರ್ಕಾರದವರು ನಿಯಮ ಉಲ್ಲಂಘನೆ ಮಾಡಿದ್ದಾರೆ ಭೂಮಿ ಗ್ರೀನ್‌ಬೆಲ್ಟ್ ಒಳಗಡೆ ಹೊರಟುಹೋಗಿದೆ. ಅದರಿಂದ ರೈತರೊಡನೆ ಮಾತನಾಡಿ ಒಂದು ಒಡಂಬಡಿಕೆಗೆ ಬಂದಿದ್ದಾರೆ. ಆದ್ದರಿಂದ ಲ್ಯಾಂಡ್ ಅಕ್ವಿಸಿಷನ್‌ಗೆ ಅವಕಾಶ ಕೊಡಬೇಕೆಂದು ಹೇಳಿದರು ಹಾಗೆ ಒಬ್ಬರಲ್ಲ, ಅನೇಕ ಜನ ಹೇಳಿದರು. ಆಗ ನಾವು ನಮ್ಮ ಸಚಿವಸಂಪುಟದಲ್ಲಿ ಒಂದು ನಿರ್ಣಯ ವನ್ನು ತೆಗೆದುಕೊಂಡೆವು. ಬಿ. ಡಿ. ಎ. ಯವರನ್ನೂ ಕರೆಯಿಸಿ, ಕಾರ್ಪೊರೇಷನ್‌ನವರನ್ನೂ ಕರೆಯಿಸಿ, ಒಂದು ಸಭೆ ಮಾಡಿದೆವು. ಬೆಂಗಳೂರು ನಗರದ ಬೆಳವಣಿಗೆ ಸುಮಾರು ಎರಡುಸಾವಿರ ವರ್ಷದ ವೇಳೆಗೆ ೨೦ ಲಕ್ಷದಷ್ಟು ಆಗಬಹುದು ಎಂದು ನಿರೀಕ್ಷೆ ಇದೆ. ನನ್ನ

೧೦.೦೦ ಎ.ಎಂ.

ದೃಷ್ಟಿಯಲ್ಲಿ ಇದು ೩೦ ಲಕ್ಷಕ್ಕಿಂತ ಹೆಚ್ಚು ಆಗಬಾರದು ಈ ಜನಸಂಖ್ಯೆಯ ಹೆಚ್ಚಳವನ್ನು ತಡೆ ಗಟ್ಟುವುದಕ್ಕೆ ಮತ್ತು ಮಿತಿಗೊಳಿಸುವುದಕ್ಕೆ ಹಾಗೂ ಸೀಮಿತಗೊಳಿಸುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ಈಗಾಗಲೇ ತೆಗೆದುಕೊಂಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಬೆಂಗಳೂರು ನಗರದ ಸುತ್ತ ಹಸಿರುಪಟ್ಟಿಯನ್ನು ನಿಗದಿಪಡಿಸಲಾಗಿತ್ತು, ಆದರೆ ಅನೇಕ ಗೃಹ ನಿರ್ಮಾಣ ಸಹಕಾರ ಸಂಘಗಳು ಇಂತಹ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸುವ ಸಲುವಾಗಿ ಕೆಲವು ಕಡೆಗಳಲ್ಲಿ ೩ ಎಕರೆಗಳನ್ನು, ಕೆಲವು ಕಡೆಗಳಲ್ಲಿ ೪ ಎಕರೆಗಳನ್ನು ಮತ್ತೆ ಕೆಲವು ಕಡೆಗಳಲ್ಲಿ ಹತ್ತು ಎಕರೆ ಗಳನ್ನು ಸಂಬಂಧಪಟ್ಟವರಿಂದ ಖರೀದಿ ಮಾಡಿದ್ದರಿಂದ ಹಸಿರುಪಟ್ಟಿ ರೇಖೆಯನ್ನು ಸ್ವಲ್ಪ ಮುಂದಕ್ಕೆ ನಿಗದಿಪಡಿಸುವುದು ಅಗತ್ಯವೆಂದು ನಮ್ಮ ಸರ್ಕಾರ ಒಂದು ನಿರ್ಣಯ ತೆಗೆದುಕೊಂಡಿತು. ಇದರ ಜೊತೆಗೆ ಹೌಸಿಂಗ್ ಕೋ ಆಪರೇಟೀವ್ ಸೊಸೈಟಿಗಳಿಂದ ಸರ್ಕಾರಕ್ಕೆ ಈ ಜಮೀನುಗಳ ಸಂಬಂಧದಲ್ಲಿ ಏನು ಅರ್ಜಿಗಳು ಬಂದಿದ್ದವು, ಅವುಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕಾಗಿ ಕೋ-ಆಪರೇಟೀವ್ ಇಲಾಖೆಯ ರಿಜಿಸ್ಟ್ರಾರ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡ ಲಾಯಿತು. ಇದರಲ್ಲಿ ರೆವಿನ್ಯೂ ಇಲಾಖೆಯ ಜಾಯಿಂಟ್ ಸೆಕ್ರೆಟರಿ ಅವರು ಹಾಗೂ ಬೆಂಗಳೂರಿನ ಸ್ಪೆಷಲ್ ಡಿ.ಸಿ. ಅವರು ಇರುವಂತಹ ೩ ಜನರ ಒಂದು ಕಮಿಟಿಯನ್ನು ಮಾಡಿದೆವು. ಈ ಕಮಿಟಿಯ ವರು ಯಾವ ಯಾವ ಗೃಹನಿರ್ಮಾಣ ಸಹಕಾರ ಸಂಘಗಳು ಜಮೀನನ್ನು ವಶಪಡಿಸಿಕೊಳ್ಳಲು ಅರ್ಹತೆ ಪಡೆದಿವೆ ಎಂಬುದನ್ನು ನಿರ್ಧಾರ ಮಾಡಿ ಸರ್ಕಾರಕ್ಕೆ ಶಿಫಾರಸ್ ಮಾಡಬೇಕು, ಈ ಸಹಕಾರ ಸಂಘ ಗಳು ಜಮೀನನ್ನು ಪಡೆಯಲು ಇರುವಂತಹ ಅರ್ಹತೆ ಮತ್ತು ಆಧಾರಗಳು ಏನು ಎಂದರೆ, ಐ.ಟಿ.ಐ. ಹೌಸಿಂಗ್ ಕೋಆಪರೇಟಿವ್ ಸೊಸೈಟಿಯಲ್ಲಿ ಸದಸ್ಯರಾದವರು ಅಲ್ಲಿಯೇ ಕೆಲಸಗಾರರಾಗಿರಬೇಕು ಎಂಬುದು. ಏಕೆಂದರೆ, ಈ ಬಗ್ಗೆಯೂ ಸರ್ಕಾರಕ್ಕೆ ಅನೇಕ ದೂರುಗಳು ಬಂದಿದ್ದವು. ಏನೆಂದರೆ, ಯಾವುದೋ ಒಂದು ಕಡೆ ಹೆಸರನ್ನು ಕೊಟ್ಟಿರುತ್ತಾರೆ, ಆದರೆ ಅಲ್ಲಿ ಅವರು ಕೆಲಸ ಮಾಡದಿರುವ ಕಾರಣದಿಂದ ಬೇರೆ ಸಾಮಾನ್ಯ ಜನರಿಗೆ ಸೈಟುಗಳು ಸಿಗದೆ ತೊಂದರೆಯಾಗುತ್ತದೆ. ಎಂದು. ಈ ರೀತಿ ಯಾರು ಯಾರಿಗೋ ಸೈಟುಗಳನ್ನು ಕೊಡುವುದರಿಂದ ಲಾಭ ಬಡುಕುತನ ಜಾಸ್ತಿಯಾಗುತ್ತದೆ. ಆದ್ದರಿಂದ ಇದನ್ನು ನಿಲ್ಲಿಸಬೇಕೆಂಬ ಮನವಿಗಳು ಸರ್ಕಾರಕ್ಕೆ ಬಂದಿದ್ದವು. ಆದ್ದರಿಂದ ನಾವು ೩ ಜನರ ಒಂದು ಕಮಿಟಿಯನ್ನು ರಚನೆ ಮಾಡುವುದು ಅಗತ್ಯವೆಂದು ತಿಳಿದುಕೊಂಡೆವು, ಈಗ ಬೆಂಗಳೂರಿನಲ್ಲಿ ಸುಮಾರು ೪೫ ಹೌಸಿಂಗ್ ಕೋಆಪರೇಟಿವ್ ಸೊಸೈಟಿಗಳು ಇವೆ. ಇದರಲ್ಲಿ ಮುಖ್ಯವಾದವುಗಳು ಏಂದರೆ.—

1. BEML Co-operative Housing Society 2. NGEF Employees Housing Co-operative Society 3. Aircraft Empoloyees Housing Co-operative Society 4. Shanthinagar Housing Co-operative Socicty 5. R.B.I. Employees Housing Co-operative Society 6. N.T.I. Housing Co-operative Society 7. University Engineering

Colleges Employees Housing Co-operative Society 8. Vijaya Bank Employees Housing Co-operative Society, 9, R.M.S. Telphone Employees Housing Co-operative Society, 10. C.I.L. Housing Co-operatieve Society, 11. Lakshminarasimha Swamy Co-operative Housing Society, 12. Bangalore City Employees Housing Society, 13. vayalikaval Housing Co-operative Society, 14. I.T.I. Employees Housing Co-operative Society, 15. Hebbal House Building Co-opeyative Sociey, 16. Vijayanagar Industril workers House Building Co-operative Society, 17. Kanaka Gruha Nirmana Mandali, 18. Remco Housing Society, Karnataka Legislature Employees Housing Co-operative Society, and 19. Vittalnagar House Building Co-operative Society. There are also so mony other societes totaly numbering 45. It is a big list which I do not want to read because it consumes a much time of the House. ಈ ೪೫ ಹೌಸ್ ಬಿಲ್ಡಿಂಗ್ ಕೋಆಪರೇಟೀವ್ ಸೊಸೈಟಿಗಳಿಂದ ಏನು ಅರ್ಜಿಗಳು ಬಂದಿವೆ ಈ ಅರ್ಜಿಗಳನ್ನು ಪರಿಶೀಲನೆ ಮಾಡಲು ನಾವು ಒಂದು ಕಮಿಟಿಯನ್ನು ಮಾಡಿದ್ದೇವೆ. ಈ ಸೊಸೈಟಿಗಳಲ್ಲಿರುವಂತಹ ನೌಕರರು ಇಲ್ಲವೇ ಕಾರ್ಮಿಕರ ಸಂಖ್ಯೆ ಎಷ್ಟು, ಈ ಸೊಸೈಟಿಯವರು ಕೇಳಿರುವಂತಹ ಜಮೀನಿನ ವಿಸ್ತೀರ್ಣ ಎಷ್ಟು ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ, ಏನಾದರೂ ಹೆಚ್ಚಿಗೆ ಜಮೀನನ್ನು ಕೇಳಿದ್ದರೆ, ಅದನ್ನು ಕಡಿಮೆ ಮಾಡುವಂತಹ ಅಧಿಕಾರವನ್ನು ನಾವು ಈ ಕಮಿಟಿಯವರಿಗೆ ಕೊಟ್ಟಿದ್ದೇವೆ. ಇದರ ಜೊತೆಗೆ ಇನ್ನು ಮುಂದೆ ಯಾವುದೇ ಗೃಹನಿರ್ಮಾಣ ಸಹಕಾರ ಸಂಘದವರು ಮನೆಗಳನ್ನು ಕಟ್ಟಿಸಲು ಜಮೀನು ಬೇಕೆಂದು ಕೇಳಿದರೆ, ಅವರಿಗೆ ಬೇಕಾದಂಥ ಜಮೀನನ್ನು ಬಿ.ಡಿ.ಎ. ನವರೇ ಅಕ್ವೈರ್ ಮಾಡಬೇಕು ಸರ್ಕಾರ ಅಕ್ವೈರ್ ಮಾಡಬಾರದು ಹಾಗೂ ಸಂಬಂಧಪಟ್ಟವರು ಜಮೀನಿನ ಬಗ್ಗೆ ಬಿ.ಡಿ.ಎ. ನವರನ್ನು ಅಪ್ರೋಚ್ ಮಾಡಬೇಕು ಎನ್ನತಕ್ಕಂಥ ನಿರ್ಣಯವನ್ನು ನಮ್ಮ ಸಂಪುಟದಲ್ಲಿ ೨-೩ ತಿಂಗಳ ಹಿಂದೆ ತೆಗೆದುಕೊಂಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.–ಈಗ ತಾವು ಕೆಲವು ಹೌಸಿಂಗ್ ಕೋಅಪರೇಟಿವ್ ಸೊಸೈಟಿಗಳ ಹೆಸರುಗಳನ್ನು ಹೇಳಿದೀರಿ. ಇವುಗಳಲ್ಲಿ ಎಚ್.ಎ.ಎಲ್., ಎನ್.ಜಿ.ಎಫ್. ಮುಂತಾದ ಕೆಲವು ಹೌಸಿಂಗ ಕೋಆಪರೇಟಿವ್ ಸೊಸೈಟಿಗಳು ತಮ್ಮ ನೌಕರರ ಸಲುವಾಗಿ ಒಳ್ಳೆಯ ಕೆಲಸವನ್ನು ಮಾಡಿವೆ. ಆದರೆ ಕೆಲವು ಹೌಸಿಂಗ್ ಕೋಆಪರೇಟಿವ್ ಸೊಸೈಟಿಗಳು ನೌಕರರಿಗಾಗಿಯಾಗಲೀ ಇಲ್ಲವೇ ಕಾರ್ಮಿಕರಿಗಾಗಿಯಾಗಲೀ ಸಂಬಂಧಪಟ್ಟಂತೆ ಇಲ್ಲ. ಉದಾಹರಣೆಗೆ ಹೇಳಬೇಕೆಂದರೆ, ವೈಯಾಲಿಕಾವಲ್ ಹೌಸಿಂಗ್ ಕೋಆಪರೇಟಿವ್ ಸೊಸೈಟಿ, ಮಲ್ಲೇಶ್ವರಂ ಟೈಲರಿಂಗ್ ಹೌಸಿಂಗ್ ಕೋಆಪರೇಟಿವ್ ಸೊಸೈಟಿ ಏನಿವೆ, ಇವು ತಮಗಿಷ್ಟ ಬಂದಂತೆ ಕೆಲಸ ಮಾಡುತ್ತಿವೆ. ಜನರಿಂದ ಬಂದ ಹಣವನ್ನು ದುರುಪಯೋಗಪಡಿಸಿಕೊಂಡಿವೆ. ಆದರೂ ಸಹ ಇಂತಹ ಸೊಸೈಟಿಗಳಿಗೆ ಅನುಮತಿ ಕೊಡಲು ಕಾರಣವೇನು ? ಇವುಗಳ ಬಗ್ಗೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನೆಲ್ಲಾ ತೆಗೆದುಕೊಳ್ಳಬೇಕೆಂದು ತಮಗೆ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಸೊಸೈಟಿಗಳ ವಿಚಾರದಲ್ಲಿ ಯಾವುದೇ ರೀತಿಯ ಅನರ್ಹತೆ ಇದ್ದರೆ ಆ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ. ಆದರೆ ಈ ಹಿಂದೆಯೇ ಜಮೀನನ್ನು ಕೊಟಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ಮಾನ್ಯ ಕೃಷ್ಣನ್ ಅವರು ಏನು ಕೆಲವು ಹೆಸರುಗಳನ್ನು ಹೇಳಿದರು, ಆ ಸೊಸೈಟಿಗಳ ಬಗ್ಗೆ ಸರ್ಕಾರಕ್ಕೆ ದೂರುಗಳು ಜನರಿಂದ ಬಂದಿದ್ದವು. ಆದರೆ ಪ್ರತಿ ಸೊಸೈಟಿಯಲ್ಲಿಯೂ ಸೈಟುಗಳನ್ನು ಪಡೆಯಲು ಅರ್ಹತೆ ಪಡೆದಂಥವರು ಇದ್ದಾರೋ ಅಥವಾ ಇಲ್ಲವೋ ಎಂಬುದನ್ನು ಸರ್ಕಾರದವರು ನೋಡುವುದಕ್ಕಾಗುವುದಿಲ್ಲ. ಅದಕ್ಕಾಗಿಯೇ ನಾವು ಈ ಒಂದು ಕಮಿಟಿಯನ್ನು ರಚನೆ ಮಾಡಿದ್ದು. ಈ ಕಮಿಟಿಯವರು ಏನು ನಿರ್ಣಯ ಮಾಡುತ್ತಾರೋ, ಮತ್ತು ಸರ್ಕಾರಕ್ಕೆ ಏನು ಶಿಫಾರಸ್ ಮಾಡುತ್ತಾರೋ, ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಹೇಳಿದನ್ನು ಸಹ ತಾವು ಪರಿಶೀಲನೆ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಪರಿಶೀಲನೆ ಮಾಡೋಣ. ಒಟ್ಟಿನಲ್ಲಿ ಈ ಒಂದು ಪ್ರಕರಣದಲ್ಲಿ ಅವ್ಯವಹಾರವಾಗಲೀ, ದುರ್ವ್ಯವಹಾರವಾಗಲಿ, ಭ್ರಷ್ಟಾಚಾರವಾಗಲೀ, ನಡೆದಿಲ್ಲ. ಎಂದು ಹೇಳ ತಕ್ಕಂಥ ಮಾತನ್ನು ಅತ್ಯಂತ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಒಟ್ಟಿನಲ್ಲಿ ಗ್ರೀನ್-ಬೆಲ್ಟ್ ಏರಿಯಾ ಮುಂದಕ್ಕೆ ಹೋಗಿದೆ. ಈ ಬಗ್ಗೆ ಮಂತ್ರಿಮಂಡಲ ಒಂದು ತೀರ್ಮಾನ ತೆಗೆದುಕೊಂಡಿದೆ ಎಂದು ಮುಖ್ಯ ಮಂತ್ರಿಗಳು ಹೇಳಿದರು ಈ ಒಂದು ಸಂದರ್ಭದಲ್ಲಿ ಕೆಲವು ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗಳು ಜಮೀನನ್ನು ಖರೀದಿ ಮಾಡುವ ಹಂತದಲ್ಲಿ ಲಕ್ಷಾಂತರ ರೂಪಾಯಿಗಳ ಒಂದು ಅವ್ಯವಹಾರ ನಡೆದಿದೆ. ಆದ್ದರಿಂದ ಈ ಪ್ರಕರಣವನ್ನು ಸಹ ಏತಕ್ಕೆ ಪಿ.ಎ.ಸಿ. ಮೂಲಕ ವಿಚಾರಣೆ ಮಾಡಿಸಬಾರದು ? ಗ್ರೀನ್ ಬೆಲ್ಟ್ ಏರಿಯಾನನ್ನು ಬದಲಾವಣೆ ಮಾಡುವ ಅಗತ್ಯವಿತ್ತೇ ಅಥವಾ ಇಲ್ಲವೇ ಎಂಬುದನ್ನು ಅವರು ಪರಿಶೀಲನೆ ಮಾಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಪಿ.ಎ.ಸಿ. ಅವರಿಗೆ ಯಾವುದೇ ಫೈಲನ್ನಾದರೂ ತರಿಸಿ ನೋಡುವಂತಹ ಅಧಿಕಾರವಿದೆ.

ಶ್ರೀ ಎಸ್. ಬಂಗಾರಪ್ಪ.—ಈ ಬಗ್ಗೆ ಸರ್ಕಾರದ ಮನಸ್ಸು ಏನಿದೆ ಎಂಬುದು ನಮಗೆ ಅರ್ಥವಾಗ ಬೇಕಾಗಿದೆ.

ಅಧ್ಯಕ್ಷರು.—ಅವರಿಗೆ ಅಧಿಕಾರ ಇದೆ. ಆದ್ದರಿಂದ ಅವರು ಫೈಲನ್ನು ತರಿಸಿಕೊಂಡು ನೋಡಲಿ.

SRI S. BANGARAPPA.—Whether the Govanment is prapared to entrust the matter to the P.A.C. for investigation ?

ಶ್ರೀ ರಾಮಕೃಷ್ಣ ಹೆಗಡೆ.—ಅಗತ್ಯವಾಗಿ ಆಗಬಹುದು. ಅದಕ್ಕೆ ನನ್ನ ಆಕ್ಷೇಪವೇನೂ ಇಲ್ಲ. ಅವರು ನೋಡಲಿ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ತೀರ್ಮಾನವನ್ನು ನಾನು ಸ್ವಾಗತ ಮಾಡುತ್ತೇನೆ. ತಾವು ತೆಗೆದುಕೊಂಡ ತೀರ್ಮಾನಕ್ಕಾಗಿ ನಾನು ತಮಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಶ್ರೀ ಕೃಷ್ಣಭಟ್ ಎಂಬುವರ ಹೆಸರಿನಲ್ಲಿ ವಿಶ್ವಭಾರತಿ ಕಾಂಪ್ಲೆಕ್ಸ್ ಬಗ್ಗೆ ದಿನವೂ ಪತ್ರಿಕೆಗಳಲ್ಲಿ ಬರುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಕರಪ್ಷನ್ ವಿಚಾರದಲ್ಲಿ ಮಾನ್ಯ ವಿರೋಧಿ ಪಕ್ಷದ ನಾಯಕರು ಮತ್ತು ಇನ್ನೂ ಒಬ್ಬಿಬ್ಬ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಈ ಲೋಕಾಯುಕ್ತರ ನೇಮಕ ಇನ್ನೂ ಸ್ವಲ್ಪ ದಿವಸಗಳಲ್ಲೇ ಆಗುತ್ತದೆ. ಈ ಸಂಬಂಧದಲ್ಲಿ ಈ ಮನೆಯ ವಿರೋಧಿ ಪಕ್ಷದ ನಾಯಕರನ್ನೂ, ಮೇಲ್ಮನೆಯ ವಿರೋಧಿ ಪಕ್ಷದ ನಾಯಕರನ್ನೂ ಕರೆಯಿಸಿ ಮಾತನಾಡಿದ್ದೇನೆ. ನಾವು ಯಾವ ಯಾವ ಹೆಸರುಗಳನ್ನು ಈ ಲೋಕಾಯುಕ್ತಕ್ಕೆ ನೇಮಿಸಲು ಯೋಚನೆ ಮಾಡಿದ್ದೇವೋ, ದುರ್ದೈವದಿಂದ ಅವರು ಯಾರೂ ಈ ಹುದ್ದೆಯನ್ನು ಸ್ವೀಕಾರ ಮಾಡಲಿಕ್ಕೆ ಒಪ್ಪಲಿಲ್ಲ. ನಾನು ಪುನಃ ಕೇಂದ್ರದ ಕಾನೂನು ಮಂತ್ರಿಗಳವರ ಸಲಹೆಯನ್ನು ಕೇಳಿದ್ದೇನೆ. ಅವರೂ ಒಂದೆರಡು ಸಲಹೆಗಳನ್ನು ಕೊಟ್ಟಿದ್ದಾರೆ. ಆ ರೀತಿ ಅವರು ಹೇಳಿದ ಪ್ರಕಾರ ಮಾಡುವ ಸಂಭವ ಇದ್ದರೆ ಈ ಮನೆಯ ವಿರೋಧಿ ಪಕ್ಷದ ನಾಯಕರನ್ನೂ ಮತ್ತು ಮೇಲ್ಮನೆಯ ವಿರೋಧಿ ಪಕ್ಷದ ನಾಯಕರನ್ನೂ, ಅಧ್ಯಕ್ಷರನ್ನು ಹಾಗೂ ಸಭಾಪತಿಗಳನ್ನು ಮತ್ತು ಮುಖ್ಯ ನ್ಯಾಯಾಧೀಶರನ್ನು ಕನ್ಸಲ್ಟ್ ಮಾಡಿ ಕೊನೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಇನ್ನು ಡ್ರಾಪ್ ಕೇಸಸ್ ಎಷ್ಟು ಎಂದು ಕೇಳಿದ್ದಾರೆ. ೩ ವರ್ಷದಲ್ಲಿ ಒಟ್ಟು ೨೫೨ ಡ್ರಾಪ್ ಕೇಸಸ್‌ಗಳು ಆಗಿವೆ. ಅದರಲ್ಲಿ ೭೨ ಕೇಸ್‌ಗಳು ಕೋರ್ಟಿನಲ್ಲಿ ಇವೆ, ಅದರ ಬಗ್ಗೆ ಪ್ರಾಸಿಕ್ಯೂಷನ್ ಆಗುತ್ತಿದೆ. ಆಮೇಲೆ ೧೧೮ ಕೇಸುಗಳ ವಿಚಾರದಲ್ಲಿ ಡಿಪಾರ್ಟ್‌ಮೆಂಟಲ್ ಕ್ರಮವನ್ನು ತೆಗೆದುಕೊಂಡಿದ್ದೇವೆ. ೪೫ ಕೇಸ್ ವಿಚಾರದಲ್ಲಿ 'ಬಿ' ರಿಪೋರ್ಟ್ ಬಂದಿದೆ. ಇನ್ನು ೧೭ ಕೇಸ್‌ಗಳು ಇನ್ನೂ ವಿವಿಧ ಹಂತದಲ್ಲಿ ಇವೆ. ಆಮೇಲೆ ತಮ್ಮ ಘೋಷಿತ ಆದಾಯಕ್ಕಿಂತಲೂ ಹೆಚ್ಚು ಹಣ ಸ್ವೀಕರಿಸಿದಂತಹ ಕೇಸ್‌ಗಳು. ಆ ವಿಚಾರದಲ್ಲಿ ೫೩೫ ದೂರು ಬಂದಿವೆ.

ಇವುಗಳಲ್ಲಿ ೨೪ ಕೇಸ್‌ಗಳು ಕೋರ್ಟಿನಲ್ಲಿ ಪ್ರಾಸಿಕ್ಯೂಷನ್ ಸ್ಟೇಜ್‌ನಲ್ಲಿ ಇವೆ, ೬೮ ಕೇಸ್‌ಗಳ ವಿಚಾರದಲ್ಲಿ ಡಿಪಾರ್ಟ್‌ಮೆಂಟಲ್ ಕ್ರಮ ತೆಗೆದುಕೊಂಡಿದ್ದೇವೆ. ಆಮೇಲೆ ೨೯೧ ಕೇಸ್‌ಗಳ ಬಗ್ಗೆ 'ಬಿ' ರಿಪೋರ್ಟ್ ಬಂದಿದೆ. ಮತ್ತು ೧೫೨ ಕೇಸ್‌ಗಳು ವಿವಿಧ ಹಂತದಲ್ಲಿ ಇನ್ನೂ ಪೆಂಡಿಂಗ್‌ನಲ್ಲಿ ಇವೆ. ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದ ಹಾಗೆ ವಿರೋಧಪಕ್ಷದನಾಯಕರು ಪುನಃ ಪುನಃ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮೂದಲಿಸಿ ಮಾತನಾಡುತ್ತಿದ್ದಾರೆ. ಅವರು ಮಾತನಾಡಿಕೊಳ್ಳಲಿ, ಅವರಿಗೆ ಸ್ವಾತಂತ್ರ್ಯ ಇದೆ. ನಮ್ಮ ವಿಚಾರವನ್ನು ಅವರು ಒಪ್ಪದೇ ಇರಬಹುದು. ಮೌಲ್ಯಾಧಾರಿತ ರಾಜಕಾರಣ ಎಂದರೆ ಅದರಲ್ಲಿ ಭ್ರಷ್ಟಾಚಾರ ನಿರ್ಮೂಲನೆಯು ಒಂದು ಭಾಗ ಮಾತ್ರ. ಮೌಲ್ಯಾಧಾರಿತ ರಾಜಕಾರಣದಲ್ಲಿ ಭ್ರಷ್ಟಾಚಾರ ರಹಿತವಾದಂತಹ ಆಡಳಿತ ಕೊಟ್ಟರೆ ಅದು ಮೌಲ್ಯಾಧಾರಿತ ರಾಜಕಾರಣವಾಗಲಿಲ್ಲ. ನಮ್ಮ ಸರ್ಕಾರದ ರೀತಿ ನೀತಿಗಳಲ್ಲಿ, ಸರ್ಕಾರದ ಕಾರ್ಯಕ್ರಮಗಳಲ್ಲಿ ನಾವು ಕೆಲವು ಮೌಲ್ಯಗಳನ್ನು ಅಂದರೆ ಯಾವುದರಲ್ಲಿ ನಮಗೆ ನಂಬಿಕೆ ಇದೆಯೋ ಆ ಮೌಲ್ಯಗಳನ್ನು ನಾವು ಅನುಸರಿಸಬೇಕು. ಇದಕ್ಕೆ ನಮ್ಮ ದೃಷ್ಟಿಯಲ್ಲಿ ಪ್ರಜಾಪ್ರಭುತ್ವದ ನಿಯಮಕ್ಕೆ ಸರಿಯಾಗಿ ನಡೆಯಬೇಕೆಂಬುದು. ಆ ಕಡೆ ಕುಳಿತಿರುವ ಮಾನ್ಯ ಸ್ನೇಹಿತರಿಗೆ ಆ ಭಾವನೆ ಇರಲಿಕ್ಕೆ ಇಲ್ಲ. ನಮ್ಮ ದೃಷ್ಟಿಯಲ್ಲಿ ಮೌಲ್ಯಾಧಾರಿತ ರಾಜಕಾರಣ ಎಂದರೆ ಅದು ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ಒಂದು. ಆದುದರಿಂದ, ಭ್ರಷ್ಟಾಚಾರ ಒಂದನ್ನು ನಾವು ನಾಳೆಯೇ ಸಂಪೂರ್ಣವಾಗಿ ತೆಗೆದುಹಾಕುತ್ತೇವೆಂದರೆ, ಅದು ಎಷ್ಟು ಕಷ್ಟ ಎಂದು ಎಲ್ಲರಿಗೂ ಗೊತ್ತು. ಭ್ರಷ್ಟಾಚಾರ ಒಂದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿದರೆ ಅದು ನೂರಕ್ಕೆ ನೂರರಷ್ಟು ಮೌಲ್ಯಾಧಾರಿತ ರಾಜಕಾರಣವಾಗುವುದಿಲ್ಲ. ಅದು ಕೇವಲ ಒಂದು ಮುಖ ಮಾತ್ರ. ಇದರ ಜೊತೆಗೆ ಇನ್ನೂ ಹಲವು ಮುಖಗಳು ಇವೆ. ನಾವು ಅದನ್ನು ಒಳ್ಳೆಯ ದೃಷ್ಟಿಯಿಂದ ನೋಡುತ್ತೇವೆಯೇ ಹೊರತು ಮಾನ್ಯ ವಿರೋಧ ಪಕ್ಷದ ನಾಯಕರ ಅಭಿಪ್ರಾಯದಂತೆ ಅವ್ಯವಹಾರ ಮತ್ತೊಂದು ಮಗದೊಂದು ಎಂದು ನೋಡಿದರೂ ಸಹ, ಇದರಿಂದ ಮೌಲ್ಯಾಧಾರಿತ ರಾಜಕಾರಣ ಎಲ್ಲಿ ಇದೆ ? ಎಂದು ಕೇಳುತ್ತಿದ್ದಾರೆ. ಅವ್ಯವಹಾರ ಎಲ್ಲಿ ಇದೆ ಅದನ್ನು ಖಂಡನೆ ಮಾಡುತ್ತೇವೆ. ಹಾಗೂ ಯಾರೇ ಅವ್ಯವಹಾರವನ್ನು ಮಾಡಿದರೂ ಅವರ ವಿರುದ್ಧವಾಗಿ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಇವರು ಮೌಲ್ಯಾಧಾರಿತ ಎಂದು ಹೇಳುತ್ತಾರೆ. ಮೌಲ್ಯ ಎಂದರೇನು ಎನ್ನುತಕ್ಕದ್ದನ್ನು ಹೇಳಬೇಕು. ಎಫಿಶಿಯೆಂಟ್ ಅಂಡ್ ಮೆರಿಟ್ ಎಂದು ಹೇಳಿಬಿಟ್ಟು ಇದರ ಸೋಗಿನಲ್ಲಿ ಸರ್ಕಾರ ತನ್ನ ಬೇಳೆಯನ್ನು ಬೇಯಿಸಿಕೊಳ್ಳುವುದು ಮೌಲ್ಯಾಧಾರಿತ ರಾಜಕಾರಣವೇ ಎಂಬುದನ್ನು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಚ್ಛವಾದಂತಹ ರಾಜಕಾರಣ, ಇದೂ ಒಂದು ಮೌಲ್ಯ. ಪ್ರಜಾಪ್ರಭುತ್ವ, ಇದು ಮತ್ತೊಂದು ಮೌಲ್ಯ. ಸಾಮಾಜಿಕ ನ್ಯಾಯ, ಇದು ಒಂದೂ ಮೌಲ್ಯ.

ಶ್ರೀ ಬಿ. ಬಸವಲಿಂಗಪ್ಪ.—ಪ್ರಜಾಪ್ರಭುತ್ವ ಮೊದಲಿನಿಂದಲೂ ಇದ್ದೇ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಿ ?

ಶ್ರೀ ಬಿ. ಬಸವಲಿಂಗಪ್ಪ.—ಈ ದೇಶದಲ್ಲಿ.

ಶ್ರೀ ರಾಮಕೃಷ್ಣ ಹೆಗಡೆ.—ಏನು ನಾವು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಕಾಯ್ದೆ ಮಾಡಿದ್ದೇವೆ ಅದೂ ಒಂದು ಮೌಲ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಕಾಲದಲ್ಲಿ ತಾಲ್ಲೂಕು ಬೋರ್ಡ್ ಇತ್ತು. ಅದು ಜನರ ಕೈಯಲ್ಲಿ ಕೊಟ್ಟಂತಹ ಅಧಿಕಾರ ಆಗಿರಲಿಲ್ಲವೇ ? ಆಗ ಒಳ್ಳೆಯ ಕೆಲಸಗಳು ಆಗಿರಲಿಲ್ಲವೇ ?

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್.—ನಿಜ. ಮೌಲ್ಯಾಧಾರಿತ ಎನ್ನುವ ತತ್ವವನ್ನು ನೀವು ಇಟ್ಟುಕೊಂಡಿದ್ದೀರಿ. ಅದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದು ತಮಗೂ ಗೊತ್ತು. ನಿಮ್ಮ ಕಾಲದೊಳಗೆ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಸೆಲೆಕ್ಷನ್ ಕಮಿಟಿಗಳನ್ನು ಮಾಡಿದ್ದೀರಿ. ಈ ಕಮಿಟಿಯ ಸದಸ್ಯರು ಭ್ರಷ್ಟಾಚಾರ ಮಾಡಿ ಹಣವನ್ನು ತಿಂದಿದ್ದಾರೆಂದು ನಿಮಗೆ ದೂರು ಕೊಟ್ಟಾಗ

ಆ ಕಮಿಟಿಗಳನ್ನು ರದ್ದು ಮಾಡಿದಿರಿ. ಈ ಕಮಿಟಿಯ ಸದಸ್ಯರು ಐದು ನೂರು ರೂಪಾಯಿಗಳಿಂದ ಐದು ಸಾವಿರ ರೂಪಾಯಿಗಳವರೆಗೆ ಒಬ್ಬೊಬ್ಬ ಅಭ್ಯರ್ಥಿಯಿಂದ ತಿಂದಿದ್ದಾರೆ. ಇಂತಹವರನ್ನು ನೀವು ಜೈಲಿಗೆ ಕಳುಹಿಸಲಿಲ್ಲ. ಯಾರೋ ಒಬ್ಬ ೪ ರೂಪಾಯಿಯನ್ನು ತೆಗೆದುಕೊಂಡುಬಿಟ್ಟ ಎಂದು ಅವನನ್ನು ಜೈಲಿಗೆ ಹಾಕುತ್ತೀರಿ. ಇಂತಹ ಖದೀಮರನ್ನು ನೀವು ಏನೂ ಮಾಡುವುದಿಲ್ಲ. ಈ ರೀತಿ ಹಣ ತಿನ್ನುವವರನ್ನು ಮೊದಲು ಜೈಲಿಗೆ ಹಾಕಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೆ.ಎಚ್. ಪಾಟೀಲರು ಹೇಳಿದ್ದನ್ನು ನಾನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಈಗ ಕೆಲವು ನೇಮಕಾತಿ ಸಮಿತಿಗಳಲ್ಲಿ ಒಬ್ಬೊಬ್ಬ ಸದಸ್ಯರು ಭ್ರಷ್ಟಾಚಾರ ಆರೋಪಕ್ಕೆ ಒಳಗಾಗಿದ್ದಾರೆ. ಭ್ರಷ್ಟಾಚಾರ ನಡೆದಿದೆ ಎಂದು ಸುದ್ದಿ ಬಂದ ತಕ್ಷಣ ಸಂಬಂಧಪಟ್ಟ ಮಂತ್ರಿಗಳು ಅಂಥಹವರನ್ನು ವಜಾ ಮಾಡಿದ್ದಾರೆ. ಅಂಥಹವರಿಗೆ ಏಕೆ ಶಿಕ್ಷೆ ಮಾಡಲಿಲ್ಲ ಎಂದರೆ, ಈಗ ಯಾರೋ ಒಬ್ಬರು ಬಂದು ನನ್ನ ಹತ್ತಿರ ಹಣವನ್ನು ಇಂತಹ ಸದಸ್ಯರು ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ಆ ಸದಸ್ಯನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನೀವು ಹಣ ಕೊಟ್ಟದ್ದಕ್ಕೆ ಏನಾದರೂ ಆಧಾರ ಕೊಡಿ ಅಥವಾ ಹಣ ಕೊಟ್ಟವರನ್ನು ನನ್ನ ಹತ್ತಿರ ಕರೆದುಕೊಂಡು ಬನ್ನಿ ಎಂದು ನಾನು ಒಂದು ಒಬ್ಬರಿಗೆ ಹೇಳಿದೆ. ಅವರು ಒಂದು ಸಾರಿ ಒಬ್ಬರನ್ನು ಕರೆದುಕೊಂಡು ಬಂದರು. ಅವರು ಇಂತಹ ಸದಸ್ಯರೊಬ್ಬರು ನನಗೆ ಹಣ ಕೊಟ್ಟರೆ ಕೆಲಸ ಕೊಡಿಸುತ್ತೇನೆಂದು ಬೇರೆಯವರ ಹತ್ತಿರ ನನಗೆ ಹೇಳಿ ಕಳುಹಿಸಿದ್ದರು ಎಂದು ಹೇಳಿದರು. ಅವರು ಹೇಳಿದ ಮೇಲೆ ನಾವು ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಒಂದು ಪಕ್ಷ ಕ್ರಮ ತೆಗೆದುಕೊಂಡರೆ ಅದು ಯಾವ ಕೋರ್ಟಿನಲ್ಲಿ ನಿಲ್ಲುತ್ತದೆ ? ಸರಿಯಾದ ಆಧಾರ ಕೊಟ್ಟರೆ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಎಂದೆಂದೂ ಹಿಂದುಮುಂದು ನೋಡುವುದಿಲ್ಲ. ಯಾರೇ ಇರಲಿ, ಅವರು ನಮ್ಮ ಪಕ್ಷದವರೇ ಇರಲಿ. ಬೇರೆ ಪಕ್ಷದವರೇ ಇರಲಿ ಅವರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಭ್ರಷ್ಟ ಸದಸ್ಯರನ್ನು ಸಮಿತಿಯೊಳಗೆ ಇರುವುದಕ್ಕೆ ಬಿಡುವುದಿಲ್ಲ.

ಶ್ರೀ ಯು. ಭೂಪತಿ.—ಲಂಚ ತೆಗೆದುಕೊಂಡವರು ರಶೀತಿ ಕೊಡುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಲಂಚ ತೆಗೆದುಕೊಂಡವರು ರಶೀತಿ ಕೊಡುವುದಿಲ್ಲ ಎನ್ನುವುದು ನನಗೂ ಗೊತ್ತಿದೆ. ಕನಿಷ್ಟ ಓರಲ್ ಆಗಿಯಾದರೂ ಬಂದು ಹೇಳಬಹುದಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಆತ್ಮ ಸಾಕ್ಷಿಯಾಗಿ ಹೇಳಿ. ಯಾರು ಲಂಚ ತೆಗೆದುಕೊಳ್ಳುವುದಿಲ್ಲ ಎಂಬುದು ನಿಮಗೆ ಗೊತ್ತಿಲ್ಲವೆ ? ನಿಮಗೆ ಎಲ್ಲಾ ಗೊತ್ತಿದ್ದರೂ ಕೂಡಾ ಪದೇ ಪದೇ ಏಕೆ ಹೀಗೆ ಹೇಳುತ್ತಿದ್ದೀರಿ ?

ಅಧ್ಯಕ್ಷರು.—ಹೀಗೆ ಮಧ್ಯೆ ಮಧ್ಯೆ ನೀವುಗಳು ಮಾತನಾಡುತ್ತಿದ್ದರೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರ ಆಗುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಬೇಕು.

ಶ್ರೀ ಎಂ. ರಾಮಪ್ಪ.—ಸುಪ್ರೀಂ ಕೋರ್ಟ್ ಈ ಬಗ್ಗೆ ತೀರ್ಪನ್ನೂ ಕೂಡಾ ಕೊಟ್ಟಿದೆ. ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಆರ್.ಎನ್. ನಾಯ್ಕ.—ಮಾನ್ಯ ಹೆಗಡೆಯವರ ಪಟ್ಟಿಯಲ್ಲಿ ದೇವರು ಮತ್ತು ಲಂಚ ಒಂದೇ ತರಹ ಎಂದು ಕಾಣುತ್ತದೆ.

ಶ್ರೀ ಬಿ. ರಾಚಯ್ಯ.—ಇದು ಅತೀ ಆಯಿತು.

ಶ್ರೀ ಎಸ್. ಬಂಗಾರಪ್ಪ.—ಲಂಚ ಅತೀ ಆಯಿತು ಎಂದೇ ?

ಅಧ್ಯಕ್ಷರು.—ಇಂಟರ್‌ಫಿಯರೆನ್ಸ್ ಅತೀ ಆಯಿತು ಎಂದು ಹೇಳಿದ್ದಾರೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಹೆಗಡೆಯವರು ಇಷ್ಟು ಬುದ್ಧಿವಂತರು ಇಷ್ಟು ಜಾಣರು ಇದ್ದು, ಅವರಿಗೆ ಈ ಲಂಚ ತಿನ್ನುವವರು ಯಾರು ಎಂದು ಗೊತ್ತಿಲ್ಲವೇ ? ಇವೊತ್ತು ಹರಕಲು ಜುಬ್ಬ, ಪೈಜಾಮು ಹಾಕಿಕೊಂಡು ಬಂದಂತಹವರು, ಈಗ ಫೀಯೆಟ್ ಕಾರು, ಸುವ್ಯವಸ್ಥಿತ ಬಂಗಲೆ ಎಲ್ಲವನ್ನೂ ಮಾಡಿಕೊಂಡಿದ್ದಾರೆ. ಹೀಗೆಲ್ಲಾ ಅವರಿಗೆ ಬರಬೇಕಾದರೆ ಎಲ್ಲಿಂದ, ಹೇಗೆ

ಬರುತ್ತದೆ ? ಅದನ್ನು ಪತ್ತೆ ಮಾಡುವುದು ನಿಮಗೆ ಕಷ್ಟವೇ ? ಇಂತಹವರನ್ನು ಪತ್ತೆ ಮಾಡಲಿಕ್ಕೆ ನಿಮ್ಮಲ್ಲಿ ಪೋಲೀಸರು ಇದ್ದಾರೆ, ಹಾಗೂ ಇನ್ನಿತರ ಸೂಕ್ತ ವ್ಯವಸ್ಥೆ ನಿಮ್ಮಲ್ಲಿ ಇದೆ ಇದನ್ನು ಕಂಡು ಹಿಡಿಯಲಿಕ್ಕೆ, ಒಂದು ವೇಳೆ ನಿಮಗೆ ಇದನ್ನು ಕಂಡುಹಿಡಿಯಲಿಕ್ಕೆ ಕಷ್ಟ ಆದರೆ, ಇನ್ನು ಯಾರಿಗೂ ಪತ್ತೆ ಮಾಡಲಿಕ್ಕೆ ಸಾಧ್ಯವೇ ಇಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ.—ಅಂತಹವರು ಯಾರು ಎಂದು ಹೇಳಿ. ಯಾರು ಈವಾಗ ಫಿಯಟ್ ಕಾರು ಇಟ್ಟುಕೊಂಡಿದ್ದಾರೆ, ಅವರ ಹೆಸರನ್ನು ಹೇಳಿ, ಕ್ರಮ ತೆಗೆದುಕೊಳ್ಳುತ್ತೇವೆ. ಸುಮ್ಮನೇ ಲೋಕಾಭಿರಾಮವಾಗಿ ಆರೋಪ ಮಾಡುವುದು ಬೇಡ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೇ ಬೇಡವೇ ಎಂದು ಹೇಳಿ. ತಾವುಗಳು ಈ ರೀತಿಯಲ್ಲಿ ವರ್ತಿಸುವುದು ಒಳ್ಳೆಯದಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿರಿ. ಅವರು ಈಗ ಉತ್ತರವನ್ನು ಹೇಳಿ ಮುಗಿಸಲಿ. ಆಮೇಲೆ ನಿಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದಕ್ಕೆ ಸಂಬಂಧಪಟ್ಟದ್ದು ಅಲ್ಲ. ಸದನದ ಮಾನ್ಯ ಸದಸ್ಯಣಿಯವರೊಬ್ಬರು ವಿಷಯವೊಂದನ್ನು ಮುಖ್ಯಮಂತ್ರಿಗಳವರ ಗಮನಕ್ಕೆ ತಂದಿದ್ದಾರೆ.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸದನದಲ್ಲಿ ಸದನದ ಹಿರಿಯ ಸದಸ್ಯಣಿಯವರೊಬ್ಬರು ಒಂದು ವಿಷಯವನ್ನು ಸದನದ ಮುಂದೆ ತಂದಾಗ, ಅದನ್ನು ಲೋಕಾಭಿರಾಮವಾಗಿ ಹೇಳಿದ್ದಾರೆ ಎಂದು ನಾವು ಹೇಳಿದರೆ ಇಲ್ಲಿ ಹೇಗೆ ಕುಳಿತುಕೊಳ್ಳುವುದು ?

ಅಧ್ಯಕ್ಷರು.—ಅದು ಸರಿಯೆಂದು ನಾನು ಹೇಳುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನಗೆ ಲೋಕಾಭಿರಾಮವಾಗಿ ಮಾತನಾಡುವುದಕ್ಕೆ ಈ ಸಂದರ್ಭ ಬೇಕಾಗಿದೆಯೇ ? ಅದಕ್ಕೆ ಬೇಕಾದಷ್ಟು ಸಮಯ, ಸಂದರ್ಭಗಳು ಇವೆ. ಅದಕ್ಕಾಗಿ ನಾನು ಅಸ್ಸೆಂಬ್ಲಿಗೆ ಬರಬೇಕಾಗಿಲ್ಲ. ಹೆಸರುಗಳನ್ನು ಹೇಳುವುದಕ್ಕೆ ನಾವು ಪಟ್ಟಿ ಮಾಡಿಕೊಂಡು ಇವರಿಗೆ ಕೊಡಬೇಕಾಗಿದೆಯೆ ?

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿರಿ. ಮಾನ್ಯ ಬಂಗಾರಪ್ಪನವರೇ, ನೀವು ವಿರೋಧ ಪಕ್ಷದ ನಾಯಕರು. ನೀವೇ ಹೀಗೆ ಕೇಳುತ್ತೀರಿ ಎಂದರೆ ಹೇಗೆ ? ಅವರು ಉತ್ತರ ಕೊಡುವ ಕಾಲದಲ್ಲಿ ಮಧ್ಯೆ ಮಾತನಾಡುವುದು ಸರಿಯೇ ? ನಿಮಗೆ ಅವಕಾಶವನ್ನು ಕೊಟ್ಟಿದ್ದೇನೆ. ಉತ್ತರ ಮುಗಿದ ಮೇಲೆ ಕ್ಲಾರಿಫಿಕೇಷನ್ ಕೇಳುವಾಗ ಮತ್ತೆ ಅವಕಾಶ ಕೊಡುತ್ತೇನೆ. ಇದು ತೀರಾ ಹೆಚ್ಚಿಗೆ ಆಯಿತು. ದಯವಿಟ್ಟು ಮತ್ತೊಬ್ಬರ ಮನಸ್ಸು ನೋಯುವಂತೆ ಯಾರೂ ಮಾತನಾಡಬಾರದು.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಯಾರೂ ಮಾತನಾಡಬಾರದು. ಇದು ರಿಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಕೆ. ಮಲ್ಲಪ್ಪ.—ಈ ಹಿಂದೆ ಆ ಕಡೆಯಲ್ಲಿ ಕುಳಿತವರು ಮಂತ್ರಿಗಳಾಗಿದ್ದರು. ಅದು ನೀವು ಕುಳಿತಿರುವ ಸ್ಥಾನದಲ್ಲಿ ಹಿಂದೆ ಒಬ್ಬರು ಕುಳಿತಿದ್ದರು. ಅವರು ಮಂತ್ರಿಗಳಾಗಿದ್ದರು. ಅವರು ಅಪಾರವಾದಂತಹ ಆಸ್ತಿ ಸಂಪಾದನೆ ಮಾಡಿದ್ದರು. ಈ ಆಸ್ತಿ ಎಲ್ಲಿಂದ ಬಂತು ಎಂದು ಕೇಳಿದಾಗ ಮಾವನ ಮನೆಯಿಂದ ಕೊಟ್ಟರು ಎಂದು ಹೇಳಿದರು. ಲಕ್ಷಾಂತರ ರೂಪಾಯಿಗಳ ಕಟ್ಟಡ ಇತ್ಯಾದಿ ಮಾಡಿದ್ದರು. ಹೇಗೆ ಮಾಡಿದರು ?

ಶ್ರೀ ಆರ್.ಎಲ್. ಜಾಲಪ್ಪ.—ಅಧ್ಯಕ್ಷರೇ......

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಲಕ್ಷಾಂತರ ರೂಪಾಯಿಗಳ ಬಿಲ್ಡಿಂಗ್ ನಾನು ಮಾಡಿದ್ದೇನೆಯೇ ? ನೀವು ಕೊಟ್ಟಿದ್ದೀರಾ ? ಅಧ್ಯಕ್ಷರೇ ಇಂತಹ ಆರೋಪಣೆ ಮಾಡುವುದು ಸರಿಯೇ ?

ಅಧ್ಯಕ್ಷರು.—ಮಾನ್ಯ ನಾಗರತ್ನಮ್ಮನವರೇ ದಯವಿಟ್ಟು ತಾವು ಕುಳಿತುಕೊಳ್ಳಿರಿ. ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು. ಈ ರೀತಿ ಮಾತನಾಡಿದ್ದುದು ಯಾವುದೂ ರಿಕಾರ್ಡಿಗೆ ಹೋಗುವುದಿಲ್ಲ. ನಾನು ಈಗ ನಿಮಗೂ ಅವರಿಗೂ ಕೂಡಿ ಹೇಳುತ್ತಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು.—ಈ ರೀತಿ ಮಧ್ಯದಲ್ಲಿ ಯಾರೂ ಮಾತನಾಡಿರೂ ಅದು ನಿಯಮಕ್ಕೆ ವಿರುದ್ಧವಾದುದು. ಅದು ಸರಿಯಲ್ಲ. ದಯವಿಟ್ಟು ಯಾರೂ ಕೂಡಾ ಹಾಗೆ ಮಾತನಾಡಬಾರದು. ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿದ ಮೇಲೆ ಎಲ್ಲರಿಗೂ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ......

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯಣಿಯವರಾದ ಶ್ರೀಮತಿ ನಾಗರತ್ನಮ್ಮನವರು ನನ್ನ ಬಗೆಗೆ.........

ಶ್ರೀ ಎಸ್. ಬಂಗಾರಪ್ಪ.—ನಿಮ್ಮನ್ನು ಕಂಡರೆ ನಮ್ಮ ಪಕ್ಷದವರಿಗೆ ಬಹಳ ಪ್ರೀತಿ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿರಿ. ತಾವುಗಳು ಸ್ವಲ್ಪ ಸಹಕಾರ ಕೊಡಬೇಕು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ್ರಿ, ಕೂಡ್ರಿ, ಎಂದು ಹೇಳುತ್ತಾ ಇರುತ್ತೀರಿ. ನಾವೇನು ಇಲ್ಲಿ ಕುಳಿತುಕೊಳ್ಳುವುದಕ್ಕೆ ಬಂದಿದ್ದೇವೆಯೇ ? ನಮ್ಮ ಸಮಸ್ಯೆಗಳು ಏನಾದರೂ ಇದ್ದರೆ ಅದನ್ನು ಇಲ್ಲಿ ಹೇಳುವುದಕ್ಕೆ ಬಂದಿದ್ದೇವೆ. ಅದಕ್ಕೆ ತಾವುಗಳು ಅವಕಾಶ ಮಾಡಿಕೊಡುವುದನ್ನು ಬಿಟ್ಟು ಯಾವಾಗಲೂ ಕೂಡ್ರಿ, ಕೂಡ್ರಿ ಎಂದು ಶಿಶುವಿಹಾರದ ಮಕ್ಕಳಿಗೆ ಹೇಳಿದ ಹಾಗೆ ಹೇಳುತ್ತಿರುತ್ತೀರಿ. ನಾವೇನು ಶಿಶುವಿಹಾರದ ಮಕ್ಕಳೇ ?

೧೧-೩೦ ಎ. ಎಂ.

ಶಿಶು ವಿಹಾರಗಳಲ್ಲಿ ಮಕ್ಕಳನ್ನು ಕುಳಿತುಕೊಳ್ಳಿ ಕುಳಿತುಕೊಳ್ಳಿ ಎಂದು ಹೇಳುವ ರೀತಿಯಲ್ಲಿ ತಾವು ಸದಸ್ಯರಿಗೆ ಹೇಳಿದರೆ ಹೇಗೆ ? ನಾವೇನು ಇಲ್ಲಿ ಸುಮ್ಮನೆ ಕುಳಿತುಕೊಂಡು ಇದ್ದು ಹೋಗುವುದಕ್ಕೆ ಬಂದಿಲ್ಲ. ನಮ್ಮ ಸಮಸ್ಯೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿಕೊಂಡು ಪರಿಹಾರ ಪಡೆಯಬೇಕಾದರೆ ಇಲ್ಲಿ ನಾವು ಮಾತನಾಡಲೇ ಬೇಕಾಗುತ್ತದೆ.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿದ ಮೇಲೆ ಬೇಕಾದರೆ ತಾವು ಕ್ಲಾರಿಫಿಕೇಶನ್ಸ್ ಕೇಳಬಹುದು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ತಾವು ಪದೇ ಪದೇ ಆ ರೀತಿ ಕುಳಿತುಕೊಳ್ಳಿ ಕುಳಿತುಕೊಳ್ಳಿ ಎಂದು ಹೇಳುವುದು ಸರಿಯಲ್ಲ.........

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯಣಿಯವರಾದ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾ ಹೇಳಿದರು ಸಮಿತಿಗಳ ಸದಸ್ಯರಾಗಲು ಬರುವಾಗ ಹರಕಲು ಬಟ್ಟೆಯನ್ನು ಹಾಕಿಕೊಂಡು ಒಂದು ಸಣ್ಣ ಕೆಂಪು ಬ್ಯಾಗು ಹಿಡಿದುಕೊಂಡು ಬರುತ್ತಾರೆ ಆಮೇಲೆ ಸ್ವಲ್ಪ ದಿವಸಗಳಲ್ಲಿ ಒಂದು ಫೀಯಟ್ ಕಾರು, ದೊಡ್ಡ ಬಂಗಲೆ ಎಲ್ಲಾ ಮಾಡಿಕೊಳ್ಳುತ್ತಾರೆ, ಅವರಿಗೆ ದುಡ್ಡು ಎಲ್ಲಿಂದ ಬಂತು, ಎಂದು ಕೇಳಿದ್ದಾರೆ. ಇದು ಯಾವ ರಾಜ್ಯದಲ್ಲಿಯೂ ನನಗೆ ಗೊತ್ತಾಗಲಿಲ್ಲ. ಅವರು ಯಾವ ರಾಜ್ಯದ ಬಗ್ಗೆ ಹೇಳಿದ್ದಾರೋ ನನಗೆ ಗೊತ್ತಾಗಲಿಲ್ಲ ದಯಮಾಡಿ......

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು......

(ಗೊಂದಲ)

ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಯಾವ ರಾಜ್ಯದಲ್ಲಿದ್ದಾರೆ ?......

(ಗೊಂದಲ)

ಅಧ್ಯಕ್ಷರು.—ತಾವು ದಯಮಾಡಿ ಈಗ ಕುಳಿತುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ಎಲ್ಲರಿಗೂ ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ಅವಕಾಶ ಮಾಡಿ ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯೆಯರಾದ ಶ್ರೀಮತಿ ನಾಗರತ್ನಮ್ಮನವರು ಎತ್ತಿದ್ದಂತಹ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು ಯಾವ ರಾಜ್ಯದಲ್ಲಿ ಎಂದು ಕೇಳಿದರೆ ಇವರೇನು ಮಣಿಪುರ ಅಥವಾ ಮಧ್ಯಪ್ರದೇಶ ಇನ್ನಿತರ ರಾಜ್ಯಗಳಲ್ಲಿ ಭಾಷಣ ಮಾಡುತ್ತಿದ್ದಾರೇನು?......

(ಗೊಂದಲ)

ಅಧ್ಯಕ್ಷರು.—ತಾವು ಸ್ವಲ್ಪ ದಯಮಾಡಿ ಕೇಳಿ. ತಾವು ಈ ರೀತಿ ಮಾತನಾಡಿದರೆ ಅದು ಕಡತಕ್ಕೆ ಹೋಗುವುದಿಲ್ಲ......

(ಗೊಂದಲ)

ಅಧ್ಯಕ್ಷರು.—ನಾನು ಮತ್ತೊಮ್ಮೆ ಮಾನ್ಯ ಸದಸ್ಯರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಯಾರಾದರೂ ಒಬ್ಬ ಮಾನ್ಯ ಸದಸ್ಯರು ಮಾತನಾಡುವಾಗ ಬೇರೊಬ್ಬ ಸದಸ್ಯರು ಮಧ್ಯೆ ಎದ್ದು ನಿಂತು ಮಾತನಾಡಬಾರದೆಂದು ನಮ್ಮ ನಿಯಮಾವಳಿಗಳಲ್ಲಿ ಇದೆ. ಆದರೂ ಕೂಡ ಈ ರೀತಿ ಮಧ್ಯೆ ಎದ್ದು ನಿಂತು ಮಾತನಾಡಿದರೆ ಅದು ಸರಿಯಾಗುದಲ್ಲ. ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿ. ಆಮೇಲೆ ಎಲ್ಲಾ ಸದಸ್ಯರಿಗೂ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿ ಕೊಡುತ್ತೇನೆ. ಇನ್ನೂ ಒಂದು ಗಂಟೆ ಸಭೆ ಮುಂದಕ್ಕೆ ಹೋದರೂ ಪರವಾಗಿಲ್ಲ. ಮಧ್ಯೆ ಏನಾದರೂ ಮುಖ್ಯವಾದ ವಿಷಯಗಳು ಇದ್ದರೆ ಮಾನ್ಯ ವಿರೋಧಪಕ್ಷದ ನಾಯಕರೊಬ್ಬರು ಮಾತ್ರ ಮಾತನಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ದಯಮಾಡಿ ಎಲ್ಲಾ ಮಾನ್ಯ ಸದಸ್ಯರು ಸಹಕಾರ ಮಾಡಬೇಕಾಗಿ ಕೋರುತ್ತೇನೆ. ಇಷ್ಟು ದಿವಸಗಳಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಸುಮ್ಮನೆ ಕುಳಿತುಕೊಂಡು ಕೇಳುತ್ತಿದ್ದೀರಿ. ಈಗಲೂ ಅದೇರೀತಿ ಮಾನ್ಯ ಸದಸ್ಯರು ಸಹಕರಿಸಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ನಿಯಮಾವಳಿಗಳನ್ನು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಅಡ್ಡಿ ಮಾಡಬೇಕೆಂದು ಏನೂ ನಮ್ಮ ಮನಸ್ಸಿನಲ್ಲಿ ಇಲ್ಲ. ಆದರೆ ಮಾನ್ಯ ಸದಸ್ಯೆಯರಾದ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾ ಹೇಳಿದರು ಸಮಿತಿಯ ಸದಸ್ಯರಾಗಲು ಬರುವಾಗ ಹರಕಲು ಬಟ್ಟೆಯನ್ನು ಹಾಕಿಕೊಂಡು ಒಂದು ಸಣ್ಣ ಕೈ ಚೀಲವನ್ನು ಹಿಡಿದುಕೊಂಡು ಬರುತ್ತಾರೆ. ಆಮೇಲೆ ಸ್ವಲ್ಪ ದಿವಸಗಳಲ್ಲಿಯೇ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿಬಿಡುತ್ತದೆ ಎನ್ನುವ ಅಭಿಪ್ರಾಯ ಬರುವ ರೀತಿಯಲ್ಲಿ ಮಾತನಾಡಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಅದು ಯಾವ ರಾಜ್ಯದಲ್ಲಿ? ಎಲ್ಲಿ? ಎಂದು ಕೇಳಿದರು. ಈ ಸದನದಲ್ಲಿ ಯಾರೇ ಸದಸ್ಯರು ಪ್ರಸ್ತಾಪ ಮಾಡಲಿ ಅದು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತಹ ವಿಷಯ. ಹಿಂದೆ ಒಂದು ಸಾರಿ ಡಿ.ಎಲ್.ಆರ್.ಸಿ ಸಮಿತಿಗಳನ್ನು ನೇಮಕ ಮಾಡಿದರು. ಆಗ ಒಂದೊಂದು ಉಪಾಧ್ಯಾಯರ ಹುದ್ದೆಗೆ ೫ ಸಾವಿರ ರೂಪಾಯಿಗಳಿಂದ ೧೦ ಸಾವಿರ ರೂಪಾಯಿಗಳವರೆಗೆ ವ್ಯವಹಾರ ನಡೆಯಿತು. ಇದನ್ನು ತಿಳಿದ ಮಂತ್ರಿಗಳೇ ಅಂದರೆ ಆಗಿನ ಮಂತ್ರಿಗಳಾದ ಶ್ರೀ ಬಿ. ರಾಚಯ್ಯನವರು ಆ ಸಮಿತಿಗಳನ್ನು ರದ್ದು ಮಾಡಿದರು. ಈ ರೀತಿಯ ಒಂದು ಅಭಿಪ್ರಾಯ ಬಂದಾಗ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಏನು ಬಂತು ? ಅದು ಯಾವ ರಾಜ್ಯದಲ್ಲಿ? ಕರ್ನಾಟಕ ರಾಜ್ಯದಲ್ಲಿ ಅಂತಹ ಪರಿಸ್ಥಿತಿ ಇಲ್ಲ. ಒಬ್ಬ ಶಾಸಕರಿಗೆ ಆ ರೀತಿಯ ** ಉತ್ತರ ಕೊಡುವುದು ಸರಿಯೇ? ಈ ರೀತಿಯ ಉತ್ತರವನ್ನು ಕೇಳಿಕೊಂಡು ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವೇ? ಖಂಡಿತವಾಗಿ ಸಾಧ್ಯವಾಗುವುದಿಲ್ಲ......

**ಅಧ್ಯಕ್ಷರ ಅನುಮತಿಯಂತೆ ಗುರುತಿಸಿರುವ ಪದವನ್ನು ತೆಗೆದು ಹಾಕಿದೆ.

(ಗೊಂದಲ)

ಅಧ್ಯಕ್ಷರು.—ಬೇಜವಾಬ್ದಾರಿ ಎನ್ನುವ ಮಾತನ್ನು ಬಳಸುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯಮುಖ್ಯಮಂತ್ರಿಗಳು ಈ ರೀತಿಯ ಉತ್ತರ ಕೊಟ್ಟರೆ......

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿದ ಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ತಮಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ, ಈ ಸದನದ ನಾಯಕರು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಬೇಜವಾಬ್ದಾರಿಯಾಗಿ ಉತ್ತರ ಕೊಡುತ್ತಾರೆಂದು ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ. ಇದು ನಿಜವಾಗಿಯೂ ಈ ಸದನಕ್ಕೆ ಗೌರವ ತರುವಂತಹ ಪದವಲ್ಲ. ಆದ್ದರಿಂದ ದಯಮಾಡಿ ಆ ಪದವನ್ನು ಅವರು ವಾಪಸ್ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಅದು ಅನ್‌ಪಾರ್ಲಿಮೆಂಟರಿ ಪದವಲ್ಲ. ಮಾನ್ಯಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಜವಾಬ್ದಾರಿಯುತವಾಗಿ ಉತ್ತರ ಕೊಟ್ಟರೆ ಬೇಜವಾಬ್ದಾರಿ ಎಂದು ಹೇಳುವ ಅವಕಾಶ ಬರುತ್ತಿರಲಿಲ್ಲ. ಜವಾಬ್ದಾರಿಯುತವಾಗಿ ಉತ್ತರ ಕೊಡುವುದಕ್ಕೆ ಹೇಳಿ......

ಅಧ್ಯಕ್ಷರು.—ಮತ್ತೆ ತಾವು ಆ ಪದವನ್ನು ಬಳಸುವುದು ಬೇಡ. ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ಯಾರಾದರೂ ಮಾತನಾಡುವಾಗ ಇತರೆಯವರಿಗೆ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಮತ್ತು ಅಶ್ಲೀಲವಾದಂಥ ಪದಗಳನ್ನು ಬಳಸಿ ಮಾತನಾಡಬಾರದು.

ಶ್ರೀ ರಾಜವರ್ಧನ್.—ಸ್ವಾಮಿ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದಂತಹ ಪದವನ್ನು ತಾವು ಕಡತದಿಂದ ತೆಗೆದುಹಾಕಬೇಕು.

ಅಧ್ಯಕ್ಷರು.—ನಾನು ಕಡತವನ್ನು ತರಿಸಿನೋಡಿ ಆ ಪದವನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯಮುಖ್ಯಮಂತ್ರಿಗಳು ಎಲ್ಲಿಯವರೆಗೆ ಜವಾಬ್ದಾರಿಯುತವಾಗಿ ಉತ್ತರ ಕೊಡುವುದಿಲ್ಲವೋ ಅಲ್ಲಿಯವರೆಗೆ ಆ ಪದ ರೆಕಾರ್ಡ್‌ನಲ್ಲಿ ಉಳಿಯುತ್ತದೆ.

(ಗೊಂದಲ)

ಶ್ರೀ ರಾಜವರ್ಧನ್.—ಸ್ವಾಮಿ, ಮಾನ್ಯ ಅಧ್ಯಕ್ಷರೇ, ಆ ಪದವನ್ನು ಕಡತದಿಂದ ತೆಗೆದುಹಾಕ ಬೇಕು.

ಅಧ್ಯಕ್ಷರು.—ಆಯಿತು. ನಾನು ಕಡತವನ್ನು ತರಿಸಿ ನೋಡಿ ಆ ಪದವನ್ನು ಎಕ್ಸ್‌ಪಂಜ್ ಮಾಡುತ್ತೇನೆಂದು ಹೇಳಿದ್ದೇನೆ. ಯಾವ ಒಬ್ಬ ಸದಸ್ಯರು ಮಾತನಾಡಲಿ ಅವರಿಗೆ ರಕ್ಷಣೆಯನ್ನು

ಕೊಡುವುದು ನನ್ನ ಕರ್ತವ್ಯ... ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ನಾನು ಅವರಿಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಸೊಗಸಾಗಿ ಸ್ಪುಟವಾಗಿ ಮಾತನಾಡಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡು ತ್ತಿದ್ದಾರೆ. ದಯಮಾಡಿ ಸ್ವಲ್ಪ ಶಾಂತಿಯಿಂದ ಕುಳಿತುಕೊಂಡು ಕೇಳಿ. ಆಮೇಲೆ ಏನಿದ್ದರೂ ಕ್ಲಾರಿಫಿಕೇಶನ್ಸ್ ಕೇಳಿ. ಅದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನಾನು ಆಡಿರುವಂತಹ ಪದ ಅದು ಅನ್‌ಪಾರ್ಲಿಮೆಂಟರಿ ಪದವಾಗಿದ್ದರೆ ಮಾತ್ರ ಅದನ್ನು ಕಡತದಿಂದ ತೆಗೆದುಹಾಕಬೇಕು.

ಅಧ್ಯಕ್ಷರು.—ಯಾರೇ ಮಾತನಾಡಿದ್ದರು ಆ ವರದಿಯನ್ನು ತರಿಸಿನೋಡಿ ಆ ಪದವನ್ನು ಎಕ್ಸ್‌ಪಂಜ್ ಮಾಡುವ ಅಧಿಕಾರ ನನಗೆ ಇದೆ. ಆದ್ದರಿಂದ ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಗಾಡಿ ನೇರವಾಗಿ ಹೋಗಬೇಕೆಂದು ನಮ್ಮ ಮಿತ್ರರಾದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಲಹೆ ಕೊಟ್ಟಿದ್ದಾರೆ. ಗಾಡಿ ಹೋಗದೇ ಇದ್ದರೆ ಮನಸ್ಸಿಗೆ ಸಮಾ ಧಾನವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಅವರು ಚೆನ್ನಾಗಿ ಮಾತನಾಡುತ್ತಾರೆ...

ಅಧ್ಯಕ್ಷರು.—ಮಾನ್ಯ ಖರ್ಗೆಯವರೆ ಈಗ ನೀವು ಮಾತನಾಡುವುದು ಬೇಡ, ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಕೈ ಜೋಡಿಸಿ ಹೇಳುತ್ತೇನೆ. ಅವರು ಒಳ್ಳೆಯ ರೀತಿಯಲ್ಲಿ ಮಾತನಾಡುತ್ತಾರೆ ಸರಿಯಾದ ರೀತಿಯಿಂದ ಮಾತ ನಾಡುತ್ತಾರೆ, ಒಂದೊಂದು ಸಲ ಟಾಂಟ್ ಮಾತನಾಡುವುದು ರೇಗಿಸುವುದು ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಚರ್ಚೆಗೂ ಕೂಡಾ ಕೆಲವು ನಿಯಮಗಳು ಇವೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಮೀರಿ ನೀವು ಹೋಗುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಮೀರಿ ಎಲ್ಲಿ ಹೋಗಿದ್ದೇನೆ ನಾನು. ಟಾಂಟ್ ಮಾಡಿದರೆ ಏನು ತೊಂದರೆ? ಟಾಂಟ್ ಮಾಡಕೂಡದು ಎಂದು ಹೇಳಿದೆಯೆ? ವ್ಯಂಗ್ಯ ಮಾಡಕೂಡದು ಎಂದು ಹೇಳಿದೆಯೇ? ಮಾತುಮಾತಿಗೂ ಕೂಡ ನೀವು ಈ ರೀತಿ......

ಅಧ್ಯಕ್ಷರು.—ಕೆಲಕೆಲವರದ್ದು ಒಂದೊಂದು ವೈಖರಿ ಇರುತ್ತದೆ, ನಿಮ್ಮದೊಂದು ತರಹ ವೈಖರಿ ಅವರದೊಂದು ವೈಖರಿ ತಾವು ದಯವಿಟ್ಟು ಸುಮ್ಮನಿರಿ.

ಶ್ರೀ ಎಸ್. ಬಂಗಾರಪ್ಪ.—ನಾನು ಬೇಡ ಎಂದು ಹೇಳುವುದಿಲ್ಲ, ಒಂದು ವಿಷಯ ಹೇಳುವುದಕ್ಕೆ ಬರುತ್ತಿದ್ದೇನೆ.

ಅಧ್ಯಕ್ಷರು.—ನಾನು ಆಗಲೇ ಹೇಳಲಿಲ್ಲವೇ, ಒಬ್ಬೊಬ್ಬರದು ಒಂದೊಂದು ವೈಖರಿ ಇರುತ್ತದೆ ಎಂದು

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಟಾಂಟ್ ಮಾಡಕೂಡದು ಎಂದೂ ಎಲ್ಲೂ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಬೇಡ ಎಂದು ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಶುರುವಾಯಿತು ಮತ್ತೆ ನೀವು ಮಾತನಾಡುವುದಾದರೆ ಮಾತನಾಡಿ ನಾನು ಬೇಕಾದರೆ ಇನ್ನೂ ಒಂದು ಗಂಟೆ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲ ಮಾತನಾಡಿ, ಮಾತನಾಡುವುದು ಬೇಡ ಎಂದು ಹೇಳುವುದಿಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ

ಶ್ರೀ ರಾಮಕೃಷ್ಣ ಹೆಗಡೆ.—ಸಹನೆಗೆ ಒಂದು ಮಿತಿ ಇದೆ ಎಂದು ಎಲ್ಲರೂ ತಿಳಿದುಕೊಳ್ಳಬೇಕು. ನಾನು ಯಾರ ನಿಂದನೆಗಾಗಿ ಅನ್‌ಪಾರ್ಲಿಮೆಂಟರಿ ವರ್ಡ್ ಒಂದು ಶಬ್ದವನ್ನು ನಾನು ಉಪಯೋಗಿಸಿಲ್ಲ. ನಮ್ಮ ಸಹನೆಗೆ ಮಿತಿ ಇದೆ. ನಾನು ಮಾತನಾಡುವಾಗ ಮೊದಲೇ ಹೇಳಿದೆ ''ಚಂದನವನ್ನೂ ಕೂಡಾ ಬಹಳ ತಿಕ್ಕಿದರೆ ಅದು ಬೆಂಕಿಯಾಗುತ್ತದೆ'' ಎಂದು

ಶ್ರೀ ಎಸ್. ಬಂಗಾರಪ್ಪ.—ಅದು ನಮಗೆ ಗೊತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಸ್ವಲ್ಪ ತಿಳಿದುಕೊಳ್ಳಿ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಇಷ್ಟು ರಿಕ್ವೆಸ್ಟ್ ಮಾಡಿದರೂ ನಿಮಗೆ ಕರುಣೆ ಬರುವುದಿಲ್ಲ ಎಂದರೆ ಅರ್ಥ ಏನು ?

ಶ್ರೀ ಎಸ್. ಬಂಗಾರಪ್ಪ.—ಕರುಣೆ ಎಂದರೆ ಅರ್ಥ ಏನು, ಮಾನ್ಯ ಸದಸ್ಯರು ಕೇಳಿದ್ದಕ್ಕೆ ಉತ್ತರ ಕೊಡುವುದನ್ನು ನೀವು ನೋಡುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೇಳಲಿ, ಇವರು ಏತಕ್ಕೆ ಡಿಫೆಂಡ್ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.— ಅವರಿಗೆ ಡಿಫೆಂಡ್ ಮಾಡುವುದಲ್ಲ, ಒಬ್ಬ ಮಾನ್ಯ ಸದಸ್ಯರು ಏನಾದರು ಕೇಳಿದರೆ......

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಸ್ವಲ್ಪ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಹೇಳುವುದಕ್ಕೆ ಕಡಿವಾಣ ಹಾಕುತ್ತಿದ್ದಾರೆ, ಇವರಿಗೆ ಮಾತನಾಡುವುದಕ್ಕೆ ಬರುತ್ತಿಲ್ಲ......

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಚರ್ಚೆ ನಿಯಮಕ್ಕೆ ಅನುಸಾರವಾಗಿ ನಡೆದರೆ ಅದಕ್ಕೆ ಒಂದು ಅರ್ಥ ಇದೆ. ಆ ಕಡೆ ಇರತಕ್ಕ ಎಲ್ಲಾ ಸದಸ್ಯರೂ ಮಾತನಾಡುವಾಗ, ಅದು ಎಷ್ಟೇ ಕ್ರೂರವಾಗಿರಲಿ, ವ್ಯಂಗ್ಯವಾಗಿರಲಿ ಅವರು ಮೂದಲಿಸಲಿ ನಾವು ಸುಮ್ಮನೆ ಕುಳಿತುಕೊಂಡು ಕೇಳಿದ್ದೇವೆ. ಅದು ಒಂದು ನಿಯಮ, ಕೇಳಬೇಕು. ಉತ್ತರ ಕೊಡುವ ಸಂದರ್ಭದಲ್ಲಿ ಉತ್ತರ ಕೊಡಬೇಕು. ಇದು ನಮ್ಮ ಅಲ್ಲಿ ಕುಳಿತ ಮಾನ್ಯ ಸದಸ್ಯರು ಮುಖ್ಯವಾಗಿ ವಿರೋಧಿ ಪಕ್ಷದ ನಾಯಕರ ಉದ್ದೇಶ, ಈ ಚರ್ಚೆ ಆಗಕೂಡದು, ಉತ್ತರ ಕೊಡಕೂಡದು. ಉತ್ತರ ಕೊಟ್ಟರೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಎದ್ದ ಕೂಡಲೇ ಅವರು ಏತಕ್ಕೆ ಏಳಬೇಕು.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಕಡೆಯವರು ನಿಮ್ಮ ಕಡೆಯವರೂ ಎಲ್ಲರೂ ಎದ್ದಿದ್ದಾರೆ ನಿಮ್ಮ ಮೇಲೆ ಅಪಾರವಾದ ಪ್ರೇಮ ಇದೆ, ನಿಮ್ಮನ್ನು ಕಂಡರೆ ಅಷ್ಟೊಂದು ಪ್ರೇಮ...

(ಗೊಂದಲ)

ಅಧ್ಯಕ್ಷರು.—ಸಮಾಧಾನವಾಗಿ ಸ್ವಲ್ಪ ಕುಳಿತುಕೊಳ್ಳಿ, ಇನ್ನೊಂದು ಅರ್ಧ ತಾಸು ಕುಳಿತುಕೊಳ್ಳಿ ಸಮಾಧಾನವಾಗಿ ಕುಳಿತುಕೊಳ್ಳಿ, ಅವರು ಉತ್ತರ ಹೇಳಬೇಕೋ ಬೇಡವೋ, ತಾವು ಹೇಳಿರಿ, ದಯವಿಟ್ಟು ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಆ ದಿವಸ ಮೌಲ್ಯಾಧಾರಿತ ರಾಜಕಾರಣ ಎಂದು ಮೌಲ್ಯಾಧಾರಿತ ರಾಜಕಾರಣ ಮಾಡಲಿಸಿ ಇಟ್ಟರಲ್ಲ, ಇದರಲ್ಲೇನೋ ಅವ್ಯವಹಾರ ನಡೆದಿದೆ, ಭ್ರಷ್ಟಾಚಾರ ನಡೆದಿದೆ, ಸ್ವಜನ ಪಕ್ಷಪಾತ ನಡೆದಿದೆ ಎಂದು ಹೇಳಿದರು ಅದು ಎಷ್ಟು ಜವಾಬ್ದಾರಿತನದಿಂದ ಮಾತನಾಡಿದರು ಎಂದು ಗೊತ್ತಾಯಿತು. ಆವತ್ತೇ ನಾವು ಬಾಯಿ ಮುಚ್ಚಿಸಬಹುದಾಗಿತ್ತು, ಅವತ್ತೇ ಇವರನ್ನು ಸುಮ್ಮನೆ ಕೂರಿಸಬಹುದಾಗಿತ್ತು, ಕೂರಿಸಲಿಲ್ಲ. ಅವರಿಗೆ ಹೇಳತಕ್ಕಂಥ ಅಧಿಕಾರ ಇದೆ, ಮಾನ್ಯ ವಿರೋಧ ಪಕ್ಷದ ನಾಯಕರು ಅದೇ ರೀತಿ ಮಾನ್ಯ ವಿರೋದ ಪಕ್ಷದ ಸದಸ್ಯರು, ಸರಕಾರದಲ್ಲಿ ನಡೆದಂಥ ವ್ಯವಹಾರ ಇದ್ದರೆ, ಅದನ್ನು ನಿಮ್ಮ ಜವಾಬ್ದಾರಿತನದಿಂದ ಮಾತನಾಡತಕ್ಕಂಥಾದ್ದು, ಏನಾದರೂ ಮನಸ್ಸಿನಲ್ಲಿ ಭ್ರಮೆ ಇದ್ದರೂ ಕೂಡಾ, ಹೇಳತಕ್ಕಂಥ ಅಧಿಕಾರ ಇದೆ. ಅದಕ್ಕಾಗಿ ತುಟಿ ಬಿಟ್ಟು ಒಂದು ಮಾತನ್ನೂ ಆಡಲಿಲ್ಲ. ಆ ದಿವಸವೇ ಬಾಯಿ ಮುಚ್ಚಿಸುವುದಕ್ಕೆ ಬರಲಿಲ್ಲ. ಆ ದಿವಸವೇ ಹೇಳುವುದಕ್ಕೆ ಬರಲಿಲ್ಲ. ಆ ಮಾತನ್ನು ನಿಲ್ಲಿಸುವುದಕ್ಕೆ ಬರಲಿಲ್ಲ. ಇದು ಚರ್ಚೆ ಎಂದು ಹೇಳುತ್ತೇವೆ. ಎಷ್ಟು ವರ್ಷದಿಂದ ಈ ಸದನದಲ್ಲಿ ತಾವು ಸದಸ್ಯರಾಗಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ಏತಕ್ಕೆ ಸಿಟ್ಟಾಗುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಸಿಟ್ಟಾಗಲಿಲ್ಲ. ಸಹನೆಗೆ ಮಿತಿ ಇದೆ. ಅದಕ್ಕಾಗಿ ಮೊದಲೇ ನಾನು ಭಾಷಣವನ್ನು ಪ್ರಾರಂಭ ಮಾಡಬೇಕಾದರೆ ಒಂದು ಮಾತನ್ನು ಹೇಳಬೇಕಾಗಿ ಬಂತು ನಾನು ಒಬ್ಬ ಸಂತರು ಹೇಳಿದ ಮಾತನ್ನು ಹೇಳಿದೆ. ಚಂದನವನ್ನು ಘರ್ಷಣೆ ಮಾಡಿದರೆ ಬೆಂಕಿಯಾಗುತ್ತದೆ, ತಂಪೂ ಆಗುತ್ತದೆ, ಅದ್ದಕ್ಕಾಗಿ ಅದರ ಗೊಡವೆಗೆ ಹೋಗಬಾರದು...

ಶ್ರೀ ಎಸ್. ಬಂಗಾರಪ್ಪ.—ಸಿಟ್ಟಾಗಬೇಡಿ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ದಯವಿಟ್ಟು ಶಾಂತ ರೀತಿಯಿಂದ ಕೇಳಿರಿ. ಶಾಂತ ರೀತಿಯಿಂದ ಕುಳಿತುಕೊಳ್ಳಿ. ಕೇಳುವುದರಿಂದ ನಿಮ್ಮ ದೊಡ್ಡಸ್ತಿಕೆ ಹೆಚ್ಚಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಮುಂದೆ, ಮಾನ್ಯ ಅಧ್ಯಕ್ಷರೇ, ದಯವಿಟ್ಟು ಅನ್ಯಥಾ ತಾವು ಭಾವಿಸಕೂಡದು. ಇನ್ನು ಮುಂದೆ ಇದೇ ತರಹ ನಡೆಯುವುದಾದರೆ ನಮಗೆ ಇರತಕ್ಕಂಥಾದ್ದು ಎರಡು ಉಪಾಯ. ಮಾನ್ಯ ವಿರೋಧಿ ಪಕ್ಷದ ನಾಯಕರು ಮಾತನಾಡುವಾಗಲೂ ಇದೇ ರೀತಿಯ ವ್ಯವಹಾರ ಮಾಡಬೇಕಾಗುತ್ತದೆ. ನಾವು ತೋರಿಸಿದ ಸೌಜನ್ಯತೆಗೆ ಪ್ರತಿಯಾಗಿ ಈ ರೀತಿ ದೌರ್ಜನ್ಯ ಸಿಕ್ಕಿದರೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಕ್ಷಮಿಸಬೇಕು, ದೌರ್ಜನ್ಯದ ಪ್ರಶ್ನೆ ಮಾತನಾಡಿದರೆ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ದೌರ್ಜನ್ಯ ಎನ್ನತಕ್ಕಂಥ ಮಾತನ್ನು ಕಡತದಿಂದ ತೆಗೆದು ಹಾಕಬೇಕು.

ಅಧ್ಯಕ್ಷರು.—ನಾನು ಹೇಳುತ್ತೇನೆ ಕುಳಿತುಕೊಳ್ಳಿ......

(ಗೊಂದಲ)

ಅಧ್ಯಕ್ಷರು.—ತಾವು ಮಾತನಾಡುವಾಗ ಆವರು ಶಾಂತ ರೀತಿಯಿಂದ ಕೇಳಿದ್ದಾರೆ. ಈಗ ನೀವು ಏತಕ್ಕೆ ಕೇಳುವುದಿಲ್ಲ ? ಸ್ವಲ್ಪ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅದ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು.—೧೯ನೇ ತಾರೀಖಿನಿಂದ ಇಲ್ಲಿಯವರೆಗೆ, ಯಾವುದೇ ಸದಸ್ಯರು ಈ ಕಡೆಯ ಸದಸ್ಯರು ಮಾತನಾಡುವಾಗ ಆ ಕಡೆಯವರು ಇಂಟರ್‌ಫಿಯರ್ ಮಾಡಿಲ್ಲ, ಆ ಕಡೆಯ ಸದಸ್ಯರು ಮಾತನಾಡುವಾಗ ಇವರೂ ಇಂಟರ್‌ಫಿಯರ್ ಮಾಡಿಲ್ಲ. ಮಾನ್ಯ ಬಂಗಾರಪ್ಪನವರು ಮಾತನಾಡುವಾಗ ಯಾರೂ ಇಂಟರ್‌ಫಿಯರ್ ಮಾಡಿಲ್ಲ, ತಾವು ಏನು ಮಾತನಾಡಿದರೂ ಕುಳಿತುಕೊಂಡು ಕೇಳಿದ್ದಾರೆ. ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡುತ್ತಿದ್ದಾರೆ, ಅವರು ಉತ್ತರ ಕೊಡಲಿ, ಅಕಸ್ಮಾತ್ ಅವರು ಅಂಥ ಮಾತುಗಳಲ್ಲಿ, ಅಥವಾ ಇವರು ಆಡಿದ ಮಾತುಗಳಲ್ಲಿ ಆಡಬಾರದ ಮಾತುಗಳನ್ನು ಏನಾದರೂ ಆಡಿದ್ದರೆ, ಕಡತವನ್ನು ಸಾಯಂಕಾಲ ತರಿಸಿಕೊಳ್ಳುತ್ತೇನೆ, ಈಗಿಂದೀಗೆ ಎಕ್ಸ್‌ಪಂಜ್ ಮಾಡುವ ಅಧಿಕಾರ ನನಗೆ ಇದೆ, ಸಾಯಂಕಾಲ ಹೋದಮೇಲೆ ನೋಡಿ ಎಕ್ಸ್‌ಪಂಜ್ ಮಾಡುವ ಅಧಿಕಾರ ಇದೆ, ನಾಳೆ ಬೆಳಿಗ್ಗೆ ನೋಡಿ ಎಕ್ಸ್‌ಪಂಜ್ ಮಾಡುವ ಅಧಿಕಾರ ಇದೆ. ಈ ಕಡೆಯವರು ಆ ಕಡೆಯವರು ಅಂತಹ ಮಾತುಗಳನ್ನು ಏನಾದರೂ ಆಡಿದ್ದರೆ ಅದನ್ನು ನನ್ನ ಎದುರಿಗೆ ತೆಗೆದುಕೊಂಡು ಬನ್ನಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ಕಡೆಯವರು ಯಾರೂ ಏಳುವುದು ಬೇಡ, ಆ ಕಡೆಯವರು ಯಾರೂ ಏಳುವುದು ಬೇಡ. ಮಾನ್ಯ ಮುಖ್ಯ ಮಂತ್ರಿಗಳು ಇನ್ನು ಅರ್ಧತಾಸಿನಲ್ಲಿ ಮುಗಿಸುತ್ತಾರೆ. ಸಮಾಧಾನವಾಗಿದ್ದುಕೊಂಡು ಕೇಳಿ. ಅವರು ಉತ್ತರ ಮುಗಿಸುವವರೆಗೆ ಯಾರೂ ಇಂಟರ್‌ಫೀಯರ್ ಮಾಡುವುದು ಬೇಡ. ಉತ್ತರ ಮುಗಿದ ನಂತರ ಕ್ಲಾರಿಫೀಷನ್‌ಗೆ ತಮಗೆ ಅವಕಾಶಮಾಡಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡಲಿ. ನಾವು ಅವರ ಉತ್ತರಕ್ಕೆ ಅಡ್ಡಿ ಹೋಗುವುದು ನಮ್ಮ ಉದ್ದೇಶ ಅಲ್ಲ. ಕೆಲವು ಪ್ರಾಮುಖ್ಯ ವಿಷಯ ಬಂದಾಗ, ಈ ಸಂದರ್ಭದಲ್ಲಿಯೇ ಪ್ರಸ್ತಾಪ ಮಾಡಿದರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ತಾವು ಕುಳಿತುಕೊಳ್ಳಿ. ಈ ಮಧ್ಯೆ ಇಂಟರ್‌ಫಿಯರ್ ಬೇಡ ಅವರು ಏನು ಹೇಳುತ್ತಾರೋ ಹೇಳಲಿ. ದಯಮಾಡಿ ಸಂಯಮದಿಂದ ಆಮೇಲೆ ಕೇಳಿರಿ ಒಂದು ಒಳ್ಳೆಯ ಸತ್‌ಸಂಪ್ರದಾಯವನ್ನು ಹಾಕಿ. ಇವೊತ್ತು ಈ ಕಡೆಯಿಂದ ಇಂಟರ್‌ಫಿಯರ್ ಮಾಡಿದರೆ, ನಾಳೆ ಆ ಕಡೆಯವರೂ ಇಂಟರ್‌ಫಿಯರ್ ಮಾಡುತ್ತಾರೆ. ಮಾತನಾಡುವಂತಹ ಯಾವುದೇ ಸದಸ್ಯರು ಇರಲಿ, ಅವರಿಗೆ ರಕ್ಷಣೆ ಕೊಡುವಂಥಾದ್ದು, ಅವಕಾಶ ಮಾಡಿಕೊಡುವಂತಾದ್ದು ನನ್ನ ಕರ್ತವ್ಯ. ಈ ದಿಸೆಯಲ್ಲಿ ನಿವೆಲ್ಲರೂ ಸಹಕರಿಸುತ್ತೀರೆಂದು ನಂಬಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು......

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ತಾವು ಕುಳಿತುಕೊಳ್ಳಿ. ನನ್ನ ಪರವಾಗಿ ನೀವು ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ನಾನು ಏನು ಹೇಳಬೇಕೋ, ಅದನ್ನು ಹೇಳುತ್ತೇನೆ. ಅವರು ಉತ್ತರ ಕೊಡಲಿ, ಆದರೆ ಇಲ್ಲಿರತಕ್ಕ ಪ್ರಶ್ನೆ.......

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ......

ಶ್ರೀ ಎಸ್. ಬಂಗಾರಪ್ಪ.—ಅವರು ಏನು ಹೇಳುತ್ತಾರೋ ಅದನ್ನೆಲ್ಲಾ ಕೇಳುವುದಕ್ಕೆ ನಾವು ತಯಾರಾಗಿಲ್ಲ. ನಮಗೂ ಅವಕಾಶ ಮಾಡಿಕೊಡಿ.

ಶ್ರೀ ಕೆ. ಹೆಚ್. ಪಾಟಿಲ್.—ಮಾನ್ಯ ಸಭಾಧ್ಯಕ್ಷರೇ, ಒಂದು ನಿಮಿಷ, ಈಗ ಅನಾವಶ್ಯಕ ಶಬ್ದಗಳನ್ನು ಉಪಯೋಗ ಮಾಡಿದರೆ ಸಭೆಯಲ್ಲಿ ಮತ್ತೆ ವಿಷಮ ವಾತಾವರಣಕ್ಕೆ ಅವಕಾಶವಾಗುತ್ತದೆ. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ಪ್ರತಿಯೊಬ್ಬ ಸದಸ್ಯರೂ ಬಹಳ ಕಾತುರತೆಯಿಂದ, ಅವರು ಏನು ಹೇಳುತ್ತಾರೋ ಎಂದು ಕೇಳುತ್ತಾರೆ. ಇಲ್ಲಿ ಅನೇಕ ಜನ ಸದಸ್ಯರಿಗೆ ಭಾಷಣ ಮಾಡಲೂ ಅವಕಾಶ ಸಿಕ್ಕಿಲ್ಲ. ಆದರೂ ಸಹ ನಮ್ಮೆಲ್ಲರ ಮನಸ್ಸನ್ನು, ಕರ್ನಾಟಕ ಜನರ ಮನಸ್ಸನ್ನು ಹಾಗೂ ವಿರೋಧಪಕ್ಷದ ನಾಯಕರ ಮನಸ್ಸನ್ನೂ ಅರಿತುಕೊಂಡು ಮಾತನಾಡುತ್ತಾರೆಂದು ತಿಳಿದುಕೊಂಡಿರುತ್ತೇನೆ. ಅದನ್ನು ಕೂಲಂಕುಷವಾಗಿ ಕೇಳಬೇಕೇ ವಿನಃ ಆತಂಕ ಮಾಡುವ ಉದ್ದೇಶ

ಇಲ್ಲ. ಒಳ್ಳೆಯ ಸಂಪ್ರದಾಯ ಹಾಕೋಣ. ಒಮ್ಮೊಮ್ಮೆ ಮನರಂಜನೆಗೆ ಕೇಳಬೇಕಾದರೆ, ಈಲ್ಡ್ ಆಗಲಿ ಎಂದು ಕೇಳೋಣ. ಅವರು ಈಲ್ಡ್ ಆಗದೇಹೋದರೆ ನಾವು ಯಾರೂ ಕೇಳುವುದು ಬೇಡ. ಮಾನ್ಯ ರಾಮಕೃಷ್ಣ ಹೆಗಡೆಯವರು ನುರಿತ, ಪ್ರಭಾವಶಾಲಿ ಸದಸ್ಯರು. ಅವರು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೌರವ ಕೊಡುವ ಬಗ್ಗೆ ಹಿಂದೆ ಬೀಳುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ನಮ್ಮ ಪರವಾಗಿ ಏನಾದರೂ ಕೇಳುತ್ತಾರೆ. Mr. Ramakrishna Hegde is not capable of beaing disturbed by anybody. He will yield. ನಾವು ಇವೊತ್ತು ಸದನದಲ್ಲಿ ಸ್ವಾರಸ್ಯಪೂರ್ವಕವಾದ ಉತ್ತರವನ್ನು ನೀರಿಕ್ಷೆ ಮಾಡೋಣ. ಚರ್ಚೆಯನ್ನು ಹೆಚ್ಚು ಮನರಂಜನೆಗಾಗಿ ಉಪಯೋಗ ಮಾಡುವುದು ಬೇಡವೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕೆ. ಹೆಚ್. ಪಾಟಿಲ್ ಅವರಿಗೆ ಕೃತಜ್ಞನಾಗಿದ್ದೇನೆ. ಇಷ್ಟು ಹೊತ್ತಿನ ವರೆಗೆ, ತುಸು ಹೆಚ್ಚು ಕಡಿಮೆ ಉಗ್ರ ವಾತಾವರಣ ಉಂಟಾಗಿತ್ತು ಅದನ್ನು ನಿಲ್ಲಿಸಿದ್ದಾರೆ. ಅವರ ಸಲಹೆಯಂತೆ ನಾವೆಲ್ಲರೂ ನಡೆದುಕೊಳ್ಳುತ್ತೇವೆಂದು ಹೇಳುತ್ತೇನೆ. ನಾನು ಅವರ ಸಲಹೆಯನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಶ್ರೀಮತಿ ನಾಗರತ್ನಮ್ಮ ನವರು ಹೇಳಿದ್ದನ್ನು, ನಾನು ಒಂದು ಚೇಷ್ಟೆಗಾಗಿ ಹೇಳಲಿಲ್ಲ. ನಾಗರತ್ನಮ್ಮನವರ ಬಗ್ಗೆ ನನಗೆ ತುಂಬಾಗೌರವ ಇದೆ. ಅವರು ಚೆನ್ನಾಗಿ ಮಾತನಾಡುತ್ತಾರೆ. ಅವರ ಮಾತಿನಲ್ಲಿ ವ್ಯಂಗ್ಯ ಇರುತ್ತದೆ, ವಿನೋದ ಇರುತ್ತದೆ, ಗಾಂಭೀರ್ಯ ಇರುತ್ತದೆ. ನನಗೆ ಸ್ವಲ್ಪ ಸೋಜಿಗವಾಯಿತು. ನಿನ್ನೆ ಹರಕು ಬಟ್ಟೆ, ಚೀಲ ಹಿಡಿದುಕೊಂಡು ಓಡಾಡುವರು, ಇಂದು ಫಿಯೆಟ್ ಕಾರನ್ನು ಕೊಂಡುಕೊಳ್ಳುವ ಶಕ್ತಿ ಎಲ್ಲಿ ಬಂತು. ಅಂತಹವರು ಇದ್ದರೆ, ಅವರ ಹೆಸರನ್ನು ಕೊಡಬೇಕು, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ನಾನು ತೆಗೆದುಕೊಳ್ಳುತ್ತೇನೆ. ಅದರಲ್ಲಿ ಏನು ಅಪರಾಧ ಇತ್ತೋ ನನಗೆ ಗೊತ್ತಾಗಲಿಲ್ಲ. ನಾನು ಮಾನ್ಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರನ್ನು ಆಕ್ಷೇಪ ಮಾಡಲಿಲ್ಲ. ಅವರಿಗೆ ಗೊತ್ತುಂಟು ನಾನು ಯಾವ ಅರ್ಥದಲ್ಲಿ ಹೇಳಿದೆ ಎಂದು ಈಗ ಎರಡು ಮಾತು. ನನ್ನ ಮಾತನ್ನು ಅವರು ತಿಳಿದುಕೊಂಡಿದ್ದಾರೆ. ಅವರ ಮಾತನ್ನು ನಾನು ತಿಳಿದುಕೊಂಡಿದ್ದೇನೆ. ಇದೇ ಸಂದರ್ಭದಲ್ಲಿ ಮಾನ್ಯ ನಾಗರತ್ನಮ್ಮನವರ ೨-೩ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಆಮೇಲೆ ಬೇರೆ ವಿಚಾರಕ್ಕೆ ಹೋಗುತ್ತೇನೆ. ಅವರು ತಮ್ಮ ಭಾಷಣದಲ್ಲಿ, ಕನ್ನಡ ನಾಡಿನ ಮಹಿಳೆಯರ ಬಗ್ಗೆ ಏನು ಮಾಡಿದ್ದೀರಿ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದರು. ಮಹಿಳೆಯರು ಶೇಕಡಾ ೫೦ ರಷ್ಟು ಇದ್ದಾರೆ, ಅಥವಾ ಇನ್ನೂ ಒಂದು ಚೂರು ಹೆಚ್ಚಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮಹಿಳೆಯರ ಬಗ್ಗೆ ಏನು ಅನುಕಂಪ ವಾಗಲೀ, ಸಹಾನುಭೂತಿಯಾಗಲೀ ಬರೀ ಬಾಯಿಂದ ಹೇಳುತ್ತಾ ಬಂದಿದ್ದಾರೋ ಅದನ್ನು ಕೃತಿಯಲ್ಲಿ ತೋರಿಸಿಲ್ಲ. ಮಹಿಳೆಯರಿಗೆ ಯೋಗ್ಯ ಸ್ಥಾನ, ಗೌರವ, ನ್ಯಾಯವನ್ನು ಕೊಡಲಿಕ್ಕೆ ನಾವು ಇನ್ನೂ ಬಹು

೧೧-೦೦ ಎ. ಎಂ.

ದೂರ ಹೋಗಬೇಕಾಗಿದೆ. ಆದರೂ ಈ ಎರಡೂವರೆ ವರ್ಷದಲ್ಲಿ ಸ್ವಲ್ಪ ಮಟ್ಟಿಗಾದರೂ ಮಹಿಳೆಯರ ಬಗ್ಗೆ ನಾವು ಗಮನಕೊಟ್ಟಿದ್ದೇವೆಂದು ಹೇಳಲಿಕ್ಕೆ ಬಯಸುತ್ತೇನೆ. ಹೀಗೆ ಹೇಳಿದ ಮಾತ್ರಕ್ಕೆ ಅದು ಅತಿಶಯೋಕ್ತಿಯಾಗ ಲಾರದು ಅದು ಯಾವುದು ಎನ್ನುವುದು ತಮಗೆಲ್ಲಾ ಗೊತ್ತುಂಟು. ಈ ಬಗ್ಗೆ ಹೇಳು ವುದಾದರೆ ಗರ್ಭಿಣಿಸ್ತ್ರೀಯರಿಗೆ ಮೂರು ತಿಂಗಳ ಭತ್ಯ ಕೊಡುವುದು. ವಿಧವೆಯರಿಗೆ ಮಾಶಾಸನ ಕೊಡುವುದು, ಈ ಸ್ಥಾನಿಕ ರಾಜ್ಯದ ಸಂಸ್ಥೆಗಳಿಗೆ ಮತ್ತು ಸಹಕಾರ ಸಂಸ್ಥೆಯಲ್ಲಿ ಅವರಿಗೆ ಸ್ಥಾನವನ್ನು ಮೀಸಲಾಗಿಡವುದು ಅಷ್ಟೇ ಅಲ್ಲ, ಈ ಎಲ್ಲಾ ಕೆಲಸವು ಇಷ್ಟಕ್ಕೆ ಮುಕ್ತಾಯವಾಯಿತೆಂದು ನಾನು ಹೇಳು ವುದಿಲ್ಲ. ನಾನು ಈ ಸಲ ಬಡ್ಜೆಟ್‌ನಲ್ಲಿ ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಅದನ್ನು ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ನೋಡಲಿಲ್ಲವೆಂದು ಕಾಣುತ್ತದೆ. ನಾನು ಆ ಬಡ್ಜೆಟ್‌ನಲ್ಲಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಒಂದು ಮಹಿಳೆಯರ ಅಭಿವೃದ್ಧಿಗಾಗಿ ಎಂದರೆ ಅವರಿಗೆ ನೌಕರಿಯಾಗಲಿ ಅಥವಾ ಸಣ್ಣ ಪುಟ್ಟ ಉದ್ಯೋಗ ಮಾಡಿಕೊಳ್ಳುವುದಕ್ಕಾಗಿ ಒಂದು ವಿಶೇಷ ಕಾರ್ಪೋರೇಷನ್ ಮಾಡಬೇಕೆಂದು ಹೇಳಿದ್ದೇನೆ. ಎರಡನೆಯದು ಮಹಿಳೆಯರಿಗೆ ಕೊ ನರ್ಸರಿ ಕಾಯಿದೆಗೆ ತಿದ್ದುಪಡಿ ಮಾಡುತ್ತೇನೆಂದು ಹೇಳಿದ್ದೇನೆ. ಈ ಎರಡು ಕೂಡ ಬಹಳ ಮಹತ್ವವಾದ ಹೆಜ್ಜೆಯೆಂದು ಹೇಳುವುದಕ್ಕೆ ಇಚ್ಛೆ ಪಡು ತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಅದು ಸೆಂಟ್ರಲ್ ಸಬ್ಜೆಕ್ಟ್.

ಶ್ರೀ ರಾಮಕೃಷ್ಣ ಹೆಗಡೆ.—ಅದು ಸೆಂಟ್ರಲ್ ಸಬ್ಜೆಕ್ಟ್ಸ್. ಅದರೆ ಅದಕ್ಕೊಂದು ರೆಸಲ್ಯೂಷನ್ ಮಾಡಿ ಕಳುಹಿಸೋಣ. ಮಹಿಳೆಯರಿಗೆ ಹೆಚ್ಚು ವಿದ್ಯಾಭ್ಯಾಸ ಆಗಬೇಕು ಉದ್ಯೋಗವಕಾಶ ಕೊಡಬೇಕು. ಅದೇ ರೀತಿಯಾಗಿ ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರಿಗೆ ನಾವು ಗೌರವವನ್ನು ಕೊಡಬೇಕು. ನಮ್ಮಲ್ಲಿ ಅನೇಕ ಜನರಿಗೆ ಆ ಕಲ್ಪನೆ ಬರುವುದಿಲ್ಲ. ಕೆಲವರಿಗೆ ಕಾರ್ಮಿಕ ಸಂಘಟನೆ ಇರುತ್ತದೆ. ಶ್ರೀಮಾನ್ ಪಂಪಾಪತಿಯಂತವರು ೧೦ ಜನರು ಇದ್ದರೆ ಸಾಕು ಅಲ್ಲೊಂದು ಸಂಘಟನೆ ಮಾಡುತ್ತಾರೆ. ಹಾಗೆ ಇತ್ತೀಚೆಗೆ ರೈತರ ಸಂಘಟನೆಯಾಗಿದೆ, ವಿದ್ಯಾರ್ಥಿಗಳ ಸಂಘಟನೆಯಾಗಿದೆ, ಹಾಗೆಯೇ ಬೇರೆ ಬೇರೆ ಸಮಾಜ ಬೇರೆ ಬೇರೆ ಸೆಕ್ಷನ್‌ನಲ್ಲಿ ಬೇರೆ ಬೇರೆ ಅಂಗದಲ್ಲಿ ಸಂಘಟನೆಯಾಗುತ್ತಿದೆ. ಆದರೆ ಮಹಿಳೆಯರ ಸಂಘಟನೆ ಆ ರೀತಿಯಾಗುವುದಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಆಗುವುದಕ್ಕೆ ಬಿಡುವುದಿಲ್ಲ, ಆಗುವುದಕ್ಕೆ ಬಿಟ್ಟರೆ ತಾನೆ ಆಗುವುದು, ಆ ರೀತಿ ಯಾಗುವುದಕ್ಕೆ ನಾವು ಬಿಡುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತಿಗೂ ಸಹ ಅವರು ಹೇಳಿದ ಹಾಗೆ ಪುರುಷ ಪ್ರಧಾನವಾದ ಸಮಾಜ ಇದೆ. ಅದಕ್ಕೆ ತಕ್ಷಣ ಪರಿಹಾರವನ್ನು ನಾವು ಈಗಲೇ ಸೂಚನೆ ಮಾಡುವುದಕ್ಕೆ ಸಾಧ್ಯವಿಲ್ಲ, ಅವರು ತಮ್ಮ ಸ್ವಂತ ನಡವಳಿಕೆಯಲ್ಲಿಯೇ ಇದ್ದಾರೆ. ನಿಜವಾಗಿಯೂ ಹೇಳಬೇಕಾದರೆ ಹೌಸ್ ವೈಫ್ ಎಂದು ಅಂತ ಏನು ಹೇಳುತ್ತೇವೆಯೋ ಅದು ಅಪರ ಒಂದು ಕೆಲಸ, ಅದು ಒಂದು ದೊಡ್ಡ ಕಾರ್ಮಿಕರ ಸಂಸ್ಥೆ ರೀತಿ ಆಗಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅರ್ಧನಾರೀಶ್ವರ ಆಗಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಕೆಲಸದಲ್ಲಿ ಮಾಡಬಹುದು, ಆದರೆ ಶಾರೀಕವಾಗಿ ಅದು ಆಗುವುದಿಲ್ಲ.

ಶ್ರೀ ಎಂ. ರಾಮಪ್ಪ.—ಮಂತ್ರಿ ಮಂಡಲದಲ್ಲಿ ಒಬ್ಬರನ್ನೇ ಇಟ್ಟುಕೊಂಡಿದ್ದೀರಲ್ಲ, ಮಿಕ್ಕವರನ್ನು ಏತಕ್ಕೆ ಇಟ್ಟುಕೊಂಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಸೂಚನೆಯನ್ನು ನಾನು ಗಮನದಲ್ಲಿಟ್ಟು ಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ ಇದು ಏತಕ್ಕೋ ಏನು ಗೊತ್ತಾಗಿಲ್ಲ. ಈ ಚಿಂತನೆಯ ಚಿಲುಮೆ ಏನು ಇದೆ ಅದರ ಬಗ್ಗೆ ಹೇಳುವುದಾದರೆ............

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ರೋಸ್ಟರಿನಲ್ಲಿ ಹೆಣ್ಣು ಮಕ್ಕಳಿಗೆ ಉದ್ಯೋಗ ಸಿಗುವ ಹಾಗೆ ಮೀಸಲಾತಿ ಕೊಡುವುದನ್ನು ಸೇರಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಕಾಯಿದೆಯಪ್ರಕಾರ ಎಂದರೆ ನಮ್ಮ ಸಂವಿಧಾನಕ್ಕೆ ಅದು ಮಾಡಲಿಕ್ಕೆ ಬರುವುದಾದರೆ ಅದನ್ನು ಮಾಡಲಿಕ್ಕೆ ನಾನು ಸಿದ್ಧನೆಂದು ಹೇಳುತ್ತೇನೆ. ಆದರೆ ಇಲ್ಲಿಯವರೆವಿಗೂ ಕೇಳಿದ ಪ್ರಕಾರ ಅದು ಬರುತ್ತಾ ಇಲ್ಲ. ತಮಗೆ ಹೇಳಬೇಕಾದರೆ ಕಾಕಾ ಕಾಳೇಲ್ಕರ್‌ರವರು ಮೊದಲನೆ ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್ನಿನ ಅಧ್ಯಕ್ಷರಾಗಿದ್ದರು. ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಹೇಳಿದ್ದಾರೆ. ಮಹಿಳೆಯರನ್ನು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಗಣನೆಗೆ ತೆಗೆದುಕೊಳ್ಳಬೇಕು, ಆ ರೀತಿಯಾಗಿ ಟ್ರೀಟ್ ಮಾಡಬೇಕೆಂದು ಹೇಳಿದರು, ಆದರೆ ಅದನ್ನು ಯಾರೂ ಒಪ್ಪಲಿಲ್ಲ. ಅದು ಹೇಗೋ ಇರಲಿ ಈ ಚಿಂತನೆಯ ಚಿಲುಮೆಯ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಬಿ. ಬಸವಲಿಂಗಪ್ಪನವರು ಏನೇನೋ ಮಾತನಾಡಿದರು, ಆದರೆ ಅವರ ವಕ್ರ ದೃಷ್ಟಿ ಈ ಬಗ್ಗೆ ಏತಕ್ಕಾಯಿತೋ ಎನ್ನುವುದು ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನನ್ನ ದೃಷ್ಟಿ ಬಿದ್ದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಆ ದೃಷ್ಟಿ ಸರಿಯಾಗಿ ಬಿದ್ದಿದ್ದರೆ ಒಳ್ಳೆಯದು ಎಂದು ತಿಳಿದುಕೊಂಡಿದ್ದೇನೆ. ಆದರಿಂದ ನಮ್ಮ ರಾಜ್ಯಕ್ಕೆ ಅಂತಹ ದೊಡ್ಡ ವೆಚ್ಚ ಏನೂ ಆಗುವುದಿಲ್ಲ ಈ ಎರಡುವರೆ ವರ್ಷದ ಹಿಂದೆ ಮೊದಲನೆಯ ಅಧಿವೇಶನದಲ್ಲಿ ಎಕನಾಮಿಕ್ ಪ್ಲಾನಿಂಗ್ ಬಗ್ಗೆ ಸ್ಟೇಟ್ planning and ಎಕನಾಮಿಕ್ ಕೌನ್ಸಿಲ್ ಅಪಾಯಿಂಟ್ ಮಾಡಿದಾಗ ಆ ವಿಚಾರದಲ್ಲಿ ಮಾನ್ಯ ವೀರಪ್ಪ ಮೊಯ್ಲಿಯವರು ಮಾನ್ಯ ಬಂಗಾರಪ್ಪನವರ ಸ್ಥಾನದಲ್ಲಿ ಕುಳಿತಿದ್ದರು. ಆಗ ಅವರು ಇದರ ಬಗ್ಗೆ ಟೀಕೆ ಮಾಡಿದ್ದಾರೆ. ನಾನು .ಹೇಳಿದೆ, ಹೋಗಲಿ ನಾನು ಏನೋ ಒಂದು ಅಪರಾಧ ಮಾಡಿರಬಹುದು,

ನಾವು ಈ ಚಿಂತನೆಯ ಚಿಲುಮೆಯನ್ನು ನೇಮಕ ಮಾಡಿದ ಎರಡು ತಿಂಗಳಲ್ಲೇ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರು ಇದೇ ರೀತಿಯಾದ ಒಂದು ಚಿಂತನೆ ಚಿಲುಮೆಯನ್ನು ಮಾಡಿದರು. ಆದರೆ ನಾನು ಇದನ್ನು ನಕಲು ಮಾಡಿದರೂ ಎಂದು ಹೇಳುವಂತಹ ದಾಟ ನನ್ನದಲ್ಲ. ಆದರೆ ಅದು ಸರ್ಕಾರಕ್ಕೆ ಬೇಕು. ಯಾರು ವಿಚಾರ ವಾದಿಗಳು ಇದ್ದಾರೋ, ಯಾರು ಇಂಟೆಲೆಕ್ಚುಯಲ್ ಇದ್ದಾರೋ ಬೇರೆ ಬೇರೆ ಸಂಸ್ಥೆ ಬಗ್ಗೆ, ಬೇರೆ ಬೇರೆ ವಿಷಯಗಳ ಬಗ್ಗೆ ಆ ತಜ್ಞರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ತಪ್ಪು ಏನೂ ಇಲ್ಲ ವಲ್ಲ, ಮತ್ತು ಅದರಿಂದ ಅನುಕೂಲ ವಾಗುತ್ತದೆಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ ನನಗೆ ಇದರಲ್ಲಿ ಹೆಮ್ಮೆ ಇದೆ. ನಾವು ಯಾರನ್ನು ಈ ಚಿಂತನೆಯ ಚಿಲುಮೆಯ ಸದಸ್ಯರಾಗಿ ಆರಿಸಿಕೊಂಡಿದ್ದೇವೆಯೋ ಅವರಲ್ಲಿ ಒಬ್ಬರು ಡಾ॥ ಪಟೇಲ್ ರಿಸರ್ವ್ ಬ್ಯಾಂಕ್ ಗೌರ್ನರ್ ಮತ್ತು ಅಹಮದಾಬಾದ್‌ನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೈರೆಕ್ಟರ್ ಸಹಾ ಆಗಿದ್ದಾರೆ, ಅವರು ನಮ್ಮ ಚಿಂತನೆಯ ಚಿಲುಮೆಯ ಸದಸ್ಯರಾದ ಮೇಲೆ ಅವರನ್ನು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಡೈರೆಕ್ಟರ್ ಆಗಿ ಮಾಡಿದರು. ಇತಿಹಾಸದಲ್ಲಿ ಇದು ಮೊದಲನೆಯದು. ಇದಕ್ಕೂ ಮುಂಚೆ ಅಲ್ಲಿ ಇಂಗ್ಲೀಷ್‌ನವರೇ ಇದ್ದರು. ಇದುವರೆವಿಗೂ ಅಲ್ಲಿ ಯಾವ ಭಾರತೀಯರು ಇರಲಿಲ್ಲ. ಒಬ್ಬ ಭಾರತೀಯನು ಲಂಡನ್ ಸ್ಕೂಲ್ ಆಫ್ ಇನ್‌ಸ್ಟ್ಯೂಷನ್‌ನಲ್ಲಿ ನೇಮಕ ಮಾಡಿರುವುದರಿಂದ ಇಲ್ಲಿರತಕ್ಕಂಥಹ ಜನರ ಯೋಗ್ಯತೆ ಏನು ಎನ್ನುವುದು ಗೊತ್ತಾಗುತ್ತದೆ. ಎರಡನೆಯದಾಗಿ ಇನ್ನೊಬ್ಬರು ಪಾರ್ಸ್ ಕೋರಿಯನ್ ಅವರಿಗೆ ಅಂತರರಾಷ್ಟ್ರೀಯ ಪ್ರೆಸ್ಟೇಜ್‌ನಲ್ಲಿ ಎರಡು ಅವಾರ್ಡ್ ಸಿಕ್ಕಿದೆ. ಮೂರನೆದು ಅವರು ಏನು ಇದ್ದಾರೆ, ಹಿಂದೆ ಮುಖ್ಯ ಕಾರ್ಯದರ್ಶಿಗಳಾಗಿದಂತಹವರ ಬಗ್ಗೆ ಕೆಲವು ಅಸಮಾಧಾನ, ಕೆಲವು ಟೀಕೆಗಳು ಬಂದಿವೆ. ಅದಕ್ಕೆ ಏನು ಕಾರಣ ಎನ್ನುವುದು ನನಗೆ ಗೊತ್ತಿಲ್ಲ. ವಿರೋಧ ಪಕ್ಷದ ನಾಯಕರು ಅವರ ಹೆಸರನ್ನು ಹೇಳಲಿಲ್ಲ ಅವರು ಏನು ಹೇಳಿದ್ದಾರೆಂದರೆ ಕೆಲವು ಜನರು ಸಾಯುವವರೆವಿಗೂ ಅಧಿಕಾರದಲ್ಲಿರಬೇಕು. ಒಂದಲ್ಲ ಒಂದು ರೀತಿಯಲ್ಲಿ ಅಧಿಕಾರದಲ್ಲಿರಬೇಕು ಎನ್ನುವ ಮಾತನ್ನು ಹೇಳಿದರು. ಈ ವಿಚಾರದಲ್ಲಿ ನಾನು ಸ್ಪಷ್ಟಪಡಿಸುವುದಾದರೆ ಈ ಚಿಂತನೆ ಚಿಲುಮೆಯಲ್ಲಿ ಯಾರು ಯಾರು ಸದಸ್ಯರಿದ್ದಾರೆ ಅವರು ಅವರಾಗಿಯೇ ಇರಬೇಕೆಂದು ಕೇಳಿದವರಲ್ಲ, ಅವರಿಗೆ ಇದು ಬೇಕಾಗಿಲ್ಲ., ನಾವು ನಾವಾಗಿಯೇ ಅವರನ್ನು ಕರೆದದ್ದು. ನಾವು ಅವರನ್ನು ಬಿಟ್ಟರೂ ಪರವಾಗಿಲ್ಲ ಅವರೇನೂ ಇದರಲ್ಲೇ ಇರಬೇಕೆಂದು ಹೇಳುವವರಲ್ಲ. ಈಗ ಪ್ಲಾನಿಂಗ್ ಕಮಿಷನ್‌ರವರು ರೋಲ್ ಡೆವಲಪ್‌ಮೆಂಟ್ ಆಫ್ ಲೋಯರ್ ಲೆವೆಲ್ ಎಂದು ಒಂದು ಕಮಿಟಿ ಮಾಡಿ ಅದರಲ್ಲಿ ಉಪಾಧ್ಯಕ್ಷರಾಗಿದ್ದರು, ಅವರನ್ನೇ ಈ ಚಿಂತನೆಯ ಚಿಲುಮೆಯಲ್ಲಿ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಆ್ಯಂಟಿ ಪವರೆಟಿ ಪ್ರೋಗ್ರಾಂ ಮನ್ನು ರಿವ್ಯೂ ಮಾಡಬೇಕೆಂದು ಏನು ಮಾಡಿದ್ದರು ಅದಕ್ಕೆ ಇವರನ್ನು ಚೇರ್‌ಮನ್ ಮಾಡಿದ್ದರು. ಅಂತರವನ್ನು ನಾವು ಇಟ್ಟುಕೊಂಡಿದ್ದೆವು. ಇಂಥವರು ಇರುವಾಗ ಇದರ ಬಗ್ಗೆ ಏತಕ್ಕೆ ಇಷ್ಟು ಇವರು ಪ್ರೆಜುಡ್ಯೂಸ್ ಇಟ್ಟದ್ದಾರೋ ಗೊತ್ತಿಲ್ಲ, ಇದರಲ್ಲಿ ಏನು ನಷ್ಟವಾಯಿತೋ ಗೊತ್ತಿಲ್ಲ. ಅವರ ಬಗ್ಗೆ ಯಾರೇನೂ ಹೇಳಿದರೋ ಗೊತ್ತಿಲ್ಲ. ಪುನಃ ಪುನಃ ಇದನ್ನು ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ ವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಈ ವಿಷಯದಲ್ಲಿ ತಾವೇನೋ ಗಹನವಾಗಿ ಹೇಳಿದಿರಿ. ಅನೇಕ ಮಾನ್ಯ ಸದಸ್ಯರು ಈ ಚಿಂತನೆ ಚಿಲುಮೆಯಲ್ಲಿ ಯಾರನ್ನು ಸೇರಿಸಿಕೊಂಡಿದ್ದೀರಿ ಅವರ ಬಗ್ಗೆ ಅವರ ಅಭಿಪ್ರಾಯವನ್ನು ತಿಳಿಸಿದ್ದಾರೆ, ಈ ವಿಷಯವು ಸಹ ತಮ್ಮ ಗಮನಕ್ಕೆ ಬಂದಿರಬಹುದೆಂದು ನನಗನಿಸುತ್ತದೆ. ನಾನು ವೈಯಕ್ತಿಕವಾಗಿ ಅಂತವರ ವಿಷಯದ ಬಗ್ಗೆ ಏನೂ ಹೇಳುವುದಿಲ್ಲ. ಈಗ ಏನಾಗಿದೆಯೆಂದರೆ ಪ್ರಪಂಚದಲ್ಲಿ ಅಮೇರಿಕಾ, ಬ್ರಿಟನ್, ಪಶ್ಚಿಮ ಜರ್ಮನಿ ಅಲ್ಲಿ ಸಮ್ರಾಜ್ಯ ಶಾಹಿ ಏನಿದ್ದಾರೆ. ಅಲ್ಲಿ ಕೆಲವರನ್ನು ಬೂಸ್ಟ್ ಮಾಡುತಿದ್ದಾರೆ. ಏನೆಂದರೆ ಅವರನ್ನು ಬಿಟ್ಟರೆ ಇನ್ನಾರೂ ಇಲ್ಲ, ಅವರನ್ನೇ ಏತಕ್ಕೆ ಕಟ್ಟುತ್ತಿದ್ದೀರಿ, ಈ ಬಗ್ಗೆ ಆರ್ಟಿಕಲ್ಸ್ ಬೇರೆ ಬೇರೆ ರೀತಿಯಲ್ಲಿ ಬಂದಿದೆ. ಅದೇ ರೀತಿಯಲ್ಲಿ ನಮ್ಮ ದೇಶದಲ್ಲೂ ಮಾಡುತ್ತಿದ್ದಾರೋ ಏನೋ ಎನ್ನುವ ಅಭಿಪ್ರಾಯ ಬರುತ್ತದೆ. ಅದೇ ರೀತಿ ವರ್ಲ್ಡ್ ಬ್ಯಾಂಕ್‌ನಲ್ಲೂ ಸಹ ಮಾಡುತ್ತಿದ್ದಾರೆ. ಈ ಇಂಪೀರಿಯಲ್ ಏಜೆನ್ಸಿ ಏನು ಇದೆ, ಇದರಲ್ಲಿರುವವರು ಬಡವರ ಬಗ್ಗೆಯಾಗಲಿ, ಕಾರ್ಮಿಕರ ಬಗ್ಗೆಯಾಗಲಿ, ಅವರು ಕಾಳಜಿ ಇರುವಂತಹ ಜನ ಅಲ್ಲ. ಅವರು ತಮ್ಮದೇ ಆದಂತಹ ರೀತಿಯಲ್ಲಿ ಬಿಲ್ಡ್ ಅಪ್ ಮಾಡುತ್ತಾರೆ. ನಾನು ಹೇಳುವುದೇನೆಂದರೆ ಈ ಚಿಂತನೆ ಚಿಲುಮೆಯಲ್ಲಿ ಅಂಥವರು ಏನಾದರೂ ಸೇರಿಕೊಂಡಿದ್ದರೆ ಅವರಿಗೆ ನಮ್ಮ ದೇಶದಲ್ಲಿ ಇರತಕ್ಕಂತಹ ಬಡವರ ಹಾಗೂ ಕಾರ್ಮಿಕರ ವ್ಯೂಸ್ ಸರಿಯಾಗಿ ತಿಳಿದುಕೊಳ್ಳದೆ ಹೋದರೆ ಬಹಳ ಕಷ್ಟವಾಗುತ್ತದೆ. ಸಾಮಾನ್ಯವಾಗಿ ಇಂಪೀರಿಯಲ್ ಏಜೆನ್ಸಿಯಲ್ಲಿರುವವರು ಬಂಡವಾಳಗಾರರ ಪರ ವಾಗಿ, ಶ್ರೀಮಂತರ ಪರವಾಗಿ, ಇರುತ್ತಾರೆ. ಆದ್ದರಿಂದ ಅಂಥಹವರನ್ನು ಈ ಚಿಂತನೆ ಚಿಲುಮೆ

ಯಲ್ಲಿ ಸದಸ್ಯರನ್ನಾಗಿ ಮಾಡಿದರೆ ನಮ್ಮ ದೇಶದ, ನಮ್ಮ ರಾಜ್ಯದ ಪಾಲಿಸಿ ಏನಾಗುತ್ತದೆ? ಅಂತವರಿದ್ದರೆ ಅವರನ್ನು ಬಿಡಿ. ಸರಿಯಾದವರನ್ನು ಹಾಕಿ. ಈ ಬಗ್ಗೆ ನಮಗೆ ಯಾವ ವಿಧವಾದ ಪ್ರಿಜುಡ್ಯೂಸ್ ಇಲ್ಲ. ಪ್ರಧಾನಮಂತ್ರಿ ರಾಜೀವ್‌ಗಾಂಧಿಯವರು ಇದೇ ರೀತಿ ಮಾಡಿ ಸಿಕ್ಕಿಹಾಕಿಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೃಷ್ಣನ್‌ನವರು ಇಷ್ಟು ತಿಳಿದುಕೊಳ್ಳಬೇಕು. ಅದರ ದೃಷ್ಟಿಯೇ ನನ್ನ ದೃಷ್ಟಿ ಆಗಬೇಕು ಎಂದು ಇಲ್ಲ, ಅಥವಾ ನನ್ನ ದೃಷ್ಟಿಯೇ ಅವರ ದೃಷ್ಟಿ ಆಗಬೇಕು ಎಂದು ಇಲ್ಲ. ಈ ಸ್ಥಾನದಲ್ಲಿದ್ದಾಗ ಯಾವ ದೃಷ್ಟಿಯಿಂದ ನಾವು ನೋಡುತ್ತೇವೋ ಅ ದೇದೃಷ್ಟಿಯಿಂದ ನೀವೂ ನೋಡುತ್ತೀರಿ ಎಂದು ನಾನು ಭಾವಿಸುವುದಿಲ್ಲ ಮತ್ತೊಂದು ವಿಚಾರ ಏನೆಂದರೆ ಎಲ್.ಕೆ. ಝಾ ಅವರ ವಿಚಾರ. ಅವರಿಗೆ ಬಹಳಷ್ಟು ವಯಸ್ಸು ಆಯಿತು. ಅವರು ರಿಸರ್ವ್ ಬ್ಯಾಂಕ್ ಗವರ್ನರ್ ಆಗಿದ್ದರು, ಕೇಂದ್ರ ಸರ್ಕಾರದಲ್ಲಿ ಆರ್ಥಿಕ ಶಾಖೆಯ ಮಂತ್ರಿಗಳಾಗಿದ್ದರು. ಕಾಶ್ಮೀರದಲ್ಲಿ ಗವರ್ನರ್ ಆಗಿದ್ದರು ಟ್ಯಾಕ್ಸೇಷನ್ ರಿಫಾರ್ಮ್ಸ್ ಕಮಿಟಿಯ ಅಧ್ಯಕ್ಷರಾಗಿದ್ದರು. ಈಗ ಅವರು ಎಕನಾಮಿಕ್ ಅಡ್ವೈಸರ್ ಆಗಿದ್ದಾರೆ. ಅವರು ಮಾಡಿರತಕ್ಕ ಕೆಲಸದ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿರಬಹುದು, ಅದು ಏನೇ ಇರಲಿ. ಈ ಚಿಂತನ ಚಿಲುಮೆಯ ಸದಸ್ಯರಲ್ಲಿ ಆಕಾಶದಲ್ಲಿ ಕುಳಿತುಕೊಂಡು ಯೋಚನೆ ಮಾಡತಕ್ಕವರು ಯಾರೂ ಇಲ್ಲ. ಆದರೆ ಉದಾಹರಣೆಯಾಗಿ ಕೊಟ್ಟು ಬಡವರ ಬಗ್ಗೆ ಚಿಂತೆ ಇಲ್ಲ ಎಂದು ಸ್ನೇಹಿತರು ಹೇಳಿದರು. ಈ ಚಿಂತನ ಚಿಲುಮೆಯ ರೆಕಮೆಂಡೇಷನ್ಸ್‌ನಲ್ಲಿ ಆಂಟಿ ಪಾವರ್ಟಿ ಪ್ರೋಗ್ರಾಮಿಗೆ ಎಲ್ಲದಕ್ಕಿಂತ ಮೊದಲನೆಯ ಸ್ಥಾನ ಕೊಡಬೇಕು ಎಂದು ಹೇಳಿದ್ದಾರೆ. ಅದೇ ಆಧಾರದ ಮೇಲೆ ಕ್ಯಾಬಿನೆಟ್‌ನಲ್ಲಿ ನಾವು ತೀರ್ಮಾನಮಾಡಿದ್ದೇವೆ. ಈ ವರ್ಷ ನೀರಾವರಿ, ವಿದ್ಯುಚ್ಛಕ್ತಿ ಈ ಎರಡನ್ನು ಬಿಟ್ಟರೆ ಬಡತನ ನಿವಾರಣಾ ಕಾರ್ಯಕ್ರಮಕ್ಕೆ ನಮ್ಮ ಪ್ರಾಧಾನ್ಯತೆ. ನೀರಾವರಿ ಮತ್ತು ವಿದ್ಯುಚ್ಛಕ್ತಿ ನಮ್ಮ ಜೀವಾಳದ ಪ್ರಶ್ನೆ. ಅದು ಇಲ್ಲದೆ ಯಾವುದೂ ಯಶಸ್ವಿಯಾಗುವುದಿಲ್ಲ. ಇವೆರಡು ಬಿಟ್ಟರೆ ಮೂರನೆಯದು ಅತ್ಯಂತ ಪ್ರಾಧಾನ್ಯತೆ ಕೊಟ್ಟಿರತಕ್ಕಂಥಾದ್ದು ಬಡತನದ ನಿವಾರಣಾ ಕಾರ್ಯಕ್ರಮ. ಅಮೆರಿಕಾ ಪರವಾಗಿ ಇದ್ದಂತಹವರು ಈ ಸಲಹೆ ಕೊಡುತ್ತಾರೆಯೇ? ನಮ್ಮ ಸರ್ಕಾರ ಬರುವುದಕ್ಕೆ ಮೊದಲು ಪ್ರತಿ ವರ್ಷ ಹೆಚ್ಚು ಎಂದರೆ ೧೮ ರಿಂದ ೨೦ ಸಾವಿರಕ್ಕಿಂತ ಹೆಚ್ಚು ಪಂಪುಸೆಟ್ಟುಗಳನ್ನು ಕೊಟ್ಟಂತೆ ಇಲ್ಲ. ಈ ಚಿಂತನ ಚಿಲುಮೆಯಲ್ಲಿ ಹೇಳಿದರು, ಇಂದು ರೈತರಿಗೆ ಈ ಅನುಕೂಲತೆಯನ್ನು ಮೊದಲು ಕೊಡಬೇಕು, ಪ್ರತಿವರ್ಷ ೫೦ ಸಾವಿರ ಹೊಸ ಪಂಪುಸೆಟ್ಟುಗಳನ್ನು ರೈತರಿಗೆ ಎನರ್ಜೈಸ್ ಮಾಡಬೇಕು ಎಂದು ಅವರು ಹೇಳಿದರು. ನನಗೆ ಸಂತೋಷ ಇದೆ, ಕಳೆದ ಎರಡೂವರೆ ವರ್ಷದಲ್ಲಿ ನಾವು ಪ್ರತಿವರ್ಷ ಸರಾಸರಿ ೪೦ ಸಾವಿರ ಕೊಟ್ಟಿದ್ದೇವೆ. ರೂರಲ್ ಎಲೆಕ್ಟ್ರಿಫಿಕೇಷನ್‌ಗೆ ಅವರು ಮಹತ್ವ ಕೊಟ್ಟರು. ಹಿಂದೆ ೬೦೦ ಹೆಚ್ಚು ಎಂದರೆ ೮೦೦ ಹಳ್ಳಿಗಳಿಗೆ ಎಲೆಕ್ಟ್ರಿಫಿಕೇಷನ್ ಆಗಿರಲಿಲ್ಲ. ಈಗ ಸರಾಸರಿ ೧೮ ಸಾವಿರ ಅಥವಾ ೨೦ ಸಾವಿರ ಈ ಎರಡೂವರೆ ವರ್ಷಗಳಲ್ಲಿ ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಋಣಿಯಾಗಿದ್ದೇನೆ. ಅವರು ಈಗಿದ್ದಾರೆ. ಈಗ ನನ್ನ ಮತ್ತು ಮಾನ್ಯ ಬಂಗಾರಪ್ಪನವರ ವಿಚಾರ ಒಂದೆ. ಚಿಂತನಚಿಲುಮೆ ಬೇಕಿಲ್ಲ ಎಂದಲ್ಲ. ಅವರ ಉದ್ದೇಶಕ್ಕೋಸ್ಕರವಾಗಿ ಇಟ್ಟುಕೊಳ್ಳಿ, ಬೆಳೆಸಿಕೊಳ್ಳಿ. ನಮ್ಮ ವಿಚಾರ ಇಷ್ಟು. ನಾವು ಬಡವರ ಪ್ರತಿನಿಧಿಗಳಾಗಿದ್ದೇವೆ, ಕಾರ್ಮಿಕರ ಪ್ರತಿನಿಧಿಗಳಾಗಿದ್ದೇವೆ. ಗ್ರಾಮೀಣ ಪ್ರದೇಶದಲ್ಲಿ ಯಾರು ಹೊಟ್ಟೆಗಿಲ್ಲದೆ ನರಳುವವರಿದ್ದಾರೆ, ಅಂತಹವರ ಪ್ರತಿನಿಧಿಗಳಾಗಿ ಅವರ ಪರವಾಗಿ ಹೇಳುತ್ತಾ ಇದ್ದೇನೆ. ಸ್ವಾಮಿ, ಬುದ್ಧಿವಾದ ಹೇಳುವವರು ಜಗತ್ತಿನಲ್ಲಿ ಇದ್ದೇ ಇದ್ದಾರೆ. ಇಂಡಿಯಾ ದೇಶದಲ್ಲಿ ಬುದ್ಧಿ ಹೇಳಿಕೊಂಡೇ ಜೀವನ ಮಾಡತಕ್ಕವರು ಇದ್ದಾರೆ. ಅವರ ಬುದ್ಧಿಯನ್ನು ಕೇಳಿಕೇಳಿ ನೀವೂ ಹಾಗೇ ನಡೆಯುತ್ತಾ ಇದ್ದೀರಿ. ನಾವು ಹೇಳುತ್ತಾ ಇದ್ದೇವೆ. ನಿಮ್ಮ ಬುದ್ಧಿ ಸಾಕು. ಹಳ್ಳಿಗಾಡಿನ ಪರಿಸ್ಥಿತಿಯ ಬಗ್ಗೆ ನಮ್ಮ ಬುದ್ಧಿಯನ್ನು ನೀವು ಕೇಳಿ. ಅವರು ಲಂಡನ್‌ಗಾದರೂ ಹೋಗಲಿ, ಎಕನಾಮಿಸ್ಟ್ ಸಂಸ್ಥೆಯ ಅಧ್ಯಕ್ಷರಾಗಲಿ, ಎಲ್ಲಾದರೂ ಹೋಗಲಿ, ಕೊನೆಯವರೆಗೆ ಅಧಿಕಾರದಲ್ಲಿದ್ದು, ಸಂಬಳ ತೆಗೆದುಕೊಂಡು ಸುಖವಾಗಿ ಜೀವನ ಮಾಡತಕ್ಕವರು ಅವರ ಮನೆಯಲ್ಲಿ ಅವರು ಇರಲಿ. ನಾವು ಹೇಳಿದಹಾಗೆ ಕೇಳಿ, ನಿಮ್ಮ ಬುದ್ಧಿವಾದ ನಮಗೆ ಸಾಕು. ಹಳ್ಳಿಗಾಡು ಪ್ರದೇಶದಲ್ಲಿ ಆರ್ಥಿಕ ವ್ಯವಸ್ಥೆಯಾಗಲಿ ಸಾಮಾಜಿಕ ವ್ಯವಸ್ಥೆ ಸುಧಾರಿಸಲಿ. ಬಡವನ ಬುದ್ಧಿವಾದ ಕೇಳಿ ಸರ್ಕಾರ ನಡೆಸಿ, ನಮಗೆ ಈ ಚಿಂತನಚಿಲುಮೆ ಬೇಡ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಸವಲಿಂಗಪ್ಪನವರು ಸೆಕ್ರೆಟರಿಯೇಟ್‌ನಲ್ಲಿ ಒಂದೇ ಜಾತಿಯವರ ಪ್ರಭಾವ ಇನ್ನೂ ನಡೆದಿದೆ, ಅದರಲ್ಲಿ ಹೆಚ್ಚು ಬದಲಾವಣೆಯಾಗಿಲ್ಲ ಎಂದು ಹೇಳಿದರು.

ಐ.ಎ.ಎಸ್. ಆಫೀಸರ್ಸ್ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಬಸವಲಿಂಗಪ್ಪ ನವರು ಇಬ್ಬರೂ ಸ್ವಲ್ಪ ಖಾರವಾಗಿ ಮಾತನಾಡಿದರು. ಈ ಐ.ಎ.ಎಸ್. ಅಧಿಕಾರಿಗಳು ಇರಬೇಕೋ ಬೇಡವೋ ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ಆದರೆ ಆ ಪದ್ಧತಿಯನ್ನು ತೆಗೆದು ಹಾಕುವಂಥಾದ್ದು ನಮಗೆ ಸಾಧ್ಯವಿಲ್ಲ. ಐ.ಎ.ಎಸ್. ಅಧಿಕಾರಿಗಳಾಗಿರತಕ್ಕವರು ಇದೇ ಸಮಾಜದಿಂದ ಬಂದವರು ಎಂಬುದನ್ನು ನಾವು ತಿಳಿದುಕೊಳ್ಳಬೇಕು, ಅವರು ನಮ್ಮ ದೇಶದವರು, ಇಂಗ್ಲೆಂಡಿನಿಂದ ಬಂದಿರತಕ್ಕವರಲ್ಲ. ಈಗ ಏನಾಗಿದೆಯೆಂದರೆ ನಮ್ಮ ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ಬೇರೆಬೇರೆ ರಾಜ್ಯಗಳಿಂದ ಏನು ಐ.ಎ.ಎಸ್. ಅಧಿಕಾರಿಗಳು ಬರುತ್ತಾರೆ ಅವರ ಸಂಖ್ಯೆಯಲ್ಲಿ ನಮ್ಮ ರಾಜ್ಯದವರ ಸಂಖ್ಯೆ ಹೆಚ್ಚು ಆಗಬೇಕು ಎನ್ನುವುದು ನಮ್ಮ ಸೂಚನೆಯಾಗಿತ್ತು. ಅದನ್ನು ಕೇಂದ್ರಸರ್ಕಾರದವರು ಒಪ್ಪಲಿಲ್ಲ. ಕೇಂದ್ರ ಸರ್ಕಾರದವರು ಹೊಸದಾಗಿ ಮತ್ತೊಂದು ನಿರ್ಣಯ ಏನು ಮಾಡಿದ್ದಾರೆ ಎಂದರೆ ಒಂದು ರಾಜ್ಯದ ಒಟ್ಟು ಕೋಟಾದಲ್ಲಿ ಶೇಕಡ ೫೦ರಷ್ಟು ಬೇರೆ ರಾಜ್ಯಗಳಿಂದ ಬರಬೇಕು, ಅದೇ ರಾಜ್ಯದ ಐ.ಎ.ಎಸ್. ಅಧಿಕಾರಿಗಳು ಶೇಕಡ ೫೦ಕ್ಕಿಂತ ಹೆಚ್ಚು ಇರತಕ್ಕದ್ದಲ್ಲ ಎಂದು ಮಾಡಿದ್ದಾರೆ. ಇದರ ಬಗ್ಗೆ ಎನ್.ಡಿ.ಸಿ. ಮೀಟಿಂಗ್‌ನಲ್ಲಿ ಏನಾದರೂ ಚರ್ಚೆಗೆ ಬರಬಹುದು, ಅಲ್ಲಿ ಚರ್ಚೆಯಾದಾಗ ನಮ್ಮ ಅಭಿಪ್ರಾಯವನ್ನು ನಾವೂ ವ್ಯಕ್ತಮಾಡಬಹುದು. ಈ ವಿಚಾರ ಕೇಂದ್ರಸರ್ಕಾರಕ್ಕೆ ಬಿಟ್ಟದ್ದು ಅವರ ವ್ಯಾಪ್ತಿಗೆ ಒಳಪಟ್ಟದ್ದು. ನಮ್ಮ ಈ ಕೇಂದ್ರ ಕಛೇರಿಯಲ್ಲಿರತಕ್ಕ ಬೇರೆಬೇರೆ ಅಧಿಕಾರಿಗಳ ಕ್ಯಾಸ್ಟ್ ಕಾಂಪೊಸಿಷನ್ ಏನು ಎಂದು ಮಾನ್ಯ ಬಸವಲಿಂಗಪ್ಪನವರು ಎತ್ತಿದ್ದರಿಂದ ಈ ವಿಚಾರ ಹೇಳಲಿಕ್ಕೆ ಬಯಸುತ್ತೇನೆ. ೧೯೮೨ರಲ್ಲಿ ಸರ್ಕಾರದಲ್ಲಿ ಒಟ್ಟು ೨೦ ಸೆಕ್ರೆಟರಿಗಳಿದ್ದರು. ಈ ೨೦ರಲ್ಲಿ ೧೦ ಜನ ಬ್ರಾಹ್ಮಣರು ೨ ಜನ ಎಸ್.ಸಿ. ಎಸ್.ಟಿ.ಗೆ ಸೇರಿದವರು ಬೇರೆಯವರು ೮. ಈಗ ೨೪ ಜನ ಇದ್ದಾರೆ. ಈ ೨೪ರಲ್ಲಿ ಬ್ರಾಹ್ಮಣರು ೧೦, ಎಸ್.ಸಿ.ಎಸ್.ಟಿ.ಗೆ ಸೇರಿದವರು ೪, ಬೇರೆಯವರು ೧೦. ಅಂದರೆ ೪ ಸ್ಥಾನ ಬೇರೆಯವರಿಗೆ ಹೆಚ್ಚು ಸಿಕ್ಕಿದೆ ಡಿವಿಜನಲ್ ಕಮಿಷನರ್ಸ್ ೧೯೮೨ನೇ ಇಸವಿಯಲ್ಲಿ ಒಬ್ಬ ಬ್ರಾಹ್ಮಣ, ಒಬ್ಬರು ಎಸ್.ಸಿ.ಎಸ್.ಟಿ.ಗೆ ಸೇರಿದವರು, ಇಬ್ಬರು ಬೇರೆಯವರು ಇದ್ದರು. ಈಗ ಒಬ್ಬ ಬ್ರಾಹ್ಮಣ, ಎಸ್.ಸಿ.ಎಸ್.ಟಿ.ಗೆ ಸೇರಿದವರು ೩ ಜನ ಇದ್ದಾರೆ. ಆಮೇಲೆ ಡೆಪ್ಯುಟಿ ಕಮಿಷನರ್ಸ್ ೧೯೮೨ರಲ್ಲಿ ೧೯ ಜನರ ಪೈಕಿ ಬ್ರಾಹ್ಮಣರು ೬, ಎಸ್.ಸಿ. ೪, ಬೇರೆಯವರು ೯ ಇದ್ದರು. ೧೯೮೫ರಲ್ಲಿ ಬ್ರಾಹ್ಮಣರು ೫, ಎಸ್.ಸಿ. ೫, ಬೇರೆಯವರು ೯, ಹೋಗಿದ್ದಾರೆ. ಅದರಲ್ಲಿ ಇನ್ನೂ ಹೆಚ್ಚು ಪ್ರಾತಿನಿಧ್ಯವನ್ನು ಹಿಂದುಳಿದ ಮತ್ತು ಅನುಸೂಚಿತ ಪಂಗಡದವರಿಗೆ ಕೊಡಲು ಸ್ವಲ್ಪಮಟ್ಟಿಗೆ ನಮಗೆ ಕಷ್ಟ ಇದೆ. ನಾವು ಯಾವ ಒಂದು ಖಾತೆಗೆ ಒಬ್ಬ ಅಧಿಕಾರಿಯನ್ನು ನೇಮಿಸುತ್ತೇವೋ ಅವರು ಇಷ್ಟು ಸೀನಿಯಾರಿಟಿ ಉಳ್ಳವರಾಗಿರಬೇಕು. ಅದೂ ಇಲ್ಲದೇ ಹೋದರೆ ಆ ಹುದ್ದೆಗೆ ಅವರನ್ನು ನೇಮಿಸು ವುದಕ್ಕೆ ಸರ್ವೀಸ್ ರೂಲ್ಸ್ ಪ್ರಕಾರ ಆಗುವುದಿಲ್ಲ, ಆ ಒಂದು ಆತಂಕ ಇದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಪಬ್ಲಿಕ್ ಗ್ರಿವೆನ್ಸ್ ವಿಚಾರದಲ್ಲಿ ಬಹಳ ಟೀಕೆ ಬಂದಿತ್ತು, ಅದರಲ್ಲೂ ವಿರೋಧ ಪಕ್ಷದ ನಾಯಕರುಬಹಳ ಉಗ್ರವಾಗಿ ಟೀಕೆ ಮಾಡಿ ಹೇಳಿದರು, ೧೦-೧೫ ಸಾವಿರ ಅರ್ಜಿಗಳಲ್ಲಿ ಕೇವಲ ೪ ಅಥವಾ ೫ ಸಾವಿರದಷ್ಟು ಅರ್ಜಿಗಳಿಗೆ ಪರಿಹಾರ ಸಿಕ್ಕಿದೆ ಒಟ್ಟು ೯೧,೦೦೦ ಅರ್ಜಿಗಳಲ್ಲಿ ೪೬೦೦ ಅರ್ಜಿಗಳಿಗೆ ಮಾತ್ರ ಸಮಸ್ಯೆ ಇತ್ಯರ್ಥವಾಗಿದೆ, ಬಾಕಿಯದು ಆಗಿಲ್ಲವೆಂದು ಹೇಳಿ ದರು. ಈ ವಿಚಾರದಲ್ಲಿ ನಾನು ಹೇಳತಕ್ಕಂಥದ್ದು, ಇಷ್ಟೇ ಈ ಪಬ್ಲಿಕ್ ಗ್ರೀವೆನ್ಸ್ ಎಂದು ನಾವು ಏನುಕರೆಯುತ್ತೇವೆ, ಅದು ಎಲ್ಲಾ ಸಂದರ್ಭದಲ್ಲೂ ಪಬ್ಲಿಕ್ ಗ್ರೀವೆನ್ಸ್ ಆಗಿರುವುದಿಲ್ಲ, ನಾವು ಈ ಖಾತೆಗೆ ಆ ಹೆಸರು ಏತಕ್ಕೆ, ಕೊಟ್ಟಿದ್ದೇವೆಂದರೆ, ವೈಯುಕ್ತಿಕವಾಗಿ ಬಂದಂತಹ ಹಾಗೂ ವೈಯುಕ್ತಿಕ ಸಮಸ್ಯೆಗಳಿಗೆ ಸಂಬಂಧಪಟ್ಟಂತಹ ಅರ್ಜಿಗಳನ್ನು ಅನೇಕ ಜನರು ಕೊಡುವುದರಿಂದ ಅದು ಪಬ್ಲಿಕ್ ಆಗುತ್ತದೆ, ಪ್ರತಿ ದಿವಸ ಸುಮಾರು ೩೦೦-೫೦೦ ಅರ್ಜಿಗಳು ಬರುತ್ತಿವೆ, ಈ ಎಲ್ಲಾ ಅರ್ಜಿಗಳನ್ನು ಒಮ್ಮೆಲೇ ವಿಲೇವಾರಿ ಮಾಡುವುದಕ್ಕೆ ಆಗುವುದಿಲ್ಲ, ಕೆಲವದರಲ್ಲಿ ಜಮೀನಿನ ಮಾಲೀಕ ಮತ್ತು ಟೆನೆಂಟ್ ಜಗಳ ಬರುತ್ತದೆ. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಒಂದು ನಿರ್ಣಯವಾದರೆ, ಆ ಟೆನೆಂಟ್ ನನ್ನ ಹತ್ತಿರ ಬಂದು ಇದು ನನಗೆ ವಿರುದ್ಧವಾಗಿದೆ, ದಯವಿಟ್ಟು ನನಗೆ ಆ ಜಮೀನು ಕೊಡಿಸಬೇಕೆಂದು ಬರುತ್ತಾನೆ, ಆದರೆ ಅದನ್ನು ಕೊಡಿಸುವುದಕ್ಕಾಗುವುದಿಲ್ಲ, ಟ್ರಿಬ್ಯುನಲ್ ಸಹ ಒಂದು ನ್ಯಾಯಾಲಯ ಇದ್ದ ಹಾಗೆ, ಅದರ ವಿರುದ್ಧ ಹೋಗುವುದಕ್ಕಾಗುವುದಿಲ್ಲ, ಆಗ ನೀವು ಹೈಕೋರ್ಟಿಗೆ ಹೋಗಿ ಎಂದು ಹೇಳಬೇಕಾಗುತ್ತದೆ. ಇನ್ನು ಕೆಲವು ಗೃಹ ಕಲಹ, ದಾಯಾದಿ ಕಲಹ ಇರಬಹುದು ನಾಲ್ಕೈದು ಜನ ಅಣ್ಣತಮ್ಮಂದಿರು ಇರುತ್ತಾರೆ, ಅವರಲ್ಲಿ ವ್ಯಾಜ್ಯ ಆಗುತ್ತದೆ ಅವರಲ್ಲಿ ಒಬ್ಬನು ತನಗೆ ಅನ್ಯಾಯವಾಗಿದೆ, ನೀವು ಅದನ್ನು ಸರಿ ಮಾಡಿ ಎಂದು ಹೇಳುತ್ತಾನೆ, ಅದನ್ನೂ ಕೂಡ ನಾವು ಸರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಗಂಡ ಹೆಂಡಿರ ಕಲಹ ಇದೆ, ಇವೊತ್ತು ಬೆಳಿಗ್ಗೆ ಒಬ್ಬ ಹೆಣ್ಣುಮಗಳು ಬಂದು ಹೇಳಿದಳು, ಒಬ್ಬ ವ್ಯಕ್ತಿ

ಬಂದು ನನ್ನನ್ನು ಮದುವೆಯಾದ, ಅವನಿಗೆ ಮೊದಲೇ ಒಬ್ಬಳು ಹೆಂಡತಿ ಇದ್ದಳು, ಆದರೆ, ಇದು ನನಗೆ ಗೊತ್ತಿರಲಿಲ್ಲ, ಈಗ ನನ್ನ ಹತ್ತಿರ ಬರುವುದಿಲ್ಲ, ದಯವಿಟ್ಟು ನೀವು ಸಹಾಯ ಮಾಡಬೇಕೆಂದು ಹೇಳಿದಳು. ಇದನ್ನು ಯಾವ ರೀತಿ ಮಾಡಬೇಕು ? ಇವೂ ಕೂಡ ನ್ಯಾಯಾಲಯಕ್ಕೆ ಹೋಗಬೇಕು. ಇಂಥಾದ್ದು ಬಹಳ ಬರುತ್ತವೆ. ಆದರೆ, ಎಲ್ಲದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಬರತಕ್ಕಂತಹ ಅರ್ಜಿಗಳು ಯಾವುವೆಂದರೆ, ಕೆಲಸ ಕೊಡಿಸಿ ಎಂದು, ಬಹಳಷ್ಟು ಜನ ಅಂಗವಿಕಲರು ಕೂಡ ಬರುತ್ತಾರೆ. ಇಂದು ಬೆಳಿಗ್ಗೆ ೬–೮ ಜನ ಅಂಧ ಸಂಘದವರು ಬಂದು ನನಗೆ ಅರ್ಜಿ ಕೊಟ್ಟರು, ನಮ್ಮ ಕಡೆಗೆ ಯಾರೂ ಗಮನ ಕೊಡುತ್ತಿಲ್ಲ, ನಮಗೆ ಬಹಳ ಅನ್ಯಾಯವಾಗುತ್ತಿದೆ, ನಮ್ಮ ಶಾಲೆ ಇದೆ, ಆ ಶಾಲೆಗೆ ಗ್ರ್ಯಾಂಟ್ ಸಿಗುತ್ತಿಲ್ಲವೆಂದೂ ಅವರು ಹೇಳಿದರು. ಇಂಥಾದ್ದು ಬಂದರೆ, ತಕ್ಷಣ ಪರಿಹಾರ ಕೊಡಬಹುದು, ಅವರೂ ಕೂಡ ತಮಗೆ ಕೆಲಸ ಕೊಡಿಸಿ ಎಂದು ಹೇಳುತ್ತಾರೆ ಆದರೆ. ಅದು ತಕ್ಷಣ ಆಗುವುದಿಲ್ಲ. ಹೀಗೆ ಅನೇಕ ರೀತಿಯ ಸಮಸ್ಯೆಗಳನ್ನು ಜನರು ತೆಗೆದುಕೊಂಡು ಬರುತ್ತಾರೆ ಯಾರು ನನ್ನ ಹತ್ತಿರ ಬರುತ್ತಾರೆ, ಅವರ ಹತ್ತಿರ ನಾನು ವೈಯುಕ್ತಿಕವಾಗಿ ಒಂದರ್ಧ ನಿಮಿಷವಾದರೂ ಮಾತನಾಡುತ್ತೇನೆ ಆದರೆ ಮಾತನಾಡಿದ್ದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ, ಅದು ನನಗೆ ಗೊತ್ತುಂಟು ಕನಿಷ್ಟ ಪಕ್ಷ ಅವರ ಮನಸ್ಸಿನಲ್ಲಿ ಇಷ್ಟಾದರೂ ಆಗುತ್ತದೆ, ನಾವು ಹೋದಾಗ ಅರ್ಜಿ ತೆಗೆದುಕೊಂಡರು, ಅರ್ಜಿ ಮೇಲೆ ಏನಾಗುತ್ತದೆನ್ನುವುದಕ್ಕೆ ದೇವರಿದ್ದಾನೆ ಎನ್ನುವಂತಹ ಒಳ್ಳೆಯ ಸ್ವಭಾವದ ಜನ ನಮ್ಮವರು. ೪೬೦೦ ಇತ್ಯರ್ಥ ಆಗಿರಬಹುದು, ಕೆಲವೊಂದು ಬಹಳ ಮಹತ್ವದ್ದೂ ಕೂಡ ಇಲ್ಲಿ, ಉದಾಹರಣೆಗಾಗಿ ಹೇಳುತ್ತೇನೆ, ನನಗೆ ಒಂದು ಪತ್ರ ಬಂದಿದೆ ಅದು ಬೆಳಗಾಂ ಅಥವಾ ಬಿಜಾಪುರ ಜಿಲ್ಲೆಯಿಂದ ಸಾಮಾನ್ಯ ರೈತನಿಂದ ಬಂದಿದೆ; ಅದು ಯಾವಾಗ ಬಂದಿದೆಯೋ ಗೊತ್ತಿಲ್ಲ, ಸುಮಾರು ೩–೪ ತಿಂಗಳ ಹಿಂದೆ ಪತ್ರ ಬಂತು ಅದನ್ನು ಇಲ್ಲಿ ಓದಬೇಕೆಂದಿದ್ದೆ ಆದರೆ, ಈಗ ಕಾಣುತ್ತಿಲ್ಲ ಅದು ಸಿಕ್ಕಿದಾಗ ಓದುತ್ತೇನೆ. ಆ ವ್ಯಕ್ತಿ ಹೇಳುತ್ತಾನೆ, ನಾನು ಮೂರು ತಿಂಗಳ ಹಿಂದೆ ಒಂದು ಅರ್ಜಿ ಕೊಟ್ಟಿದ್ದೆ, ನೀವು ಅದನ್ನು ಎಲೆಕ್ಟ್ರಿಸಿಟಿ ಬೋರ್ಡಿಗೆ ಕಳಿಸಿದ್ದೀರಿ. ಎಲೆಕ್ಟ್ರಿಸಿಟಿ ಬೋರ್ಡ್‌ನವರು ಬಂದು ಪಂಪ್‌ಸೆಟ್‌ಗೆ ಎಲೆಕ್ಟ್ರಿಸಿಟಿ ಕೊಟ್ಟಿದ್ದಾರೆಂದು ಹೇಳಿದ್ದಾನೆ. ಒಬ್ಬ ಸಾಮಾನ್ಯವಾದಂತಹ ರೈತ ಹೋಗಿ ಅರ್ಜಿ ಕೊಟ್ಟರೆ ಆ ಪುಕಾರನ್ನು ಕೇಳಿ ಕೆಲಸವಾಗುತ್ತದೆಂದು ನನಗೆ ಗೊತ್ತಿರಲಿಲ್ಲವೆಂದು ಹೇಳಿದ್ದರು. ಬಂದವರೆಲ್ಲರಿಗೂ ಈ ತರಹ ಪರಿಹಾರ ಸಿಗುವುದಿಲ್ಲವೆಂದು ನನಗೆ ಗೊತ್ತುಂಟು. ಆದಷ್ಟು ಮಟ್ಟಿಗೆ ಜನತೆಯನ್ನು ಸರ್ಕಾರದ ಹತ್ತಿರ ತರಬೇಕು ಎನ್ನತಕ್ಕಂಥಾದ್ದು ನಮ್ಮ ಪ್ರಯತ್ನ. ಈ ಪ್ರಯತ್ನ ಮುಂದುವರಿಯುತ್ತಿರಬೇಕು, ಎಲ್ಲಿಯವರೆಗೆ ಜನತೆಯ ಸಮಸ್ಯೆಗಳು ಇತ್ಯರ್ಥವಾಗುವುದಿಲ್ಲ ಅಲ್ಲಿಯವರೆಗೆ, ಈ ಪ್ರಯತ್ನವನ್ನು ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ, ನಾವು ಒಂದು ಹೊಸ ಸ್ಕೀಮನ್ನು ಮಾಡಿದೆವು. ಯಾರು ಅನುಸೂಚಿತ ವರ್ಗಗಳ ಪ್ರತಿಭಾವಂತ ಯುವಕರು ರ್‍ಯಾಂಕ್ ಪಡೆಯುತ್ತಾರೆ, ಅಂತಹವರನ್ನು ನೇರವಾಗಿ ನೇಮಕ ಮಾಡಬೇಕೆಂದು. ನಮ್ಮ ಇಡೀ ದೇಶದಲ್ಲಿ ಹಿಂದೆಂದೂ ಇದು ಆಗಿರಲಿಲ್ಲ. ಒಂದು ಹೊಸ ಪ್ರಯೋಗವನ್ನು ನಾವು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಸಮಾಧಾನವಿಲ್ಲ. ಇದರ ಬಗ್ಗೆ ಸರ್ಕಾರೀ ಆಜ್ಞೆ ಹೊರಡಿಸಲಿಕ್ಕೆ ಒಂದೂವರೆ ವರ್ಷವಾಯಿತು, ಗವರ್ನರ್‌ರವರು ಇದರ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು, ಲಾ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕಾಯಿತು, ಮತ್ತು ಎ. ಜಿ. ಹತ್ತಿರ ಕನ್‌ಸಲ್ಟ್ ಮಾಡಬೇಕಾಯಿತು, ಅದೆಲ್ಲಾ ಆಗಿ ಒಂದೂವರೆ ವರ್ಷದ ನಂತರ ಇದನ್ನು ಕೊಡಬಹುದೆಂದು ನಿರ್ಣಯ ಮಾಡಿದರೆ, ಆಗ ಮತ್ತೆ ಹೈ ಕೋರ್ಟಿಗೆ ಹೋಗಿದ್ದಾರೆ, ಇದನ್ನು ತಕ್ಷಣ ವೆಕೇಟ್ ಮಾಡಬೇಕೆಂದು ಅಡ್ವೊಕೇಟ್ ಜನರಲ್ ರವರಿಗೆ ಹೇಳಿದ್ದೇವೆ, ವೆಕೇಟ್ ಆಗಬಹುದು. ಕನಿಷ್ಟ ಪಕ್ಷ ಮೊದಲನೆಯ ಹಂತದ ೮೩–೮೪ ಜನರಿಗೆ ಸಿಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮಾನ್ಯ ಲೈಕ್ ಉದ್ದೀನ್‌ರವರು ಕೆಲವು ವಿಚಾರವನ್ನು ಹೇಳಿದರು, ಅದರಲ್ಲಿ ಬೀದರ್ ಜಿಲ್ಲೆಗೆ ಏನೂ ಆಗಿಲ್ಲವೆಂದು, ಬೀದರ್ ಜಿಲ್ಲೆಯಿಂದ ಆರಿಸಿ ಬಂದ ಇನ್ನೂ ಇತರ ಸದಸ್ಯರಿದ್ದಾರೆ, ಎಷ್ಟೋ ವರ್ಷಗಳಿಂದ ನೆನೆಗುದಿಗೆ ಬಿದ್ದಂತಹ ಎಲ್ಲಾ ಸಮಸ್ಯೆಗಳು ಪರಿಹಾರವಾಗಿದೆಯೆಂದು ನಾನು ಹೇಳುತ್ತಿಲ್ಲ. ಎರಡು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ, ಇದು ಕೇವಲ ಪ್ರಾರಂಭ, ಬೀದರ್ ಜಿಲ್ಲೆಯು ಹವಾಮಾನ ದೃಷ್ಟಿಯಿಂದ ಮತ್ತು ನೆಲದ ದೃಷ್ಟಿಯಿಂದ ಅತಿ ಉತ್ತಮವಾದಂತಹ ಜಿಲ್ಲೆ. ಅಲ್ಲಿ ಕೆಲವು ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ, ಕೆಲಸ ಎಷ್ಟು ತೀವ್ರವಾಗಿ ಆಗಬೇಕೋ ಅದು ಆಗುತ್ತಿಲ್ಲ. ಈ ವರ್ಷದ ಕೊನೆಯಲ್ಲಿ ಸಾಧ್ಯವಾದರೆ, ಹಣ ಕೊಡಬೇಕೆಂದು ನಮ್ಮ ಮನಸ್ಸಿನಲ್ಲಿ ಇದೆ. ಮುಂದಿನ ವರ್ಷ ಹೆಚ್ಚು ಹಣ ಒದಗಿಸುತ್ತೇವೆ. ಇಡೀ ದಕ್ಷಿಣ ಭಾರತದಲ್ಲಿ ಬೀದರ್ ಜಿಲ್ಲೆ ಔದ್ಯೋಗಿಕ ದೃಷ್ಟಿಯಿಂದ ಹಿಂದುಳಿದ ಜಿಲ್ಲೆಯೆಂದು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಇಡೀ ದಕ್ಷಿಣ ಭಾರತದ ನಾಲ್ಕು ರಾಜ್ಯ

ಗಳಲ್ಲಿ ಒಂದೇ ಒಂದು ಹಿಂದುಳಿದ ಜಿಲ್ಲೆಯೆಂದು ಒಪ್ಪಿಕೊಂಡಿದೆ. ಸುಮಾರು ೧೯ ಕೋಟಿ ರೂಪಾಯಿಗಳನ್ನು ಇನ್‌ಫ್ರಾಸ್ಟ್ರಕ್ಚರ್ ಆಗಿ ಖರ್ಚು ಮಾಡುತ್ತೇವೆ. ಬೀದರ್‌ಗೆ ಒಂದು ಸಣ್ಣ ಥರ್ಮಲ್ ಯೂನಿಟ್ ಹಾಕಬೇಕೆಂದಿದ್ದೇವೆ, ಅಲ್ಲಿ ಹೊಸದಾಗಿ ಕೈಗಾರಿಕೆಗಳೂ ಕೂಡ ಆಗಬೇಕು. ಬಹುಶಃ ಕೋಲಾರ ಮತ್ತು ಬಿಜಾಪುರ ಜಿಲ್ಲೆಯನ್ನು ಬಿಟ್ಟರೆ, ಅತಿ ಹೆಚ್ಚು ನೀರಾವರಿ ಭಾವಿಗಳು ಇರತಕ್ಕಂಥಾದ್ದು ಈ ಜಿಲ್ಲೆಯಲ್ಲೇ. ವಿದ್ಯುಚ್ಛಕ್ತಿ ಪೂರೈಕೆಯಲ್ಲಿ ಮೇಲೆ ಕೆಳಗೆ ಆಗಕೂಡದು ಮತ್ತು ಇದು ಅಸ್ತವ್ಯಸ್ತ ವಾಗಬಾರದೆನ್ನುವ ದೃಷ್ಟಿಯಿಂದ, ಅದಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಯಾವ ರೀತಿ ಜಮಖಂಡಿ ಇಂಡಿ ಮತ್ತು ಕೋಲಾರದಲ್ಲಿ ಡೀಸಲ್ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಮಾಡಬೇಕೆಂದಿದ್ದೇವೋ ಅದೇ ರೀತಿ ಬೀದರ್‌ನಲ್ಲಿ ಮಾಡಬೇಕೆಂದಿದ್ದೇವೆ.

೧೧-೩೦ ಎ. ಎಂ.

ಅನಂತರ ಮಾನ್ಯ ಕೃಷ್ಣನ್‌ರವರು ಕೆಲವೊಂದು ವಿಚಾರಗಳನ್ನು ಪ್ರಸ್ತಾಪಿಸಿ ಒಂದು ಆತಂಕವನ್ನು ಅವರು ವ್ಯಕ್ತ ಮಾಡಿದರು. ಈಗ ಆಂಟಿ ರಿಸರ್ವೇಷನ್ ಮೂವ್‌ಮೆಂಟ್ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ ಅದರ ಬಗ್ಗೆ ಸರ್ಕಾರ ವಿಜಿಲೆಂಟ್ ಆಗಿರಬೇಕು, ಮತ್ತು ಜಾತೀಯತೆಯ ಗಲಭೆ ಆಗದಂತೆ ನೋಡಿಕೊಳ್ಳಬೇಕೆಂದು ಅವರು ಹೇಳಿದರು. ಆ ವಿಚಾರದ ಬಗ್ಗೆ ಸರ್ಕಾರದ ಧೋರಣೆ ಏನು ಇದೆ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ. ಅದರ ಬಗ್ಗೆ ಪುನರುಕ್ತಿ ಮಾಡತಕ್ಕ ಆಗತ್ಯ ಇಲ್ಲ. ಇನ್ನು ಒಬ್ಬಿಬ್ಬರು ಸದಸ್ಯರು ಖಾಲಿ ಹುದ್ದೆಗಳ ಬಗ್ಗೆ ಹೇಳಿದ್ದಾರೆ. ಈಗ ಸುಮಾರು ೪೫ ಸಾವಿರ ಇರಬಹುದು. ನಾವು ಅಧಿಕಾರಕ್ಕೆ ಬಂದಾಗ ೬೫ ಸಾವಿರ ಇದ್ದವು. ಅಷ್ಟೇ ಅಲ್ಲ, ಲೋಕೋಪಯೋಗಿ ನೀರಾವರಿ ಖಾತೆಯಲ್ಲಿ ಮುಖ್ಯವಾಗಿ ಯಾರು ದೈನಂದಿಕ ಸಂಬಳದ ಮೇಲೆ ಕೆಲಸ ಮಾಡುತ್ತಿದ್ದರು ಅವರು ಸುಮಾರು ೩೨ ಸಾವಿರ ಜನ ಇದ್ದರು. ಅವರು ೧೫-೨೦ ವರ್ಷಗಳಿಂದಲೂ ಕೆಲಸ ಮಾಡುತಿದ್ದರು. ಇವರುಗಳ ಬಗ್ಗೆ ಮಾನ್ಯ ಕೃಷ್ಣನ್‌ರವರು ಮತ್ತು ಆ ಕಡೆಯ ಸದಸ್ಯರು, ಈ ಕಡೆಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನೀರಗಂಟಿ ಕೆಲಸ ಮಾಡುವವರು ಅವರಿಗೆ ರೆಗ್ಯುಲರೈಸ್ ಮಾಡಲಿಕ್ಕೆ ಬರುವುದಿಲ್ಲ. ಅವರನ್ನು ಲೋಕಲ್ ಕ್ಯಾಂಡಿಡೇಟ್ ಎಂದು ನೇಮಕ ಮಾಡಲಿಕ್ಕೆ ಬರುವುದಿಲ್ಲ. ಹೈಕೋರ್ಟ್ ಆಜ್ಞೆಯಲ್ಲಿ ಇನ್ನು ಮುಂದೆ ಲೋಕಲ್ ಕ್ಯಾಂಡಿಡೇಟ್ ಎಂದು ಯಾರನ್ನು ಹಾಕಕಬಾರದು ಎಂದು ಹೇಳುತ್ತಾರೆ. ಎರಡು ವರ್ಷಗಳಲ್ಲಿ ತಾತ್ಕಾಲಿಕವಾಗಿ ಸಹ ಕಾಂಟ್ರಾಕ್ಟ್‌ಬೇಸಿಸ್ ಮೇಲೆ ಶಿಕ್ಷಕರನ್ನು ನೇಮಿಸುವ ಪ್ರಸಂಗ ಬಂತು. ಈಗ ೩೨ ಸಾವಿರದಲ್ಲಿ ೧೭ ಸಾವಿರ ದಿನಕೂಲಿ ಕೆಲಸ ಮಾಡತಕ್ಕವರನ್ನು ಖಾಯಂ ಮಾಡಿದ್ದೇವೆ. ಆದರೂ ಇನ್ನೂ ಬಹಳಷ್ಟು ಜನ ಇದ್ದಾರೆ ಅವರಿಗೆ ಯಾವರೀತಿ ಪರಿಹಾರ ಮಾಡಿಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಅವರಿಗೆ ಒಂದು ಪರಿಹಾರ ಹುಡುಕ ಬೇಕಾಗಿದೆ. ಮೊನ್ನೆಯ ದಿವಸ ಮೇಲ್ಮನೆಯಲ್ಲಿ ನಾನು ಒಂದು ಮಾತನ್ನು ಹೇಳಿದ್ದೇನೆ. ಸ್ಟೈಫಂಡರಿ ಗ್ರಾಜುಯೇಟ್ಸ್‌ಗೆ ಸಂಬಂಧಪಟ್ಟಿದ್ದು ಹಿಂದೆ ಆದಂಥಾದ್ದು ಆ ಭಾರ ನಮ್ಮ ಮೇಲೆ ಬಿದ್ದಿದೆ. ೧೫೦ ರೂಪಾಯಿಗಳ ಸಂಬಳದ ಮೇಲೆ ಅವರು ಪ್ರತಿ ತಿಂಗಳು ಏನು ಕೆಲಸ ಮಾಡುತ್ತಿದ್ದರೋ ಇಲ್ಲವೋ ದೇವರಿಗೆ ಗೊತ್ತು ಅವರನ್ನು ನೇಮಕ ಮಾಡಿದ್ದರು. ಅನಂತರ ೧೫೦ ರೂಪಾಯಿಗಳಿಂದ ೨೦೦ ರೂಪಾಯಿಗಳಿಗೆ ಮಾಡಿದರು. ಅನಂತರ ನಾವು ೪೯೦ ರೂಪಾಯಿಗಳು ಮತ್ತು ಭತ್ಯ ೫೦ ರೂಪಾಯಿಗಳು ಒಟ್ಟು ೫೪೦ ರೂಪಾಯಿ ಸಂಬಳದ ಮೇಲೆ ಇಟ್ಟಿದ್ದೇವೆ. ಹೈಕೋರ್ಟ್ ಆಜ್ಞೆ ಪ್ರಕಾರ ಹೊಸದಾಗಿ ನೇಮಕ ಆಗತಕ್ಕ ಸ್ಥಾನಗಳಲ್ಲಿಶೇಕಡಾ ೫೦ ರಷ್ಟು ಸ್ಟೈಫಂಡರಿ ಪದವೀಧರರಿಗೂ ಲೋಕಲ್ ಕ್ಯಾಂಡಿಡೇಟ್‌ಗಳಿಗೂ ಕೊಡ ಬೇಕೆಂದು ಇದೆ. ಆ ಪ್ರಕಾರ ರೂಲ್ ಅಮೆಂಡ್ ಮಾಡಿದ್ದೇವೆ. ಇನ್ನೂ ಅನೇಕ ಜನರಿಗೆ ನೌಕರಿ ಸಿಕ್ಕದೇ ಇರುವುದರಿಂದ ಅವರ ವಯಸ್ಸು ಹೆಚ್ಚಾಗುತ್ತಿದೆ. ಅವರ ವಯಸ್ಸಿನ ಮಿತಿ ಬಗ್ಗೆ ಸರ್ಕಾರಿ ಸೇವಾ ನಿಯಮಕ್ಕೆ ತಿದ್ದುಪಡಿ ಮಾಡಿ ೩೫ ವರ್ಷದವರೆಗೆ ಏರಿಸಿದ್ದೇವೆ. ಅನೇಕ ಜನರಿಗೆ ವಯಸ್ಸು ಮೀರಿರತಕ್ಕ ಪರಿಸ್ಥಿತಿ ಬಂದಿರಬಹುದು. ಅದಕ್ಕೆ ನಾನು ಹೇಳುವುದು ಏನೆಂದರೆ, ಅವರಿಗೆ ಇಷ್ಟ ಇದ್ದರೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ನಾವು ಅವರನ್ನು ನೇಮಕ ಮಾಡಿಕೊಳ್ಳಬಹುದು. ೫ವರ್ಷಗಳ ಕೆಲಸ ಸರಿಯಾಗಿ ಇದ್ದರೆ ಪುನಃ ೫ ವರ್ಷ, ಅನಂತರ ೫ ವರ್ಷ. ಅವರಿಗೆ ನಿವೃತ್ತಿ ನಂತರದ ಪೆನ್‌ಷನ್ ಮತ್ತಿತರ ಲಾಭ ಸಿಕ್ಕಬೇಕು ಅಂದರೆ ಅದು ಸಿಕ್ಕಲಾರದು. ಇದು ಒಂದೇ ಒಂದು ಉಪಾಯ ನನಗೆ ಕಾಣುತ್ತಿದೆ. ಇನ್ನು ಲೆಜಿಸ್ಲೇಟೀವ್ ಕೌನ್ಸಿಲ್ ಅಬಾಲಿಷನ್ ಮಾಡಿ ಎಂದು ಹೇಳಿದ್ದಾರೆ.......

ಶ್ರೀ ಬಿ. ಬಸವಲಿಂಗಪ್ಪ.—ಆ ಬಗ್ಗೆ ನಾವು ಸವಿಸ್ತಾರವಾಗಿ ಯೋಚನೆ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರು ಮಾನ್ಯ ದೇವೇಗೌಡರು ನಾವೆಲ್ಲಾ ಸೇರಿ ಮಾತನಾಡಿದ್ದೇವೆ. ಈಗ ೩೨ ಸಾವಿರ ಜನ ಹಂಗಾಮಿಯಾಗಿ ಏನು ಕೆಲಸ ಮಾಡುತ್ತಿದ್ದಾರೆ ಆ ಜನರನ್ನು ಆಯಾ ಕಾಲದಲ್ಲಿ ಯಾರು ಯಾರು ಅಧಿಕಾರಿಗಳು ಯಾವ ಯಾವ ಜಾತಿಗೆ ಸೇರಿದ್ದರು ಅಂತಹವರನ್ನೇ ತೆಗೆದು ಕೊಂಡಿದ್ದಾರೆ. ನಾನು ಜಾತಿ ವಾದಿ ಅಲ್ಲ. ಜಾತಿ ಹೋಗಬೇಕು ಎಂದು ಹೋರಾಟ ಮಾಡತಕ್ಕ ವ್ಯಕ್ತಿ. ಎಲ್ಲಿಯವರೆಗೆ ಜಾತಿ ಇರುತ್ತದೆ ಅಲ್ಲಿಯವರೆಗೆ ಅದನ್ನು ಮಾನ್ಯತೆ ಕೊಡಬೇಕೆಂದು ಕೇಳುತ್ತೇವೆ. ಇವತ್ತು ಹಂಗಾಮಿ ಯಾಗಿ ಸೇರಿಕೊಂಡಿರುವವರು ಏನಿದ್ದಾರೆ ಅವರ ಬಗ್ಗೆ ಅವರನ್ನು ಮುಂದುವರಿಸಿ ಎಂದು ಜನರು ಕೇಳುತ್ತಾರೆ ಎಂದು ಹೇಳಿದರೆ, ನಿವೃತ್ತಿ ಸಮಾಜದಲ್ಲಿ ಹಿಂದುಳಿದಿರುವವರು ಏನಿದ್ದಾರೆ ಅವರಿಗೆ ಅವಕಾಶ ಸಿಕ್ಕಿಲ್ಲ ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಅವರ ಕಡೆಯೂ ತಾವು ಗಮನ ಕೊಡಬೇಕಾಗುತ್ತದೆ. No temporary employee has a right to past. They are all temporaries. Supreme Court Judgement is there.

ಶ್ರೀ ರಾಮಕೃಷ್ಣ ಹೆಗಡೆ.—ಈ ಆಸ್ಪೆಕ್ಟನ್ನು ಹೈಕೋರ್ಟಿನವರು ಪರಿಶೀಲನೆ ಮಾಡಿ ಈ ಒಂದು ತೀರ್ಮಾನ ಕೊಟ್ಟಿದ್ದಾರೆ. ಲೋಕಲ್ ಕ್ಯಾಂಡಿಡೇಟ್ಸ್ ಬಗ್ಗೆಯೂ ರೋಸ್ಟರ್ ಪ್ರಕಾರ ರಿಸರ್ವೇಷನ್ ನಿಯಮಕ್ಕನುಗುಣವಾಗಿ ಹೇಳಿದ್ದಾರೆ. ಹೈಕೋರ್ಟ್ ಆರ್ಡರ್ ಪ್ರಕಾರ ಕೂಡ ಅವರನ್ನು ನಾವು ಖಾಯಂ ಮಾಡಲಿಕ್ಕೆ ಬರುವುದಿಲ್ಲ ಅವರು ಏನು ಹೇಳುತ್ತಾರೆ ಎಂದರೆ ನೀವು ಅಡ್ವರ್‌ಟೈಸ್‌ಮೆಂಟ್ ಮಾಡಲಿಲ್ಲ, ಆದ್ದರಿಂದ, ಕೆಲವು ಅಪರ್‌ಚ್ಯುನಿಟೀಸ್ ಅವರಿಗೆ ಕೊಡಲಿಲ್ಲ, ಎಂದು ಆ ಒಂದೇ ಒಂದು ಆಧಾರದ ಮೇಲೆ ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಕ್ಲಾಸ್ ಮೂರು ಮತ್ತು ನಾಲ್ಕನೆ ದರ್ಜೆ ಅಪಾಯಿಂಟ್‌ಮೆಂಟಿನಲ್ಲಿ ಯಾರಿಗೆ ಪ್ರಾತಿನಿಧ್ಯ ಇಲ್ಲ ಅಂತಹವರಿಗೆ ನೇರವಾಗಿ ಮಾಡಬಹುದು. ಅದಕ್ಕೆಂದೆ ಕಾನೂನನ್ನು ಮಾಡಿದ್ದೇವೆ. ಅದರ ಬಗ್ಗೆ ಸ್ಟೇ ಕೊಟ್ಟಿಲ್ಲ ಸುಪ್ರೀಂ ಕೋರ್ಟಿನಲ್ಲಿ ಅದನ್ನು ಪೆಂಡಿಂಗ್ ಇದೆ. ಅದರ ಬಗ್ಗೆ ನಿಯಮಗಳನ್ನು ಮಾಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರ ಅನುಮತಿ ಪಡೆದು ಮಧ್ಯೆ ಪ್ರವೇಶ ಮಾಡುತ್ತಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಏನು ಹೇಳಿದ್ದಾರೆ ಅದರ ಬಗ್ಗೆ ಅವರು ಯಾವುದೇ ಸಂಶಯ ಇಟ್ಟು ಕೊಳ್ಳಬೇಕಾಗಿಲ್ಲ. ಈ ವಿಷಯದಲ್ಲಿ ಅವರಿಗೆ ಎಷ್ಟು ಕಾಳಜಿ ಇದೆಯೋ ಸರ್ಕಾರಕ್ಕೂ ಅಷ್ಟೇ ಕಾಳಜಿ ಇದೆ. ಗುಲಗಂಜಿಯಷ್ಟು ಕಡಿಮೆ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಲೋಕೋಪಯೋಗಿ ಇಲಾಖೆಯ ನೀರಾವರಿ ಇಲಾಖೆಯಲ್ಲಿ ಜ್ಯೂನಿಯರ್ ಇಂಜಿನೀಯರ್ ನೇಮಕ ಮಾಡಿದ್ದೇವೆ. ಅವರಲ್ಲಿ ಲೋಕಲ್ ಕ್ಯಾಂಡಿಡೇಟ್ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಇದ್ದಾರೆ. ೨೦೦ ಜನ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಖಾಯಂಗೊಳಿಸಿದ್ದೇವೆ. ಅದೇ ಸಂದರ್ಭದಲ್ಲಿ ೧೪೩ ಜನ ಪರಿಶಿಷ್ಟ ಸಮಾಜದ ಜ್ಯೂನಿಯರ್ ಇಂಜಿನಿಯರ್‌ಗಳನ್ನು ನೇಮಕ ಮಾಡುತ್ತಿದ್ದೇವೆ. ಸ್ಟ್ರಿಕ್ಟ್‌ಲಿ ಇನ್ ಅಕಾರ್ಡೆನ್ಸ್ ವಿತ್ ದಿ ರೋಸ್ಟರ್ ಸಿಸ್ಟಮ್ ಅಂಡ್ ಇನ್ ಅಕಾರ್‌ಡೆನ್ಸ್ ವಿತ್ ದಿ ರಿಸರ್ವೇಷನ್ ಪಾಲಿಸಿ ೨೫ ಪರ್‌ಸೆಂಟ್ ಏನು ಮಾಡಿದ್ದೇವೆ ಈ ಎರಡನ್ನು ಅಳವಡಿಸಿ ಹೈಕೋರ್ಟ್ ನಿರ್ಣಯ ಪಾಲನೆ ಮಾಡಿ ೨೦೦ ಜನ ಲೋಕಲ್ ಕ್ಯಾಂಡಿಡೇಟ್‌ಗಳನ್ನು ರೆಗ್ಯುಲರೈಸ್ ಮಾಡುವುದರ ಜೊತೆಗೆ ೧೪೩ ಜನ ಷೆಡ್ಯೂಲ್ ಕ್ಯಾಸ್ಟ್ ಇಂಜಿನಿಯರ್‌ಗಳನ್ನು ನೇಮಕ ಮಾಡುತ್ತಿದ್ದೇವೆ. In the History of Karnataka PWD, this Government has appointed 143 SCs, Junior Engineers. ೩೨,೮೫೮ ಜನ ಎನ್. ಎಂ. ಆರ್. ನಲ್ಲಿ ಏನಿದ್ದಾರೆ ಅದರಲ್ಲಿ ನೇಮಕ ಮಾಡಿರತಕ್ಕವರಲ್ಲಿ ೧೭,೦೦೦ ಜನರನ್ನು ರೆಗ್ಯುಲರೈಸ್ ಮಾಡಿದ್ದೇವೆ. nearly 30 percent Constitutes Seheduled Caste. ಸರ್ಕಾರ ತೆಗೆದು ಕೊಂಡಿರುವ ನಿರ್ಣಯದ ಬಗ್ಗೆ ಯಾವುದೇ ಅನುಮಾನ ಬೇಡ. ಇದರ ಬಗ್ಗೆ ವಿರೋಧ ಪಕ್ಷದ ಮಾಜಿ ನಾಯಕರ ಜೊತೆ ಚರ್ಚೆ ಮಾಡಿದಾಗ ೭ ಸಾವಿರ ವೈಟ್ ಕಾಲರ್ ಜಾಬ್ಸ್ ಬಗ್ಗೆ ತಿಳಿಸಿದ್ದಾರೆ. ಇಲ್ಲಿಟರೇಟ್ ಕೂಲಿ ೩೨,೮೫೮ ಜನರಲ್ಲಿ ೭ ಸಾವಿರ ಜನರ ಒಂದು ಸಮಸ್ಯೆ ಇದೆ. ಅವರನ್ನೂ ಕೂಡ ಬಿಡುವುದಿಲ್ಲ. ಇದೆಲ್ಲವನ್ನೂ ವಿರೋಧ ಪಕ್ಷದ ಮುಖಂಡರನ್ನೊಳಗೊಂಡು ಈ ಹೌಸ್‌ನಲ್ಲಿ ಒಂದು ಕಮಿಟ್ ಮಾಡಿದ್ದೇನೆ. ೨೫೫ ದಿವಸ ಕೆಲಸ ಮಾಡಿದವರನ್ನು ಹೊರಗಡೆ ಕಳುಹಿಸ ಬಾರದೆಂದು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇನೆ. ಆದರೆ ೭ ಸಾವಿರ ಜನರನ್ನು ರೆಗ್ಯುಲೇಟ್ ಮಾಡುವಾಗ ಇರುವ ವೈಟ್ ಕಾಲರ್ ಜಾಬ್‌ಗಳಿಗೆ ಪರಿಶಿಷ್ಟ ಸಮಾಜದವರಿಗೆ ಏನು ಸಿಗಬೇಕೋ ಅದನ್ನು ಕಾದಿರಿಸಿ ಮುಂದಿನ ನಿರ್ಣಯ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಕರ್ನಾಟಕ ಸ್ಟೇಟ್ ಸಿವಿಲ್ ಸರ್ವಿಸಸ್ (ಡೈರೆಕ್ಟ್ ರೆಕ್ರೂಟ್‌ಮೆಂಟ್ ಆಫ್ ಎಸ್.ಸಿ. ಅಂಡ್ ಎಸ್.ಟಿ. ಅಂಡ್ ಬ್ಯಾಕ್‌ವಾರ್ಡ್ ಟ್ರೈಬ್ಸ್) ರೂಲ್ ೭೭ರ ಪ್ರಕಾರ ಮಾಡಲು ಆಗುತ್ತದೆಯೇ ?

ಶ್ರೀ ಎಂ. ಎಸ್. ಕೃಷ್ಣನ್.—ದೇವೇಗೌಡರೇ, ಬಹಳ ಚೆನ್ನಾಗಿ ಹೇಳುತ್ತಿದ್ದೀರಿ. ನೀವು ಇಲ್ಲಿಯುವರೆಗೆ ಹೇಳುತ್ತಿರುವುದು ಸರಿ. ೧-೪-೮೨ ಆದಮೇಲೆ ೧೦,೦೦೦ ಜನರನ್ನು ಟರ್ಮಿನೇಟ್ ಮಾಡಿದ್ದೀರಿ. ಇವರ ಬಗ್ಗೆ ತಾವು ಅನುಕಂಪ ತೋರಬೇಕಾಗಿದೆ. ತಾವು ಏನೂ ಹೇಳಲಿಲ್ಲ. ಎಲ್ಲವನ್ನೂ ಹೇಳಿ, ಇದು ಮುಚ್ಚುಮರೆ ಪ್ರಶ್ನೆಯಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಹಿಂದೆ ಕೂಡ ಕೆಲಸ ಮಾಡಿದ್ದಾರೆ. ದಯವಿಟ್ಟು ಅವರ ಬಗ್ಗೆ ಸಹಾನುಭೂತಿಯ ಆಟಿಟ್ಯೂಟ್ ತೆಗೆದುಕೊಂಡು ಅವರಿಗೂ ಕೂಡ ಕೆಲಸ ಕೊಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀಮಾನ್ ಕೃಷ್ಣನ್‌ರವರು ತುಂಬಾ ಬುದ್ಧಿವಂತರು. ಅವರು ಮಾತನಾಡಿ, ಇತ್ತೀಚೆಗೆ ಏನು ನೇಮಕ ಮಾಡಲಾಗಿದೆ ಅವರ ಬಗ್ಗೆ ಸರ್ಕಾರ ಒಪ್ಪಿಗೆ ಕೊಡಬೇಕೆಂದು ಹೇಳಿದ್ದಾರೆ. ಸರ್ಕಾರ ಯಾವತ್ತೂ ಆರ್ಥಿಕವಾಗಿ ಹಿಂದುಳಿದಿರುವವರ ಬಗ್ಗೆ ಚಿಂತನೆ ನಡೆಸುತ್ತದೆ. ಎರಡನೆಯದಾಗಿ ರೆಕ್ರೂಟ್‌ಮೆಂಟ್ ಪಾಲಿಸಿ ವಿರುದ್ಧವಾಗಿ ಹೋಗುವುದಿಲ್ಲ ಎನ್ನುವುದರ ಬಗ್ಗೆ ಶ್ರೀ ಬಸವಲಿಂಗಪ್ಪನವರು ಸಂಶಯ ತಾಳಿದ್ದಾರೆ. ಅದರ ಬಗ್ಗೆ ಹೇಳಬೇಕಾದರೆ ಅದಕೋಸ್ಕರವಾಗಿ ೯,೯೯೦ ಜನರನ್ನು ತೆಗೆದುಹಾಕಿದ್ದೇವೆ. ಅವರುಗಳ ಬಗ್ಗೆಯೂ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಶ್ರೀ ಕೃಷ್ಣನ್‌ರವರು ಮಾತನಾಡುವಾಗ ಬಹಳ ಗಂಭೀರವಾದ ಸೂಚನೆ ಮಾಡಿದರು. ಅದು ಲೆಜಿಸ್ಲೇಟಿವ್ ಕೌನ್ಸಿಲ್ ಅನ್ನು ಅಬಾಲಿಷ್ ಮಾಡಿಬಿಡಿ ಎಂದು. ಇದು ಬಹಳ ಗಂಭೀರವಾದದ್ದು. ಅವರು ಏತಕ್ಕೆ ಈ ಸಲಹೆ ಕೊಡುತ್ತಿರುವರೋ ಗೊತ್ತಿಲ್ಲ. ನರಸಿಂಹನ್ ಇದ್ದಿದ್ದರೆ ಅವರು ಈ ರೀತಿ ಹೇಳುತ್ತಿರಲಿಲ್ಲವೇನೋ ಅಥವಾ ಸಧ್ಯಕ್ಕೆ ಮೇಲ್ಮನೆಯಿಂದ ಅನೇಕ ದೃಷ್ಟಿಯಿಂದ ತೊಂದರೆಯಾಗುತ್ತದೆ ಎಂಬ ದೃಷ್ಟಿಯಿಂದ ಹೇಳಿದರೋ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈ ಮನೆಗೆ ಬಂದಾಗಿನಿಂದಲೂ ಈ ಪ್ರಪೋಸಲ್ ಮಾಡುತ್ತಲೇ ಇದ್ದೇನೆ. ಈಗ ತಕರಾರು ಬರುತ್ತಿದೆ. ಮುಂದೆ ಈ ರೀತಿ ಆಗಬಾರದು ಎಂದು.

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಮತ್ತು ನನ್ನ ಸರ್ಕಾರಕ್ಕೆ ಬೈಕ್ಯಾಮರೆಲ್ ಎಂದರೆ ಎರಡು ಮನೆಗಳಿರತಕ್ಕ ವಿಧಾನಮಂಡಲದಲ್ಲಿ ವಿಶ್ವಾಸ ಇದೆ. ಇದನ್ನು ಬಹಳ ಯೋಚನೆ ಮಾಡಿ ನಾನು ಮಾತನಾಡುತ್ತಿದ್ದೇನೆ. ಕೆಲವು ರಾಜ್ಯಗಳಲ್ಲಿ ಕೇವಲ ಅಸೆಂಬ್ಲಿ ಮಾತ್ರ ಇದ್ದು ಇನ್ನು ಕೆಲವು ಕಡೆ ಎರಡೂ ಇರುವಂಥದು ಇದೆ. ಇದರ ಉದ್ದೇಶ ಇಷ್ಟೇ. ನಾನು ಈಗ ಹೇಳುವುದನ್ನು ನಾವು ಟೀಕೆ ಎಂದಾಗಲೀ ಅಥವಾ ಈ ಮನೆಗೆ ಅಗೌರವವೆಂದಾಗಲೀ ಭಾವಿಸಬಾರದು. ಈ ಮನೆಯಲ್ಲಿ ಚರ್ಚೆಯಾಗತಕ್ಕಂಥವು ಬಹಳಷ್ಟು ಸಲ ತಾತ್ಕಾಲಿಕ ಮಹತ್ವ ವಿಷಯಗಳು. ಯಾವುದು ಮಹತ್ವವೋ ಅದಕ್ಕೆ ನಾವು ಕಡಿಮೆ ಸಮಯ ಕೊಡುತ್ತಿದ್ದೇವೆ. ಕೊನೆಗೆ ಸಮಯಾಭಾವದಿಂದ ಬೇಗಬೇಗನೆ ಮುಗಿಸಿಬಿಡುತ್ತೇವೆ. ಉದಾಹರಣೆಗೆ, ಬೆಳಗಾಂನಲ್ಲೋ, ರಾಯಚೂರಿನಲ್ಲೋ ಯಾವುದೋ ಕ್ಷುಲ್ಲಕ ಕಾರಣಕ್ಕಾಗಿ ಘರ್ಷಣೆಯಾದರೆ ಅದರ ಬಗ್ಗೆ ಇಲ್ಲಿ ನಾವು ಬೇಕಾದಷ್ಟು ಚರ್ಚೆ ಮಾಡುತ್ತೇವೆ, ಆದರೆ ಬಿಲ್‌ಗಳನ್ನು ಚರ್ಚೆ ಮಾಡುವಾಗ ಸಮಯ ಅಭಾವವಾಗಿ ನಾಲ್ಕೈದು ಬಿಲ್‌ಗಳನ್ನು ಒಂದರ್ಧ ಗಂಟೆಯಲ್ಲೇ ಪಾಸಾಗಿರುವುದು ಉಂಟು. ಆದ್ದರಿಂದಲೇ ಇಂಥ ಮಹತ್ವದ ಬಿಲ್‌ಗಳ ಬಗ್ಗೆ ದೀರ್ಘ ಹಾಗೂ ಗಮನಾರ್ಹ ಚರ್ಚೆ ನಡೆಯಲಿ ಎಂಬ ಉದ್ದೇಶದಿಂದಲೇ ಅಪ್ಪರ್‌ಹೌಸ್ ಇರುವುದು. ಬಹುಶಃ ಕೃಷ್ಣನ್‌ರ ಮನಸ್ಸಿನಲ್ಲಿ ಈ ಅಪ್ಪರ್ ಹೌಸ್ ಯಾವ ಪಾತ್ರ ನಿರ್ವಹಿಸಬೇಕಾಗಿತ್ತೋ ಅದಾಗುತ್ತಿಲ್ಲ ಎಂಬುದಿರಬಹುದು. ಅದಕ್ಕೆ ರಾಮಬಾಣ ರದ್ದು ಮಾಡುವುದು ಅಲ್ಲ. ಅದನ್ನು ಸುಧಾರಿಸಬೇಕು. ಅದರಲ್ಲಿರತಕ್ಕ ಲೋಪದೋಷಗಳನ್ನು ನಿವಾರಿಸಬೇಕು. ಅಲ್ಲದೆ ಮೇಲ್ಮನೆಯಲ್ಲಿ ಆದರ ಮೂರನೆಯ ಒಂದು ಭಾಗ ಸ್ಥಾನಗಳು ಖಾಲಿ ಇವೆ. ಲೋಕಲ್ ಬಾಡೀಸ್ ಪ್ರಾತಿನಿಧ್ಯ ಅಲ್ಲಿಲ್ಲ. ಅವುಗಳಿಗೆ ಚುನಾವಣೆ ನಡೆಸಿಲ್ಲ. ನಾವಾದರೂ ಒಂದ ಮೇಲೆ ಚುನಾವಣೆ ನಡೆಸಿದ್ದೇವೆ. ಎಲೆಕ್ಷನ್ ಕಮಿಷನ್‌ನವರು ಏನು ಹೇಳಿದ್ದಾರೆಂದರೆ ನಗರಸಭೆಗಳಲ್ಲಿರುವ ಪಾಪ್ಯುಲೇಷನ್ ಬರೀ ಶೇಕಡ ೮ ರಿಂದ ೧೦ರಷ್ಟು ಮಾತ್ರ. ಆದರೆ ಗ್ರಾಮೀಣ ಜನರ ಪ್ರಾತಿನಿಧ್ಯ ಇಲ್ಲದೇ ಇರುವುದರಿಂದ ಚುನಾವಣೆ ಮಾಡುವುದು ಸರಿ ಇಲ್ಲವೆಂದು ಹೇಳಿದ್ದಾರೆ. ಅದೇ ರೀತಿ ನಾಮಕರಣ ಮಾಡುವಾಗ ರಾಜಕೀಯ ದೃಷ್ಟಿಯಿಂದ ನಾಮಕರಣ ಮಾಡಿಕೊಂಡು ಬಂದಿ

ದ್ದೇವೆ. ಅದು ಆಗಕೂಡದು. ಯಾವ ಇಂಟರೆಸ್ಟ್‌ಗಾಗಿ ಸ್ಥಾನ ಮೀಸಲಾಗಿಟ್ಟಿದ್ದೇವೋ ಅವರ ಪಾರ್ಟಿಸಿಪೇಷನ್‌ನಿಂದ ಮಾತ್ರ ಸಮಾಜದ ಸುಧಾರಣೆ ಆಗುತ್ತದೆ. ಪರಿಣಿತ ವ್ಯಕ್ತಿಗಳನ್ನು ನಾವು ನಾಮಕರಣ ಮಾಡಬೇಕಾಗುತ್ತದೆ. ಆದರೆ ಅದನ್ನು ನಾವು ಮಾಡುತ್ತಾ ಬಂದಿಲ್ಲ. ಆದ್ದರಿಂದಲೇ ಅಲ್ಲಿ ತೃಪ್ತಿಕರವಾಗಿ ಕೆಲಸವಾಗುತ್ತಿಲ್ಲ ಎಂಬುದು ನಮ್ಮ ಮನಸ್ಸಿಗೆ ಬಂದಿರಬಹುದು. ಅದಕ್ಕೆ ಪರಿಹಾರ ಕೃಷ್ಣನ್‌ರು ಸೂಚಿಸಿದ್ದಲ್ಲ. ಆಂಧ್ರದಲ್ಲಿ ಮಾಡಿದರು, ವೆಸ್ಟ್ ಬೆಂಗಾಲ್‌ನಲ್ಲಿ ಮಾಡಿದರು. ಯು.ಪಿ.ಯಲ್ಲಿ ಮಾಡಿ ಮತ್ತೆ ಅದನ್ನು ಚಾಲ್ತಿಗೆ ತಂದರು. ನಮ್ಮಲ್ಲಿ ಆ ತರಹ ಆಗಕೂಡದು. ನಮಗೆ ತಾತ್ಕಾಲಿಕವಾಗಿ ಅನಾನುಕೂಲ ಆಗಿರಬಹುದು. ನಮ್ಮ ಅನೇಕ ಬಿಲ್‌ಗಳನ್ನು ಕಳೆದ ವರ್ಷ ಪಾಸ್ ಮಾಡಲಿಲ್ಲ. ನಮಗೆ ಬಹುಮತ ಇಲ್ಲದಿದ್ದುದರಿಂದ ನಾವು ಗೆಲ್ಲಲಿಲ್ಲ. ಆದರೆ ಮಾನ್ಯ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ ನಾವು ಒಂದೂ ಬಿಲ್ಲನ್ನು ರಿಜೆಕ್ಟ್ ಮಾಡಲಿಲ್ಲ. ಬಹುಶಃ ಒಂದೇ ಬಿಲ್ಲು ಎಂದರೆ ಅದು ಲ್ಯಾಂಡ್ ರಿಫಾರ್ಮ್ಸ್ ಬಿಲ್‌ನಲ್ಲಿ ರೈತರ ಪರವಾಗಿ ಒಂದು ತಿದ್ದುಪಡಿ ಮಾಡಿದ್ದೆವು. ಅಷ್ಟಕ್ಕೆ ಅವರು ಕೋಪಗೊಂಡು ವಿಧಾನ ಪರಿಷತ್ತನ್ನೇ ರದ್ದು ಮಾಡಿ ಬಿಡುತ್ತೇವೆ ಎಂದು ಆಟಾಟೋಪ ಮಾಡಿದ್ದರು. ಕೊನೆಗೆ ಏನೋ ದೇವರು ಬುದ್ಧಿ ಕೊಟ್ಟ, ಅವರು ಹಾಗೆ ಮಾಡಲಿಲ್ಲ. ನಾನು ಅವರ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಇದರಲ್ಲಿ ಬಹಳ ಉಪಯುಕ್ತತೆ ಇದೆ. ತೊಂದರೆ ಇದ್ದರೆ ಅದನ್ನು ನಿವಾರಣೆ ಮಾಡೋಣ ಎಂದು ಹೇಳುತ್ತೇನೆ. ಮತ್ತೊಂದು ವಿಚಾರವನ್ನು ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮೇಲ್ಮನೆ ರದ್ದು ಮಾಡತಕ್ಕಂತಹ ವಿಷಯದಲ್ಲಿ ಧ್ವಂಧ್ವ ಅಭಿಪ್ರಾಯ ಗಳಿವೆ. ತಾವು ಈಗ ತಾನೇ ಹೇಳಿದಿರಿ, ನಮ್ಮ ನೀತಿ ಮೇಲ್ಮನೆಯನ್ನು ಮುಂದುವರಿಸಿಕೊಂಡು ಹೋಗುವುದು ಎಂದು. ಆದರೆ ಆಂಧ್ರದಲ್ಲಿ ಮೇಲ್ಮನೆಯನ್ನು ರದ್ದು ಮಾಡುವ ವಿಷಯದಲ್ಲಿ ಶ್ರೀಮಾನ್ ಎನ್.ಟಿ. ರಾಮರಾಯರಿಗೆ ಬೆಂಬಲ ಕೊಟ್ಟು ತಮ್ಮ ಪಕ್ಷದ ನೀತಿಯನ್ನು ಸ್ಪಷ್ಟಪಡಿಸಿದ್ದೀರಿ. ಇಲ್ಲಿ ಮೇಲ್ಮನೆಯನ್ನು ಇಟ್ಟುಕೊಳ್ಳುತ್ತೇವೆ ಎನ್ನುವ ಮಾತನಾಡಿದ್ದೀರಿ. ಇದು ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೋಯ್ಲಿಯವರು ಪದೇಪದೇ ಬೇರೆ ರಾಜ್ಯದ ವಿಚಾರದಲ್ಲಿ ಪ್ರಸ್ತಾಪ ಮಾಡುವುದು ಬೇಡ ಎಂದು ಎರಡು, ಮೂರು ಸಲ ಹೇಳಿದ್ದಾರೆ. ಪಕ್ಷದ ನೀತಿಯ ವಿಚಾರದಲ್ಲಿ ಆಯಾ ರಾಜ್ಯಕ್ಕೆ ಸಂಬಂಧಪಟ್ಟಂತೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದೊಂದು ರಾಜ್ಯದಲ್ಲಿಯೂ ಒಂದೊಂದು ತರಹ ಪಕ್ಷದ ನೀತಿ ಇರುತ್ತದೆಯೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಗಡಿ ವಿಷಯದಲ್ಲಿ ಯಾವ ರೀತಿ ಇದೆ ಎನ್ನುವುದು ತಮಗೇ ಗೊತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್.— ಗಡಿ ವಿಷಯದಲ್ಲಿ ಕರ್ನಾಟಕದಲ್ಲಿ ಏನು ಮಾಡಲಾಗಿದೆ. ಕೆಲವು ನ್ಯಾಯವಾದಿಗಳು ಅಲ್ಲಿಯೂ ಕೂಡ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅಖಿಲ ಭಾರತಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಅಥವಾ ಬಹಳ ಮಹತ್ವದ ನೀತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸ್ಥಾನಿಕ ಮಹತ್ವಕ್ಕೆ ಸಂಬಂಧಪಟ್ಟ ನೀತಿಯ ಮೇಲೆ ಪಕ್ಷದ ನೀತಿ ಅವಲಂಬಿಸಿರುತ್ತದೆ. ಉತ್ತರ ಪ್ರದೇಶದಲ್ಲಿ ಮೇಲ್ಮನೆಯನ್ನು ಕಾಂಗ್ರೆಸ್ ಪಕ್ಷ ಅಬಾಲಿಷ್ ಮಾಡಿತು. ಆದರೆ, ಬಿಹಾರದಲ್ಲಿ ಏತಕ್ಕೆ ಮಾಡಲಿಲ್ಲ ? ಆಂಧ್ರದಲ್ಲಿ ಸ್ಥಾನಿಕ ಸ್ಥಿತಿಗತಿಗಳನ್ನು ನೋಡಿ ಕೊಂಡು ನಿರ್ಣಯ ತೆಗೆದುಕೊಂಡಿದ್ದಾರೆ. ಪಾರ್ಲಿಮೆಂಟಿನಲ್ಲಿ ಮೇಲ್ಮನೆ ಬೇಡ ಎಂಬ ಪ್ರಶ್ನೆ ಬಂದಾಗ ಕೂಡ ಅದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಇನ್ನು ರಾಜ್ಯಪಾಲರ ಹುದ್ದೆಯನ್ನೂ ಕೂಡ ಅಬಾಲಿಷ್ ಮಾಡಬೇಕೆಂದು ಮಾನ್ಯ ಕೃಷ್ಣನ್‌ರವರು ಹೇಳಿದ್ದಾರೆ. ಇದು ಇನ್‌ಸ್ಟಿಟ್ಯೂಷನ್ಸ್ ಆಫ್ ಗವರ್ನರ್ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯ ಏನು ಎನ್ನುವುದನ್ನು ವೈಟ್ ಪೇಪರ್ ಮುಖಾಂತರ ಸ್ಪಷ್ಟಪಡಿಸಿದ್ದೇವೆ. ಅದರ ಬಗ್ಗೆ ಯಾವುದೇ ರೀತಿಯ ಒಂದು ಶಬ್ದವನ್ನೂ ಕೂಡ ಸೇರಿಸಬೇಕಾಗಿಲ್ಲ. ಇನ್ನು ಮಾನ್ಯ ಬಂಗಾರಪ್ಪನವರು ಎತ್ತಿದಂತಹ ವಿಚಾರ ವಿಶ್ವಕನ್ನಡ ಸಮ್ಮೇಳನ ವನ್ನು ಮಾಡಬೇಕೆಂದು ನಿರ್ಣಯ ಮಾಡಿದವರು ನಮ್ಮ ಸರ್ಕಾರದವರಲ್ಲ. ಹಿಂದಿನ ಸರ್ಕಾರದವರೇ ನಿರ್ಣಯ ತೆಗೆದುಕೊಂಡಿದ್ದರು. ಇದನ್ನು ೮೨ರ ಅಕ್ಟೋಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಮಾಡು ವಂತಹ ತೀರ್ಮಾನ ಮಾಡಲಾಗಿತ್ತು. ಆದರೆ ಚುನಾವಣೆಗಳು ಬಂದದ್ದರಿಂದ, ಮಾಡಲಿಕ್ಕಾಗಲಿಲ್ಲ. ಆಗಿನ್ನೂ ಬಹಳಷ್ಟು ಕೆಲಸ ಮುಗಿದಿರಲಿಲ್ಲ. ಕೆಲವು ಕೆಲಸಗಳನ್ನು ಪ್ರಾರಂಭ ಮಾಡಿರಲಿಲ್ಲ. ನಾವು ಅಧಿಕಾರಕ್ಕೆ ಬಂದಮೇಲೆ ಸಾಹಿತಿಗಳ, ಕಲೆಗಾರರ ಇಂಥದ್ದರಲ್ಲಿ ಆಸಕ್ತಿ ಇರತಕ್ಕ ಎಲ್ಲರ ಸಭೆ ಕರೆಯಿಸಿ,

ವಿಚಾರವಿನಿಮಯ ಮಾಡಿದ್ದೇವೆ. ಬಹಳ ದೊಡ್ಡ ಬಹುಮತದಿಂದ ಈ ಕಾರ್ಯಕ್ರಮದಲ್ಲಿ ಕೆಲವು ಹೆಜ್ಜೆಗಳನ್ನು ತೆಗೆದುಕೊಳ್ಳಲಾಗಿದೆ. ಅದನ್ನು ಮಾಡಿ ಮುಗಿಸುವುದು ಒಳ್ಳೆಯದು. ಆಡಂಬರವಾಗಿ ಮಾಡಕೂಡದು. ಆದಷ್ಟು ಕಡಿಮೆ ವೆಚ್ಚದಲ್ಲಿ ಸರಳ ರೀತಿಯಿಂದ ಈ ಸಮ್ಮೇಳನವನ್ನು ಮಾಡಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದೆ. ಅದರ ನಂತರ ೮೩ರಲ್ಲಿ ಮಾಡಬೇಕೆಂಬುದು ಯೋಚನೆ ಮಾಡಿದಾಗ, ಇನ್ನೂ ಕೆಲಸ ಮುಗಿದಿರಲಿಲ್ಲ. ರಂಗಮಂಟಪ, ರಂಗಮಂದಿರ ಮತ್ತು ಇತರೇ ಕೆಲಸಗಳು ಇನ್ನೂ ಇದ್ದುದರಿಂದ, ಅದನ್ನು ಮುಂದೆಹಾಕತಕ್ಕಂತಹ ಪ್ರಸಂಗ ಬಂದಿತು. ೮೪ನೇ ಇಸವಿಯು ಕೊನೆಗೆ ಪುನಃ ಲೋಕಸಭೆಯು ಚುನಾವಣೆ ಘೋಷಣೆ ಆದಮೇಲೆ ಮಾಡಲಿಕ್ಕಾಗಲಿಲ್ಲ. ಪುನ: ಸಭೆಯನ್ನು ಕರೆದು, ಈ ವರ್ಷದ ಕೊನೆಗೆ ಮಾಡಬೇಕೆಂದು ಮಾಡಿದ್ದೇವೆ. ಈಗ ಮಾನ್ಯ ಬಂಗಾರಪ್ಪನವರು ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿಯಿದ್ದು, ಜನರಿಗೆ ತುಂಬಾ ತೊಂದರೆಯಿದೆ ಏತಕ್ಕೋಸ್ಕರ ಮಾಡಬೇಕು ? ಇನ್ನೂ ಒಂದು ಹೆಜ್ಜೆ ಮುಂದೆಹೋಗಿ ಹೇಳಿದರು, ನನ್ನ ಕಡೆ ಅಂಕಿತ ಮಾಡಿ, ನೀರೋ ಈಸ್ ಫಿಡ್ಲಿಂಗ್, ವೆನ್ ದಿ ರೋಂ ವಾಸ್ ಬರ್ನಿಂಗ್ ಎಂದು ಹೇಳಿದರು, ಎಷ್ಟರ ಮಟ್ಟಿಗೆ ಇದು ಈ ಸಾಮ್ಯ ನನಗೆ ಅನುರೂಪವಾಗುತ್ತದೆಯೋ ಗೊತ್ತಿಲ್ಲ. ನಾನು ರೋಮನ್ ಇತಿಹಾಸಕ್ಕೆ ಸಂಬಂಧಪಟ್ಟಂತೆ ಮತ್ತೊಂದು ಉದಾಹರಣೆಯನ್ನು ಕೊಡುತ್ತೇನೆ. ಕ್ಲಿಯೋಪಾತ್ರ ಸೀಸರ್‌ನನ್ನು ಮದುವೆಯಾಗುತ್ತಾಳೆ. ಅವನು ಸತ್ತಮೇಲೆ, ಮತ್ತೆ ಮಾರ್ಕ್ ಆಂಟೋನಿಯನ್ನು ಮದುವೆಯಾಗುತ್ತಾಳೆ. ಅವನೂ ಸತ್ತಮೇಲೆ ಅಗಸ್ಟಸ್‌ನನ್ನು ಮದುವೆಯಾಗುತ್ತಾಳೆ, ಇಷ್ಟು ಸಾಕು.

(ನಗು)

ಶ್ರೀ ಎಸ್. ಬಂಗಾರಪ್ಪ.—ನೀವು ಎಷ್ಟು ಜನರನ್ನು ಮದುವೆಯಾಗುತ್ತಾ ಬಂದಿದ್ದೀರಿ ಎಂಬುದು ದೇಶಕ್ಕೆ ಗೊತ್ತಿದೆ. ನಿಮ್ಮ ಹಿಂದಿನ ಚಾರಿತ್ರ್ಯ ನೋಡಿದರೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಚಾರಿತ್ರ್ಯದ ಬಗ್ಗೆ ಕೂಡ ಬರೋಣ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ವಿರೋಧಿಗಳನ್ನೇ ಮದುವೆಯಾಗಿ ಮಂತ್ರಿಮಂಡಲದಲ್ಲಿ ಇಟ್ಟುಕೊಂಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಅಭಾವ ಪರಿಸ್ಥಿತಿ ಇರತಕ್ಕಂಥಾದ್ದು ನಿಜ. ಬಹಳ ತೀವ್ರವಾಗಿದ್ದು ನಮಗೆ ಕಳವಳವನ್ನುಂಟುಮಾಡಿದೆ. ಕ್ಯಾಪಿಟಲ್ ವರ್ಕ್ಸ್ ಏನಿದೆ ಎಂದರೆ, ಕಟ್ಟಡ ಕಟ್ಟತಕ್ಕಂಥದ್ದು ಮುಗಿಯುತ್ತಾ ಬಂದಿದೆ. ಅದನ್ನು ಹಾಗೇ ಬಿಡುವುದಕ್ಕಾಗುವುದಿಲ್ಲ. ಬರೀ ಸಮಾರಂಭವನ್ನು ಏರ್ಪಡಿಸುವುದು ಮಾತ್ರ ಉಳಿದಿದೆ. ದಸರಾ ಸಮಾರಂಭವನ್ನು ಏರ್ಪಡಿಸುತ್ತೇವೆ. ಅದೇ ರೀತಿ, ಸರಳವಾಗಿ ಈ ಒಂದು ಸಮಾರಂಭವನ್ನು ಏರ್ಪಡಿಸಲಾಗುವುದು. ಇದನ್ನು ೩ ಸಲ ಮುಂದಕ್ಕೆ ಹಾಕಿ, ಈಗ ಮಾಡುತ್ತೇವೆಂದು ಬಹಿರಂಗ ಮಾಡಿದಮೇಲೆ ಮತ್ತೊಮ್ಮೆ ಪುನಃ ಮುಂದೆ ಹಾಕತಕ್ಕಂಥಾದ್ದು ಸರಿಯಾದುದಲ್ಲ ಎಂಬುದು ನಮ್ಮ ಭಾವನೆ. ಅತಿ ಕಡಿಮೆ ಖರ್ಚಿನಲ್ಲಿ ಅತ್ಯಂತ ಸರಳವಾಗಿರತಕ್ಕಂತಹ ರೀತಿಯಲ್ಲಿ ಹೊರಗಡೆಯಿಂದ ಬರತಕ್ಕಂಥವರಿಗೆ ಹಿಂದಿನ ಮುಖ್ಯಮಂತ್ರಿಗಳು ಹೇಳಿದಂತೆ, ಹೋಗಿಬರತಕ್ಕಂತಹ ಖರ್ಚು, ಅವರು ಓಡಾಡತಕ್ಕಂತಹ ಖರ್ಚು ಇಷ್ಟೆಲ್ಲಾ ಖರ್ಚು ಮಾಡತಕ್ಕಂತಹ ಅಗತ್ಯವಿಲ್ಲ, ಅವರ ಖರ್ಚಿನಿಂದ ಅವರು ಬರುತ್ತಾರೆ, ೨-೩ ದಿನಗಳ ಕಾಲ ನಮ್ಮ ಅತಿಥಿಗಳಾಗಿರುತ್ತಾರೆ. ದೊಡ್ಡ ಆಡಂಬರದಲ್ಲಿ ಖರ್ಚು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಒಟ್ಟು ಎಷ್ಟು ಖರ್ಚಾಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ಕೋಟಿಗಳಂತೂ ಆಗುವುದಿಲ್ಲ, ಕೆಲವು ಲಕ್ಷಗಳಾಗಬಹುದು; ಬೇಕಾದರೆ, ಪ್ರತ್ಯೇಕವಾಗಿ ನಿಮಗೆ ತಿಳಿಸುತ್ತೇನೆ.

೧೨-೦೦ ಘಂಟೆ ಮಧ್ಯಾಹ್ನ

ಇನ್ನು ಒಂದು ಸಣ್ಣದು ಅಂದರೆ, ಸಣ್ಣ ವಿಚಾರ ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ. ಒಬ್ಬ ಮಹಿಳೆಯ ಮಗ ಗಂಗರಾಮ್ ಕಟ್ಟಡದ ಕುಸಿತ ಆದಾಗ ತೀರಿಕೊಂಡ ಎಂದು ಹೇಳಿ ಪರಿಹಾರಕ್ಕೆ ಅರ್ಜಿ ಹಾಕಿಕೊಂಡಿದ್ದಾರೆ. ಶ್ರೀಮತಿ ಜಯಮ್ಮ ಅವರಿಗೆ ಯಾವುದೇ ತರಹ ಸಹಾಯ

ಸಿಕ್ಕಿಲ್ಲ ಎನ್ನುವ ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಅದು ಸರಿಯಲ್ಲವೆಂದು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ದಿನಾಂಕ ೮–೮–೮೫ಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ, ಅವರು ಅದನ್ನೇ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಜಯಮ್ಮ ಅವರಿಗೆ ೧ ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. ಅದನ್ನು ಕೂಡ ಮಾನವೀಯತೆಯ ದೃಷ್ಟಿಯಿಂದ ಕೊಟ್ಟಿದ್ದೇವೆ. ತೀರಿಕೊಂಡವರ ಬಗ್ಗೆ ನಿಶ್ಚಿತವಾದ ಯಾವುದೇ ಒಂದು ಪುರಾವೆ ಇಲ್ಲ. ಪರಿಹಾರವನ್ನು ಕೊಡತಕ್ಕ ಸಂದರ್ಭದಲ್ಲಿ ಏನಾಯಿತು ಎಂದರೆ, ದೊಡ್ಡ ವ್ಯಾಪಕವಾದ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದರಿಂದ ಅನೇಕ ಜನರು ನಿಜವಾಗಿಯೂ ಸಾವುನೋವಿಗೆ ಒಳಗಾಗದಿದ್ದರೂ ಈ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಕೆಲವರು ಲಾಭವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟರು. ಆದರೂ ಕೂಡ ಶ್ರೀಮತಿ ಜಯಮ್ಮ ಅವರಿಗೆ ೧ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುವುದಕ್ಕೆ ಬಯಸುತ್ತೇವೆ.

ಮಾನ್ಯ ವಿರೋಧಪಕ್ಷದ ನಾಯಕರು ಆಪ್ತ ಸಿಬ್ಬಂದಿಯ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವುದರಲ್ಲಿ ಬಹಳ ಕಾಲ ಸಮಯವನ್ನು ಕಳೆದರು. ಅವರು ಮಾಡುವಂತಹ ಆರೋಪ ಸಿ.ಐ ಡಿ.ಗಳನ್ನು ಬಿಟ್ಟಿದ್ದರು ಎಂದು ಹೇಳಿದ್ದಾರೆ. ಸೊರಬದಲ್ಲೂ ಸಿ.ಐ.ಡಿ.ಗಳಿದ್ದರೂ ಎಂದು ಒಂದು ಸಂದರ್ಭದಲ್ಲಿ ಹೇಳಿದ್ದಾರೆ. ವುಡ್‌ಲ್ಯಾಂಡ್ಸ್ ಹೋಟೆಲಿನಲ್ಲಿ ಏನು ವ್ಯವಹಾರ ನಡೆಯಿತು ಅದಕ್ಕೆ ಸಿ.ಐ.ಡಿ.ಗಳನ್ನು ಬಿಟ್ಟಿದ್ದರು. ಎಂದು ಹೇಳಿದ್ದಾರೆ. ಸೊರಬಕ್ಕೆ ಯಾವ ಸಿ.ಐ.ಡಿ.ಗಳು ಹೋಗಿದ್ದರೋ ನನಗೆ ಗೊತ್ತಿಲ್ಲ, ಕೇಂದ್ರ ಸರ್ಕಾರದ ಸಿ.ಐ.ಡಿ. ಗಳು ಹೋಗಿರಬಹುದು. ಸಿ.ಐ.ಡಿ. ಗಳು ಅವರು ತಮ್ಮ ಕೆಲಸವನ್ನು ಮಾಡುತ್ತಾರೆ. ಅದು ನಮ್ಮ ಗೃಹಮಂತ್ರಿಗಳ ಕಾರ್ಯ ಅಂದರೆ ರಾಜಕೀಯ ವ್ಯವಹಾರವನ್ನು ನೋಡಬೇಕೆಂದು ಅಲ್ಲ. ಅಲ್ಲಿ ಏನು ಆಗುತ್ತದೆಂದು ಅವರು ಓಡಾಡುತ್ತಾರೆ, ಅವರ ಕೆಲಸ ಎಂದರೆ ಸಾಮಾನ್ಯವಾಗಿ ಎದುರಿಗೆ ಕಾಣಿಸುವುದಿಲ್ಲ, ಅಂತಹ ಸುದ್ದಿಗಳನ್ನು ಸಂಗ್ರಹ ಮಾಡುತ್ತಾರೆ. ಈಗ ನನ್ನ ಹಿಂದೆಯೂ ಸಿ. ಐ. ಡಿ. ಗಳು ಇರುತ್ತಾರೆ. ಅವರು ಕೇಂದ್ರ ಸರ್ಕಾರದ ಸಿ. ಐ. ಡಿ. ಗಳು ಇರಬಹುದು, ನಮ್ಮವರು ಇರಬಹುದು, ನಮ್ಮ ಮೇಲೆ ಅಥವಾ ವಿರೋಧ ಪಕ್ಷದ ನಾಯಕರ ಮೇಲೆ ಯಾರಾದರೂ ಹಲ್ಲೆ ಮಾಡಬಹುದೆನ್ನುವ ಅನುಮಾನ ಬಂದಿದ್ದರೆ, ಅಂತಹ ಇನ್‌ಫರ್ಮೇಷನ್ ಪೊಲೀಸ್ ಸ್ಟೇಷನ್‌ಗೆ ಬಂದಿದ್ದರೆ ಅವರ ಕರ್ತವ್ಯ ಅವರು ಮಾಡುತ್ತಾರೆ. ತೊಂದರೆಯಾಗದ ಹಾಗೆ ಅವರು ಮೊದಲೇ ನಿಗ. ಇಟ್ಟುಕೊಳ್ಳುತ್ತಾರೆ. ನನ್ನ ಎಲ್ಲಾ ಸಹೋದ್ಯೋಗಿಗಳ ಆಪ್ತ ಸಿಬ್ಬಂದಿಯಲ್ಲಿ ನನ್ನ ಸಿ.ಐ.ಡಿ. ಗಳನ್ನು ಇಟ್ಟಿದ್ದಾರೆಂದು ಹೇಳಿದ್ದಾರೆ. ಹಾಗೆ ಏನಾದರೂ ಅವರಿಗೆ ಅನುಮಾನವಿದ್ದರೆ ನನ್ನ ಸಹೋದ್ಯೋಗಿಗಳೇ ಹೇಳುತ್ತಾರೆ. ಇಷ್ಟು ಮಾತ್ರ ಹೇಳುತ್ತೇನೆ ಒಂದು ಸೂಚನೆಯನ್ನು ಕೊಟ್ಟಿದ್ದು ನಿಜ. ಆದಷ್ಟು ಮಟ್ಟಿಗೆ ಮಂತ್ರಿಗಳ ಆಪ್ತ ಸಿಬ್ಬಂದಿಯಲ್ಲಿ ಬದಲಾವಣೆ ಮಾಡೋಣವೆಂದು ಹಾಗೆ ಮಾಡಿದ್ದೇವೆ. ಮಂತ್ರಿಗಳ ಆಪ್ತ ಸಿಬ್ಬಂದಿಯಲ್ಲಿ ಅದೇ ಡಿಪಾರ್ಟ್‌ಮೆಂಟ್‌ನವರು ಇರುತ್ತಾರೆ, ಸೆಕ್ರೆಟರಿಯೇಟ್‌ನವರು ಇರುತ್ತಾರೆ ಮಂತ್ರಿಗಳು ಜಾತಿಯವರು ಸಂಬಂಧೀಕರು ಇರಕೂಡದೆಂದು ಯಾವುದೇ ಕಾಯಿದೆ ಇಲ್ಲ, ಆದರೂ ಒಂದು ಹೊಸ ಪ್ರಯೋಗ ಮಾಡೋಣವೆಂದು ಸೂಚನೆ ಅಷ್ಟೆ, ಅದು ಆಜ್ಞೆಯಲ್ಲ. ಒಂದೇ ಜಿಲ್ಲೆಯವರು ಇರಕೂಡದು, ಅದೇ ಹುದ್ದೆಯಲ್ಲಿ ೫ ವರ್ಷಗಳಿಗಿಂತ ಜಾಸ್ತಿ ಸೇವೆ ಸಲ್ಲಿಸಿರುವವರು ಇರಕೂಡದು, ಹಿಂದೆ ಸೇವೆ ಸಲ್ಲಿಸಿರಬಹುದು, ಅದೇ ಜಾತಿಯವರು ಇರಕೂಡದೆಂದು ಸೂಚನೆ ಕೊಡಲಾಗಿದೆ. ಕೊಟ್ಟಂತಹ ಸೂಚನೆಯನ್ನು ಬಹುಪಾಲು ನಮ್ಮ ಸಹೋದ್ಯೋಗಿಗಳು ಸ್ವೀಕಾರಮಾಡಿ ಅದನ್ನು ಜಾರಿಗೆ ತಂದಿದ್ದಾರೆ, ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ವಿರೋಧಪಕ್ಷದ ನಾಯಕರು ಅವರು ಸೂಚನೆ ಮಾಡಿದಂತಹ ಒಬ್ಬ ಅಧಿಕಾರಿಯನ್ನು ನಾವು ಕೊಡಲಿಲ್ಲವೆಂದು ಹೇಳಿ, ನೀವು ಕೊಟ್ಟಿದ್ದವರನ್ನು ನಾವು ಏತಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿ ತೆಗೆದುಕೊಂಡಿಲ್ಲ. ನಿಮ್ಮ ಆಫೀಸಿನಲ್ಲಿ ನಮ್ಮ ಸಿ.ಐ.ಡಿ. ಯನ್ನು ಹಾಕುತ್ತೇವೆಂದು ನಾನು ಎಂದೂ ಹೇಳಿಲ್ಲ. ಮಾನ್ಯ ವೀರಪ್ಪಮೊಯಿಲಿಯವರು ಇದ್ದಾರೆ ಅವರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಹಿರಿಯ ಸದಸ್ಯರು ಮತ್ತು ಅನೇಕ ಜನರು ಇದ್ದಾರೆ. ನಾನು ಅವರಿಗೆ ಹೇಳಿದ್ದೇನೆ, ನಾನು ಹೇಳಿರುವ ಮಾತು ಎಲ್ಲರೂ ಕೇಳಿರಬಹುದು. ಮೂರು ಜನ ಅಧಿಕಾರಿಗಳ ಹೆಸರುಗಳನ್ನು ಕೊಡಿ. ನೀವು ಕೇಳಿರತಕ್ಕ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳತಕ್ಕ ಒಂದು ಪರಿಸ್ಥಿತಿ ಬಂದಿದೆ. ಮೂರು ಜನ ಅಧಿಕಾರಿಗಳ ಹೆಸರುಗಳನ್ನು ಕೊಡಿ, ನಾನು ಇವತ್ತೂ ಹೇಳುತ್ತೇನೆ ೧೦ ಜನ ಅಧಿಕಾರಿಗಳ ಹೆಸರುಗಳನ್ನು ಕೊಡಿ. ನಿಮಗೆ ಯಾರು ಬೇಕೋ ಅವರುಗಳ ಹೆಸರುಗಳನ್ನು ಕೊಡಿ. ನಾವು ಹಾಕಿದರೆ ನಿಮಗೆ ಅನುಮಾನ ಇರುತ್ತದೆ ಆ ಅಧಿಕಾರಿ ಬೇಡವೆಂದು ಹೇಳುವುದಕ್ಕೆ ಕಾರಣ, ನೀವು ಯಾರನ್ನು ಕೇಳಿದ್ದಿರೋ ಅವರು ಸರ್ಕಾರಿ

ಆಜ್ಞೆಯನ್ನು ಉಲ್ಲಂಘನೆ ಮಾಡಿದ್ದಾರೆ. ಎಷ್ಟು ವರ್ಷ ಆ ಅಧಿಕಾರಿ ಬೆಂಗಳೂರಿನಲ್ಲಿದ್ದರು, ಅವರ ಹಿನ್ನೆಲೆ ಏನು ಎಂದು ಹೇಳಬೇಕಾದರೆ............

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಿಮ್ಮ ರಾಮಪ್ಪನವರು ಎಷ್ಟು ವರ್ಷಗಳಿಂದ ಇದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಹೇಳುತ್ತೇನೆ. ಅದನ್ನು ಏತಕ್ಕೆ ಬಿಡೋಣ ಅದನ್ನು ಹೇಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಬಂಗಾರಪ್ಪನವರು ಇವೊತ್ತು ಎಡಗಡೆ ಮಗ್ಗುಲಲ್ಲಿ ಎದ್ದಿದ್ದಾರೆ.

ಶ್ರೀ ಎಂ ರಾಮಪ್ಪ.—ನಾನು ಸುಮ್ಮನೆ ಕುಳಿತರು ನನ್ನ ಹೆಸರನ್ನು ಹೇಳುತ್ತಾರೆ ಅದಕ್ಕೆ ನಾನು ಏನು ಮಾಡಲಿ ?

ಅಧ್ಯಕ್ಷರು.—ಮಾನ್ಯ ಸದಸ್ಯರು ತಾವು ಕುಳಿತುಕೊಳ್ಳಿ, ಅವರು ನಿಮಗಲ್ಲ ಹೇಳಿದ್ದುದು.

ಶ್ರೀ ಜಿ. ನಾರಾಯಣಕುಮಾರ್.—ಬಂಗಾರಪ್ಪನವರು ಇಲ್ಲದಿದ್ದರೆ ರಾಮಪ್ಪನವರು ಯಾರು, ಏನೂ, ಎಂದು ಗೊತ್ತಾಗುತ್ತದೆ.

ಶ್ರೀ ಎಂ. ರಾಮಪ್ಪ.—ರಾಜ್ಯೋತ್ಸವ ಮಾಡುತ್ತೇವೆಂದು ಹೇಳಿಕೊಂಡು ರೊಕ್ಕ ವಸೂಲಿ ಮಾಡಿಕೊಂಡು ನಾವು ಓಡಾಡುವುದಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ರಮೇಶ್‌ಕುಮಾರ್ ಮತ್ತು ನಾರಾಯಣ ಕುಮಾರ್ ಆ ಇಬ್ಬರು ಕುಮಾರ್‌ಗಳು ಒಂದೇ ಕಡೆ ಕುಳಿತಿದ್ದಾರೆ ಅವರಿಬ್ಬರನ್ನು ಬೇರೆ ಬೇರೆ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧಪಕ್ಷದ ನಾಯಕರು ಕೇಳಿರತಕ್ಕ ಅಧಿಕಾರಿ ೧೯೭೫ ರಿಂದ ೮೫ರವರೆಗೆ ಮಧ್ಯದಲ್ಲಿ ಒಂದೂವರೆ ವರ್ಷ ಬಿಟ್ಟರೆ ಎಲ್ಲಾ ವರ್ಷಗಳಲ್ಲೂ ಬೆಂಗಳೂರಿನಲ್ಲಿಯೇ ಇದ್ದಾರೆ. ಅವರು ಸೆಕ್ರೆಟರಿಯೇಟ್ ಅಫೀಶಿಯಲ್ ಅಲ್ಲ. ದಯವಿಟ್ಟು ತಾವು ಅದನ್ನು ತಿಳಿದು ಕೊಳ್ಳಬೇಕು. ಅವರು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನ ಅಧಿಕಾರಿಯಾದರೂ ೧೯೭೫ ರಿಂದ ೭೭ರ ವರೆಗೆ ಕಾನೂನು ಮತ್ತು ನಗರಾಡಳಿತ ಸಚಿವರ ಕಛೇರಿಯಲ್ಲಿ ಆಪ್ತ ಕಾರ್ಯದರ್ಶಿಯಾಗಿದ್ದರು. ೧೯೭೭ರಿಂದ ೭೮ರವರೆಗೆ ಬೆಂಗಳೂರಿನಲ್ಲಿ ಸಿ.ಟಿ.ಓ. ಆಗಿದ್ದರು. ಆಮೇಲೆ ೧೯೭೮ ರಿಂದ ೮೧ರವರೆಗೆ ಸಮಾಜ ಕಲ್ಯಾಣ ಹಾಗೂ ಕಾನೂನು ಸಚಿವರ ಆಪ್ತ ಕಾರ್ಯದರ್ಶಿಯಾಗಿದ್ದರು. ೧೯೮೦ರ ಮಧ್ಯದಿಂದ ೧೯೮೩ರವರೆಗೆ ಬಳ್ಳಾರಿಯಲ್ಲಿ ಸಿ. ಟಿ. ಓ. ಆಗಿದ್ದರು.

ಆಮೇಲೆ ಅವರಿಗೆ ಪುನಃ ೮೩ ರಲ್ಲಿ ಬೆಂಗಳೂರಿಗೆ ವರ್ಗವಾಯಿತು. ಅದು ಆದಮೇಲೆ ಮೈಸೂರಿಗೆ ೨೪–೫–೮೫ ರಂದು ವರ್ಗವಾಯಿತು. ಅವರು ಒಂದು ದಿವಸದ ಹಿಂದೆಯೇ ವರ್ಗವಾಯಿತು. ಅವರು ಒಂದು ದಿವಸದ ಹಿಂದೆಯೇ ವರ್ಗವಾದ ವಿಚಾರವನ್ನು ತಿಳಿದುಕೊಂಡು ಅವರು ಮೆಡಿಕಲ್ ಲೀವ್ ಹಾಕಿದರು. ಅವರು ಇತ್ತೀಚೆಗೆ ಅಂದರೆ ೫–೯–೮೫ ರವರೆವಿಗೂ ಕೆಲಸಕೆ ಹಾಜರಾಗಲಿಲ್ಲ. ೫–೯–೮೫ ರಂದು ಅವರು ಮೈಸೂರಿಗೆ ಹೋಗಿ ಕೆಲಸಕ್ಕೆ ಹಾಜರಾದರು, ಅವರನ್ನು ಎಷ್ಟೇ ಸಲ ಹೋಗಿ ಕೆಲಸಕ್ಕೆ ಹಾಜರಾಗಿ ಎಂದು ಕೇಳಿಕೊಂಡರೂ ಅವರು ಹೋಗಲಿಲ್ಲು ಜುಲೈ ೧೦ನೇ ತಾರೀಖಿನಿಂದ ಸೆಪ್ಟೆಂಬರ್ ೫ ರವರೆಗೂ ಎಂದರೆ ಸುಮಾರು ಎರಡು ತಿಂಗಳ್. ಅನ್‌ಆತರೈಸ್ಡ್ ಅಬ್ಸೆನ್ಸ್ ಫ್ರಮ್ ಡ್ಯೂಟಿ ಆಗಿದ್ದರು. ಅವರನ್ನು ಇವರು ಕೊಡಿ ಎಂದು ಆಗ್ರಹ ಪಡಿಸಿದರೆ ಅವರನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದು ನಿಜ. ಅವರ ಮೇಲೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳಬೇಕು. ನಾನು ಒಂದು ಸುತ್ತೋಲೆಯನ್ನು ಕಳುಹಿಸಿ ಆಪ್ತ ಸಿಬ್ಬಂದಿ ವರ್ಗ ಅಂದರೆ ಪ್ರೈವೇಟ್ ಸೆಕ್ರೇಟರಿ ಮತ್ತು ಪರ್ಸನಲ್ ಅಸಿಸ್ಟೆಂಟ್ ಇವರಿಬ್ಬರ ಬಗ್ಗೆ ಸೂಚನೆಯನ್ನು ಕಳಿಸಿದ್ದೇನೆ. ಈಗ ರಾಮಪ್ಪನವರು ನನ್ನ ಪ್ರೈವೇಟ್ ಸೆಕ್ರೇಟರಿಯೂ ಅಲ್ಲ ಪರ್ಸನಲ್ ಅಸಿಸ್ಟೆಂಟೂ ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಅವರನ್ನು ಬಿಟ್ಟಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಅವರೇನೂ ನನ್ನ ಜಾತೀನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಜಾತಿ ವಿಷಯ ಹೇಳಲಿಲ್ಲ.

ಶ್ರೀ ಎಂ. ರಾಮಪ್ಪ.—ನಾಲ್ಕಾಣೆ ಪಾವಲಿ, 25 ಪೈಸೆ, ಎಲ್ಲಾ ಒಂದೇ, ಹೆಸರು ಛೇಂಜ್ ಮಾಡಿ ಹೇಳಿದರೆ ಮಾತ್ರ ಅದು ಬೇರೆಯಾಗುವುದಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಪುನಃ ಈ ವಿಷಯದಲ್ಲಿ ಹೇಳುವುದು ಏನೆಂದರೆ ಒಂದಲ್ಲ ಎರಡಲ್ಲ ಹತ್ತು ಹೆಸರನ್ನು ಕೊಡಿ. ನಿಮಗೆ ಯಾರು ಬೇಕೋ ಅವರನ್ನು ಆರಿಸಿಕೊಳ್ಳಿ. ನಿಮಗೇ ಆರಿಸಲಾಗದಿದ್ದರೆ ಹತ್ತು ಹೆಸರನ್ನು ನಾವು ಕಳುಹಿಸಿಕೊಡುತ್ತೇವೆ. ಅದು ನಿಮಗೇ ಸಮಾಧಾನವಾಗ ದಿದ್ದರೆ ಇನ್ನು ಹತ್ತು ಹೆಸರನ್ನು ಕಳುಹಿಸುತ್ತೇವೆ. ಇವರ ಮೇಲೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದು ಕೊಳ್ಳತಕ್ಕಂಥ ಪರಿಸ್ಥಿತಿ ಬರದಿದ್ದರೆ ನನ್ನ ಆಕ್ಷೇಪವೇನೂ ಇರಲಿಲ್ಲ. ಅವರು ಯಾವ ಜಾತಿಯವರೇ ಆಗಿರಲಿ. ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳತಕ್ಕಂಥವದ್ದನ್ನು ತಪ್ಪಿಸಲಿಕ್ಕೆ ಈ ರೀತಿ ಮಾಡಿದ ಹಾಗೆ ನಮಗೆ ಕಾಣಿಸುತ್ತದೆ ವಿರೋಧ ಪಕ್ಷದ ನಾಯಕರ ಪ್ರೈವೇಟ್ ಸೆಕ್ರೆಟರಿನೋ ಅಥವಾ ಪರ್ಸನಲ್ ಅಸಿಸ್ಟೆಂಟ್ ಆಗಿಬಿಟ್ಟರೆ.......

(ಗೊಂದಲ)

ಶ್ರೀ ಎಂ. ರಾಮಪ್ಪ.—ಜಾತಿ ಹೆಸರು ಹೇಳಲಿಲ್ಲ..........

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಮುಖ್ಯಮಂತ್ರಿಗಳು ಮಾತನಾಡುವಾಗ ಅವರಿಗೆ ಗೌರವ ಕೊಡುವುದನ್ನು ಕಲಿಯಿರಿ.

(ಗೊಂದಲ)

ಶ್ರೀ ಎಂ. ರಾಮಪ್ಪ.—ಮುಖ್ಯಮಂತ್ರಿಗಳು ದೊಡ್ಡವರು, ಅವರಿಗೆ ಗೌರವ ಇದೆ. ಸದಸ್ಯರಿಗೆ ಗೌರವ ಇಲ್ಲವೇ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ರಾಮಪ್ಪನವರು ನನ್ನ ಹೆಸರನ್ನು ಹೇಳುತ್ತಿದ್ದಾರೆ. ರಾಮ ರಾಮ ಎಂದು ಹೇಳಲಿ, ಕೃಷ್ಣ ಕೃಷ್ಣ ಎಂದು ಹೇಳಲಿ, ನನಗೇನೂ ಬೇಜಾರು ಇಲ್ಲ. ಮತ್ತೊಂದು ಬಹಳ ದೊಡ್ಡ ಆಕ್ಷೇಪವನ್ನು ಮಾನ್ಯ ಬಂಗಾರಪ್ಪನವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ನಾನು ಒಬ್ಬ ಸೆಕ್ರೆಟರಿಗೆ ಪತ್ರ ಬರೆದ ಎಂದು............

ಶ್ರೀ ಆರ್. ಎನ್. ನಾಯಕ್.—ನಿಮ್ಮ ರಾಮಪ್ಪನವರ ಬಗ್ಗೆ ಸ್ವಲ್ಪ ವಿವರವಾಗಿ ಹೇಳಿ. ಅವರು ಎಷ್ಟು ವರ್ಷದಿಂದ ಬೆಂಗಳೂರಿನಲ್ಲಿದ್ದಾರೆ. ಎಷ್ಟು ಜನ ಎಂ. ಎಲ್. ಎ. ಗಳು ಅವರ ಮುಂದೆ ನಿಲ್ಲಬೇಕು ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರಿಗೆ ರೂಲ್ಸ್ ಗೊತ್ತಿದೆ. ಅವರು ಮಂತ್ರಿಯಾಗಿದ್ದವರು. ಆದರೆ ಮಾನ್ಯ ನಾಯಕರು ಇನ್ನು ಮಂತ್ರಿಯಾಗಿಲ್ಲ, ಕಾಯಬೇಕಾಗುತ್ತದೆ ಮಾನ್ಯ ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಯಾಗಿ ಮಾನ್ಯ ನಾಯಕರು ಪುನಃ ಆರಿಸಿ ಬಂದರೆ..........

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನಾನು ಆರಿಸಿ ಬರದೇ ಇದ್ದರೂ ಪರವಾಗಿಲ್ಲ. ಆದರೆ......

(ಗೊಂದಲ)

ಶ್ರೀ ಬಿ. ವಿ. ಕರೀಗೌಡ.—ಮಾನ್ಯ ಸದಸ್ಯರ ಸೀಟಿನಲ್ಲಿ ಏನಾದರೂ ಮೊಳೆ ಗಿಳೆ ಚುಚ್ಚಿದ್ದೀರಾ?

ಶ್ರೀ ಜಿ. ನಾರಾಯಣಕುಮಾರ್.—ಒಳ್ಳೆ ಮೆಣಸಿನಕಾಯಿ ಇಟ್ಟಹಾಗೆ ಆಡುತ್ತಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಹೇಳಿದರು, ಬಂಗಾರಪ್ಪನವರಿಗೆ ರೂಲ್ಸ್ ಗೊತ್ತಿದೆ, ಅವರು ಮಂತ್ರಿಯಾಗಿದ್ದವರು ಎಂದು. ಆದರೆ ಮಾನ್ಯ ಸದಸ್ಯರಾದ ನಾಯಕ್ ರವರು ಮಂತ್ರಿಯಾಗಿಲ್ಲ, ನಾನು ಮುಖ್ಯಮಂತ್ರಿಯಾದರೆ ನಾಯಕ್‌ರವರು ಪುನಃ ಆರಿಸಿ ಬಂದರೆ ಎಂದು ಹೇಳಿದ್ದಾರೆ. ಶಾಸನಸಭೆ ಚುನಾವಣೆಗೆ ೧೯೮೩ ರಲ್ಲಿ ನಿಲ್ಲದೆ ಮುಖ್ಯ ಮಂತ್ರಿಯಾಗಿರುವ ನಿಮ್ಮದೇ ಉದಾಹರಣೆ ಇರುವುದರಿಂದ.........

ಶ್ರೀ ಜಿ. ನಾರಾಯಣಕುಮಾರ್.—ಎಲ್ಲಾ ಕಳೆದುಕೊಂಡು ಅವರು ಆ ರೀತಿ ಆಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಯಾವುದೇ ಚುನಾವಣೆಗೆ ಮೇಲ್ಮನೆಯಾಗಲೀ, ಕೆಳ ಮನೆಯಾಗಲಿ ನಿಲ್ಲದೆ ನೀವು ಪ್ರಜಾಪ್ರಭುತ್ವದಲ್ಲಿ ದೊಡ್ಡ ಉದಾಹರಣೆಯಾಗಿ ಗೊಮ್ಮಟೇಶ್ವರ ಹಾಗೆ ನಮ್ಮ ಮುಂದೆ ನಿಂತಿದ್ದೀರಿ. ೧೯೭೨ ರಲ್ಲಿ ಚುನಾವಣೆಗೆ ನಿಲ್ಲತಕ್ಕಂಥ ಧೈರ್ಯ ಕೂಡ ನಿಮಗೆ ಇರಲಿಲ್ಲ. ನಿಮ್ಮ ರಾಜಕೀಯದ ಸಂಪೂರ್ಣ ಚರಿತ್ರೆ ನನಗೆ ಗೊತ್ತಿದೆ. ಆರ್. ಎನ್. ನಾಯಕರವರಿಗೆ ಚಿಕ್ಕ ವಯಸ್ಸು. ಮತ್ತೆ ಅವರು ಆರಿಸಿ ಬರದಿದ್ದರೂ ಕೂಡ ನೀವೇ ಉದಾಹರಣೆ ಆಗಿರುವುದರಿಂದ ಆರ್. ಎನ್. ನಾಯಕರು ಕೂಡ ನಿಮ್ಮ ಹಾಗೆ ಮುಖ್ಯ ಮಂತ್ರಿ ಆಗಬಹುದು.

ಶ್ರೀ ಸಿ.ಎಂ. ಉದಾಸಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಬಂಗಾರಪ್ಪನವರು ಹೇಳಿದರು, ನಾಯಕರು ಚುನಾವಣೆಯಲ್ಲಿ ಆರಿಸಿ ಬಂದರೂ ಮಂತ್ರಿಯಾಗಬಹುದು. ಚುನಾವಣೆಯಲ್ಲಿ ಆರಿಸಿ ಬರದಿದ್ದರೂ ಮಂತ್ರಿಯಾಗಬಹುದು. ಮಾನ್ಯ ಬಂಗಾರಪ್ಪನವರು ಸೊರಬ ಕ್ಷೇತ್ರವನ್ನು ಬಿಟ್ಟು ಬೇರೆ ಕ್ಷೇತ್ರದಲ್ಲಿ ನಿಂತು ಆರಿಸಿ ಬಂದರೆ ಈ ಪ್ರಶ್ನೆಗೆ ಉತ್ತರ ಸಿಗಬಹುದು.

ಶ್ರೀ ಎಸ್. ಬಂಗಾರಪ್ಪ.—ಇಲ್ಲ, ಇಲ್ಲ, ಒಂದು ಸ್ವೀಕಾರ ಅವರ ಕ್ಷೇತ್ರ ಹಾನ್‌ಗಲ್‌ಗೇ ಬರುತ್ತೇನೆ. ನೀವೂ ರಾಜೀನಾಮೆ ಕೊಡಿ. ನಾನೂ ರಾಜೀನಾಮೆಯನ್ನು ಕೊಡುತ್ತೇನೆ. ಬರುತ್ತೇನೆ ಹಾನಗಲ್ಲಿಗೆ ಬನ್ನಿ ಆಮೇಲೆ ನೋಡಿಕೊಳ್ಳೋಣ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ. ಉದಾಸಿಯವರು ತಮ್ಮ ರಾಜೀನಾಮೆ ಪತ್ರವನ್ನು ಬರೆದು ಕಳಿಸಲು ಪ್ರಯತ್ನಿಸುತ್ತಿದ್ದರು.)

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಬರೆದು ಕೊಡಿ. ನಾನು ಹೇಳುತ್ತೇನೆ.

ಅಧ್ಯಕ್ಷರು.—ಅವರೂ ಕೊಡಲಿ, ಇವರೂ ಕೊಡಲಿ, ನಾನು ಪರಿಶೀಲನೆ ಮಾಡುತ್ತೇನೆ. ನನ್ನ ಹತ್ತಿರ ಇಟ್ಟುಕೊಳ್ಳುತ್ತೇನೆ. ಮಾನ್ಯ ಬಂಗಾರಪ್ಪನವರು ನೀವೂ ರಾಜೀನಾಮೆ ಕೊಡಿ, ನಾನು ಕೊಡುತ್ತೇನೆಂದು ಹೇಳಿದರು.

(ಗೊಂದಲ)

ಶ್ರೀ ಕೆ.ಎಚ್. ಪಾಟೀಲ್.—ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ,.........

ಶ್ರೀ ಎಂ.ಎಸ್. ಕೃಷ್ಣನ್.—ರಾಜೀನಾಮೆಯನ್ನು ಕೊಡಿ, ನಾನೂ ಕೊಡುತ್ತೇನೆಂದು ಶ್ರೀಮಾನ್ ಬಂಗಾರಪ್ಪನವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಉದಾಸಿಯವರು ಹಾನಗಲ್ ಕ್ಷೇತ್ರದ ಶಾಸಕರು ಅವರ ಸ್ಥಾನದಲ್ಲಿ ಕುಳಿತು ಹೇಳಿರತಕ್ಕ ಮಾತಿನ ಪ್ರಕಾರವೇ ಹೇಳೋಣ. ಅದರಿಂದ ವ್ಯತ್ಯಾಸ ಬರುವುದು ಬೇಡ. ಬಂಗಾರಪ್ಪನವರು ಸೊರಬ ಕ್ಷೇತ್ರದಿಂದ ಗೆದ್ದು ಬರುತ್ತಿದ್ದಾರೆಂಬುದು ಅದರ ಅರ್ಥ. ಬೇರೆ ಕ್ಷೇತ್ರದಲ್ಲಿ ಎಲ್ಲಿಯಾದರೂ ನಿಲ್ಲಿ ಅಂತ ಹೇಳಿದ್ದಾರೆ. ಆದರೆ ಬಂಗಾರಪ್ಪನವರು ಸೊರಬ ಕ್ಷೇತ್ರದಿಂದ ಏಕೆ ಗೆಲ್ಲುತ್ತಿದ್ದಾರೆಂಬ ವಿಚಾರ ಪ್ರತ್ಯೇಕ. ಒಂದೇ ಕ್ಷೇತ್ರದಲ್ಲಿ ನಿಂತು ೪-೫ ಚುನಾವಣೆಗಳಲ್ಲೂ ಗೆಲ್ಲುತ್ತಿದ್ದೇನೆ. ನಾನು ಹೋಗದಿದ್ದರೂ ಕಾರು ಮೈಕು ಹಿಡಿಯದಿದ್ದರೂ......

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೆ,.........

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ನಾರಾಯಣಕುಮಾರ್‌ರವರೇ ನಿಮಗೆ ಇದು ಅರ್ಥವಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ. ನೀವು ಎಂ.ಎಲ್.ಎ. ಆಗುವುದಕ್ಕೆ ನಾನು ಕಾರಣ ಎಂಬುದನ್ನು ಮರೆಯಬೇಡಿ, ಎಲ್ಲಾ ಗೊತ್ತಿದೆ. ಶ್ರೀಮಾನ್ ನಾರಾಯಣಕುಮಾರ್‌ರವರು ಪಕ್ಷದ ವತಿಯಿಂದ ಸ್ಪರ್ಧೆ ಮಾಡುವುದಕ್ಕೆ ಇನ್ನು ಅರ್ಧ ಗಂಟೆ ಮಾತ್ರ ಉಳಿದಿತ್ತು. ೧೯೮೫ನೇ ಇಸವಿಯಲ್ಲಿ ನಡೆದಂತಹ ಚುನಾವಣೆಯಲ್ಲಿ ಪಕ್ಷದ ಸಿಂಬಲನ್ನು ಅವರಿಗೆ ಕೊಡುವುದಕ್ಕೆ ಅರ್ಧ ಗಂಟೆ ಮಾತ್ರ ಉಳಿದಿತ್ತು, ಅದನ್ನು ಕೊಟ್ಟು ಕಳುಹಿಸಬೇಕಾಯಿತು. ಅದಿಲ್ಲದಿದ್ದರೆ ನಿಮ್ಮ ಹಣೆಬರಹದಲ್ಲೇ ಬರೆದಿಲ್ಲ, ನೀವು ಎಂ.ಎಲ್.ಎ. ಆಗುತ್ತಿರಲಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ತಾವು ದಯಮಾಡಿ ಕುಳಿತುಕೊಳ್ಳಿ. ನಾಯಕರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಅವರು ಹೇಳಿದರು. ಬೇರೆ ಯಾವುದಾದರೂ ಕ್ಷೇತ್ರದಲ್ಲಿ ನಿಂತು ಗೆದ್ದು ಬರಲಿ ಎಂಬುದಾಗಿ ಸವಾಲು ರೂಪದಲ್ಲಿ ಹೇಳಿದರು. ಅದಕ್ಕೆ ನಾನು ನಿಮ್ಮ ಹಾನಗಲ್‌ಗೆ ಬರುತ್ತೇನೆಂದು ಹೇಳಿದ್ದೇನೆ. ರಾಜೀನಾಮೆ ಕೊಡಿ ಎಂದೂ ಹೇಳಿದ್ದೇನೆ. ಹೌದಾ, ಅವರು ಕೊಡಲಿ, ಚುನಾವಣೆಗೆ ಬರಲಿ. ಈ ಸದನದ ಒಬ್ಬ ಸದಸ್ಯನಾಗಿ ಇದ್ದುಕೊಂಡೇ ಮತ್ತೊಂದು ಕ್ಷೇತ್ರದಲ್ಲಿ ಸ್ಪರ್ಧೆ ಮಾಡತಕ್ಕ ಹಕ್ಕು ಇದೆ. ಅದರಂತೆ ಕಂಟೆಸ್ಟ್ ಮಾಡುತ್ತೇನೆ.

(ಗೊಂದಲ)

ನಿಮ್ಮ ಕ್ಷೇತ್ರಕ್ಕೆ ಬರುತ್ತೇನೆ. ರಾಜೀನಾಮೆ ಕೊಡಿ ಎಂದು ಹೇಳಿದೆ.

(ಗೊಂದಲ)

ಶ್ರೀಮಾನ್ ಎಂ.ಎಸ್. ಕೃಷ್ಣನ್‌ರವರು ಹೇಳಿದರು......

೧೨-೩೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೋಸ್ಕರ ಹೇಳಿದೆ, ನನ್ನ ಮಾತನ್ನು ದಾಖಲೆಯಲ್ಲಿ ತೆಗೆಸಿ ನೋಡಿ. ಎಂ.ಎಸ್. ಕೃಷ್ಣನ್. ಹೇಳಿರತಕ್ಕದ್ದು ನೀವು ರಾಜೀನಾಮೆ ಕೊಡಿ, ನಾನು ಅಲ್ಲಿಗೆ ಬರುತ್ತೇನೆ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈಗ ಪ್ರಶ್ನೆ ಏನೆಂದರೆ ಬೇರೆ ಕ್ಷೇತ್ರಕ್ಕೆ ಬನ್ನಿ ಎಂಬ ಮಾತು ಹೇಳಿದಾಗ ರಾಜೀನಾಮೆ ಕೊಡಬೇಕು. ನಾನು ಕಂಟೆಸ್ಟಿಗೆ ಹೋಗುವುದಕ್ಕೆ ತಯಾರಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಕುಳಿತುಕೊಳ್ಳಿ, ಏತಕ್ಕೆ ಮಾತನಾಡುತ್ತೀರಿ ? ಸಭಾ ನಾಯಕರನ್ನು ಕರೆದಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಇದೇನೋ ಟಾಸ್ ಆಗಿ ಹೋಯಿತು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕಡೆಯಿಂದ ಟಾಸ್ ಆದರೆ ನಾನು ಕಂಟೆಸ್ಟ್ ಮಾಡುವುದಕ್ಕೆ ತಯಾರಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೆಯದಾಗಿ ವಿರೋಧ ಪಕ್ಷದ ನಾಯಕರು ಮಾನ್ಯ ಸದಸ್ಯರಾದ ನಾರಾಯಣಕುಮಾರ್ ಬಗ್ಗೆ ನಿಮ್ಮ ಹಣೇಬರಹದಲ್ಲಿ ಬರೆದಿತ್ತು ಮೆಂಬರ್ ಆಗತಕ್ಕದ್ದು ಎಂದು ಹೇಳತಕ್ಕ ವಾಕ್ಯವನ್ನು ಪ್ರಯೋಗ ಮಾಡಿದರು. ಅದು ಪಾರ್ಲಿಮೆಂಟರಿಯೋ ಅನ್ ಪಾರ್ಲಿಮೆಂಟರಿಯೋ ಎಂಬುದನ್ನು ಯೋಚಿಸಿ.

ಶ್ರೀ ಎಸ್. ಬಂಗಾರಪ್ಪ.—ಅರ್ಧ ಗಂಟೆ ಟೈಂ ಇತ್ತು ಎಂದು ಈಗಲೂ ಹೇಳುತ್ತೇನೆ. ಬೇಕಾದರೆ ಅವರನ್ನೇ ಕೇಳಿ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಹಣೇಬರಹ ಗಲಾಟೆಯಲ್ಲೇ ಆಯಿತು. ಈಗ ಆ ಪ್ರಶ್ನೆ ಇಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನೀವು ಬಂಗಾರಪ್ಪನವರ ಹಾಗೆ ಮಾಡಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಹಗುರವಾಗಿ ಮಾತನಾಡುವುದನ್ನು ಬಿಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಸಿಟ್ಟಿನಿಂದ ಮಾತನಾಡಬೇಡಿ. ನಿಮಗೆ ಏತಕ್ಕೆ ಇಷ್ಟು ಸಿಟ್ಟು ?

ಶ್ರೀ ಎಸ್. ಬಂಗಾರಪ್ಪ.—ಏನು ಮಾತನಾಡುತ್ತಿರುವುದು ಅವರು ?

ಅಧ್ಯಕ್ಷರು.—ಈ ರೀತಿ ನೀವುಗಳು ಮಾತನಾಡುತ್ತಿದ್ದರೆ, ಯಾರೇ ಮಾತನಾಡಲಿ ಅದು ರೆಕಾರ್ಡ್‌ನಲ್ಲಿ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅದನ್ನು ರೆಕಾರ್ಡ್‌ನಿಂದ ತೆಗೆಸಿ ಹಾಕಿ. ಮಾತನಾಡುವುದಕ್ಕೂ ಒಂದು ಮಿತಿ ಇರಬೇಕು. What is this ? It is too much. Are you playing in the Assembly You cannot play with the Leader of the Opposition. The Chief Minister must be very careful while talking. Should the Chief Minister talk like this ?

ಅಧ್ಯಕ್ಷರು.—ನಾನು ರೆಕಾರ್ಡ್ ನೋಡಿ ತೆಗೆಸಿ ಹಾಕುತ್ತೇನೆ. ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಇಷ್ಟು ಸಿಟ್ಟು ಏಕೆ ನಿಮಗೆ ? ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ಅನ್ ಪಾರ್ಲಿಯಮೆಂಟರಿ ಇದ್ದರೆ ತೆಗೆಯುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ತಾವು ಸ್ವಲ್ಪ ಸಮಾಧಾನವಾಗಿ ಇರಿ. ರೆಕಾರ್ಡಿಗೆ ಹೋಗಿದ್ದರೆ ತೆಗೆಸುತ್ತೇನೆ. ದಯವಿಟ್ಟು ಕೂಡಿ. ನಿಮ್ಮನ್ನು ರಕ್ಷಣೆ ಮಾಡುತ್ತೇನೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಮಾತನಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳಿದ ಮಾತಿನಲ್ಲಿ ಏನಾದರೂ ಆಕ್ಷೇಪಾರ್ಹವಾದ ವಿಚಾರ ಇದ್ದರೆ ಅದನ್ನು ಕಡತದಿಂದ ತೆಗೆದುಹಾಕಿ. ಆದರೆ ನಾನು ಹೇಳಿದ್ದೇನು ? ನಾರಾಯಣ ಕುಮಾರ್ ಅವರು ಮಧ್ಯದಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಶುರು ಮಾಡಿದರು. ಆಗ ನಾನು ಅವರಿಗೆ ಹೇಳಿದೆ. ನೀವು ಬಂಗಾರಪ್ಪನವರ ಹಾಗೆ ಮಾಡಬೇಡಿ ಎಂದು.

(ಗೊಂದಲ)

ಅಧ್ಯಕ್ಷರು.—ನಾನು ಕಡತ ತರಿಸಿ ನೋಡಿ ಅಂಥದ್ದೇನಾದರೂ ಇದ್ದರೆ ತೆಗೆಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ವಿರೋಧಪಕ್ಷದ ನಾಯಕರೆ, ಮಧ್ಯದಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಎಂದು ಕೇಳಿದೆ. ನೀವು ಏನು, ಬಂಗಾರಪ್ಪನವರೇ, ಅಥವಾ ವಿರೋಧ ಪಕ್ಷದ ನಾಯಕರೇ, ಎಂಬ ಅರ್ಥದಲ್ಲಿ ಕೇಳಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅದು ಬರುವುದಿಲ್ಲ.

ಅಧ್ಯಕ್ಷರು.—ಆಕಸ್ಮಿಕವಾಗಿ ಆ ಕಡೆಯವರು ತಮಗೆ ನೋವಾಗುವ ಹಾಗೆ ಮಾತನಾಡಿದ್ದರೆ ರೆಕಾರ್ಡ್‌ನಿಂದ ತೆಗೆಸಿ ಹಾಕುತ್ತೇನೆ. ರಾಜೀನಾಮೆ ಕೊಡುವುದಾದರೆ ನೀವೂ ಕೊಡಿ, ಅವರೂ ಕೊಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಉತ್ತರ ಕೊಡುತ್ತಿದ್ದೇನೆ. ಮೊನ್ನೆ ನೀವು ಮಾತನಾಡಿದ್ದಕ್ಕೆ ಇವತ್ತು ನಾನು ಮಾತನಾಡಿದೆ. ಹಣೇಬರಹದಲ್ಲಿ ಇರಲಿಲ್ಲವೆಂದು ಹೇಳಿದೆ. ಹೇಳಿದ್ದನ್ನು ಒಪ್ಪಿಕೊಂಡರೆ ಆಕ್ಷೇಪವೆ ?

ಶ್ರೀ ಎಸ್. ಬಂಗಾರಪ್ಪ.—೧೯೮೩ರಲ್ಲಿ......

ಶ್ರೀ ರಾಮಕೃಷ್ಣ ಹೆಗಡೆ.—೧೯೮೩ರಲ್ಲಿ ಅವರ ಹಣೇಬರಹದಲ್ಲಿ ಇತ್ತು. ದೇವರು ನಿಮಗೆ ಬುದ್ಧಿ ಕೊಟ್ಟರು.

ಹಣೆಬರಹದಲ್ಲಿತ್ತು. ಆಯಿತು. ಅದಾದ ಮೇಲೆ ಅವರ ಹಣೆಬರಹದಲ್ಲಿ ಇದೂ ಇತ್ತು. ೮೫ನೇ ಇಸವಿಯಲ್ಲೂ ಆರಿಸಿಬರಬೇಕು ಎಂದು ಇತ್ತು. ಅದಕ್ಕೇನು ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು.—ಮಾನ್ಯ ನಾರಾಯಣಕುಮಾರ್ ಅವರೇ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅದರಂತೆ ಮಾನ್ಯ ಅಧ್ಯಕ್ಷರೆ, ನನ್ನ ಹಣೆಬರಹದಲ್ಲೂ ಇತ್ತು, ನಾನೇನು ಮಾಡಲಿ? ಇಲ್ಲಿ ಬಂದು ಮುಖ್ಯಮಂತ್ರಿ ಆಗಬೇಕು ಎಂದಿತ್ತು. ನಾನೆಲ್ಲೋ ದೆಹಲಿಯಲ್ಲಿದ್ದವನು.

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಾವು ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಅವರೇನು ಮಾಡಲಿಕ್ಕೆ ಬರುತ್ತದೆ? ಅವರು ಪುನಃ ಪುನಃ ಹೇಳಿದ್ದಾರೆ, ಮೋಸ ಮಾಡಿ ಬಂದಿದ್ದಾರೆ, ಮೋಸ ಮಾಡಿ ಬಂದಿದ್ದಾರೆ ಎಂದು. ಯಾರಿಗೆ ಮೋಸಾನೋ ನನಗೆ ಗೊತ್ತಿಲ್ಲ.

ಒಬ್ಬ ವಿರೋಧಪಕ್ಷದ ಸದಸ್ಯರು.—ಹಿಂದುಗಡೆಯ ಬಾಗಿಲಿನಿಂದ ಬಂದಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಎಡಗಡೆಯೋ, ಬಲಗಡೆಯೋ, ಹಿಂದುಗಡೆಯೋ ಏನೋ? ಆಕಾಶದಿಂದ ಬಂದಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಗವಾಕ್ಷಿಯಿಂದ.

ಶ್ರೀ ರಾಮಕೃಷ್ಣ ಹೆಗಡೆ.—ಇರಬಹುದು. ಸತ್ಯ ಏನು ಎಂದರೆ ಆ ಪಕ್ಷದವರು ನನ್ನನ್ನು ಬಾ ಎಂದು ಕರೆದು ಆರಿಸಿದರು. ಅದೇ ಮೋಸ ಆಗಿದ್ದರೆ ಮೋಸ ಎಂದು ಇಟ್ಟುಕೊಳ್ಳಿ. ಆ ಮಾತು ಬೇರೆ. ಆದರೆ ನಾನು ಹೇಳುವುದು......

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ......

ಅಧ್ಯಕ್ಷರು.—ಅವರದು ಮುಗಿಯಲಿ, ತಾವು ಕೂಡಿರಿ.

(ಗೊಂದಲ)

SRI K.H. PATIL.—Mr. Speaker, I am on a point of order.

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಇದು ಮುಗಿಯಲಿ.

SRI K.H. PATIL.—I am on a point of order. ಈಗ ಸದನದಲ್ಲಿ ಒಬ್ಬರಿಗೊಬ್ಬರಿಗೆ ಆದಂಥ ಅನ್ಯಾಯಗಳನ್ನು ಆಗಲಿ ಅವರಿಗೆ ಬಂದಂಥ ವೇದನೆಯನ್ನಾಗಲೀ ಕೇಳಲಿಕ್ಕೆ ನಾವು ಕುಳಿತಿಲ್ಲ. ನಾನಂತೂ ಕುಳಿತಿಲ್ಲ. ಇವೊತ್ತಿನ ದಿವಸ ಅನೇಕ ಮಹತ್ವವಾದ ಮಾತುಗಳನ್ನು ಸದನದ ನಾಯಕರನ್ನು ಕೇಳಿದ್ದೇವೆ, ರಾಜ್ಯಕ್ಕೆ ಸಂಬಂಧಪಟ್ಟಹಾಗೆ. ಆ ದೃಷ್ಟಿಯಿಂದ ನೇರವಾಗಿ ವಿರೋಧಪಕ್ಷ ಮತ್ತು ಆಳುವ ಪಕ್ಷ ಎರಡೂ ಕೂಡ ಗಂಭೀರತೆಯಿಂದ ಇದ್ದಾಗ ರಾಜ್ಯದ ಸರ್ಕಾರ ಸುಸೂತ್ರವಾಗಿ ನಡೆಯುತ್ತದೆ. ವಿನೋದಕ್ಕಾಗಿಯಾಗಲೀ ಒಬ್ಬರಿಗೊಬ್ಬರು ಬಡಿದಾಡುವ ದೃಷ್ಟಿಯಿಂದ ಆಗಲಿ ಹೋಗುವುದು ವಿಹಿತವಲ್ಲ. ಆ ದೃಷ್ಟಿಯಿಂದ ಮಾನ್ಯ ಸದನದ ನಾಯಕರನ್ನು ಪುನಃ ನಾನು ಮನವಿ ಮಾಡಿಕೊಳ್ಳುತ್ತೇನೆ, ನೇರವಾಗಿ ಸ್ಪೀಚ್‌ಗೆ ಉತ್ತರವನ್ನು ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು.—ಅವರಿಗೆ ಹೇಳಿ.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಸಭಾಪತಿಗಳೆ, ನಾವು ಸದನವನ್ನು ಉದ್ದೇಶಿಸಿ ಹೇಳಿದಾಗ ಅದು ವಿರೋಧಪಕ್ಷದ ನಾಯಕರಿಗೂ ಹೇಳಿದಹಾಗೆ ಆಯಿತು, ಅವರನ್ನು ಬಿಟ್ಟು ಅಲ್ಲ. ಸದನದ ನಾಯಕರ ಕರ್ತವ್ಯ ವಿರೋಧಪಕ್ಷದ ನಾಯಕರ ಗೌರವವನ್ನು ಎತ್ತಿಹಿಡಿಯುವುದು. ಅವರನ್ನು ಸಂಭೋಧಿಸಿದಾಗ ಇಡೀ ಸದನವನ್ನು ಸಂಭೋಧಿಸಿದಂತಾಗುತ್ತದೆ. ಆ ದೃಷ್ಟಿಯಿಂದ ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಹೌದು. ನೇರವಾಗಿ ಸಂಬಂಧಪಟ್ಟ ವಿಷಯದ ಮೇಲೆಯೇ ನಾನು ಮಾತನಾಡುತ್ತಿರುವುದು.

(ಗೊಂದಲ)

SRI R. VENKATARAMAIAH.—I am on a point of order.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಪಾಟೀಲರ ಅಭಿಪ್ರಾಯವನ್ನು ಒಪ್ಪುತ್ತೇನೆ. ಸುಮ್ಮನೆ ಅಕ್ಕರೆ ಇಲ್ಲದ ಸಮಸ್ಯೆ ಬಗ್ಗೆ ಎರಡು ಗಂಟೆ ವೇಸ್ಟ್ ಮಾಡಿದ್ದೇವೆ. ನಾನು ಯಾರನ್ನೂ ಅಕ್ಯೂಸ್ ಮಾಡುತ್ತಿಲ್ಲ. ಇವರು ಇದನ್ನೇ ಹೇಳುತ್ತಾ ಇದ್ದರೆ ನಾವೇನಾದರೂ ಬೇರೆ ಕೆಲಸ ಮಾಡಬಹುದು. ಸುಮ್ಮನೆ ಸದನದ ಸಮಯ ವೇಸ್ಟಾಗುತ್ತಿದೆ, ದಯವಿಟ್ಟು ಇದನ್ನು ತಪ್ಪಿಸಿ, ಸದನ ನಡೆಯಲಿ ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಮಾಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಮಾನ್ಯ ವೆಂಕಟರಾಮಯ್ಯನವರಿಗೂ ಹೇಳುವುದಿಷ್ಟೆ. ಕೆ.ಹೆಚ್. ಪಾಟೀಲರಿಗೂ ಹೇಳುವುದಿಷ್ಟೆ. ನಾನು ನೇರವಾಗಿ ಹೋಗುತ್ತಾ ಇದ್ದಾಗಲೇ ಬೇರೆ ವಿಷಯ ತಂದವರು ಯಾರು? ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದವರು ಯಾರು ?

ಶ್ರೀ ಎಸ್. ಬಂಗಾರಪ್ಪ.—ವಿಷಯ ಪ್ರಸ್ತಾಪ ಮಾಡಿದವರು ಯಾರು ? ಅಲ್ಲಿ......

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರ ಕೀರ್ತಿ ಅನೇಕ ವಿಚಾರದಲ್ಲಿದೆ. ಅವರು ಪರಾಕ್ರಮಿ, ಧೈರ್ಯವಂತ, ಬಂಗಾರಪ್ಪನವರು ಕೊಟ್ಟ ಮಾತನ್ನು ವಾಪಸ್ ತೆಗೆದುಕೊಳ್ಳುವವರಲ್ಲ ಎಂದು ಹೇಳತಕ್ಕ ಒಂದು ಕೀರ್ತಿ ಇದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳಿದ್ದೇನೆ. I stand by my statement, I will stand by the statement. I am prepared to contest...

ಅಧ್ಯಕ್ಷರು.—ನಿಮ್ಮ ಸ್ಟ್ಯಾಂಡ್ ಇದ್ದೇ ಇದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಚಾಲೆಂಜ್ ಅಕ್ಸೆಪ್ಟ್ ಮಾಡಿರಬೇಕಾದರೆ ರಾಜೀನಾಮೆ ಕೊಡಿಸುವ ಕೆಲಸ ನಿಮ್ಮದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಉದಾಸಿಯವರಿಗೆ ತಾನಾಗಿಯೇ ರಾಜೀನಾಮೆ ಕೊಡತಕ್ಕ ಇಷ್ಟ ಇರಲಿಲ್ಲ. ಆದರೆ ಒಂದು ಚಾಲೆಂಜ್ ಬಂತು. ಅವರು ತಮ್ಮ ಮಾತನ್ನು ಇಟ್ಟುಕೊಳ್ಳ ಬೇಕೆಂದು ಅವರು ರಾಜೀನಾಮೆ ಕಳುಹಿಸಿದ್ದಾರೆ. ಇದನ್ನು ತಮ್ಮ (ಅಧ್ಯಕ್ಷರ) ಕೈಯಲ್ಲಿ ಕಳುಹಿಸಿ ಕೊಡುತ್ತೇನೆ. ''ನೀವೂ ರಾಜೀನಾಮೆ ಕೊಡಿ, ನಾನೂ ರಾಜೀನಾಮೆ ಕೊಡುತ್ತೇನೆ, ಆರಿಸಿ ಬರುತ್ತೇನೆ'' ಎಂದು ಅವರು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಹೇಳಿ. ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರ ಇಷ್ಟಕ್ಕೇ ತೀರ್ಮಾನ ಮಾಡೋಣ. ಇಲ್ಲಿ ರೆಕಾರ್ಡ್ ಇದೆ. ಟೇಪ್ ಇದೆ. ತಾವು (ಅಧ್ಯಕ್ಷರು) ಒಂದು ಕೆಲಸ ಮಾಡಬೇಕು. ಬೇರೆ ಯಾರೂ ಬೇಕಾಗಿಲ್ಲ ರೆಕಾರ್ಡ್ ತರಿಸಿಬಿಡಿ. ಟೇಪ್ ಕೇಳಿ. ಒಂದೊಮ್ಮೆ ಮಾನ್ಯ ಬಂಗಾರಪ್ಪನವರು ಅದನ್ನು ಹೇಳಿದ್ದರೆ ''ನೀವೂ ರಾಜೀನಾಮೆ ಕೊಡಿ, ನಾನೂ ರಾಜೀನಾಮೆ ಕೊಡುತ್ತೇನೆ, ನಾನು ಹಾನಗಲ್‌ನಿಂದ ಸ್ಪರ್ಧಿಸಿ ಆರಿಸಿಬರುತ್ತೇನೆ'' ಎಂದು ಹೇಳಿದ್ದು ನಿಜ ಆಗಿದ್ದರೆ...

ಶ್ರೀ ಎಸ್. ಬಂಗಾರಪ್ಪ.—ಅದು ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಿಲ್ಲುತ್ತೇನೆ ಎಂದು ಹೇಳಿದ್ದೀರಿ. ಅಲ್ಲೇ ಬಂದು ಸ್ಪರ್ಧೆ ಮಾಡುತ್ತೇನೆ ಎಂದು ಹೇಳಿದ್ದೀರಿ. ಅದು ನಿಜ ಆದರೆ ದಯವಿಟ್ಟು ಅವರು ಬೇರೆಯವರ ಮಾತಿಗೆ ಇಲ್ಲದಿದ್ದರೂ ತಮ್ಮ ಮಾತಿಗಾದರೂ ಗೌರವ ಕೊಡುತ್ತಾರೆಂಬ ನಂಬಿಕೆ ನನಗಿದೆ. ತಾವು ಹೇಳಿದಂಥ ಮಾತನ್ನು ವಾಪಸ್ ತೆಗೆದುಕೊಳ್ಳುವುದಾದರೆ ಈಗಲೇ ತೆಗೆದುಕೊಂಡುಬಿಡಿ ಅದಿಲ್ಲದಿದ್ದರೆ......

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಆ ಮಾತನ್ನು ನೀವು ನಡೆಸಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ತಾವು......

(ಗೊಂದಲ)

ಅಧ್ಯಕ್ಷರು.—ಅವರು ಹೇಳುವುದು ಮುಗಿಯಲಿ.

ಶ್ರೀ ಎಸ್. ಬಂಗಾರಪ್ಪ.—ತಾವು ದಯವಿಟ್ಟು ಕೇಳಿ. ಅವರ ಒಂದು ಅಭಿಪ್ರಾಯ ಕೊಟ್ಟಿದ್ದಾರೆ. ಅದಕ್ಕೆ ನಾವು ಹೇಳದಿದ್ದರೆ ತಪ್ಪಾಗುತ್ತದೆ. ಈ ಸಬ್ಜೆಕ್ಟ್ ಮುಗಿಸಿದ ಮೇಲೆ ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಸಬ್ಜೆಕ್ಟ್ ಎಂದರೆ ಇದು ದೊಡ್ಡ ಸಬ್ಜೆಕ್ಟ್ ಅಲ್ಲ. ಇದು ಮಧ್ಯದಲ್ಲಿ ಬಂದಂಥ ಆಹ್ವಾನ ಮತ್ತು ಪ್ರತಿಆಹ್ವಾನ.

ಶ್ರೀ ಎಸ್. ಬಂಗಾರಪ್ಪ.—ಅಷ್ಟೇ ತಾನೆ?

ಶ್ರೀ ರಾಮಕೃಷ್ಣ ಹೆಗಡೆ.—ಅಷ್ಟೆ.

ಅಧ್ಯಕ್ಷರು.—ಮುಗಿಯಲಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಒಂದೇ ಒಂದು ಮನಸ್ಸಿನಲ್ಲಿ ಸ್ವಲ್ಪಮಟ್ಟಿಗೆ ಚಿಂತೆ ಎಂದೇ ಹೇಳೋಣ. ರೆಕಾರ್ಡ್‌ನಲ್ಲಿ ಅದಿದ್ದರೆ ತೆಗೆದುಹಾಕುವುದಕ್ಕೆ ಏನೂ ಆಗುವುದಿಲ್ಲ. ಏಕೆಂದರೆ ಅದು ಅನ್‌ಪಾರ್ಲಿಮೆಂಟರಿ ಶಬ್ದ ಏನಲ್ಲ. ಇದನ್ನು ಹತ್ತು ವರುಷದ ನಂತರ ೧೫ ವರುಷದ ನಂತರ

ಬಂಗಾರಪ್ಪನವರ ಮಕ್ಕಳು, ಮೊಮ್ಮಕ್ಕಳು, ನನ್ನ ಮಕ್ಕಳು ಮೊಮ್ಮಕ್ಕಳು ಮುಂದೆ ಓದಿದರೆ ಇಂಥವರು ಇದ್ದರಲ್ಲ, ಸದನದ ಎದುರುಗಡೆ ಯಾರೂ ಕೇಳದೇ ಮಾಡದೆ ನೀವೂ ರಾಜೀನಾಮೆ ಕೊಡಿ ನಾನೂ ರಾಜೀನಾಮೆ ಕೊಡುತ್ತೇನೆ, ಹಾನಗಲ್‌ನಲ್ಲಿ ನಿಲ್ಲುತ್ತೇನೆ ಎಂದು ಹೇಳಿ ಆಮೇಲೆ ಇದ್ದಕ್ಕಿದ್ದ ಹಾಗೆ ಏತಕ್ಕೆ ಸ್ತಬ್ಧ ಆದರು ಎಂದು ಹೇಳತಕ್ಕ ಕಳಂಕ ನಿಮಗೆ ಬರಕೂಡದು. ಆ ಒಂದು ಚಿಂತೆ ಇದೆ. ಈ ಒಂದು ರಾಜೀನಾಮೆ ಪತ್ರವನ್ನು ನಿಮ್ಮ ಹತ್ತಿರ ಕೊಡುತ್ತೇನೆ.

ಅಧ್ಯಕ್ಷರು.—ರೆಕಾರ್ಡ್ ತರಿಸಿ ನೋಡೋಣ.

(ಮುಖ್ಯಮಂತ್ರಿಗಳು ಉದಾಸಿಯವರ ರಾಜೀನಾಮೆ ಪತ್ರವನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿದರು)

ಶ್ರೀ ರಾಮಕೃಷ್ಣ ಹೆಗಡೆ.—ಅವರ ರಾಜೀನಾಮೆ ಪತ್ರವೂ ಬರಲಿ. ಎರಡೂ ಪತ್ರಗಳನ್ನು ನೀವು ಅಂಗೀಕಾರ ಮಾಡಬೇಕು ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.—ಒಂದು ನಿಮಿಷ ಈಲ್ಡ್ ಆದರೆ...ಇದೇ ವಿಷಯವನ್ನು ತಾವೂ ಹೇಳುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಇದು ಮುಗಿಯಲಿ.

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಾ ವಿಚಾರವನ್ನೂ ಹೇಳೋಣ.

ಶ್ರೀ ಎಸ್. ಬಂಗಾರಪ್ಪ.—ನೋ ನೋ. ಈ ವಿಷಯದ ಬಗ್ಗೆ ಅಂತಿಮ ತೀರ್ಮಾನ ಆಗಬೇಕು. I want a decision from you.

ಅಧ್ಯಕ್ಷರು.—ರೆಕಾರ್ಡ್ ತರಿಸಿ ನೋಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ರೆಕಾರ್ಡ್ ನೋಡಲಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೆ, ಅವರು ಏನು ಹೇಳುತ್ತಾರೆಂದರೆ 'ನಾನೂ ರಾಜಿನಾಮೆ ಕೊಡುತ್ತೇನೆ, ಅವರೂ ರಾಜೀನಾಮೆ ಕೊಡಲಿ, ಹಾನಗಲ್‌ನಲ್ಲಿ ಹೋಗಿ ನಿಲ್ಲುತ್ತೇನೆ, ಆರಿಸಿಬರುತ್ತೇನೆ' ಎಂದು ತಾವು ಅಂದಿರಿ ಎಂದು ಹೇಳಿದ್ದಾರೆ. ನಾನು ರೆಕಾರ್ಡ್ ನೋಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನೂ ಹೇಳುತ್ತೇನೆ. I will have to make myself very clear.

SRI RAMAKRISHNA HEGDE.—Very clear.

SRI. S. BANGAGARAPPA.—Very very clear. I will have to make my stand clear.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದ ಉದಾಸಿ ಅವರು ಸೊರಬ ಬಿಟ್ಟು ಬನ್ನಿ ಎಂಬ ಅಭಿಪ್ರಾಯ ಹೇಳಿದರು. I have accepted that challenge. I stand by that challenge.

ಅಧ್ಯಕ್ಷರು.—'ತಾವು ರಾಜೀನಾಮೆ ಕೊಡಿ, ನಾನೂ ರಾಜೀನಾಮೆ ಕೊಡುತ್ತೇನೆ ಎಂದು ತಾವು ಅಂದಿರಿ' ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಆ ಪಾಯಿಂಟ್‌ಗೆ ಬರುತ್ತಿದ್ದೇನೆ. ರಾಜೀನಾಮೆ ಕೊಡುತ್ತೇನೆ ಎಂಬ ಮಾತನಾಡಿದಾಗ ಸ್ಪಷ್ಟವಾಗಿ ಹೇಳಿದ್ದೇನೆ, 'ನೀವು ಕೊಡಿ, ನಾನು ಕಾಂಟೆಸ್ಟ್ ಮಾಡುತ್ತೇನೆ ಹಾನಗಲ್‌ನಲ್ಲಿ' ಎಂದು ನೀವು ಹೇಳಿದಿರಿ ಎಂಬ ಮಾತು ಇದೆಯಲ್ಲಾ ಇದು ನೀರು ಕುಡಿಸತಕ್ಕ ಮಾತು. ನನಗೆಲ್ಲಾ ಗೊತ್ತಿದೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ ಅವರು ಮುಗಿಸಲಿ.

(ಗೊಂದಲ)

ಬೇಗ ಮುಗಿಸಿ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನನ್ನ ಅಭಿಪ್ರಾಯ ಇಷ್ಟೆ. ನಾನು ಸೊರಬದಿಂದ ರಾಜೀನಾಮೆ ಕೊಟ್ಟು ಬರುತ್ತೇನೆ ಎನ್ನುವ ಮಾತು ನಿಮ್ಮ ಬಾಯಿಂದ ಕೇಳಿರತಕ್ಕದ್ದು.........

(ಗೊಂದಲ)

ಬಂದೆ.........ಬಂದೆ.........ನೀವು ಎಷ್ಟೇ ಮಾತನಾಡಿದರೂ ಅಷ್ಟೆ.........I know the legal position well. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇಷ್ಟೇ ವಿಚಾರ. ಮಾನ್ಯ ಸಭಾಧ್ಯಕ್ಷರೇ, ಪಾರ್ಲಿಮೆಂಟ್ ಸದಸ್ಯರಾಗಿರಬಹುದು, ಶಾಸನಸಭೆಯ ಸದಸ್ಯರಾಗಿರಬಹುದು, ವಿಧಾನಪರಿಷತ್ತಿನ ಸದಸ್ಯರಾಗಿರಬಹುದು. ಬೇರೆ ಕಡೆಯಲ್ಲಿ ಕ್ಷೇತ್ರವನ್ನು ತೆರವು ಮಾಡಿಕೊಂಡು ಚುನಾವಣೆ ಬಂದಾಗ ಸ್ಪರ್ಧೆ ಮಾಡತಕ್ಕ ಅಧಿಕಾರ ಹಾಲಿ ಸದಸ್ಯರಿಗೆ ಇರುವುದರಿಂದ ನಾನು ಆ ರೀತಿ ಹೇಳಿದ್ದುದು. ಅವರು ಬೇರೆ ಕಡೆ ನಿಂತು ಗೆಲ್ಲಿ ಎಂದರು, ಬೇಕಾದರೆ ನಿಮ್ಮ ಹಾನಗಲ್ಲಿಗೇ ಬರುತ್ತೇನೆ ಎಂದು ಹೇಳಿದೆ. ಅವರು ರಾಜೀನಾಮೆ ಕೊಡುತ್ತೇನೆಂದು ಹೇಳಿದರು, ಹಾಗಾದರೆ ಅವರು ಕೊಡಲಿ ನಾನು ಬಂದು ಕಂಟೆಸ್ಟ್ ಮಾಡುತ್ತೇನೆ ಎಂದು ಹೇಳಿದೆ. ಈಗಲೂ ಕೂಡಾ ಅದನ್ನೇ ನಾನು ಹೇಳುತ್ತಿದ್ದೇನೆ. ಈಗಲೂ ನಾನು ರೆಡಿ ಇದ್ದೇನೆ. that is, without resigning from Soraba......that is my stand......

(ಗೊಂದಲ)

ಅಧ್ಯಕ್ಷರು.—ಮೊಯ್ಲಿಯವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ರಾಜೀನಾಮೆ ಕೊಡುವ ವಿಷಯ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಮಾನ್ಯ ಬಂಗಾರಪ್ಪನವರು ರಾಜೀನಾಮೆಯನ್ನು ಕೊಡಬೇಕೇ ಅಥವಾ ಕೊಡದೆ ಹಾಗೇ ನಿಲ್ಲಬಹುದೇ ಎನ್ನುವ ಪ್ರಶ್ನೆ ಇಲ್ಲಿ ಇದೆ. ಸಂವಿಧಾನದ ಪ್ರಕಾರ ರಾಜೀನಾಮೆಯನ್ನು ಕೊಡದೇ ಚುನಾವಣೆಗೆ ನಿಲ್ಲಬಹುದೆಂದು ಸ್ಪಷ್ಟವಾಗಿ ಇದೆ. ಆದರೆ ಒಂದು ಪ್ರಶ್ನೆ ಏನೆಂದರೆ, ಮಾನ್ಯ ಅಧ್ಯಕ್ಷರು ಅವರು ರಾಜೀನಾಮೆಯನ್ನು ಕೊಡುತ್ತೇನೆಂದು ಮಾತನಾಡಿದ್ದರೆ ಆ ಬಗ್ಗೆ ವೆರಿಫೈ ಮಾಡಲಿ. ಇಲ್ಲಿ ಮಾತನಾಡಿರತಕ್ಕುದು ರೆಕಾರ್ಡ್ ಆಗಿರುತ್ತದೆ. ಟೇಪ್‌ರೆಕಾರ್ಡ್‌ನಿಂದ ಅದನ್ನು ಕೇಳಬಹುದು, ನನ್ನ ಒಂದು ಸಲಹೆ ಇಷ್ಟೆ. ವಿರೋಧಪಕ್ಷದ ನಾಯಕರೂ ಇರಲಿ, ಈ ಸಭೆಯ ನಾಯಕರೂ ಇರಲಿ ಹಾಗೂ ಈ ಮನೆಯ ಇನ್ನಿತರ ವಿರೋಧ ಪಕ್ಷದ ನಾಯಕರೂ ಇರಲಿ—ಎಲ್ಲರೂ ಹೋಗಿ ಟೇಪ್ ರೆಕಾರ್ಡ್ ಆದದ್ದನ್ನು ಕೇಳೋಣ. ಆಮೇಲೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು ಎಂದು ನನ್ನ ಭಾವನೆ.

(ಗೊಂದಲ)

ಅಧ್ಯಕ್ಷರು.—ಈಗ ಸಭೆಯಲ್ಲಿ ನಡೆದ ನಡವಳಿಕೆಯ ವರದಿ ಬಂದಿದೆ.

(ಗೊಂದಲ)

ಅಧ್ಯಕ್ಷರು.—ಮುಖ್ಯಮಂತ್ರಿಗಳು ಹೇಳಿದ್ದೂ ಇದೆ, ಮತ್ತು......

ಶ್ರೀ ಎಸ್. ಬಂಗಾರಪ್ಪ.—ರೆಕಾರ್ಡ್‌ನಲ್ಲಿ ಎಲ್ಲಾ ಇದೆ, ನಾನೂ ಹೇಳಿದ್ದೂ ಇದೆ, ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ.........

(ಗೊಂದಲ)

ಅಧ್ಯಕ್ಷರು.—ಅವರು ಏನು ಹೇಳಿದ್ದಾರೆ ಎಂಬ ಬಗ್ಗೆ......

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಅದನ್ನು ಓದುವ ಮೊದಲು ಒಂದು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರೇ, ಬೆಳಿಗ್ಗೆಯಿಂದ ಈ ಸದನದಲ್ಲಿ ನಡೆದ ಕಾರ್ಯಕಲಾಪಗಳ ಬಗ್ಗೆ ಹೇಳಬೇಕೆಂದರೆ ನಾವು ಬಹಳ ವ್ಯಸನದಿಂದಲೇ ಎಲ್ಲವನ್ನೂ ಕೇಳುತ್ತಾ ಬಂದಿದ್ದೇವೆ. ಈ ಒಂದು ಪರಿಸ್ಥಿತಿಗೆ, ಈ ಹಂತಕ್ಕೆ ಈ ಸದನದ ಕಾರ್ಯಕಲಾಪಗಳು ಹೋಗಲೇಬಾರದು. ಅದೇಕೋ ವೈಯಕ್ತಿಕವಾದ ಕೆಲವು ದ್ವೇಷ, ಭಾವನೆಗಳು, ಉದ್ರೇಕ, ಉದ್ವೇಗಗಳು ಇಲ್ಲಿ ನಡೆಯುತ್ತಿವೆ. ಉದ್ವೇಗದ ಭರದಲ್ಲಿ ಒಂದು ವಾತಾವರಣಕ್ಕೆ ನಾವು ಬಂದಿದ್ದೇವೆ. ನಮ್ಮ ನಾಯಕರು ಇವೊತ್ತು ಯಾವುದಕ್ಕೋ ಸಿದ್ಧರಾಗಿ ಬಂದ ಹಾಗೆ ಕಾಣುತ್ತಾ ಇದೆ. ಅವರ ಒಂದು ಭಾವನೆಯನ್ನು ನೋಡಿದಾಗ ಇದು ಕಾಣುತ್ತಾ ಇದೆ. ಇವೊತ್ತು ನಮ್ಮ ಸಭಾ ನಾಯಕರು ಒಂದು ಪಕ್ಷಕ್ಕೆ ಮಾತ್ರ ನಾಯಕರಲ್ಲ. ಅವರು ಇಡೀ ಸಭೆಯ ಸದನದ ನಾಯಕರು ಯಾವುದೇ ಒಂದು ಉದ್ವೇಗದ, ಒಂದು ಕೋಪದ, ಒಂದು ತಾಪದ ಆಧಾರದ ಮೇಲೆ ಯಾವ ಕಾರ್ಯಕಲಾಪ ಗಳೂ ಕೂಡಾ ಈ ಸದನದಲ್ಲಿ ನಡೆಯಬಾರದು. ಇದನ್ನು ತಪ್ಪಿಸತಕ್ಕ ಪ್ರಯತ್ನವನ್ನು ಮುಖ್ಯವಾಗಿ ಸಭಾನಾಯಕರು ಮಾಡಬೇಕು. ಏಕೆಂದರೆ ಪ್ರಚೋದನೆ ಯಾವ ಕಡೆಯಿಂದಲೇ ಬರಬಹುದು, ಆದರೆ ಪ್ರಚೋದನೆಯಿಂದ ಯಾವುದಾದರೂ ಒಂದು ನಿರ್ಣಯವನ್ನು ಒಬ್ಬ ಶಾಸಕನಾಗಲಿ, ಒಂದು ಸದನವಾಗಲೀ ತೆಗೆದುಕೊಂಡಾಗ ಸಮಗ್ರ ದೃಷ್ಟಿಯಿಂದ ಸಭಾ ನಾಯಕರು he has to give a lead.........ಇಲ್ಲಿ ಏಕೆ ಈ ಒಂದು ವಿಚಾರದ ಬಗ್ಗೆ ಹೇಳುತ್ತಿದ್ದೇನೆಂದರೆ, ಈಗ ಉದಾಸಿಯವರನ್ನೇ ತೆಗೆದುಕೊಳ್ಳೋಣ. ಅವರು ಒಂದು ಮಾತಿನಿಂದ ವಿರೋಧಪಕ್ಷದ ನಾಯಕರು ಉದ್ವೇಗದ ಭರದಲ್ಲಿ ಕೋಪ ತಾಪದಲ್ಲಿ, ಭಾವನೆಗಳು ಉತ್ತುಂಗ ಶಿಖರಕ್ಕೆ ಹೋದಾಗ ಅವರು ಒಂದು ಮಾತನ್ನು ಹೇಳಿದರು. ಅದನ್ನು ಮಾನ್ಯ ಸಭಾ ನಾಯಕರು ಒಂದು ಸಂಯಮದಿಂದ ತೆಗೆದುಕೊಳ್ಳತಕ್ಕ ಪ್ರಯತ್ನ ವನ್ನು ಮಾಡಬಹುದಾಗಿತ್ತು. ಅದನ್ನು ಮಾಡಲಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೇ ತಾವು ಸ್ವಲ್ಪ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. I will complete it. ಆ ಭಾವನೆಯನ್ನು ಒಂದು ಉತ್ತುಂಗ ಮಟ್ಟಕ್ಕೆ ಕೊಂಡು ಹೋಗಿ ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಿದ್ದರೆ ಈ ಸಭೆಗೆ ಶೋಭೆ ಬರುವುದಿಲ್ಲ. ಏಕೆಂದರೆ, ಇಬ್ಬರು ಸದಸ್ಯರು ರಾಜೀನಾಮೆಯನ್ನು ಕೊಡುತ್ತೇವೆ ಎಂದು ಹೇಳಿದ ಕೂಡಲೇ ಅದನ್ನು ಒಂದು ನಿರ್ಣಯ ಮಾಡಿ ಕೊಂಡು ಈ ಸದನವೇ ನಿರ್ಣಯ ಮಾಡುವುದಾದರೆ ಈ ಸಭೆಗೆ ಖಂಡಿತವಾಗಿ ಶೋಭೆ ಬರುವುದಿಲ್ಲ.

ಅಧ್ಯಕ್ಷರು.—ಆ ವಿಷಯ ನನಗೆ ಬಿಟ್ಟದ್ದು. ಅದನ್ನು ನನಗೆ ಬಿಡಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಸನ್ಮಾನ್ಯ ಸದಸ್ಯರಾದ ಉದಾಸಿಯವರು ರಾಜೀನಾಮೆ ಯನ್ನು ಕೊಡುತ್ತೇನೆಂದು ಸವಾಲು ಎಸೆದಾಗ ಪ್ರತಿ ಸವಾಲನ್ನು ವಿರೋಧಪಕ್ಷದ ನಾಯಕರು ಕೊಟ್ಟು ಕೊಡುತ್ತಾರೆ. ಅದನ್ನು ನಾವು......

(ಗೊಂದಲ)

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೇ ತಾವು ಕುಳಿತುಕೊಳ್ಳಿ. ಸಭಾನಾಯಕರು ಏನು ಹೇಳಿದರು ? ಹಾನಗಲ್ಲಿನ ಉದಾಸಿಯವರೂ ರಾಜೀನಾಮೆ ಕೊಡಲಿ ನಾನೂ ರಾಜೀನಾಮೆ ಕೊಡು ತ್ತೇನೆ, ಹಾನಗಲ್‌ಗೆ ಬರುತ್ತೇನೆ ಅಲ್ಲಿ ನೋಡೋಣ ಎಂದು ಮಾನ್ಯ ಬಂಗಾರಪ್ಪನವರು ಹೇಳಿದರು ಎಂದು ಹೇಳಿದರು. ಹಾಗೆ ಹೇಳಿಲ್ಲ ಎಂದು ಮಾನ್ಯ ಬಂಗಾರಪ್ಪ ಅವರು ಹೇಳಿದರು. ನಾನು ರೆಕಾರ್ಡ್ ತರಿಸಿ ನೋಡಿದ್ದೇನೆ. ಈಗ ನಾನು ಈ ಬಗ್ಗೆ ಏಕದಮ್ ಡಿಸಿಷನ್ ಕೊಡುವುದಿಲ್ಲ. ರಾಜೀನಾಮೆ ಕೊಡುತ್ತೇನೆ ಎಂದೂ ಅವರೂ ಹೇಳಿರಬಹುದು. ಅವರು ರಾಜೀನಾಮೆಯನ್ನು ಕೊಟ್ಟರೂ ಕೂಡಾ ಆಕ್ಸೆಪ್ಟ್ ಮಾಡುವವನು ನಾನು. ಅದನ್ನು ಮಾಡಬೇಕೋ ಬೇಡವೋ ಎಂಬು ದನ್ನು ನಮಗೆ ಬಿಡಿ. ......

(ಗೊಂದಲ)

ಹೀಗೆ ಗೊಂದಲ ಮಾಡಿದರೇ ಹೇಗೆ ? ಎಲ್ಲರೂ ಸ್ವಲ್ಪ ಕೇಳಿ. ಇಲ್ಲದಿದ್ದರೆ ಸಭೆಯನ್ನು ನಡೆಸುವುದಕ್ಕೆ ಬಹಳ ಕಷ್ಟವಾಗುತ್ತದೆ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಬಂಗಾರಪ್ಪನವರು ಹೇಳಿದರು, ಚುನಾವಣೆಯಲ್ಲಿ ಆರಿಸಿ ಬಂದರೂ ಮಂತ್ರಿಯಾಗಬಹುದು, ಚುನಾವಣೆಯಲ್ಲಿ ಆರಿಸಿ ಬಾರದಿದ್ದರೂ ಮಂತ್ರಿಗಳು ಆಗಬಹುದು ಎಂದು. ಶ್ರೀ ಮಾನ್ ಬಂಗಾರಪ್ಪನವರು ಸೊರಬ ಕ್ಷೇತ್ರದಿಂದ ಆರಿಸಿ ಬರುತ್ತಿದ್ದಾರೆ. ಅವರು ಆ ಕ್ಷೇತ್ರವನ್ನು ಬಿಟ್ಟು ಬೇರೆ ಕ್ಷೇತ್ರದಲ್ಲಿ ನಿಂತು ಆರಿಸಿ ಬಂದಾಗ ಆ ಪ್ರಶ್ನೆಗೆ ಉತ್ತರ ಸಿಗುವುದು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಹಾನಗಲ್ಲಿಗೇ ಬರುತ್ತೇನೆ. ನೀವೂ ರಾಜೀನಾಮೆ ಕೊಡಿ, ನಾನೂ ರಾಜೀನಾಮೆ ಕೊಡುತ್ತೇನೆ.

(ಆಡಳಿತ ಪಕ್ಷದ ಶಾಸಕರು ಕರತಾಡನ ಮಾಡಿದರು)

ಅಧ್ಯಕ್ಷರು.—ತಾವು ಸ್ವಲ್ಪ ಸುಮ್ಮನೆ ಕೇಳುವುದಕ್ಕೂ ತಾಳ್ಮೆ ಇಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಹಾನಗಲ್ಲಿಗೇ ಬರುತ್ತೇನೆ. ನೀವೂ ರಾಜೀನಾಮೆ ಕೊಡಿ, ನಾನೂ ರಾಜೀನಾಮೆ ಕೊಡುತ್ತೇನೆ, ಬರುತ್ತೇನೆ. ಆಮೇಲೆ ನೋಡಿಕೊಳ್ಳೋಣ.

(ಗೊಂದಲ)

(ಈ ಹೊತ್ತಿನಲ್ಲಿ ಮಾನ್ಯ ಸದಸ್ಯರಾದ ಸಿ. ಎಂ. ಉದಾಸಿಯವರು ತಮ್ಮ ರಾಜೀನಾಮೆ ಪತ್ರವನ್ನು ಬರೆದು ಕಳಿಸಲು ಪ್ರಯತ್ನಿಸುತ್ತಿದ್ದರು.) ಈ ರೀತಿ ರೆಕಾರ್ಡ್‌ನಲ್ಲಿ ಇದೆ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕೂಡಿ. ಈಗ ಮಾನ್ಯ ಸದಸ್ಯರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ರಾಜೀನಾಮೆಯ ಪತ್ರವನ್ನು ಕೂಡಾ ನಾನು ಈ ಸಭೆಯ ಗೌರವ ಘನತೆಯ ದೃಷ್ಟಿಯಿಂದ ಸ್ವೀಕಾರ ಮಾಡುವುದಿಲ್ಲ. ಎರಡನ್ನೂ ನಾನು ಇಟ್ಟುಕೊಳ್ಳುತ್ತೇನೆ, ಆಮೇಲೆ ಮುಂದೆ ವಿಚಾರ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಇದರಲ್ಲಿ ಸಭೆಯ ಘನತೆ ಗೌರವ ಮತ್ತು ಇಬ್ಬರು ಮಾನ್ಯ ಸದಸ್ಯರುಗಳ ವೈಯಕ್ತಿಕ ಘನತೆ ಗೌರವಗಳೂ ಇವೆ.

ಅಧ್ಯಕ್ಷರು.—ಹೌದು, ಸಿಟ್ಟಿನ ಭರದಲ್ಲಿ ಅವರು ರಾಜೀನಾಮೆಯನ್ನು ಕೊಟ್ಟರೂ ಕೂಡಾ, ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಡುವುದು ಬೇಡ. ಇಬ್ಬರೂ ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಡುವುದು ಬೇಡ. ಈ ಬಗ್ಗೆ ಮುಂದೆ ವಿಚಾರ ಮಾಡೋಣ. ನಾನು ಈ ಬಗ್ಗೆ ಸಭಾನಾಯಕರಿಗೂ ಕೇಳುತ್ತೇನೆ. ಇವತ್ತು ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಡುವುದು ಬೇಡ. ಮುಂದೆ ಏನು ವಿಚಾರ ಮಾಡಬೇಕೆಂದು ಸಭಾನಾಯಕರನ್ನು, ಅಂದರೆ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಈ ಪ್ರಕರಣವನ್ನು ನಾವು ಇಲ್ಲಿಗೇ ಮುಗಿಸೋಣ. ಈಗ ಎಲ್ಲಾ ರೆಕಾರ್ಡ್‌ನಲ್ಲಿ ಇದೆ. ಮಾನ್ಯ ಬಂಗಾರಪ್ಪನವರು ಸಿಟ್ಟಿನ ಭರದಲ್ಲಿ ಅದನ್ನು ಹೇಳಿರಬಹುದು ಸಿಟ್ಟು ಯಾರಲ್ಲೇ ಇರಲಿ ಅದು ಇದ್ದಾಗ ಏನನ್ನು ನಾವು ಮಾಡುತ್ತಿದ್ದೇವೆಂದು ಎಂಬುದು ಗೊತ್ತಾಗುವುದಿಲ್ಲ. ಮಾನ್ಯ ಬಂಗಾರಪ್ಪನವರು ಸಿಟ್ಟಿನಲ್ಲಿ ಇದ್ದರು ಎಂದು ಕಾಣುತ್ತದೆ. ಸಿಟ್ಟಿನ ಭರದಲ್ಲಿ ಅವರು ಹೇಳಿರಬಹುದು. ಈ ಬಗ್ಗೆ......

ಶ್ರೀ ರಾಮಕೃಷ್ಣ ಹೆಗ್ಡೆ.—ಈ ಬಗ್ಗೆ ನಿರ್ಣಯವನ್ನು ಆಮೇಲೆ ಕೊಡಿ.

ಅಧ್ಯಕ್ಷರು.—ಆಮೇಲೆ ಕೊಡುತ್ತೇನೆ. ಈಗ ಅವರು ಸಿಟ್ಟಿನ ಭರದಲ್ಲಿ ಅದನ್ನು ಹೇಳಿರಬಹುದು. ಈ ಬಗ್ಗೆ ಮುಂದೆ ಏನು ತೀರ್ಮಾನ ತೆಗೆದುಕೊಳ್ಳಬೇಕು ಎಂಬ ತೀರ್ಮಾನ ನನಗೆ ಬಿಟ್ಟಿದ್ದು ಮಾನ್ಯ ವಿರೋಧ ಪಕ್ಷದ ನಾಯಕರು ರಾಜೀನಾಮೆ ಕೊಟ್ಟರೂ ಕೂಡಾ ಅದನ್ನು ಹಾಗೆ ಇಟ್ಟುಕೊಳ್ಳುತ್ತೇನೆ. ಮುಂದೆ ವಿಚಾರ ಮಾಡಿ.........

೧-೦೦ ಪಿ.ಎಂ.

ನಾನು ಹೇಳುತ್ತೇನೆ, ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಈ ಸಂದರ್ಭದಲ್ಲಿ ತಮಗೂ ಸಿಟ್ಟು ಬಹಳಷ್ಟು ಬಂದಿದೆ. ತಾವು ಸಮಾಧಾನವಾಗಿ ಇರಿ. ಆ ಕಡೆಯವರೂ ಈ ಕಡೆಯವರೂ ಸಮಾಧಾನವಾಗಿರಬೇಕು. ಈ ಪ್ರಕರಣವನ್ನು ಇಲ್ಲಿಗೆ ಮುಗಿಸೋಣ. ದಯವಿಟ್ಟು ಕೇಳಿ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಬೇಕು ಸಮಾಧಾನದಿಂದ ಕೇಳಿ ಈ ವಿಚಾರದಲ್ಲಿ ಮಾತನಾಡಲು ನನಗೆ ತಾವು ಸ್ವಲ್ಪ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೆ ತಾವು ತಮ್ಮ ನಾಯಕರಿಗೆ ಹೇಳಿ ಕೂಡಿಸಬೇಕು. ಮಾನ್ಯ ಬಂಗಾರಪ್ಪನವರೂ ಕೂಡಬೇಕು.

ಶ್ರೀ ಎಂ. ರಘುಪತಿ.—ಪಾಯಿಂಟ್ ಆಫ್ ಆರ್ಡರ್. ನನ್ನ ಕ್ರಿಯಾಲೋಪ ಇಷ್ಟೆ ಈ ವಿಷಯದ ಬಗ್ಗೆ ಮಾನ್ಯ ಸಭಾ ನಾಯಕರು ಮಾತನಾಡಿದ್ದಾರೆ ಮತ್ತು ವಿರೋಧ ಪಕ್ಷದ ನಾಯಕರೂ ಮಾತನಾಡಿದ್ದಾರೆ. ತಾವು ಕಡತವನ್ನು ತರಿಸಿಕೊಂಡು ಓದಿದ್ದೀರಿ. ಅನಂತರ ಒಂದು ನಿರ್ಣಯವನ್ನು ಸದನಕ್ಕೆ ತಾವು ಓದಿ ಹೇಳಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ ಎಂದು ತಾವು ಹೇಳಿದ್ದೀರಿ. ಇದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ವಿಶ್ಲೇಷಣೆ ಮಾಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ತಮಗೆ ನಾವು ಗೌರವ, ಘನತೆಯನ್ನು ಕೊಡಬೇಕು. ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ, ನಾನು ಇದರ ಬಗ್ಗೆ ಅಂತಿಮವಾಗಿ ಒಂದು ನಿರ್ಣಯವನ್ನು ಕೊಡುತ್ತೇನೆ, ಯಾರೂ ಇದರ ಬಗ್ಗೆ ಪ್ರಸ್ತಾಪವನ್ನು ಮತ್ತೆ ಮಾಡಬೇಡಿ ಎಂದೂ ಕೂಡ ತಾವು ಹೇಳಿದ್ದೀರಿ. ಆದ್ದರಿಂದ ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ, ಈ ವಿಚಾರವನ್ನು ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪಮಾಡುವುದು ಬೇಡ. ಇಲ್ಲಿಗೆ ಇದನ್ನೂ ಅವರು ಬಿಡಬೇಕು.

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು, ತಾವು ನನಗೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ದಯವಿಟ್ಟು ಕೇಳಿ......

(ಗೊಂದಲ)

ಮತ್ತೆ ಈ ವಿಷಯವನ್ನು ಬೆಳೆಸುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುವುದನ್ನು ತಾವು ಒಂದು ನಿಮಿಷ ಕೇಳಿದರೆ ಮತ್ತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ನಾನು ಒಂದು ವಿಚಾರವನ್ನು ಹೇಳಲೇಬೇಕು. ದಯವಿಟ್ಟು ನನಗೆ ಅವಕಾಶವನ್ನು ಕೊಡಬೇಕು. ತಾವು ಎದ್ದು ನಿಂತಾಗ ನಾನು ಕುಳಿತುಕೊಳ್ಳಬೇಕು. ನಿಜ ಆದರೆ ತಾವು ಪದೇ ಪದೇ ಎದ್ದು ನಿಂತರೆ ನಾನು ಮಾತನಾಡುವುದು ಯಾವಾಗ?

ಅಧ್ಯಕ್ಷರು.—ಈ ಸದನದ ಪ್ರತಿಯೊಬ್ಬರ ಬಗೆಗೂ ನನಗೆ ಗೌರವ ಇದೆ. ತಾವು ಸ್ವಲ್ಪ ಸಮಾಧಾನದಿಂದ ಇರಿ. ಈ ವಿಷಯವನ್ನು ಇಲ್ಲಿಗೆ ಬಿಡೋಣ. ತಾವು ಸಿಟ್ಟಿಗೆ ಏಳಬೇಡಿ. ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳುವುದನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ತಾವು ದಯವಿಟ್ಟು ನನಗೆ ಅವಕಾಶ ಕೊಡಿ. ನಾನು ಎಕ್ಸ್‌ಪ್ಲೈನ್ ಮಾಡಬೇಕು. ನಾನು ಎಕ್ಸ್‌ಪ್ಲೈನ್ ಮಾಡಲೇಬೇಕು......

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದೇನೆ......

ಶ್ರೀ ಎಸ್. ಬಂಗಾರಪ್ಪ.—ತಾವು ನನಗೆ ಮಾತನಾಡಲು ಅವಕಾಶವನ್ನು ಕೊಡದಿದ್ದರೆ ನಾವು ಯಾರೂ ಕೂಡ ಈ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ......

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಸ್ವಲ್ಪ ಹೊತ್ತು ಸುಮ್ಮನೆ ಇರಿ.

ಶ್ರೀ ಎಸ್. ಬಂಗಾರಪ್ಪ.—ತಾವು ದಯವಿಟ್ಟು ಸ್ವಲ್ಪ ಕುಳಿತುಕೊಳ್ಳಬೇಕು.

ಶ್ರೀ ಕೆ.ಹೆಚ್. ಪಾಟೀಲ್.—ಪಾಯಿಂಟ್ ಆಫ್ ಆರ್ಡರ್. ಬಂಗಾರಪ್ಪನವರೆ ತಾವು ಸ್ವಲ್ಪ ಸುಮ್ಮನೆ ಕೂಡಬೇಕು. ಇದು ತಪ್ಪಾಗುತ್ತದೆ ನಿಯಮಾವಳಿ ಸ್ಪಷ್ಟವಾಗಿದೆ. ಒಂದು ವೇಳೆಇಬ್ಬರೂ ರಾಜೀನಾಮೆಯನ್ನು ಕೊಟ್ಟರೂ ಸಹಿತ ಅದನ್ನು ಅವರುಸ್ವೀಕಾರ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಅದು ಪ್ರಚೋದನೆಯಿಂದ ಕೊಟ್ಟಂಥ ರಾಜೀನಾಮೆ ಆಗಲಿ, ಅಥವಾ ಒತ್ತಾಯದಿಂದ ಕೊಟ್ಟಂಥ ರಾಜೀನಾಮೆ ಆಗಲಿ ಅದನ್ನು ರಾಜೀನಾಮೆ ಎಂದು ಸ್ವೀಕಾರ ಮಾಡುವುದಕ್ಕೆ ಬರುವುದಿಲ್ಲ. ಮಾನ್ಯ ಸದನದ ನಾಯಕರು ಸಿಟ್ಟು ಬರುವಂಥ ಮಾತನ್ನು ಏನಾದರೂ ಆಡಿದ್ದರೆ ಅದನ್ನು ಇಲ್ಲಿಗೆ ಮುಗಿಸಿ ಬೇರೆ ವಿಷಯವನ್ನು ತೆಗೆದುಕೊಳ್ಳೋಣ ನಿಯಮಾವಳಿಯ ಪ್ರಕಾರ ಮಾನ್ಯ ಉದಾಸಿಯವರಾಗಲಿ ಅಥವಾ ಮಾನ್ಯ ಬಂಗಾರಪ್ಪನವರಾಗಲಿ ಸ್ವಪ್ರೇರಣೆಯಿಂದ ಬರೆದುಕೊಟ್ಟರೆ ಅದು ರಾಜೀನಾಮೆಯಾಗುತ್ತದೆ. ಆದರೆ ಇದು ಸಭೆಯಲ್ಲಿ ಒಂದು ಪ್ರಚೋದನೆಯಿಂದ ಕೊಟ್ಟಿರುವಂಥ ರಾಜೀನಾಮೆಯಾದ್ದರಿಂದ ಇದು ರಾಜೀನಾಮೆ ಆಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

(ಗೊಂದಲ)

ಶ್ರೀ ಎಂ.ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್. ರಾಜೀನಾಮೆಯ ಪತ್ರ ಬಂದಾಗ ಏನು ಮಾಡಬೇಕೆಂಬ ಬಗ್ಗೆ ನಿಯಮಾವಳಿಯ ಪುಸ್ತಕದಲ್ಲಿ ಬಹಳ ಸ್ಪಷ್ಟವಾಗಿದೆ. ರಾಜೀನಾಮೆ ಪತ್ರಗಳು ಬಂದಾಗ ರೂಲ್ಸನ್ನು ಫಾಲೋ ಮಾಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥಿಸುತ್ತೇನೆ. ಈ ನಿಯಮಾವಳಿಯಲ್ಲಿ ಏನಿದೆ ಎಂದರೆ:

'If a member hands over the letter of resignation to the Speaker personally and informs him that the resignation is voluntary and genuine and the Speaker has no information or knowledge to the contrary, the Speaker may accept resignation immediately.

If the Speaker receives the letter of resignation either by post or through someone else, the Speaker may make such inquiry as he thinks fit to satisfy himself that the resignation is voluntary and genuine. If the Speaker, after making a summary enquiry either himself or through the agency, or Legislature Secretariat or through such other agency, as he may deem fit, is satisfied that the resignation is not voluntary or genuine, he shall not accept the resignation'......

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಸಣ್ಣ ಪಾಯಿಂಟ್ ಆಫ್ ಆರ್ಡರ್. ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರು ಮಾತನಾಡುವಾಗ is it not only desirable, is it not the practice that the Members speak when they are fully under control of their senses and faculties......

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಕುಳಿತುಕೊಂಡರೆ ಒಳ್ಳೆಯದು. ದಯವಿಟ್ಟು ತಾವು ಎದ್ದು ನಿಂತುಕೊಳ್ಳಬೇಡಿ, ನಾನು ಮಾತನಾಡಬೇಕಾಗಿದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ದಯುವಿಟ್ಟು ಕೂಡಿ. ಎಲ್ಲರೂ ಕೂಡ ಕುಳಿತುಕೊಳ್ಳಬೇಕು. ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಹೇಳಿದಂತೆ, ಮಾನ್ಯ ರಘುಪತಿಯವರು ಹೇಳಿದಂತೆ ಈ ವಿಚಾರವನ್ನು ಇಲ್ಲಿಗೆ ಮುಗಿಸೋಣ. ಮಾನ್ಯ ಸಭಾನಾಯಕರು ಈಗ ಉತ್ತರವನ್ನು ಹೇಳು ತ್ತಾರೆ......

(ಗೊಂದಲ)

ಶ್ರೀ ಎಂ.ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೆ, ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ತಮ್ಮ ರೂಲಿಂಗ್ ಏನು ಎಂದು ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಾವು ಏತಕ್ಕೆ ಎದ್ದು ನಿಂತುಕೊಳ್ಳುತ್ತೀರಿ ? ದಯವಿಟ್ಟು ನಾನು ಹೇಳುವುದನ್ನು ಕೇಳಿದರೆ ತಮಗೆ ಅರ್ಥವಾಗುತ್ತದೆಂದು ನನ್ನ ಅಭಿಪ್ರಾಯ.

(ಗೊಂದಲ)

ಶ್ರೀ ಎಂ. ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ನನ್ನ ಪಾಯಿಂಟ್ ಆಫ್ ಆರ್ಡರ್ ಮೇಲೆ ತಾವು ರೂಲಿಂಗ್ ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ನಾನು ಈಗಾಗಲೇ ಅದರ ಬಗ್ಗೆ ರೂಲಿಂಗ್ ಕೊಟ್ಟಿರುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ತಾವು ಅವರೆಲ್ಲರನ್ನು ಕುಳಿತುಕೊಳ್ಳಲು ತಿಳಿಸಿದರೆ ನಾನು ಎಕ್ಸ್‌ಪ್ಲೈನ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ಎಕ್ಸ್‌ಪ್ಲೇನ್ ಮಾಡುವುದು ಏನೂ ಬೇಡ. ದಯುವಿಟ್ಟು ತಾವು ಕುಳಿತುಕೊಳ್ಳಿ. ನಾನು ಈಗಾಗಲೇ ರೂಲಿಂಗ್ ಕೊಟ್ಟು ಆ ವಿಷಯವನ್ನು ಮುಕ್ತಾಯ ಮಾಡಿರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಹೇಳುತ್ತಾರೆ. ನಾನು ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯವಾಗಿರುತ್ತದೆ. ದಯುವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ.........

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಮಾತನಾಡಲೇಬೇಕು. ನನಗೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು.—ಈ ರೀತಿ ನೀವು ಹಠ ಮಾಡಬೇಡಿ. ನಾನು ನಿಮಗೆ ಅವಕಾಶವನ್ನು ಕೊಡು ವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಷ್ಟಾದರೂ ಕೂಡ ನಾನು ಪದೇ ಪದೇ ಕೇಳಿಕೊಳ್ಳುತ್ತಿರುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಡಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನೀವು ಸ್ವಲ್ಪ ಸಮಾಧಾನವಾಗಿ ಇರಿ. ನೀವು ಹೇಳ ತಕ್ಕಂಥದ್ದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯುವಿಟ್ಟು ಕೇಳಿರಿ. ಹಠ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಸಮಾಧಾನವಾಗಿರುತ್ತೇನೆ. ನನಗೆ ಮಾತನಾಡುವುದಕ್ಕೆ ಅಲೋ ಮಾಡಿ. ನಾನು ಎಕ್ಸ್‌ಪ್ಲೇನ್ ಮಾಡಲೇಬೇಕು.

ಅಧ್ಯಕ್ಷರು.—ತಾವು ದಯುವಿಟ್ಟು ಕುಳಿತುಕೊಳ್ಳಬೇಕು. ತಾವು ಈ ರೀತಿ ಹಠ ಮಾಡಬಾರದು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ಈ ರೀತಿ ಹಠ ಮಾಡಬಾರದು. ನಾನು ಈ ಸದನದ ಅಧ್ಯಕ್ಷನಾಗಿ ಎಲ್ಲರ ಹಿತವನ್ನು ಮತ್ತು ಈ ಸದನದ ಗೌರವವನ್ನು ಕಾಪಾಡತಕ್ಕಂಥದ್ದು ನನ್ನ ಕರ್ತವ್ಯವಾಗಿರುತ್ತದೆ. ತಾವು ದಯವಿಟ್ಟು ಸಿಟ್ಟನ್ನು ಬಿಡಬೇಕು. ಸಮಾಧಾನವಾಗಿ ಇರಬೇಕು. ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರವನ್ನು ಕೊಡುತ್ತಾರೆ. ದಯವಿಟ್ಟು ತಾವು ಕೇಳಿರಿ. ನನಗೆ ಕುಳಿತುಕೊಳ್ಳಬೇಕೆಂದು ಹೇಳುವುದಕ್ಕೆ ಹಕ್ಕು ನಿಮಗೆ ಇಲ್ಲ, ಮತ್ತೆ ಯಾರಿಗೂ ಇಲ್ಲ. ಈಗ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಆದ್ದರಿಂದ ತಾವು ದಯವಿಟ್ಟು ಸಮಾಧಾನವಾಗಿ ಇರಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಾವು ನನಗೆ ಏತಕ್ಕೆ ಎಕ್ಸ್‌ಪ್ಲೈನ್ ಮಾಡಲು ಅವಕಾಶವನ್ನು ಕೊಡುತ್ತಿಲ್ಲವೆನ್ನುವುದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ಈಗ ಸಧ್ಯದ ವಾತಾವರಣದಲ್ಲಿ ನಿಮಗೆ ಅವಕಾಶವನ್ನು ಕೊಡುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ಹೀಗೆಲ್ಲ ಮಾತನಾಡಬಾರದು. ಸಿಟ್ಟುಪಡಬಾರದು, ಸಮಾಧಾನವಾಗಿರಬೇಕು.

ಶ್ರೀ ಎಸ್. ಬಂಗಾರಪ್ಪ.—ನೀವು ಕೂಡ ಸಿಟ್ಟುಮಾಡಿಕೊಳ್ಳಬಾರದು.

ಅಧ್ಯಕ್ಷರು.—ನಾನೇಕೆ ಸಿಟ್ಟುಮಾಡಿಕೊಳ್ಳಲಿ. ನಾನು ನಿಮ್ಮ ಹಿತದೃಷ್ಟಿಯಿಂದ ಹೇಳುತ್ತಿರುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ.........

ಅಧ್ಯಕ್ಷರು.—ನೀವು ಏನು ಹೇಳಿದರೂ ಕೂಡ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ನನಗೆ ಮಾತನಾಡಲು ಅವಕಾಶವನ್ನು ಕೊಡದೆ ಸಿಟ್ಟು ಬರುವಂತೆ ಮಾಡುತ್ತಿದ್ದೀರಿ.

ಅಧ್ಯಕ್ಷರು.—ತಾವು ತುಂಬಿದ ಕೊಡ ಇದ್ದಂತೆ ಇರಬೇಕು. ಸಭಾನಾಯಕರು ಉತ್ತರವನ್ನು ಕೊಡಲಿ, ಮುಗಿಸೋಣ.

ಶ್ರೀ ಎಂ.ಎಸ್. ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ನನ್ನ ಕ್ರಿಯಾಲೋಪಕ್ಕೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿರುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪ್ರಾರ್ಥನೆ. ದಯವಿಟ್ಟು ಈ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ಹಾಕಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ,

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಕೊಡಬೇಕು. ದಯವಿಟ್ಟು ತಮ್ಮಲ್ಲಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ದಯವಿಟ್ಟು ಬೇಡಿ. ಸಭೆಗೆ ಗೌರವ ಕೊಡಬೇಕು.

SRI S. BANGARAPPA.—I cannot understand this...... I am very sorry. I have been......

MR. SPEAKER.—Nothing will go on record.

ಬಂಗಾರಪ್ಪನವರೇ, ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗೋದಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟುಬಿಟ್ಟಿದ್ದೇನೆ. ಆದ್ದರಿಂದ ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ನಾನು ಮುಖ್ಯಮಂತ್ರಿಯವರು ಹೇಳಿದ್ದು ಕೇಳಿದ್ದೇನೆ. ರೆಕಾರ್ಡ್ ತರಿಸಿ ನೋಡಿದ್ದೇನೆ. ಅವರ ರಾಜೀನಾಮೆಯನ್ನು ಸ್ವೀಕಾರ ಮಾಡುವುದಿಲ್ಲ, ಹಾಗೆಯೇ ಇವರು ಕೊಟ್ಟಿದ್ದನ್ನೂ ಕೂಡ ಒಪ್ಪಿಕೊಳ್ಳುವುದಿಲ್ಲ, ಎರಡನ್ನೂ ಇಟ್ಟುಕೊಂಡಿರುತ್ತೇನೆ. ಎರಡೂ ಕಡೆಯ ಮುಖಂಡರನ್ನು ಕರೆದು ಇದನ್ನು ಇತ್ಯರ್ಥ ಮಾಡುತ್ತೇನೆ ಎಂದು ಹೇಳಿದ್ದೇನೆ. ಆದ್ದರಿಂದ ಇದನ್ನು ಈಗ ಮುಕ್ತಾಯ ಮಾಡೋಣ. ಮುಂಚೆ ಮಾನ್ಯ ಸಭಾನಾಯಕರು ಉತ್ತರ ಕೊಡಲಿ ಎಂದು ರೂಲಿಂಗ್ ಕೊಟ್ಟಿದ್ದೇನೆ. ನಾನು ಯಾರಿಗೂ ಅನ್ಯಾಯ ಮಾಡಿಲ್ಲ. ಬಂಗಾರಪ್ಪನವರೇ ನೀವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ನನಗೆ ನೀವು ಅವಕಾಶ ಕೊಡದೇ ಇದ್ದರೆ.........

ಅಧ್ಯಕ್ಷರು.—ನೀವು ಹೇಳುವುದೂ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕೂಡಿ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮೋಯಿಲಿಯವರಿಗೂ ಬೇಸರ ಬಂತು......

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮಗೆ ಸಂತೋಷವಾಗಿದೆಯೆಂದೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಎಲ್ಲಿಯವರೆಗೆ ಹೋಯಿತು ಎಂದರೆ.......

ಅಧ್ಯಕ್ಷರು.—ನೀವು ಹೇಳುವುದು ಸೌಜನ್ಯದಿಂದ, ಸೌಮ್ಯತೆಯಿಂದ ಕೂಡಿರಲಿ.

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕಿಂತಲೂ ?

ಅಧ್ಯಕ್ಷರು.—ಇನ್ನೂ ಸ್ವಲ್ಪ........

(ಸಭೆಯಲ್ಲಿ ನಗು)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಕೊನೆಯಲ್ಲಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಇವೆರಡೂ ಮಾನ್ಯ ವಿರೋಧ ಪಕ್ಷದ ನಾಯಕರು ಇತ್ತಿದಂಥ ಟೀಕೆಗಳ ವಿಚಾರದಲ್ಲಿ. ಅನೇಕ ಮಂದಿ ಸದಸ್ಯರ ಸೂಚನೆಗಳ ಬಗ್ಗೆ ಪ್ರಸ್ತಾಪ ಮಾಡಲು ಸಾಧ್ಯವಾಗದಿದ್ದುದಕ್ಕಾಗಿ ಕ್ಷಮೆ ಕೋರುತ್ತೇನೆ. ಸಭೆಯ ಕಾರ್ಯಕಲಾಪಗಳು ಸರಿಯಾಗಿ ನಡೆದಿದ್ದರೆ ಅದು ಸಾಧ್ಯವಾಗುತಿತ್ತು. ಅವರಿಗೆ ತೃಪ್ತಿ ಆಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ, ನನಗೆ ತಿಳಿದ ಮಟ್ಟಿಗೆ ಅವರುಗಳು ಕೇಳಿದ್ದನ್ನು ಹೇಳುವುದಕ್ಕೆ ಅವಕಾಶ ಸಿಗುತ್ತಿತ್ತು. ಅದು ಇಲ್ಲದಿದ್ದುದಕ್ಕಾಗಿ ವಿಷಾದವಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಉಗ್ರವಾದ ಟೀಕೆಯನ್ನು ಮಾಡಿದರು ಅದೇನೆಂದರೆ, ವಿರೋಧ ಪಕ್ಷದ ನಾಯಕರ ಹಕ್ಕಿನ ವಿಚಾರದಲ್ಲಿ ಚ್ಯುತಿಯಾಗಿದೆ ಎಂದು. ಉದಾಹರಣೆಗೆ ಅವರು, ಪಶು ಸಂಗೋಪನಾ ಮತ್ತು ಅರಣ್ಯ ಇಲಾಖೆಯ ಕಾರ್ಯದರ್ಶಿಯವರಿಗೆ ತಮಗೆ ಯಾವುದೋ ಮಾಹಿತಿ ಬೇಕು ಎಂದು ಪತ್ರ ಬರೆದಿದ್ದುದಕ್ಕೆ, ಅವರು ಮಾಹಿತಿ ಕೊಡಲಿಲ್ಲ, ಈ ರೀತಿಯಾಗಿ ಹೇಳಿದರು ಎಂದು ಹೇಳಿದರು. ಮಾನ್ಯ ಬಂಗಾರಪ್ಪನವರು ಬರೆದ ಪತ್ರವನ್ನು ನಾನು ಇಲ್ಲಿ ಓದಿದರೆ ಅದಕ್ಕೆ ಸರಿಯಾದಂಥ ಹಿನ್ನಲೆ ಸಿಗಬಹುದು.

"Dear Sri. VASUDEVAN, The people of Karnataka are seized of the information that thosuands of acres forest land is being allotted to several private industries for growing soft-wood trees, boorge, etc. This decision of the Government is in conformity with their policy to minimise the responsibility of the Government in supplying soft wood to serveral industries as per the commitment made already at the time of sanctioning licences. Now

the fact remains to what extent the Government has permitted the private industrialists to grow softwood trees and the total extent of plantation of softwood trees. Alongwith the above, I may also be enlightend with details of total applicants with their names and the total number of applications received by the Government from all over the State for allotment of forest land for the said purpose and action taken by the Government thereon I may be given this information on or before 18th July, 1985.''

ಇದಕ್ಕೆ ಉತ್ತರವಾಗಿ ಕಾರ್ಯದರ್ಶಿಯವರು ಒಂದು ಪತ್ರ ಬರೆದಿದ್ದರು, ಅದನ್ನು ವಿಸ್ತಾರವಾಗಿ ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೇ, ಈ ಒಂದು ಮಹತ್ವವಾದಂಥ ವಿಷಯವನ್ನು ಅವರು ಎತ್ತಿದರು. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸ್ಥಾನ ಇದೆ, ಮಾನ ಇದೆ ಮತ್ತು ಕೆಲವೊಂದ ಅನುಕೂಲತೆಗಳನ್ನು ನಾವು ಕೊಡುತ್ತೇವೆ. ಈ ಪದ್ಧತಿಯನ್ನು ಪ್ರಾರಂಭಿಸುವ ನಿರ್ಣಯವನ್ನು ಹಿಂದೆ ನಮ್ಮ ಸರ್ಕಾರ ಇದ್ದಾಗ ತೆಗೆದುಕೊಳ್ಳಲಾಯಿತು ಆಗಲೆ ಇದಕ್ಕೆ ಒಂದು ಮಸೂದೆ ಕೂಡ ಸಿದ್ಧವಾಯಿತು ಈ ಮಸೂದೆಪಾಸ್ ಆದದ್ದು, ನನ್ನ ನೆನಪಿನ ಆಧಾರದ ಮೇಲೆ ಹೇಳುವುದಾದರೆ, ೧೯೭೬ ರಲ್ಲಿ ಇರಬಹುದು ಅಥವಾ ೧೮೭೫ ರಲ್ಲಿ ಇರಬಹುದು, ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಯಾವುದೇ ರೀತಿಯ ಅನುಕೂಲತೆ, ಕಛೇರಿಯಾಗಲಿ, ಕಾರಾಗಲೀ, ಸಿಬ್ಬಂದಿವರ್ಗ ಯಾವುದೂ ಇರಲಿಲ್ಲ. ಇಂದಿನ ಮಾನ್ಯ ವಿರೋಧಿ ಪಕ್ಷದ ನಾಯಕರು ಯಾವುದೇ ಸಿಬ್ಬಂದಿ ಇಲ್ಲದೇ, ಕಾರೂ ಇಲ್ಲದೇ ಕೆಲಸ ಮಾಡಲಿಕ್ಕೆ ತಯಾರಿದ್ದೇನೆ ಎಂದು ಹೇಳಿದರು. ಈ ಶಕ್ತಿ ಅವರಲ್ಲಿ ಇರಬಹುದು, ಸಂತೋಷ. ಆದರೆ ಇದು ಒಂದು ಪರಂಪರೆ ಮತ್ತು ಸಿದ್ಧಾಂತ ಎರಡಕ್ಕೂ ಸಂಬಂಧಪಟ್ಟ ವಿಚಾರ ಆಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವರು ಕೇಳಿದ ಎಲ್ಲಾ ವಿವರಗಳನ್ನು, ಮಾಹಿತಿಗಳನ್ನು, ಕೊಡಬೇಕೆಂದು ನಿರ್ಣಯವನ್ನು ನಾವು ತೆಗೆದುಕೊಂಡಿದ್ದರೆ, ಆಗ ಕೊಡಬೇಕಾಗುತಿತ್ತು.ಆಗಯಾವುದೇ ಅಧಿಕಾರಿ ಕೊಡಲಿಕ್ಕೆ ಬರುವುದಿಲ್ಲವೆಂದು ಹೇಳಿದರೆ, ಅವರು ಶಿಕ್ಷೆಗೆ ಅರ್ಹರಾಗುತ್ತಾರೆ, ಆದರೆ ಅಧಿಕಾರಿಗಳಾಗಲೀ, ಕಾರ್ಯದರ್ಶಿಗಳಾಗಲೀ, ಮಂತ್ರಿಗಳಾಗಲೀ. Oath of secrecy ಎಂದು ಏನು ಹೇಳುತ್ತೇವೆ, ಸರ್ಕಾರದ ಕೆಲಸ ಸಾರ್ವಜನಿಕರ ಕೆಲಸ ನಿಜ, ಆದರೂ ಕೆಲವೊಂದು ವಿಚಾರ, ಗೋಪ್ಯ ಎಂದು ನಾನು ಹೇಳುವುದಿಲ್ಲ, ಆದರೆ ಕ್ಯಾಬಿನೆಟ್‌ನ ಕೆಲವು ವಿಚಾರಗಳನ್ನು ಹೊರತರಕೂಡದು ಎಂದು ಇದೆ. ಪ್ರಜಾಪ್ರಭುತ್ವ ಪದ್ಧತಿಯನ್ನು ಒಪ್ಪಿಕೊಂಡಿರುವ ಕಡೆಗಳಲ್ಲಿ ಈ ಒಂದು ಪರಂಪರೆ, ಪದ್ಧತಿ ಜಾರಿಯಲ್ಲಿದೆ.

೧–೩೦ ಪಿ. ಎಂ.

ಇದುವರೆಗೂ ಸಹ ನಾವು ಯಾವ ಯಾವ ಮಾಹಿತಿಗಳನ್ನು ವಿರೋಧಪಕ್ಷದ ನಾಯಕರಿಗೆ ಕೊಡಬೇಕು ಮತ್ತು ಯಾವ ಯಾವ ಮಾಹಿತಿಗಳನ್ನು ಕೊಡಬಾರದು ಎಂಬ ಬಗ್ಗೆ ಯಾವುದೇ ಕಾಯಿದೆಯನ್ನು ಮಾಡಿಲ್ಲ. ಈಗ ವಿರೋಧಪಕ್ಷದ ನಾಯಕರಿಗೆ ಕೆಲವೊಂದು ಪ್ರಿವಿಲೇಜ್‌ಗಳನ್ನು ಮತ್ತು ಕೆಲವೊಂದು ಅನುಕೂಲಗಳನ್ನು ಒದಗಿಸಿಕೊಡುವುದಕ್ಕೆ ಸಂಬಂಧಪಟ್ಟಂತೆ ಏನು ಕಾಯಿದೆ ಮಾಡಲಾಗಿದೆ, ಅದರಲ್ಲಿ ಈ ತರಹದ ಅಧಿಕಾರವನ್ನು ಅವರಿಗೆ ಕೊಟ್ಟಿಲ್ಲ. ಈ ಹಿಂದೆ ಇಲ್ಲಿ ಒಂದು ಪ್ರಸಂಗ ಬಂತು. ಆಗ ನಾನು ಅದನ್ನು ಇಲ್ಲಿ ಪ್ರಸ್ತಾಪ ಮಾಡಿದೆ. ಆಗ ವಿರೋಧಪಕ್ಷದ ನಾಯಕರು ನಮಗೆ ಏನೂ ಅಧಿಕಾರವಿಲ್ಲವೋ, ನಾವು ಇಲ್ಲಿಗೆ ಸುಮ್ಮನೆ ಕೇಳುವುದಕ್ಕೆ ಬಂದಿದ್ದೇವೋ ಎಂದು ಕೇಳಿದರು ? ಆ ಒಂದು ಪ್ರಸಂಗ ಯಾವುದು ಎಂದರೆ, ಅಬಕಾರಿ ಇಲಾಖೆಯ ಮುಖ್ಯಾಧಿಕಾರಿ ಅವರಿಗೆ ಇವರು ಫೋನ್ ಮಾಡಿ, ತಮ್ಮ ಮನೆಗೆ ಬರಬೇಕು ಎಂದು ಇವರು ಕೇಳಿದ್ದುದು.

ಶ್ರೀ ಎಸ್. ಬಂಗಾರಪ್ಪ.—ಅದು ಹಳೆಯ ವಿಚಾರ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಹೊಸ ವಿಚಾರ ತೆಗೆದಿದ್ದೀರಿ. ಇದು ಸಿದ್ಧಾಂತಕ್ಕೆ ಸಂಬಂಧಪಟ್ಟಿದ್ದುದು. ಯಾವ ಅಧಿಕಾರಿಗಳನ್ನೇ ಆಗಲಿ, ವಿರೋಧಪಕ್ಷದ ನಾಯಕರು ತಮಗೆ ಬೇಕಾದಾಗ ತಮ್ಮ ಮನೆಗಾಗಲೀ ಇಲ್ಲವೇ ತಮ್ಮ ಕಛೇರಿಗಾಗಲೀ ಕರೆಯಿಸಿಕೊಂಡು ಅವರಿಂದ ತಮಗೆ ಬೇಕಾದ ಮಾಹಿತಿಗಳನ್ನು ಪಡೆದುಕೊಳ್ಳಬಹುದು ಎಂಬ ಬಗ್ಗೆ ಈ ಮನೆಯ ಸದಸ್ಯರು ಅಭಿಪ್ರಾಯ ಪಡುವುದಾದರೆ, ಅದರಂತೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಆ ಪ್ರಯತ್ನವನ್ನು ಯಾರೂ ಮಾಡಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈ ಮನೆಯ ಸದಸ್ಯರುಗಳಿಗೆ ಕೆಲವೊಂದು ಮಾಹಿತಿಗಳನ್ನು ಸರ್ಕಾರದಿಂದ ಪಡೆದುಕೊಳ್ಳಲು ಅಧಿಕಾರವಿದೆ. ಅವರಿಗೆ ಬೇಕಾದ ಮಾಹಿತಿಗಳನ್ನು ಇಲ್ಲಿ ಪ್ರಶ್ನೆಗಳನ್ನು ಕೇಳುವುದರ ಮೂಲಕ, ಅಲ್ಪಕಾಲಾವಧಿ ಪ್ರಶ್ನೆಯನ್ನು ಹಾಕುವುದರ ಮೂಲಕ, ಗಮನಸೆಳೆಯುವ ಸೂಚನೆಯ ಮೂಲಕ, ನಿರ್ಣಯವನ್ನು ಇಲ್ಲಿ ಮಂಡಿಸುವುದರ ಮೂಲಕ, ಕೆಲವೊಂದು ವರದಿಗಳ ಬಗ್ಗೆ ಇಲ್ಲಿ ಚರ್ಚೆ ಮಾಡುವ ಸಂದರ್ಭಗಳಲ್ಲಿ ಹಾಗೂ ಬಡ್ಜೆಟ್ ಮೇಲೆ ಇಲ್ಲಿ ಚರ್ಚೆ ಮಾಡುವಂತಹ ಸಂದರ್ಭಗಳಲ್ಲಿ ಪಡೆದುಕೊಳ್ಳಲು ಅಧಿಕಾರವಿದೆ. ಅವರು ಕೇಳುವಂತಹ ಮಾಹಿತಿಗಳನ್ನು ಒದಗಿಸಿ ಕೊಡುವುದು ನಮ್ಮ ಕರ್ತವ್ಯವಾಗಿದೆ. ಯಾವುದೇ ಮಾಹಿತಿ ಗೋಪ್ಯವಿಲ್ಲದಿದ್ದರೆ, ಅದನ್ನು ಮಾನ್ಯ ಸದಸ್ಯರಿಗೆ ಒದಗಿಸಬೇಕಾಗುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವೊಂದು ಮಾಹಿತಿಗಳನ್ನು ಇಲ್ಲಿ ಸಂಬಂಧಪಟ್ಟ ಮಂತ್ರಿಗಳು ಮಾನ್ಯ ಸದಸ್ಯರಿಗೆ ಒದಗಿಸಬೇಕಾಗುತ್ತದೆ. ಅದೇಪ್ರಕಾರ ಈ ಶಾಸನ ಸಭೆಗೆ ಸಂಬಂಧಪಟ್ಟ ಪಿ.ಎ.ಸಿ., ಪಿ.ಯು.ಸಿ., ಎಸ್.ಸಿ. ಅಂಡ್ ಎಸ್.ಟಿ. ಕಮಿಟಿಗಳ ಅಧ್ಯಕ್ಷರುಗಳು ಹಾಗೂ ಹಿಂದುಳಿವ ವರ್ಗಗಳ ಕಮಿಟಿಯ ಅಧ್ಯಕ್ಷರು ಆಯಾ ಸಂದರ್ಭಕ್ಕೆ ಅನುಸಾರವಾಗಿ ಕೆಲವೊಂದು ಮಾಹಿತಿಗಳನ್ನು ಸರ್ಕಾರದಿಂದ ಕೇಳಿದಾಗ ನಾವು ಕೊಡಲೇಬೇಕಾಗುತ್ತದೆ. ಇಲ್ಲದಿದ್ದರೆ ಈ ಸಭೆಗೆ ಹಕ್ಕುಚ್ಯುತಿ ಮಾಡಿದಂತೆ ಆಗುತ್ತದೆ. ವಿರೋಧ ಪಕ್ಷದ ನಾಯಕರಾದ ಕೂಡಲೇ ಅವರಿಗೆ ಮಂತ್ರಿಗಳಿಗೆ ಇರುವಷ್ಟೇ ಸ್ಥಾನಮಾನಗಳು ಲಭ್ಯವಾಗುತ್ತವೆ. ಈಗ ವಿರೋಧ ಪಕ್ಷದ ನಾಯಕರಿಗೆ ಕೆಲವೊಂದು ಅನುಕೂಲಗಳನ್ನು ಏತಕ್ಕೆ ಕೊಡಲಾಗಿದೆ ಎಂದರೆ, ಅವರು ತಮ್ಮ ಪಕ್ಷದ ಪರವಾಗಿ ಜನರ ಕುಂದುಕೊರತೆಗಳನ್ನು ಕೇಳಬೇಕಾಗುತ್ತದೆ. ಜನರ ಬಳಿ ಹೋಗಿ ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಅದಕ್ಕಾಗಿಯೇ ಅವರಿಗೆ ಕಾರು ಮತ್ತು ಟೆಲಿಫೋನ್ ಹಾಗೂ ಇನ್ನಿತರ ಅನುಕೂಲತೆಗಳನ್ನು ಒದಗಿಸಿಕೊಟ್ಟಿರುವುದು. ಆದರೆ ಇವರು ವಿರೋಧಪಕ್ಷದ ನಾಯಕರಾದ ಮೇಲೆ ಕಳದ ಎರಡೂವರೆ ಮೂರು ತಿಂಗಳಲ್ಲಿ ನನಗೆ ಬಂದಿರುವ ವರದಿಯ ಪ್ರಕಾರ ಸುಮಾರು ೪೦ ಕೇಸ್‌ಗಳಲ್ಲಿ ಇವರು ಅಧಿಕಾರಿಗಳಿಗೆ ಫೋನ್ ಮಾಡಿ ತಮ್ಮ ಸಂಬಂಧಿಕರಿಗೆ ಮತ್ತು ತಮಗೆ ಬೇಕಾದವರಿಗೆ ಕೆಲಸ ಕೊಡಬೇಕು, ಇಂಟರ್‌ವ್ಯೂ ಮಾಡುವ ಸಂದರ್ಭಗಳಲ್ಲಿ ತಮ್ಮ ಕಡೆಯವರನ್ನೇ ಆರಿಸಬೇಕು ಹಾಗೂ ಇಂತಹವರನ್ನು ಇಂತಹ ಕಡೆಯಿಂದ ಮತ್ತೊಂದು ಕಡೆಗೆ ವರ್ಗ ಮಾಡಬೇಕೆಂದು ಎಂದುಕೇಳಿಕೊಂಡಿದ್ದಾರೆ. ಇವರು ಈರೀತಿ ಕೇಳಿಕೊಂಡಿರುವಂತಹ ಅಧಿಕಾರಿಗಳು ಎಂದರೆ, ಅವರು ಶಿವಮೊಗ್ಗದ ಡಿ.ಸಿ. ಆಗಿರಬಹುದು, ಬೇರೆಬೇರೆ ಇಲಾಖೆಯ ಹಿರಿಯ ಅಧಿಕಾರಿಗಳು ಆಗಿರಬಹುದು, ಪಿ.ಎಸ್.ಸಿ. ಸದಸ್ಯರು ಇರಬಹುದು. ಸಂದರ್ಭ ಬಂದಾಗ ವಿವರಗಳನ್ನು ಕೊಡುತ್ತೇನೆ. ವಿರೋಧಪಕ್ಷದ ನಾಯಕರು ಈ ರೀತಿಯಿಂದ ಕೆಲಸ ಮಾಡುವುದಾದರೆ, ಅವರು ನಮಗೆ ಇಲ್ಲಿ ಬೇರೆಯವರ ಮೇಲೆ ಪ್ರಭಾವ ಬೀರುತ್ತೀರಿ, ನೀವು ಸ್ವಜನ ಪಕ್ಷಪಾತ ಮಾಡುತ್ತಿದ್ದೀರಿ ಎಂದು ಏತಕ್ಕೆ ಹೇಳಬೇಕು ? ಇಂಥಾದ್ದನ್ನೆಲ್ಲಾ ಇಲ್ಲಿ ಹೇಳಲು ಅವರಿಗೆ ಅಧಿಕಾರ ಇಲ್ಲ ಎಂದು ನಾನು ಹೇಳುತ್ತೇನೆ. ಇವರು ಪ್ರಭಾವ ಬೀರುವ ವಿಚಾರದಲ್ಲಿ ನಾನು ಸ್ವಂತವಾಗಿ ಇಲ್ಲಿ ಏನನ್ನೂ ಟೀಕೆ ಮಾಡುವುದಿಲ್ಲ ಆದರೆ ಹೈಕೋರ್ಟಿನ ಜಡ್ಜ್‌ಮೆಂಟ್‌ನ್ನು ಇಲ್ಲಿ ಓದಿ ಹೇಳಿದರೆ ಅದು ತಮಗೆ ಗೊತ್ತಾಗುತ್ತದೆ. ಇದರಲ್ಲಿ ಏನು ಹೇಳಿದ್ದಾರೆಂದರೆ:

> "The Petitioners had earlier approached this Court in a writ petition alleging bias against Respondent-1 who was then a Member of the land tribunal. In that writ petition they had prayed writ in the nature of prohibition restraining Respondent-1 from participating in the proceedings on the applications filed by Respondents 4 to 7 before the land tribunal on the ground that the Respondent-1 was biased against them. On the averments made in that writ petition this Court made an interim order staying further procedings before the Tribunal. During the pendency of that writ petition it transpires that the Respondent-1 ceased to be a member of the tribunal he having been inducted into the

State Cabinet as the Minister of State. Taking advantage of his position as the Minister or State Respondent 4 to 7 filed representations before him for the police protection on the ground that the petitioners were interferring with their possession of the lands in dispute. Records of the proceedings of Respondents 2 and 3 pertaining to the impugned order have been secured by this Court and on perusal of the same there could be no doubt that the Respondent 4 to 7 had approached the Respondent-1, who was at that time a Minister in the State Cabinet, for police protection. On their representation the Respondent No. 1 had made orders as follows. "Give full protection to this tenant and report". It is rather surprising that the Respondent-1 who had ceased to be a member of the land tribunal took law into his hands and made the impugned order affording police protection to Respondent 4 to 7 when their claim to occupancy right was pending consideration before the land tribunal validly consituted under the Karnataka Land Reforms Act. There is no need to comment on the illegal actions of the Respondent-1. Since this Court had made the interim order staying the operation of the order made by the Respondent-1, it is equally surprising that the Respondent 2 and 3 should have tried to implement the illegal order of the Respondent-1. Hence, this writ petition is allowed and the impugned order is quashed. Respondents 1 to 3 did not care to file their written statement controverting the allegation made against them. Accordingly Respondent 1 to 3 jointly and severally are liable to pay a sum of Rs. 300/- as costs to the petitioners within four weeks from today".

ಇದರಲ್ಲಿ ರೆಸ್‌ಪಾಂಡೆಟ್ ನಂಬರ್ ಒನ್ ಯಾರು ಎಂದರೆ, ಈಗ ವಿರೋಧಪಕ್ಷದ ನಾಯಕರಾಗಿ ರುವಂತಹ ಮಾನ್ಯ ಬಂಗಾರಪ್ಪನವರ ....

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾ ಲೋಪವಿದೆ. ಏನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಹೈಕೋರ್ಟಿನ ಮುಂದಿರತಕ್ಕಂಥ ವಿಚಾರಗಳನ್ನು ಇಲ್ಲಿ ಹಲವಾರು ಸಲ.........

ಶ್ರೀ ಸಿ. ಬೈರೇಗೌಡ.—ಮಾನ್ಯ ಸದಸ್ಯರು ಯಾವ ನಿಯಮದ ಪ್ರಕಾರ ಕ್ರಿಯಾಲೋಪವನ್ನು ಎತ್ತಿದ್ದಾರೆ ?

ಅಧ್ಯಕ್ಷರು.—ಮಾನ್ಯ ನಾಯಕ್ ಅವರೇ, ತಾವು ಇನ್ನೂ ಹೊಸಬರಿದ್ದೀರಿ, ತಮಗೆ ಕೊನೆ ಯಲ್ಲಿ ಕ್ಲಾರಿಫಿಕೇಷನ್ ಕೇಳಲು ಅವಕಾಶ ಕೊಡುತ್ತೇನೆ. ಈಗ ತಾವು ಎಲ್ಲಾ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ......

ಅಧ್ಯಕ್ಷರು.—ಈಗ ಬೇರೆ ಯಾರೂ ಮಾತನಾಡಬಾರದು. ಏನಾದರೂ ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಕ್ಲಾರಿಫಿಕೇಷನ್ ಕೇಳುವುದಕ್ಕೆ ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಓದಿದ್ದು, ಹೈಕೋರ್ಟು ನೀಡಿರುವ ಜಡ್ಜ್‌ಮೆಂಟ್ ನಕಲನ್ನು ಹೈಕೋರ್ಟಿನ ಎದುರುಗಡೆ ಇರುವ ವಿಷಯವನ್ನು ನಾನು ಪ್ರಸ್ತಾಪ ಮಾಡಿಲ್ಲ. ಹೈಕೋರ್ಟಿನ ಮುಂದೆ ಇರುವ ವಿಷಯವನ್ನು ಪ್ರಸ್ತಾಪ ಮಾಡಬಾರದೆಂದು ನನಗೂ ಗೊತ್ತು.

ಶ್ರೀ ಆರ್. ಎನ್. ನಾಯಕ್.—ಒಪ್ಪಿಕೊಂಡರೆ, ದಯವಿಟ್ಟು ಆ ವಿಷಯವನ್ನು ಬಿಟ್ಟು ಬಿಡಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನನಗೂ ಗೊತ್ತಾಗಿದೆ. ಯಾರು ಹರಿಜನರಿಂದ ಅಫಿಡವಿಟ್‌ನ್ನು ಹಾಕಿಸಿ ಮತ್ತೆ ಅದನ್ನು ವಾಪಸ್ ತೆಗೆದುಕೊಂಡಿದ್ದುದು. ಇದಕ್ಕೆ ಎಷ್ಟು ಹಣ ಕೊಟ್ಟರೂ ಎಂಬುದೂ ನನಗೆ ಗೊತ್ತಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಇದು ಯಾವ ವಿಷಯ ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನಿಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ನಾಯಕ್‌ರವರಿಗೆ ಇಷ್ಟು ಹೇಳುತ್ತೇನೆ ತಾವು ಇನ್ನೂ ತರುಣರು. ಸದನಕ್ಕೆ ಬಂದು ಕೇವಲ ಎರಡೂವರೆ ವರ್ಷವಾಗಿದೆ. ತಾವು ಇನ್ನೂ ಬಹಳ ದೂರ ಹೋಗಬೇಕಾಗಿದೆ. ಮಾನ್ಯ ಬಂಗಾರಪ್ಪನವರು ತಮ್ಮನ್ನು ಮಂತ್ರಿಯೂ ಆಗಬಹುದು ಮುಖ್ಯ ಮಂತ್ರಿಯೂ ಆಗಬಹುದೆಂದು ಹೇಳಿದ್ದಾರೆ. ನೀವು ನಮ್ಮ ಜಿಲ್ಲೆಯವರೇ, ನಾನು ಹೋದ ಮೇಲೆ ನೀವೇ ಮುಖ್ಯಮಂತ್ರಿಗಳಾಗುತ್ತೀರಿ ಆದರೆ ನನಗೆ ಒಂದು ಅನುಮಾನ. ಮಾನ್ಯ ಬಂಗಾರಪ್ಪನವರು ಇರುವವರೆಗೂ ನಿಮಗೆ ಮುಖ್ಯ ಮಂತ್ರಿಯ ಚಾನ್ಸ್ ಸಿಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮಂತಹವರು ಇರುವವರೆಗೂ ಬೇರೆಯವರಿಗೂ ಚಾನ್ಸ್ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕೊನೆಯಲ್ಲಿ ಇಷ್ಟೇ ಹೇಳುತ್ತೇನೆ. ಬಜೆಟ್ ಸೆಷನ್‌ನಲ್ಲಿ ನಾವು ಉನ್ನತ ಮಟ್ಟದಲ್ಲಿ, ನೀತಿ ವಿಚಾರ, ಕಾರ್ಯಕ್ರಮದ ವಿಚಾರ ಚರ್ಚೆ ಮಾಡಬೇಕಾಗುತ್ತದೆ. ಇದು ಸ್ಕ್ಯಾಂಡಲ್ ವಿಚಾರ. ಇದನ್ನು ನಾನು ಹಿಂದೆಯೇ ಹೇಳಿದ್ದೇನೆ. ಇವತ್ತೂ ಹೇಳುತ್ತೇನೆ ಈ ಸರ್ಕಾರದ ಯಾವುದೇ ಒಂದು ವ್ಯವಹಾರದಲ್ಲಿ ಮುಚ್ಚಿಡತಕ್ಕಂಥಾದ್ದು ಏನೂ ಇಲ್ಲ. ಹೋದ ಸಲ, ಹಿಂದಿನ ವರ್ಷದಲ್ಲಿ ಮಾನ್ಯ ಬಂಗಾರಪ್ಪನವರು ರೆಕ್ಟಿಫೈಡ್ ವಿಚಾರವನ್ನು ಎತ್ತಿದ್ದರು. ನಾನು ಆಗಲೇ ಹೇಳಿದ್ದೆ ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುತ್ತೇನೆಂದು, ಅದನ್ನೂ ಮಾಡಿದ್ದೇನೆ. ಇದು ಪ್ರೂವ್ ಆಗಲಿಲ್ಲ ಎಂದರೆ ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿದ್ದರು.........

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರು ನಾಯಕರವರ ಬಗ್ಗೆ ಹೇಳುವಾಗ ಅವರು ಕಿವಿಯನ್ನು ಇಷ್ಟು ದೊಡ್ಡದು ಮಾಡಿಕೊಂಡು ಕೇಳುತ್ತಿರುತ್ತಾರೆ ಈಗ ಮಾತ್ರ ಗಲಾಟೆ ಮಾಡುತ್ತೀರಿ. ಯಾವಾಗಲೂ ಅಷ್ಟೆ ಒಂದು ಸತ್ಯವನ್ನು ತಿಳಿಯಬೇಕಾದರೆ ಎರಡೂ ಕಡೆಯವರಿಂದ ವಿಷಯಗಳನ್ನು ನಾವು ತಿಳಿದುಕೊಳ್ಳಬೇಕು. ನಾವೇನಾದರೂ ತಪ್ಪು ಮಾಡಿದರೆ ಈ ಸ್ಥಾನದಲ್ಲಿ ಇರು

ವುದಕ್ಕೆ ನಾನು ಅಯೋಗ್ಯ. ಪುನಃ ಪುನಃ ಇವರು ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಫೇವರಿಟಿಸಂ ಮತ್ತೊಂದು ಮಗದೊಂದು ಹೀಗೆ ನಾನ ತರಹವಾಗಿ ಹೇಳುತ್ತಿದ್ದಾರೆ. ನಾನು ಜನತೆ ಕೊಡುವ ತೀರ್ಮಾನವನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಆದರೆ ನೀವು ಅದಕ್ಕೆ ತಯಾರಿಲ್ಲ. ಅದಕ್ಕೆ ನಾವು ಏನು ಮಾಡೋಣ ?

ಶ್ರೀ ಆರ್.ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್ ಇದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಬಹಳ ಸಿಟ್ಟು ಬೇಡ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಇದು ಗೂಂಡಾಗಿರಿ ತರಹ ಆಗಿ ಹೋಯಿತು.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಯಾರೂ ಗಲಾಟೆ ಮಾಡ ಬೇಡಿ.

ಶ್ರೀ ಜಿ. ನಾರಾಯಣಕುಮಾರ್.—ಇದು ರೌಡೀಸಮ್ ತರಹ ಆಗಿಬಿಟ್ಟಿದೆ.

ಅಧ್ಯಕ್ಷರು.—ಮಾನ್ಯ ಸಭಾ ನಾಯಕರೇ ತಮ್ಮದು ರಿಪ್ಲೈ ಮುಗಿದು ಹೋಯಿತೇ ? ಈಗ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಸಭಾ ನಾಯಕರು, ನಾವು ನಿರೀಕ್ಷೆ ಮಾಡಿದಷ್ಟು ಸರಿಯಾಗಿ ಉತ್ತರವನ್ನು ಕೊಡಲಿಲ್ಲ.

ಶ್ರೀ ರಾಮಕೃಷ್ಣಹೆಗಡೆ.—ಅದಕ್ಕಾಗಿ ನಾನು ಕಡಿಮೆ ಕೇಳಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಉತ್ತರವೇ ಇಲ್ಲದೆ ಕ್ಲಾರಿಫಿಕೇಷನ್ ಹೇಗೆ ಕೇಳುವುದು ?

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ನಾನು ಕ್ಲಾರಿಫಿಕೇಷನ್ ಕೇಳುವುದು ಇದೆ, ಮಾನ್ಯ ಸಭಾಧ್ಯಕ್ಷರೇ, ನಿರ್ಲಾನ್ ಕಂಪನಿ ವಿಚಾರದಲ್ಲಿ ನಾವುಯಾವುದೇ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಹಾಗೂ ಪ್ರಮೋಷನ್‌ಗಳ ವಿಚಾರದಲ್ಲಿ ಅಥವಾ ಯಾವುದೇ ವಿಚಾರದಲ್ಲಿ ನಾವು ಏನು ಅಕ್ರಮಗಳನ್ನು ಮಾಡಿಲ್ಲವೆಂದು ಅವರು ಹೇಳಿದ್ದಾರೆ. ನಿರ್ಲಾನ್ ಕಂಪನಿಗೆ ಕೇಂದ್ರ ಸರ್ಕಾರದವರು ಲೈಸನ್ಸ್ ಕೊಟ್ಟು ಕರ್ನಾಟಕ ರಾಜ್ಯದಲ್ಲಿ ಪ್ರಾರಂಭ ಮಾಡಿ ಎಂದು ಹೇಳಿದರೂ ಅದನ್ನು ಇಲ್ಲಿ ಏಕೆ ಪ್ರಾರಂಭ ಮಾಡಲಿಲ್ಲ. ಇನ್ನು ಲಂಚದ ಬಗ್ಗೆ ಹೇಳಬೇಕಾದರೆ, ಯಾರಾದರೂ ಲಂಚ ತೆಗೆದುಕೊಂಡಿರುವುದನ್ನು ತಾವು ಕಂಡಿದ್ದರೆ ಅಂತಹವರ ವಿವರಗಳನು ನನಗೆ ಕೊಡಿ, ಅವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಸರ್ಕಾರವೇ ಕಾನೂನು ಮಾಡಿ ಇಲಾಖೆ ಅಧಿಕಾರಿಗಳನ್ನು ಇಟ್ಟು, ಲಂಚವನ್ನು ತೆಗೆದುಕೊಳ್ಳುವವರನ್ನು ಹಿಡಿಯತಕ್ಕ ವ್ಯವಸ್ಥೆ ಇಟ್ಟಿರಬೇಕಾದರೆ ಅವರು ಏಕೆ ಈ ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ಇವರ ವರದಿಯಲ್ಲಿ ಒಂದು ಚಕಾರವೂ ಇಲ್ಲ. ಮಂಡ್ಯದಲ್ಲಿ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಒಬ್ಬ ವೆಂಕಟೇಶ್ ಎಂಬುವವರು, ಇವರು ೧೦೦೦೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಸಿಕ್ಕಿಹಾಕಿಕೊಂಡಿದ್ದರು. ಆದರೆ ಇವರನ್ನು ಸಸ್‌ಪೆಂಡ್ ಮಾಡಿ ಎನ್‌ಕ್ವಯಿರಿ ಮಾಡಲೇ ಇಲ್ಲ. ಅದರ ಬಗ್ಗೆ ಸಂಬಂಧಪಟ್ಟ ಎಫ್.ಐ.ಆರ್ ಕಾಪಿ ನನ್ನ ಹತ್ತಿರ ಇದೆ. ಅವರ ಮೇಲೆ ಕೋರ್ಟಿನಲ್ಲಿ ಚಾರ್ಜ್ ಶೀಟ್ ಹಾಕಿದ್ದಾರೋ ಇಲ್ಲವೋ ಗೊತ್ತಿಲ್ಲ ಇದು ನಡೆದು ಮೂರು ತಿಂಗಳಾಗಿದೆ. ಇವರು ಯಾರೋ ಒಬ್ಬರಿಗೆ ಸಂಬಂಧಿಕರಾಗಿದ್ದಾರೆಂದು ಇವರ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಸ್ವಾಮಿರಾಯರು ಸಹ ಇಳಿಳಿಳ ನಿಯಮದ ಮೇಲೆ ಸಭೆಯ ಗಮನವನ್ನು ಸೆಳೆದಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೇಳಿದು ನಿಜವಿದ್ದಲ್ಲಿ, ಅವರನ್ನು ಕೂಡಲೇ ಸಸ್‌ಪೆಂಡ್ ಮಾಡುತ್ತೇನೆ. ಈ ಅಧಿಕಾರಿಯು ಸೇವೆಯಲ್ಲಿ ಮುಂದುವರಿಯಲಿಕ್ಕೆ ಸಾಧ್ಯವಿಲ್ಲ ಯಾರೇ ಆಗಿರಲಿ ಯಾರ ಸಂಬಂಧವೇ ಆಗಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನೊಮ್ಮೆ ಹೇಳುತ್ತೇನೆ ಅವರು ಹೇಳಿದ್ದ ಮಾತು ನಿಜ ಆದರೆ ನಾಳೆಯೇ ಅವರನ್ನು ಸಸ್ಪೆಂಡ್ ಮಾಡುತ್ತೇನೆ. ಆ ಅಧಿಕಾರಿ ಸರಕಾರಿ ಸೇವೆಯಲ್ಲಿ ಮುಂದುವರಿಯಲಿಕ್ಕೆ ಅರ್ಹನಲ್ಲ. ಇದರಲ್ಲಿ ಯಾರ ಸಂಬಂಧದ ಪ್ರಶ್ನೆಯೂ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆ ಮೇಲೆ ೪೦ ಕೇಸ್‌ಗಳಲ್ಲಿ, ನಾನು ಟ್ರಾನ್ಸ್‌ಫರ್ ಬಗ್ಗೆ, ಅಥವಾ ಬೇರೆ ಯಾವುದರ ಬಗ್ಗೆಯೋ ಹೇಳಿದ್ದಾಗಿದೆ. ಸಂಬಂಧೀಕರ ಮಾತನ್ನು ಹೇಳಿದ್ದೀರಿ. ಕ್ಷಮಿಸಬೇಕು, ನಾನು ಆ ರೀತಿ ಡಿಫರ್ ಆಗತಕ್ಕಂತಹ ಸ್ವಭಾವವನ್ನು ಇಟ್ಟುಕೊಂಡಿಲ್ಲ. ನಿಜ, ಇಂಟರ್‌ವ್ಯೂ ಬಂದರೆ, ಹುಡುಗರು ನಮ್ಮ ಹತ್ತಿರ ನಿಮ್ಮ ಹತ್ತಿರ ಬಂದೇ ಬರುತ್ತಾರೆ. ಏನಾದರೂ ಕೆಲಸ ಇಟ್ಟುಕೊಂಡು ತುಂಬಾ ಜನ ಬರುತ್ತಾರೆ. ಅನೇಕ ಜನ ಆ ಸಮಿತಿಯಲ್ಲಿರತಕ್ಕಂತಹ ಸದಸ್ಯರು ಹೇಳಿರತಕ್ಕಂತಹ ಕೆಲಸಗಳನ್ನು ನಾನು ಮಾಡಿದ್ದೇನೆ, there is nothing wrong in it ಬೇರೆಯವರೂ ಕೂಡಾ ಆ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಹೆಗಡೆಯವರು ಕೂಡಾ ಆ ಸ್ಥಾನದಲ್ಲಿ ಇದ್ದಾಗ ಹಿಂದೆ, ಅವರೂ ಕೂಡಾ ಮಾಡಿದ್ದರು. ನಾವೂ ಕೂಡಾ ಇರತಕ್ಕಂತಹ ಸಂದರ್ಭದಲ್ಲಿ ಮಾಡಿದ್ದೇವೆ, ಮಾಡಬೇಕಾಗುತ್ತದೆ.

ಅನಂತರ ಲ್ಯಾಂಡ್ ಟ್ರಿಬ್ಯೂನಲ್ ವಿಚಾರದಲ್ಲಿ ಹೇಳಿದರು. ನಮ್ಮ ರಾಜಕೀಯ ವೃತ್ತಾಂತವನ್ನು ಅವರು ಅಭ್ಯಾಸ ಮಾಡದಿದ್ದರೆ. ಅವರು ಈಗ ತಿಳಿದುಕೊಳ್ಳುವುದು ಒಳ್ಳೆಯದು. ತೀರ್ಥಹಳ್ಳಿ, ಸೊರಬ, ಸಾಗರ, ಶಿವಮೊಗ್ಗ, ಹೊಸನಗರ ಇವುಗಳು ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳು, ಹಾಗೆಯೇ ಕಾರವಾರ ಜಿಲ್ಲೆಯ ಎಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರ ಜಿಲ್ಲೆಯ ಸಿದ್ದಾಪುರ, ಸಿರ್ಸಿ, ಈ ಕಡೆಗಳಲ್ಲಿ ಗೇಣೀದಾರರು ಮತ್ತು ಜಮೀನುದಾರರ ನಡುವೆ ಬೇಕಾದಷ್ಟು ವಾದ ವಿವಾದಗಳು ನಡೆದಿರತಕ್ಕಂತದಾದು ಇದೆ. ಎಂದರೆ ಕಾಗೋಡು ಸತ್ಯಾಗ್ರಹ ಕಾಲದಲ್ಲಿ ನಡೆದಿರತಕ್ಕಂತ ವಿಚಾರ. ನಾವು ಗೇಣಿದಾರರ ಬಗ್ಗೆ ಹೋರಾಟ ಮಾಡತಕ್ಕಂತಹವರು. ಜನ ಇದರ ಬಗ್ಗೆ ಅನುಮಾನ ಪಡಬೇಕಾಗಿಲ್ಲ. ನಿಜವಾಗಿಯೂ ಹೇಳಬೇಕೆಂದರೆ ನಾವು ಪದೇ ಪದೇ ಈ ಚುನಾವಣೆ ಗೆಲ್ಲಬೇಕೆಂದರೆ ನಮ್ಮ ಹೋರಾಟವೂ ಕೂಡಾ ಮುಖ್ಯವಾದ ಕಾರಣ ಆಗಿರಬೇಕೆಂದು ನನ್ನ ಭಾವನೆ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ನಾನು ಕೆಲಸ ಮಾಡಬೇಕಾದರೆ ಗೇಣಿದಾರರ ಪರವಾಗಿ ಜಡ್ಜಮೆಂಟ್ ಬರೆದಿರತಕ್ಕಂಥಾದ್ದು ನಿಜ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಒಂದು ನಿಮಿಷ. ಎಂ. ವಿ. ವೆಂಕಟೇಶ್ ಎಂದರೆ ಇವರೇನಾ ? ಶಿ. ಟಿ. ಓ. ಅವರು ೨೭–೭–೧೯೮೫ ರಿಂದ ಸಸ್ಪೆನ್‌ಷನ್‌ನಲ್ಲಿ ಇದ್ದಾರೆ. ಅದಕ್ಕಾಗಿ ದಯವಿಟ್ಟು ನಿಮ್ಮ ಹತ್ತಿರ ಬಂದ ಮಾಹಿತಿಯನ್ನೇ ಆಧಾರವಾಗಿಟ್ಟುಕೊಂಡು ಆರೋಪ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದರೂ ಕೂಡಾ ನಿಮ್ಮ ಹೇಳಿಕೆಯಲ್ಲಿ ಅದು ಬಂದಿರಲಿಲ್ಲ. ಅಧ್ಯಕ್ಷರೇ, ಟ್ರಿಬ್ಯೂನಲ್ ಮೆಂಬರ್ ಆದ ಮೇಲೆ ಗೇಣಿದಾರರ ಪರವಾಗಿ ಬರೆದುದು ನಿಜ. ನಾನು ಒಬ್ಬನೇ ಇರುವುದಿಲ್ಲ, ಬೇರೆ ಮಾನ್ಯ ಸದಸ್ಯರೂ ಕೂಡಾ ಟ್ರಿಬ್ಯೂನ್‌ನಲ್ಲಿ ಇರುತ್ತಾರೆ. ಅನಂತರ ಹೈಕೋರ್ಟ್ ರಿಟ್ ಪಿಟಿಷನ್‌ಗಳಲ್ಲಿ ಬೇಕಾದಷ್ಟು ಕೇಸುಗಳಲ್ಲಿ ಇದೇ ಜಮೀನುದಾರರುಗಳು, ನನ್ನನ್ನು ಪಾರ್ಟಿ ಮಾಡಿದರು. ಆ ವಿಷಯವೆಲ್ಲಾ ತಮಗೆ ಗೊತ್ತಿರತಕ್ಕಂಥಾದ್ದು ಆಗಿದೆ ಅದಕ್ಕೆ ಹೈಕೋರ್ಟ್ ನೋಟೀಸ್‌ಗಳು ಬಂದು, ನಾವು ಲಾಯರ್‌ಗಳನ್ನು ಇಟ್ಟಿದ್ದೆವು. ನಿಜ ಹೇಳಬೇಕೆಂದರೆ, ಆಗಿನ ಸರಕಾರಕ್ಕೆ ನಾವು ಬರೆದಿದ್ದೇವೆ ಇದು ನಮ್ಮ ಸ್ವಂತದ ಕೆಲಸ ಅಲ್ಲ, ಸರಕಾರದ ವತಿಯಿಂದ ನಾವು ಮೆಂಬರ್ ಆಗಿ ಕೆಲಸ ಮಾಡುತ್ತಿದ್ದೇವೆ, ಆದುದರಿಂದ ಸರಕಾರದ ವಕೀಲರು ನಮ್ಮ ಪರವಾಗಿ ಇರಬೇಕೆಂದು ಬರೆದುಕೊಂಡಿದ್ದೆವು. ಆ ವ್ಯವಸ್ಥೆಯನ್ನು ಆ ಸಂದರ್ಭದಲ್ಲಿ ಕೆಲವು ಕೇಸ್‌ಗಳಿಗೆ ಮಾಡಿದ್ದರೂ ಕೆಲವಕ್ಕೆ ಮಾಡಲಿಲ್ಲ. ಅಂತಹ ಸಂದರ್ಭಗಳಲ್ಲಿ ನಾವು ಸ್ವಂತವಾಗಿ ಅಡ್ವೋಕೇಟ್‌ಗಳನ್ನು ಇಟ್ಟುಕೊಳ್ಳಬೇಕಾಯಿತು. ಅದೆಲ್ಲಾ ಕೆಲಸಗಳನ್ನು ನಾವು ಮಾಡಿದ್ದುದ್ದು ಜನರಿಗೋಸ್ಕರವಾಗಿಯೇ ಹೊರತು ಬೇರೆ ಏನೂ ಉದ್ದೇಶಕ್ಕಾಗಿ ಅಲ್ಲ. ನಾನು ೧೯೭೭ ರಲ್ಲಿ ಹೋಂ ಡಿಪಾರ್ಟ್‌ಮೆಂಟ್‌ಗೆ ಸ್ಟೇಟ್ ಮಿನಿಸ್ಟರ್ ಆಗಿದ್ದಾಗ, ಗೇಣಿದಾರರಿಗೆ ರಕ್ಷಣೆ ಕೊಡಬೇಕೆಂದು ಬರೆದಿದ್ದೇನೆ. I must thank you for having disclosed this I passed an

order in favour of the tenants to give them protection when I was the Minister. Please refer Section 48 of the Land Reforms Act. ಕಾನೂನು ಇರುವುದನ್ನು ತಾವೂ ಕೂಡಾ ಓದಿದ್ದೀರಿ. ಅದು ಗೇಣಿದಾರರಿಗೆ ರಕ್ಷಣೆ ಕೊಡಬೇಕೆಂದು ಇದೆಯೇ ವಿನಹ, ಜಮೀನ್ದಾರರಿಗೆ ರಕ್ಷಣೆ ಕೊಡಬೇಕೆಂದು ಅಲ್ಲ. ಇಂಜೆಕ್ಷನ್ ಕೊಡಬೇಕಾದರೂ ಕೂಡಾ ಜಮೀನ್ದಾರರ ಪರವಾಗಿ ಕೊಡಬೇಕೆಂದು ಇಲ್ಲ. ಕೊಡುವ ಹಾಗೆ ಇದ್ದರೆ, ಗೇಣಿದಾರರ ಪರವಾಗಿ ಕೊಡಬೇಕೆಂದು ಇದೆ. ಆ ದೃಷ್ಟಿಯಿಂದ ಹೈಕೋರ್ಟ್‌ನಲ್ಲಿ. ಅವರ ಅಭಿಪ್ರಾಯದಲ್ಲಿ. I have taken law into my hands ಎಂದು ಹೇಳಿದರು. ತಾವು ಓದಿ ನೋಡಿ, ಗೇಣಿದಾರರಿಗೆ ರಕ್ಷಣೆ ಕೊಡಬೇಕೆಂದು ಇದೆ. ಆ ಸೆಕ್ಷನ್ ಪ್ರಕಾರ, ಸರಕಾರದ ಆಜ್ಞೆಯ ಪ್ರಕಾರ ನಾನು ಡೈರೆಕ್ಷನ್ ಕೊಟ್ಟಿದ್ದೇನೆ. ಅದು ಹೈಕೋರ್ಟ್ ಅಭಿಪ್ರಾಯ ಇದ್ದರೆ ಅದು ಅವರ ಅಭಿಪ್ರಾಯ ನಾನು ಮಂತ್ರಿ ಆಗಿದ್ದರೆ, ನನ್ನ ಕರ್ತವ್ಯವನ್ನು ಮಾಡತಕ್ಕಂಥಾದ್ದು ಇದೆ. ಸಮಾಜದಲ್ಲಿ ಯಾರು ತುಳಿತಕ್ಕೆ ಸಿಕ್ಕಿದ್ದಾರೆ, ಅಂದರೆ ಬಡವರಿಗೆ, ಗೇಣೀದಾರರಿಗೆ ನಾನು ಆರ್ಡರ್ ಮುಖಾಂತರ ರಕ್ಷಣೆ ಕೊಟ್ಟಿದ್ದೇನೆ. ಅದನ್ನು ನೀವು ಹೇಳಿದ್ದೀರಿ, ಅದಕ್ಕಾಗಿ ನಾನು ನಿಮ್ಮನ್ನು ಅಭಿನಂಧಿಸುತ್ತೇನೆ.

ಅನಂತರ ಮೊದಲು ಎತ್ತಿರತಕ್ಕಂತಹ ವಿಚಾರದ ಬಗ್ಗೆ ಒಂದು ವಿಚಾರ ಹೇಳ ಬೇಕೆಂದು ಪ್ರಯತ್ನ ಪಟ್ಟೆ. ಮಾನ್ಯ ಅಧ್ಯಕ್ಷರೇ. ನೀವು ನನಗೆ ಅವಕಾಶ ಕೊಟ್ಟಿಲ್ಲ. ಯಾವುದೇ ಒಬ್ಬ ಮಾನ್ಯ ಸದಸ್ಯರು ಏನೇ ಹೇಳಲಿ, ಅದು ರಿಕಾರ್ಡ್‌ಗೆ ಹೋಗುತ್ತದೆ. ಅನಂತರ ಅದನ್ನು ಕರೆಕ್ಷನ್‌ಗೆ ನೀವು ಕಳುಹಿಸಿಕೊಡುತ್ತೀರಿ. ನಾವು ಅದನ್ನು ನೋಡಿ, ಸರಿಯೋ, ತಪ್ಪೋ ಎಂದು ನೋಡಿಕೊಂಡು ಕಳುಹಿಸಿ ಕೊಡುತ್ತೇವೆ.

(ಗೊಂದಲ)

ನಾನು ರಾಜೀನಾಮೆ ಕೊಡುತ್ತೇನೆ ಎನ್ನತಕ್ಕಂಥಾದ್ದನ್ನು ಕರೆಕ್ಷನ್‌ಗೆ ಕಳುಹಿಸಿ ಕೊಡಿ. ಅದನ್ನು ನಾನು ಪುನಃ ನಿಮಗೆ ಕಳುಹಿಸಿಕೊಡುತ್ತೇನೆ. ನಾನು ಆ ರೀತಿಯಾಗಿ ಹೇಳಲಿಲ್ಲ.

(ಗೊಂದಲ)

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ.........

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗ ಇದನ್ನು ಮುಗಿಸಿಬಿಡೋಣ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಲ್ಯಾಂಡ್ ಟ್ರಿಬ್ಯೂನಲ್ ವಿಚಾರದಲ್ಲಿ ಅವರು ಹೇಳಿದ್ದಾರೆ. ಹೈಕೋರ್ಟಿನಲ್ಲಿ ಯಾರು ಇವರು ರೈತರು ಎಂದು ಹೇಳಿದ್ದಾರೆ. ಈಗ ಅವರು ರೈತರು ಹೌದೋ ಅಲ್ಲವೋ ಎನ್ನುವುದರ ವಿಚಾರದಲ್ಲಿ ಡಿಸ್ಪ್ಯೂಟ್ ಇತ್ತು. ಅವರು ರೈತರು ಅಲ್ಲ, ಅವರ ಹೆಸರನ್ನು ಬೇರೆ ರೀತಿಯಲ್ಲಿ ಹಾಕಿದ್ದಾರೆ ಎಂದು ಹೇಳತಕ್ಕಂತಹ ವಿಚಾರದಲ್ಲಿ ಅದು ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಇತ್ತು. ಆದುದರಿಂದ ಅವರು ನಿಜವಾದ ರೈತರು ಆಗಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನೂ ಕೂಡಾ ಮಂತ್ರಿಯಾಗಿದ್ದೆ. ತಾವೂ ಕೂಡಾ ಮಂತ್ರಿಯಾಗಿದ್ದೀರಿ. ತಮ್ಮ ಅಭಿಪ್ರಾಯದಲ್ಲಿ ಒಬ್ಬ ರೈತನಿಗೆ ರಕ್ಷಣೆ ಕೊಡಬೇಕೆಂದು ಸಂದರ್ಭ ಬಂದಾಗ ತಾವೂ ಕೊಡುತ್ತೀರಿ. ನನ್ನ ಅಭಿಪ್ರಾಯದಲ್ಲಿ ಬಡವರಿಗೆ ನಿಜವಾಗಿಯೂ ರಕ್ಷಣೆಕೊಡಬೇಕೆಂದು ಹೇಳುತ್ತಾ ಇದ್ದೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತು ಕೊಳ್ಳಿ.

ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

"೩೧–೩–೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ, ೧೫,೧೬,೧೭, ೧೮,೨೦,೩೮,೩೯,೪೦,೪೧ ಮತ್ತು ೪೨ಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೧೫—ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೯,೮೨,೮೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೧೬—ವಿಮೆ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೫೦,೧೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೧೭—ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೪,೧೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೧೮—ಸರಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಬಂಡವಾಳ ಖಾತೆಯಲ್ಲಿ ೩೨,೬೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೨೦—ವಿವಿಧ ಸಾಮಾನ್ಯ ಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿವಿಧ ಸಾಮಾನ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨.೬೦.೪೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೩೮—ಚುನಾವಣೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೯,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೩೯—ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೧-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೪.೨೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೪೦—ಸಚಿವಾಲಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೧-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೯೩,೬೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೪೧—ಜಿಲ್ಲಾಡಳಿತ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩.೭೬,೯೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೪೨—ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೧೪,೮೯,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೯೯,೫೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಬೇಡಿಕೆ ಕ್ರ. ಸಂ. ೬೧—ಕಾರ್ಮಿಕ ಮತ್ತು ಉದ್ಯೋಗ
೬೨—ಸಮಾಜ ಕಲ್ಯಾಣ
೬೩—ಹಿಂದುಳಿದ ವರ್ಗ
೬೪—ಆದಿವಾಸಿ ಪ್ರದೇಶ ಯೋಜನೆ, ಮತ್ತು ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ

ಮೇಲಿನ ಚರ್ಚೆ

ಅಧ್ಯಕ್ಷರು.— ಈಗ ಮುಂದಿನ ವಿಷಯ. ಬೇಡಿಕೆ ಕ್ರಮಾಂಕ, ೬೧, ೬೨, ೬೩, ೬೪ನ್ನು ಮಾನ್ಯ ಮಂತ್ರಿಗಳು ಮಂಡಿಸುವುದು.

ಶ್ರೀ ಡಿ. ಮಂಜುನಾಥ್.—

ಅಭಿಯಾಚನೆ ಕ್ರಮಾಂಕ ೬೧—ಕಾರ್ಮಿಕ ಮತ್ತು ಉದ್ಯೋಗ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೨,೧೬,೨೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ."

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಯಿತು.

ಮಾನ್ಯ ವಿ. ಎಲ್. ಪಾಟೀಲರವರು ತಮ್ಮ ಖಾತೆಯ ಬೇಡಿಕೆಗಳನ್ನು ಮಂಡಿಸಬೇಕು.

ಶ್ರೀ ವಿ. ಎಲ್. ಪಾಟೀಲ್.—

ಅಭಿಯಾಚನೆ ಕ್ರಮಾಂಕ ೬೨ ಮತ್ತು ೬೩—ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೯,೮೭,೪೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮೫,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.''

ಅಭಿಯಾಚನೆ ಕ್ರಮಾಂಕ ೬೩—ಆದಿವಾಸಿ ಪ್ರದೇಶ ಉಪಯೋಜನೆ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆದಿವಾಸಿ ಪ್ರದೇಶ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೦೩,೭೧,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೨೯,೩೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.''

ಅಭಿಯಾಚನೆ ಕ್ರಮಾಂಕ ೬೪—ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೩,೬೪,೧೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಯಿತು.

೨-೦೦ ಪಿ.ಎಂ.

†ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಗಳಿಗೆ ಸಂಬಂಧಪಟ್ಟಂತಹ ಬೇಡಿಕೆಗಳನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಆ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಕೆಲವಾರು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರ್ಮಿಕ ಇಲಾಖೆಯ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಎ.ಎಸ್. ಕೃಷ್ಣನ್‌ರವರು ಹೆಚ್ಚು ಮಾತನಾಡುತ್ತಾರೆ. ಆದ್ದರಿಂದ ನಾನು ಸಮಾಜ ಕಲ್ಯಾಣ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಮೇಲೆ ನನ್ನ ಹಿಂದಿನ ಅನುಭವದ ಆಧಾರದ ಮೇಲೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಾನಾದರೂ ಭಾವಿಸಿಕೊಂಡಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತರು, ಅವರು ಈ ಇಲಾಖೆಯನ್ನು ಒಳ್ಳೆಯವರ ಕೈಗೆ ಕೊಡುತ್ತಾರೆಂದು, ಆದರೆ ಈ ಒಂದು ಇಲಾಖೆಯನ್ನು ಯಾರ ಕೈಗೆ ಕೊಡಬೇಕಾಗಿತ್ತೋ ಅವರ ಕೈಗೆ ಕೊಡದೆ ಶ್ರೀಮಾನ್ ವಿ.ಎಲ್. ಪಾಟೀಲ್‌ರವರ ಕೈಗೆ ಕೊಟ್ಟಿದ್ದಾರೆ. ಅವರು ಹಿರಿಯ ಅನುಭವಸ್ಥ ಸದಸ್ಯರು ಇರಬಹುದು.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಈ ಕಡೆಗೆ ಬಂದರೆ ಅವರಿಗೆ ಈ ಖಾತೆಯನ್ನು ನಾನು ಕೊಡುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ನಾನು ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಬರುವುದಿಲ್ಲ. ನಾನು ಈ ಪಕ್ಷದಲ್ಲಿಯೇ ಇರುತ್ತೇನೆಂದು ಈ ಸದನದಲ್ಲಿ ಹೇಳುತ್ತಿದ್ದೇನೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಪಕ್ಷದಲ್ಲಿ ಅನುಭವಸ್ಥ ಸದಸ್ಯಣಿಯವರು ಇದ್ದಾರೆ, ತಾಕತ್ತು ಸಹ ಇದೆ, ಅವರಿಗೆ ಈ ಸಮಾಜ ಕಲ್ಯಾಣ ಇಲಾಖೆಯನ್ನು ಕೊಡಬಹುದಲ್ಲವೇ ? ಈ ಒಂದು ಸಮಾಜ ಕಲ್ಯಾಣ ಇಲಾಖೆ ಯಲ್ಲಿ ಹರಿಜನ ಮತ್ತು ಗಿರಿಜನರು ಹಾಗೂ ಹಿಂದುಳಿದ ವರ್ಗದವರು ಹಾಗೂ ಮಹಿಳೆಯರು ಮತ್ತು ಮಕ್ಕಳು ಇವರ ಕಲ್ಯಾಣ ಮಾಡುವಂತಹ ಭಾರವನ್ನು ಈ ಇಲಾಖೆ ಹೊತ್ತಿದೆ. ಈ ಒಂದು ಇಲಾಖೆಯನ್ನು ನಿಜವಾಗಿ ಯಾರಿಗೆ ಕಳಕಳಿ ಮತ್ತು ಆಸಕ್ತಿ ಇರುತ್ತದೆಯೋ ಅವರಿಗೆ ಕೊಡಬೇಕಾಗಿತ್ತು. ಆದರೆ ಅಂತಹವರಿಗೆ ಇವೊತ್ತು ಈ ಇಲಾಖೆಯನ್ನು ತಾವು ಕೊಟ್ಟಿಲ್ಲ. ಮಾನ್ಯ ಮಂತ್ರಿಗಳಿಗೆ ಈ ಖಾತೆಯಲ್ಲಿ ಅಷ್ಟು ಆಸಕ್ತಿ ಇಲ್ಲವೆಂದು ಸಹ ನಾನು ಕೇಳಿದ್ದೇನೆ. ಇದರ ಜೊತೆಗೆ ಒಬ್ಬ ಮಹಿಳಾ ರಾಜ್ಯ ಮಂತ್ರಿಯವರು ಕೂಡ ಈ ಇಲಾಖೆಯಲ್ಲಿ ಇದ್ದಾರೆ. ಈ ರಾಜ್ಯದ ಮಹಿಳಾಮಣಿಗಳ ಹಿತರಕ್ಷಣೆಯು ಯಾವ ರೀತಿಯಲ್ಲಿ ಆಗುತ್ತಿದೆ ಎನ್ನುವುದಕ್ಕೆ ಮಾನ್ಯ ಮಂತ್ರಿಗಳು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುವುದು ತಮಗೆಲ್ಲಾ ಗೊತ್ತಿರುವ ವಿಷಯವೇ ? ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಹೇಳಿಕೊಂಡಿದ್ದಾರೆ, ಅಧಿಕಾರಿಗಳು ನನ್ನ ಮಾತನ್ನು ಕೇಳುವುದಿಲ್ಲ. ಯಾವ ಅಧಿಕಾರಿಗಳ ಮೇಲೆ ಅವರು ಆಪಾದನೆಯನ್ನು ಮಾಡಿದ್ದಾರೋ ಆ ಅಧಿಕಾರಿಗಳು ಆ ಸ್ಥಳ ದಲ್ಲಿಯೇ ಇದ್ದಾರೆ. ಶ್ರೀಮತಿ ಪುಷ್ಪಾವತಿಯವರು ಕೂಡ ಇಲ್ಲಿ ಇದ್ದಾರೆ. ಅವರು ಕೂಡ ಈ ಬಗ್ಗೆ ಉತ್ತರ ಕೊಡುತ್ತಿಲ್ಲ. ಮಾನ್ಯ ವಿ.ಎಲ್. ಪಾಟೀಲ್‌ರವರು ಕೂಡ ಇದ್ದಾರೆ, ಅವರು ಕೂಡ ಉತ್ತರ ಕೊಡುತ್ತಿಲ್ಲ. ಇದು ನನಗೆ ಅರ್ಥವಾಗುತ್ತಿಲ್ಲ. ನಾನು ಸುಮಾರು ೮ ವರ್ಷಗಳ ಕಾಲ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ ಜವಾಬ್ದಾರಿಯನ್ನು ನಿರ್ವಹಿಸಿದ್ದೆ. ಆಗ ನನ್ನ ಕೈಯಲ್ಲಿ ಸುಮಾರು ೫ ಜನ ಐ.ಎ.ಎಸ್. ಅಧಿಕಾರಿಗಳು ಇದ್ದರು. ಇವರೆಲ್ಲರೂ ಕೂಡ ಮಹಿಳೆ ಯರೇ. ಇವರಲ್ಲಿ ಒಬ್ಬರು ನಿರ್ದೇಶಕರು ಸಹ ಇದ್ದರು. ಅವರಿಗೂ ನನಗೂ ಯಾವುದೇ ರೀತಿ ಯಾದಂಥ ಮನಸ್ತಾಪಗಳು ಒಂದು ದಿವಸವು ಸಹ ಬಂದಿರಲಿಲ್ಲ. ಮಾನ್ಯ ರಾಜ್ಯ ಸಚಿವೆಯರು ಬೀದರ್ ಜಿಲ್ಲೆಯಲ್ಲಿ ಪ್ರವಾಸ ಮಾಡಿದಂತಹ ಕಾಲದಲ್ಲಿ ಈ ಇಲಾಖೆಯ ಕೆಳದರ್ಜೆಯ ಅಧಿಕಾರಿಗಳು ಲಂಚದಲ್ಲಿ ಮುಳುಗಿದ್ದಾರೆ ಅವರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ಸಹ ಇಲಾಖೆಯ ಹಿರಿಯ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿಕೊಂಡಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳಾದ ವಿ.ಎಲ್. ಪಾಟೀಲ್‌ರವರು ಕೂಡ ಏನೂ ಪ್ರಸ್ತಾಪ ಮಾಡದೆ ಸುಮ್ಮನೆ ಕುಳಿತುಕೊಂಡಿದ್ದಾರೆ ಇವರಿಗೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಬಹುಶಃ ಅವರಿಗೆ ಈ ಇಲಾಖೆಯ ಬಗ್ಗೆ ಕಾಳಜಿ ಇಲ್ಲ. ರಾಷ್ಟ್ರದಲ್ಲಿ ಯಾರಿಗಾದರೂ ಭಾರತ ರತ್ನ ಬಿರುದು ಕೊಡು ವುದಾದರೆ ಮಾನ್ಯ ಮಂತ್ರಿಗಳಿಗೆ ಕೊಡಬೇಕು. ತಮ್ಮ ಪರವಾಗಿ ನಾನು ಮಾನ್ಯ ಮುಖ್ಯಮಂತ್ರಿ ಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಇವರಿಗೆ ಭಾರತ ರತ್ನ ಬಿರುದು ಕೊಡುವಂತೆ ಕೇಂದ್ರ ಸರ್ಕಾರಕ್ಕೆ ತಾವು ಶಿಫಾರಸ್ಸು ಮಾಡಿ. ಈ ಸದನದಲ್ಲಿ ಕೆಲವರು ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಕೇಳಿದಾಗ ಅವರು ಉತ್ತರ ಕೊಡುವುದು ಪರಿಶೀಲಿಸೋಣ, ನೋಡೋಣ, ಎಂದು ಹೇಳುತ್ತಿದ್ದರು. ಬಹುಶಃ ಅವರಿಗೆ ಈ ಖಾತೆಯಲ್ಲಿ ಆಸಕ್ತಿ ಇಲ್ಲ. ಅವರು ತಮ್ಮ ಜಮೀನನ್ನು ಉಳಿಸಿಕೊಳ್ಳುವ ಕಾತುರದಲ್ಲಿ ಇರಬಹುದು.

ಶ್ರೀ ವಿ.ಎಲ್. ಪಾಟೀಲ್.—ಜಮೀನು ಉಳಿಸಿಕೊಳ್ಳುವ ಬಗ್ಗೆ ಎಂದು ಮಾನ್ಯ ಸದಸ್ಯರ ಪ್ರಸ್ತಾಪ ಮಾಡಿದ್ದಾರೆ. ಅದು ಯಾವ ಜಮೀನು ಎಂಬುದನ್ನು ಮಾನ್ಯ ಸದಸ್ಯಣಿಯವರು ಹೇಳ ಬೇಕು.

ಶ್ರೀಮತಿ ಮನೋರಮ ಮಧ್ವರಾಜ್.—ನಿಮ್ಮ ಹಳ್ಳಿಯಲ್ಲಿರುವಂತಹ ಜಮೀನು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುವಾಗ ಸ್ಪೆಸಿಫಿಕ್ ಆಗಿ ಏನಾದರೂ ವಿಷಯ ಇದ್ದರೆ, ಅದರ ಮೇಲೆ ಪ್ರಸ್ತಾಪ ಮಾಡುವುದು ಒಳ್ಳೆಯದು.

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಅದು ಯಾವ ಜಮೀನು ಎಂಬುದು ಮಾನ್ಯ ಸದಸ್ಯಣಿಯವರು ತಿಳಿಸಬೇಕು. ಇಲ್ಲದಿದ್ದರೆ ಆ ಶಬ್ದವನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.— ಮಾನ್ಯ ಸದಸ್ಯೆಯರಿಗೆ ಸಾಕಷ್ಟು ಅನುಭವ ಇದೆ. ತಾವು ಮಾತನಾಡಿ.

ಶ್ರೀ ವಿ.ಎಲ್. ಪಾಟೀಲ್.—ಅದು ಯಾವ ಜಮೀನು ಎನ್ನುವುದನ್ನು ಮಾನ್ಯ ಸದಸ್ಯೆಯರು ಹೇಳಬೇಕು. ನಾನು ಸೀಲಿಂಗ್‌ನಲ್ಲಿ ಸರಿಯಾಗಿ ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಹಳ್ಳಿಯಲ್ಲಿರುವಂತಹ ಜಮೀನು ಬಗ್ಗೆ ಅವರು ಪ್ರಸ್ತಾಪ ಮಾಡಿದರು.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಿಮ್ಮ ಹಳ್ಳಿಯಲ್ಲಿರುವಂತಹ ಜಮೀನನ್ನು ತಾವು ಉಳುಮೆ ಮಾಡಿಸುವುದಿಲ್ಲವೇ ? ಅದಕ್ಕೆ ಏತಕ್ಕೆ ಇಷ್ಟು ಸಿಟ್ಟು ಮಾನ್ಯ ಮಂತ್ರಿಗಳಿಗೆ.

ಅಧ್ಯಕ್ಷರು.—ಮಾನ್ಯ ಸದಸ್ಯೆಯವರು ನೇರವಾಗಿ ವಿಷಯದ ಪ್ರಸ್ತಾಪಕ್ಕೆ ಬನ್ನಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳಿಗೆ ಏತಕ್ಕೆ ಇಷ್ಟು ಸಿಟ್ಟು ? ಕುಂಬಳಕಾಯಿ ಕಳ್ಳ ಯಾರೆಂದು ಹೇಳಿದರೆ ಹೆಗಲು ಮುಟ್ಟಿ ನೋಡಿಕೊಂಡರಂತೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಹಳ್ಳಿಯಲ್ಲಿರುವಂತಹ ಜಮೀನನ್ನು ಉಳಿಸಿಕೊಳ್ಳುವುದಕ್ಕೆ ತಾವು ಆಸಕ್ತಿಯನ್ನು ಹೊಂದಿದ್ದಾರೆಂದು ಹೇಳಿದರೆ ತಮಗೇತಕ್ಕೆ ಇಷ್ಟು ಸಿಟ್ಟು ?

ಅಧ್ಯಕ್ಷರು.—ತಾವು ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೆಚ್ಚಿನ ಪರಿಣಿತರು ಇದ್ದೀರಿ. ತಾವು ನೇರವಾಗಿ ಇಲಾಖೆಗೆ ಸಂಬಂಧಪಟ್ಟಂತೆ ಮಾತನಾಡಿ.

ಶ್ರೀಮತಿ ಮನೋರಮಮ ದ್ವರಾಜ್.—ತಾವು ಬೆಳಗಾಂಗೆ ಎಷ್ಟು ಸಾರಿ ಪ್ರವಾಸ ಹೋಗಿದ್ದೀರಿ. ಇನ್ನಿತರ ಕಡೆಗಳಿಗೆ ಎಷ್ಟು ಸಾರಿ ಹೋಗಿದ್ದೀರಿ ಎಂಬುದನ್ನು ಹೇಳಿ ನೋಡೋಣ. ಆಗ ಗೊತ್ತಾಗುತ್ತದೆ.

ಅಧ್ಯಕ್ಷರು.—ತಾವು ನೇರವಾಗಿ ವಿಷಯದ ಪ್ರಸ್ತಾಪಕ್ಕೆ ಬನ್ನಿ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷರೇ, ಈ ಒಂದು ಇಲಾಖೆಯಲ್ಲಿ ಕೆಲಸ ಮಾಡುವಾಗ ಸಮಾಜದ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗುತ್ತದೆ ಇಲ್ಲದೇ ಹೋದರೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.—ಇವೊತ್ತು ಬೆಳಿಗ್ಗೆಯಿಂದ ಏತಕ್ಕೋ ರಾಹುಕಾಲವೇ ಆಗಿದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ರಾಹುಕಾಲ ಅಲ್ಲ, ಸಾಡೇಸಾತಿ ಹಿಡಿದಿದೆ. ನಾವು ಮಾತನಾಡುವಾಗ ಜರಿದು ಬೀಳುತ್ತಾರೆ, ಮಾತನಾಡುವುದಕ್ಕೆ ಬಿಡುವುದಿಲ್ಲ. ಮಾನ್ಯ ಅಧ್ಯಕ್ಷರೆ. ಈ ಒಂದು ಇಲಾಖೆಯಲ್ಲಿ ಕೆಲಸ ಮಾಡುವಾಗ ಸಮಾಜವನ್ನು ಒಳಗೊಂಡು ಕೆಲಸ ಮಾಡಬೇಕಾಗುತ್ತದೆ. ಮೊನ್ನೆ ಕೂಡಾ ನಾನು ಇಲ್ಲಿ ಕೆಲವು ವಿಚಾರಗಳನ್ನು ಎತ್ತಿದ್ದೆ. ಸ್ವಯಂ ಸೇವಾ ಸಂಸ್ಥೆಯವರು ಅನಾಥಾಶ್ರಮಗಳನ್ನು ನಡೆಸುವಾಗ, ಬೇರೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ನಡೆಸುವಾಗ, ಗ್ರಾಂಟ್‌ಗೋಸ್ಕರ ನಮ್ಮ ಹೆಡ್ ಆಫೀಸ್‌ಗೆ ಎಂದರೆ ಮುಖ್ಯ ಕಚೇರಿಗೆ ಬರಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಈ ಮಕ್ಕಳನ್ನು ಸಾಕುವವರು ಅವರಿಗೆ ವಿದ್ಯಾಭ್ಯಾಸ, ಬಟ್ಟೆ, ಊಟ ವಸತಿ ಎಲ್ಲಾ ಕೊಡಬೇಕಾಗುತ್ತದೆ. ಇವರು ಮಾರ್ಚ್ ಆಪ್ರೈಲಿನ ತನಕ ಗ್ರಾಂಟ್ ಕೊಡದೇ ಹೋದರೆ, ಅವರು ಅಲೆದಾಡಿಕೊಂಡು ಇಲ್ಲಿಗೆ ಬರಬೇಕಾಗುತ್ತದೆ. ಅವರು ಇಲ್ಲಿಗೆ ಬಂದರೂ ಶ್ರೀಮತಿ ಪುಷ್ಪಾವತಿಯವರು ಹೇಳಿದ ಹಾಗೆ ಈ ಒಂದು ಅಧಿಕಾರಿಗಳು ಲಂಚ ಪಡೆದುಕೊಳ್ಳುತ್ತಾರೆ· ಅವರ ಕೈ ಬಿಸಿ ಮಾಡದೆ ಗ್ರಾಂಟ್ ಸಿಗುವುದಿಲ್ಲ. ನಾನು ಮಂತ್ರಿಯಾಗಿದ್ದಾಗ, ಯಾವ ಭ್ರಷ್ಟ ಅಧಿಕಾರಿಗಳು ಇದ್ದರು. ಅವರನ್ನು ಆದಷ್ಟು ದೂರ ಹಾಕಿ ಕಳುಹಿಸಿ ಕೊಟ್ಟಿದ್ದರೂ, ಇವತ್ತು ಅವರೆಲ್ಲ ವಾಪಸ್ ಇಲ್ಲೇ ಬಂದು ಸೇರಿಕೊಂಡಿದ್ದಾರೆಂದು ವರ್ತಮಾನ ಉಂಟು. ಇಂತಹ ಸಂದರ್ಭ

ದಲ್ಲಿ ಅವರು ಯಾವರೀತಿ ಕೆಲಸ ಮಾಡಬಹುದು. ಗ್ರಾಂಟ್ ಇನ್ ಏಡ್ ರೂಲ್ಸ್ ಪ್ರಕಾರ ಹಿಂದೆ ೧೯೭೬ ರಿಂದ ಕೊಟ್ಟ ಗ್ರಾಂಟನ್ನು, ನಿಮ್ಮ ಸರಕಾರ ಅರ್ಥಾತ್ ಇಲಾಖೆಯವರು, ಹಿಂದಕ್ಕೆ ಕೊಡಬೇಕೆಂದು ಕೇಳುತ್ತಿದ್ದಾರೆ, ಸಿಯುವ ೩೩೪ ರಲ್ಲಿ ನಾನು ಇದರ ಬಗ್ಗೆ ಕೇಳಿದ್ದೇನೆ. ಈ ಬಗ್ಗೆ ಸಚಿವರು ಉತ್ತರಕೊಡುತ್ತಾ ಪರಿಶಿಲಿಸುತ್ತೇವೆಂದು ಹೇಳಿದ್ದಾರೆ, ಆದರೆ ಇದುವರೆಗೆ ಏನು ಮಾಡಿದ್ದಾರೆಂದು ಗೊತ್ತಿಲ್ಲ. ಈ ಒಂದು ಕಿರುಕುಳವನ್ನು ಸಹಿಸಿಕೊಂಡು ಹೋಗಬೇಕು. ನಮ್ಮ ಜಿಲ್ಲೆಯಲ್ಲಿ ಇರತಕ್ಕ ಇಂತಹ ೨೬ ಅನಾಥಾಶ್ರಮಗಳಿಗೆ ೧೪ ಲಕ್ಷ ರೂಪಾಯಿಗಳು ಮರುಪಾವತಿ ಮಾಡಬೇಕೆಂದು ಹೇಳಿದ್ದಾರೆ. ಅವರು ಎಲ್ಲಿಂದ ಕೊಡಬೇಕು ? ನಿಮ್ಮ ಗ್ರಾಂಟ್–ಇನ್–ಏಡ್ ರೂಲ್ಸ್ ಪ್ರಕಾರವೇ ನೀವು ಹಣ ಕೊಟ್ಟಿದ್ದೀರಿ, ನಿಮ್ಮ ಸ್ಟೇಟ್‌ಮೆಂಟ್ಸ್ ಆಡಿಟೆಡ್ ರಿಪೋರ್ಟ್ ಇದನ್ನೆಲ್ಲಾ ಅಂಗೀಕರಿಸಿದ ಮೇಲೆ, ವಾಪಸ್ ಹಣ ಕೊಡಬೇಕೆಂದರೆ ಅದು ನಿಜವಾಗಲೂ ಕಷ್ಟಸಾಧ್ಯದ ಕೆಲಸ. ಈ ಮಾತನ್ನು ಇಲ್ಲಿಗೇ ಬಿಟ್ಟು, ಆ ಬಡಪಾಯಿಗಳನ್ನು ಕೋರ್ಟಿಗೆ ಎಳೆಯುತಕ್ಕಂಥ ಕೆಲಸ ಮಾಡಬೇಡಿ ಎಂದು ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ. ಅದೇ ರೀತಿ ಸೌಹಾರ್ದಯುತ ವಾತಾವರಣ ಬೆಳೆಸ ತಕ್ಕಂಥ ದೃಷ್ಟಿಯಿಂದ, ಕೋ ಆರ್ಡಿನೇಟ್ ಕೌನ್ಸಿಲ್ ಆನ್‌ವಾಲಂಟರಿ ಆರ್ಗನೈಸೇಷನ್ಸ್ ಎಂದು ಏನು ಮಾಡಿಕೊಂಡಿದ್ದೀರಿ ಅದಕ್ಕೆ ಇನ್ನೂ ಕೂಡಾ ಕನ್‌ಸಲ್ಟೇಟೀವ್ ಸ್ಟೇಟಸ್ ಕೊಡಲಿಲ್ಲ. ಆದರೆ ರೂರಲ್ ಡೆವಲಪ್‌ಮೆಂಟ್ ಆರ್ಗನೈಸೇಷನ್ಸ್‌ಗೆ ಸೌಲಭ್ಯ ಕೊಟ್ಟು ಮಾನ್ಯತೆ ಕೊಟ್ಟಿದ್ದೀರಿ. ಇದರಲ್ಲೇನು ಕಾಣಿಸುತ್ತದೆ ಎಂದರೆ, ಮಹಿಳೆಯರ ಬಗ್ಗೆ, ಮಕ್ಕಳ ಬಗ್ಗೆ, ಹರಿಜನ ಗಿರಿಜನ, ಹಿಂದುಳಿದವರ ಬಗ್ಗೆ ಏನು ಕಳಕಳಿ ನಿಮಗೆ ಉಂಟು ಎಂದು ಕಾಣಿಸುತ್ತದೆ. ಇದರ ಬಗ್ಗೆ ಆದಷ್ಟು ಶೀಘ್ರ ಒಂದು ನಿರ್ಣಯ ತೆಗೆದುಕೊಂಡು ಅವರಿಗೆ ನೀವು ಒಂದು ಕೆಲಸದವರ ಹಾಗೆ ಕಾಣಿದೆ, ಅವರು ಯಾವುದೇ ಸಂಭಾವನೆ ದೃಷ್ಟಿ ಇಟ್ಟುಕೊಂಡು, ಸಂಭಾವನೆ ಅಪೇಕ್ಷೆಯಿಂದ ಕೆಲಸ ಮಾಡುತ್ತಿಲ್ಲ, ಅವರು ಒಂದು ನೆರವಿನ ಮನೋಭಾವನೆಯಿಂದ ಕೆಲಸ ಮಾಡುವವರು, ನಿಮ್ಮ ಇಲಾಖೆಯಲ್ಲಿ ಇಂತಹ ಒಂದು ಖಿದೀಮರನ್ನು ಇಟ್ಟುಕೊಳ್ಳುವುದಕ್ಕಿಂತ, ಇಂತಹವರ ಕೈಯಲ್ಲಿ ಕೆಲಸ ಮಾಡಿಸುವುದು ಸೂಕ್ತ ಎಂದು ನನ್ನ ಭಾವನೆ. ಮಾನ್ಯ ಮಂತ್ರಿಯವರು ಇದರ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಇನ್ನು ಸೋಷಿಯಲ್ ವೆಲ್‌ಫೇರ್ ಅಡ್ವೈಸರಿ ಬೋರ್ಡ್, ಇದು ಸತತವಾಗಿ ೧೯೫೪ ರಿಂದ ಅಸ್ತಿತ್ವದಲ್ಲಿ ಉಂಟು. ಈ ತನಕ ಒಂಭತ್ತು ಮಹಿಳೆಯರು ಇದರ ಅಧ್ಯಕ್ಷಿಣಿಯಾಗಿ ಇದರ ನೇತೃತ್ವ ವಹಿಸಿಕೊಂಡಿದ್ದಾರೆ. ಇದೆಲ್ಲಾ ಹಾನರರಿ ಪೋಸ್ಟ್. ಇವೊತ್ತು ಏನಾಗಿದೆ, ಜನತಾ ಸರಕಾರ, ಬಡವರ ಬಗ್ಗೆ ಬಹಳ ಕಾಳಜಿ ಇರುವವರು ಎಂದು ಹೇಳಿಕೊಳ್ಳತಕ್ಕವರು, ಇವತ್ತು ಅಭಿವೃದ್ಧಿ ಕಾರ್ಯಕ್ರಮಕ್ಕೆ ಹಣ ಇಲ್ಲ, ಆದರೆ ಇವತ್ತಿನ ಅಧ್ಯಕ್ಷಿಣಿಯರಿಗೆ ತಿಂಗಳಿಗೆ ೧೫೦೦. ರೂಪಾಯಿಗಳ ಸಂಭಾವನೆ ಕೊಟ್ಟು. ಅದರ ಮೇಲೆ ಹೌಸ್ ಅಲೋಯನ್ಸ್ ಎಂದು ೫೦೦ ರೂಪಾಯಿಗಳನ್ನು ಕೊಟ್ಟು, ಹೊಸ ಪರಿಪಾಠವನ್ನು ಹಾಕಿಕೊಂಡಿದ್ದಾರೆ. ಅವರು ಮೆಲ್ಮನೆಯ ಸದಸ್ಯರೂ ಕೂಡಾ ಆಗಿದ್ದಾರೆ. ಅಂತಹದಕ್ಕೆ ಹಣ ಉಂಟು. ಈ ಒಂದು ಕೆಟ್ಟ ಕೆಲಸ ಏತಕ್ಕೆ ಮಾಡಿದ್ದಾರೆ ಎಂದು ನಿಮ್ಮ ಮುಖಾಂತರ ಮಾನ್ಯ ಸಚಿವರನ್ನು ನಾನು ಪ್ರಶ್ನಿಸುತ್ತೇನೆ. ಇದನ್ನೂ ಕೂಡಾ ಆದಷ್ಟು ಬೇಗ ಸಂಭಾವನೆ ಕೊಡದೇ, ಗೌರವಾರ್ಥವಾಗಿ ಕೆಲಸ ಮಾಡುವವರನ್ನು ಹಾಕಿ. ಗೌರವಾರ್ಥ ಕೆಲಸ ಮಾಡುವವರು ಆಗಿದ್ದರೆ, ಕೆಲಸ ಮಾಡಲಿ, ಇಲ್ಲದಿದ್ದರೆ ಬೇಡ ಎಂದು ಹೇಳುತ್ತೇನೆ. ಈ ಒಂದು ಕಮಿಟಿಯಲ್ಲಿ ೬ ಜನ ಮಹಿಳೆಯರು ಬೆಂಗಳೂರಿನವರೇ, ಅವರಲ್ಲಿ ಕೆಲವರಿಗೆ ಕನ್ನಡ ಕೂಡಾ ಬರುವುದಿಲ್ಲ, ಏನು ಸ್ವಾಮಿ, ಬಡವರಿಗಾಗಿ ಇರುವಂತಹ ಈ ಸಮಿತಿಯಲ್ಲಿ ಕೆಲಸ ಮಾಡುವವರಿಗೆ ಕನ್ನಡ ಬರದಂಥವರಿಗೆ ಕೊಟ್ಟು, ಅವರು ಯಾವರೀತಿ ಹಳ್ಳಿಗಳಿಗೆ ಹೋಗಿ ಬಡವರ ಕೆಲಸ ಮಾಡುವುದಕ್ಕೆ ಸಾಧ್ಯ ಉಂಟು. ಬಡವರ ಹತ್ತಿರ ಮಾತುಕತೆ ನಡೆಸಿ ಅವರ ಕಷ್ಟಕಾರ್ಪಣ್ಯಗಳನ್ನು ತಿಳಿಯುವ ಅವಕಾಶ ಕೊಟ್ಟಿದ್ದೀರಿ. ಈ ಸಮಿತಿಯಲ್ಲಿ ಹಿಂದುಳಿದ ಜಿಲ್ಲೆಗಳಾದ ಗುಲ್ಬರ್ಗಾ ರಾಯಚೂರು ಬಳ್ಳಾರಿ ಡಿಸ್ಟ್ರಿಕ್ಟ್‌ಗಳಿಗೆ ಪ್ರಾತಿನಿಧ್ಯ ಕೊಡಲಿಲ್ಲ. ಅಲ್ಲಿಂದ ಯಾವ ಮಹಿಳೆಯರನ್ನೂ ತೆಗೆದುಕೊಳ್ಳಲಿಲ್ಲ. ಅಲ್ಲಿ ಯಾರು ಕೆಲಸ ಮಾಡುತ್ತಾರೆ ಹಾಗಾದರೆ ? ನಾನು ಆಗಲೇ ಹೇಳಿದಹಾಗೆ ಈ ಇಲಾಖೆ ಯಾರ ಕೈಗೆ ಹೋಗಬೇಕಾಗಿತ್ತೋ, ಅವರ ಕೈಗೆ ಹೋಗಬೇಕಾಗಿತ್ತು. ಮಾನ್ಯ ಬಿ. ಎಲ್. ಪಾಟೀಲ್‌ರವರೆ ತಪ್ಪು ತಿಳಿದುಕೊಳ್ಳಬೇಡಿ ನೀವು ಬೇರೆ ಖಾತೆ ಇಟ್ಟುಕೊಳ್ಳಿ. ಇದರ ಬಗ್ಗೆ ಕಳಕಳಿ ಇರುವಂತಹ ಮಾನ್ಯ ರಾಚಯ್ಯನವರು ಇದ್ದಾರೆ, ನಜೀರ್ ಸಾಹೇಬರು ದಕ್ಷತೆಗೆ ಹೆಸರು ಗಳಿಸಿದ್ದಾರೆ, ಪ್ರಾಮಾಣಿಕರಾಗಿದ್ದಾರೆ, ಅವರಿಗೆ ಈ ಇಲಾಖೆಯನ್ನು ಕೊಟ್ಟು ಕೆಲಸ ಮಾಡಿಸಿ. ಸುಮ್ಮನೆ ನಾವು ಇಲ್ಲಿ ಮಾತನಾಡಿ, ಕಂಠ ಶೋಷಣೆ ಮಾಡಿಕೊಳ್ಳುವುದು, ಗೋರ್ಕಲ್ಲ ಮೇಲೆ ನೀರು ಬಿದ್ದಹಾಗೆ ಆದರೆ, ನಾವು ಎಲ್ಲಿಗೆ ಏತಕ್ಕೆ ಬರಬೇಕು ?

ಮಾನ್ಯ ಸಭಾಧ್ಯಕ್ಷರೇ, ಕೇಂದ್ರ ಸರಕಾರದ ಬಗ್ಗೆ ಹೇಳುವುದು ಇದ್ದರೆ, ಹರಿಜನ ಗಿರಿಜನರ ಉದ್ಧಾರ ಅಭಿವೃದ್ಧಿಗೋಸ್ಕರ ಯೋಜನಾ ಬಜೆಟ್‌ನಲ್ಲಿ ಕೇಂದ್ರ ಸರಕಾರ ೧೧ ಕೋಟಿ ಹಣ ಕೊಟ್ಟಿದೆ.

ಇವರೇನು ಮಾಡಿದ್ದಾರೆ ಎಂದರೆ, ೩ ಕೋಟಿ ರೂಪಾಯಿಗಳನ್ನು ಬಟ್ಟೆ ಹಂಚುವುದಕ್ಕೋಸ್ಕರ ವಿದ್ಯಾ ಇಲಾಖೆಗೆ ಕೊಟ್ಟಿದ್ದಾರೆ. ಬಹಶಃ ನನಗೆ ಒಂದು ಜ್ಞಾಪಕಕ್ಕೆ ಬರುತ್ತದೆ. ಉಡುಪಿಯಲ್ಲಿ ಪರ್ಯಾಯ ಆಗುತ್ತದೆ. ಎರಡು ವರ್ಷಕ್ಕೊಮ್ಮೆ ಸ್ವಾಮಿಜಿಗಳು ಪರ್ಯಾಯ ಪೀಠಕ್ಕೆ ಕುಳಿತು ಕೊಳ್ಳುವುದು ಉಂಟು ಆಗ ಅನ್ನ ಸಂತರ್ಪಣೆ ಆಗುತ್ತದೆ. ಬಡಿಸುವವರು ಬೇರೆ, ಅಜ್ಞೆ ಮಾಡು ವವರು ಬೇರೆ. ಬಡಿಸುವುದಕ್ಕೆ ಹೋಗುವಾಗ ಏನು ಮಾಡುತ್ತಾರೆ ಎಂದರೆ ಒಬ್ಬರಲ್ಲ ಕೆಲವು ಮಂದಿ ದೊಡ್ಡ ದೊಡ್ಡ ಶಾಲುಗಳನ್ನು ಹಾಕಿಕೊಂಡು, ಭರ್ಜರಿ ಕಚ್ಚೆ ಉಟ್ಟುಕೊಂಡು ನಿಂತಿರುತ್ತಾರೆ, ಅವರು ಅದೇನು ಅನ್ನವಾ, ಆ ಮಾಳಿಗೆಗೆ ಹೋಗಲಿ, ಅದೇನು ಸಾರು, ಈ ಮಾಳಿಗೆಗೆ ಹೋಗಲಿ, ಎಂದು ಬಡಿಸುವವರ ಮೇಲೆ ಪಾರುಪತ್ಯ ಮಾಡುತ್ತಾರೆ. ಇದಕ್ಕೆ ಬಡಗು ಮಾಳಿಗೆ ಪಾರುಪತ್ಯ ಎಂದು ಹೇಳುವುದು. ಕೇಂದ್ರ ಸರಕಾರ ಕೊಟ್ಟ ಹಣವನ್ನು, ಖುಷಿ ಬಂದಹಾಗೆ ವಿದ್ಯಾ ಇಲಾಖೆಗೆ ಇವರು ಏತಕ್ಕೆ ಕೊಡಬೇಕು ? ಇವರ ಅಂಬೋಣ ಎಂದರೆ, ಸರಕಾರಿ ಶಾಲೆಯಲ್ಲಿ ಹರಿಜನ ಗಿರಿಜನ ಮಕ್ಕಳಿದ್ದಾರೆ, ಅವರಿಗೆ ಬಟ್ಟೆ ಹಂಚುತ್ತೇವೆ ಎಂದು. ಆದರೆ ಹರಿಜನ ಗಿರಿಜನರ ಮಕ್ಕಳು ಸರಕಾರಿ ಶಾಲೆಗಳಿಗೇ ಹೋಗಬೇಕೆಂದು ನಿಯಮ ಇಲ್ಲ. ಅವರು ಪ್ರೈವೇಟ್ ಶಾಲೆಗಳಿಗೆ ಹೋಗಬಹುದು. ಬಡ ಹರಿಜನ ಗಿರಿಜನರ ಮಕ್ಕಳು ವಿದ್ಯಾಭ್ಯಾಸ ಮಾಡಬೇಕೆಂದು ಇಲ್ಲ. ಮಾಡಲು ಸಾಧ್ಯವಾಗುವುದಿಲ್ಲ. ಇವರು ಬಟ್ಟೆ ಹಂಚುವುದು, ಸರಕಾರಿ ಶಾಲೆಗಳಿಗೆ ಮಾತ್ರ. ಹಾಗಾದರೆ ಮಿಕ್ಕುಳಿದ ಹರಿಜನ ಗಿರಿಜನರ ಮಕ್ಕಳ ಗತಿಏನು? ಯಾವುದೊ ಒಂದು ಯೋಜನೆಗೆ ಕೊಟ್ಟ ಹಣವನ್ನು ಇವರು ಬೇರೆ ಬಾಬಿಗೆಉಪಯೋಗ ಮಾಡುವುದು ದೊಡ್ಡ ತಪ್ಪು ಎಂದು ನಾನು ಭಾವಿಸುತ್ತೇನೆ. ಅದನ್ನು ಬಿಟ್ಟು ಮುಂದಕ್ಕಾದರೂ ತಾವು ಆದಷ್ಟು ಹರಿಜನ ಗಿರಿಜನರ ಉದ್ಧಾರದ ಬಗ್ಗೆ ಕಳಕಳಿಯಿಂದ ಕೆಲಸ ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಈ ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ ಏನು ಉಂಟು, ಇದು ನಾನು ಸಚಿವೆಯಾಗಿದ್ದಾಗ, ಅರ್ಬನ್ ಏರಿಯಾಸ್‌ನಲ್ಲಿ ಸಾಧಾರಣ ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ಯತ್ತು ಟ್ರೈಬಲ್ ಏರಿಯಾ ಇಲ್ಲಿಗೆ ಮಾತ್ರ ಈ ಒಂದು ಸ್ಕೀಮನ್ನು ಅಳವಡಿಸಿಕೊಳ್ಳಲಾಗಿತ್ತು. ಆದರೆ ಇಲ್ಲಿ ಬಹಳಷ್ಟು ಅನಾಚಾರಗಳು ಆಗಿರುವುದರಿಂದ, ಆಗುವ ಪ್ರಮೇಯ ಕಂಡುದರಿಂದ ನಾವು ಅರ್ಬನ್ ಏರಿಯಾದಲ್ಲಿ ಐ. ಸಿ. ಡಿ. ಎಸ್. ಎಂದು ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಎರಡು ಯೋಜನೆಗಳನ್ನು ಪ್ರಾರಂಭ ಮಾಡಿದ್ದೆವು. ಬಹುಶಃ ಅದು ಈಗ ಒಂದೂ ಕೂಡಾ ಕಾಣುವುದಿಲ್ಲ. ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ ಏನು ಇಂಟ್ರಡ್ಯೂಸ್ ಮಾಡುತ್ತಿದ್ದೇವೆ, ಇದು ಸಮರ್ಪಕವಾಗಿ ಬಡ ಮಕ್ಕಳಿಗೆ, ಯಾರಿಗೆ ಸೇರಬೇಕೋ ಅವರಿಗೆ ಸೇರುತ್ತಿಲ್ಲ ಎಂದು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ. ಆದಷ್ಟು ಶೀಘ್ರ ವಾಗಿ ತಾವು ಐ.ಸಿ.ಡಿ.ಎಸ್. ಪ್ರೋಗ್ರಾಂ ಹಾಕಿಕೊಂಡರೆ ಈ ಒಂದು ಬ್ಲಾಕ್‌ನಲ್ಲಿ ಅರ್ಥಾತ್ ಯೋಜನೆಯಲ್ಲಿ ನೂರು ಜನ ಅಂಗನವಾಡಿ ವರ್ಕರ್ಸ್‌ಗೆ, ನೂರು ಜನ ಹೆಲ್ಪರ್ಸ್ ಕೊಟ್ಟ ಹಾಗೆ ಆಗುತ್ತದೆ. ಅಂತಹ ಹೆಣ್ಣುಮಕ್ಕಳಿಗೆ ಕೆಲಸ ಕೊಟ್ಟಹಾಗೆ ಆಗಲಿ. ಯಾರು ಯಾರೋ ಹೊಟ್ಟೆ ತುಂಬಿಸಿಕೊಳ್ಳುವ ಬದಲು, ನ್ಯಾಯವಾಗಿ ಯಾರಿಗೆ ಸಿಗಬೇಕೋ ಅವರಿಗೆ ಸಿಗುವುದಕ್ಕೆ ಒಂದು ಸಂದರ್ಭ ಆಗಲಿ ಎಂದು ಹೇಳಿ, ಆದಷ್ಟು ಇದರ ಬಗ್ಗೆ ತಾವು ನಿಗಾ ಕೊಟ್ಟು ಒಂದು ಅರ್ಬನ್ ಐ.ಸಿ.ಡಿ.ಎಸ್. ಪ್ರಾರಂಭ ಮಾಡಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಎಂದರೆ, ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ ಹೇಳುವು ದಾದರೆ, ತಾವು ತಮ್ಮ ರಿಪೋರ್ಟ್‌ನಲ್ಲಿ ೭೧ ಐ.ಸಿ.ಡಿ.ಎಸ್. ಇದೆ ಎಂದು ತಿಳಿಸಿದ್ದೀರಿ, ಇಲ್ಲಿ ಮದುವೆ ಆಗದ ಹೆಣ್ಣುಮಕ್ಕಳು ಕೆಲಸ ಮಾಡುವಂತಹ ಸಂದರ್ಭ ಇದೆ. ಸಿ.ಡಿ.ಬಿ.ಒ. ಕೆಳಗೆ ತಾವು ಗಂಡಸರನ್ನು ನೇಮಕ ಮಾಡಿದ್ದೀರಿ. ಮೊನ್ನೆ ಕೂಡಾ ಒಂದು ಪತ್ರಿಕೆಯಲ್ಲಿ ಬಂತು. ಒಬ್ಬ ಅಂಗನವಾಡಿ ಕಾರ್ಯಕರ್ತೆಯನ್ನು ಕೊಲೆ ಮಾಡಿದ್ದಾರೆ ಎಂದು ಬಂದಿದೆ. ತಮ್ಮ ಭಯ ಕೆಲಸ ಮಾಡುವವರಿಗೆ ಇದ್ದರೆ ಯಾರಾದರೂ ಈ ರೀತಿ ಮಾಡುವುದಕ್ಕೆ ಸಾಧ್ಯ ಉಂಟೇ? ಇವರ ಮೇಲೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಶ್ರೀಮತಿ ಪುಷ್ಪಾವತಿಯವರು ಎಲ್ಲಿ ಹೋಗಿ ನೋಡಿ ಬಂದಿದ್ದಾರೆ? ಏನು ವಿಚಾರಗಳನ್ನು ತಿಳಿದುಕೊಂಡು ಬಂದಿದ್ದಾರೆ ಎನ್ನುವುದನ್ನು ತಿಳಿಸ ಬೇಕು. ಕಾರ್ಯಕರ್ತೆಯವರು ರಾಜ್ಯವ್ಯಾಪ್ತಿ ಧರಣಿ ಮಾಡುತ್ತಾರೆ. ಅವರು ಸಣ್ಣ ಮಕ್ಕಳಿಗೆ ಕಲಿಸುವವರು ಅವರು ಕೇವಲ ೨೦೦–೨೫೦ ರೂಪಾಯಿಗಳ ಸಂಬಳದಲ್ಲಿ ಕೆಲಸ ಮಾಡುವವರು. ಈ ರೀತಿಯ ದೌರ್ಜನ್ಯ, ಅವರಿಗೆ ಸಿಕ್ಕುವಹಾಗೆ ಮಾಡಿದರೆ. ಅವರ ಬಗ್ಗೆ ನಿಮಗೆ ಏನು ಭಾವನೆ ಇದೆ ಯೆಂದು ಕೇಳುತ್ತೇನೆ. ಚುನಾವಣೆ ಕಾಲದಲ್ಲಿ ಹೆಣ್ಣುಮಕ್ಕಳ ಮತಗಳನ್ನು ಕೇಳಿ, ಕೊಡಿಸಿಕೊಂಡು ಬಂದಿದ್ದೀರಿ. ಇವೊತ್ತು ಅವರಿಗೆ ರಕ್ಷಣೆ ಇಲ್ಲ ಎಂದರೆ ಅವರು ಯಾವರೀತಿ ಕೆಲಸ ಮಾಡಬೇಕು? ಅದಕ್ಕೆ ನಾನು ಮೊದಲೇ ಹೇಳಿದ್ದು, ಈ ಇಲಾಖೆಯ ಕೆಲಸವನ್ನು ನಿರ್ವಹಿಸುವುದು ನಿಮಗೆ ಆಗುವುದಿಲ್ಲ ಗಂಭೀರವಾಗಿ ಇದನ್ನು ಬೇರೆ ಯಾರಾದರೂ ಹೆಣ್ಣುಮಕ್ಕಳಿಗ ಬಿಟ್ಟುಕೊಡಿ ಎಂದು ಹೇಳತಕ್ಕಂಥಾದು

ನನ್ನ ಭಾವನೆ. ಅಷ್ಟೇ ಅಲ್ಲ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಯೋಜನಾ ಬಜೆಟ್‌ನಲ್ಲಿ ಕೇಂದ್ರಸರ್ಕಾರ ೩೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ, ಅದರಲ್ಲಿ ೫೭ ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದೀರಿ. ಏನು ಇದರ ಅರ್ಥ? ಇದಕ್ಕೆ ನಿಮ್ಮ ಬೇಜವಾಬ್ದಾರಿತನ ಎಂದು ಹೇಳಬೇಕಾಗಿದೆ. ಹಣ ಇಲ್ಲ ಎಂದು ಬೊಬ್ಬೆ ಹಾಕುತ್ತೀರಿ, ಹಣ ಕೊಟ್ಟರೆ ಈ ರೀತಿ ಲ್ಯಾಪ್ಸ್ ಮಾಡುತ್ತೀರಿ. ಇದಕ್ಕೆ ಯಾರು ಕಾರಣರು ಎಂಬ ಬಗ್ಗೆ ಉತ್ತರ ಕೊಡಬೇಕು. ಮಾನ್ಯ ಸಚಿವೆಯವರು ತಮ್ಮ ಅಸಹಾಯಕತೆಯನ್ನು ತೋರಿಸಿಕೊಂಡಮೇಲೆ ಅದನ್ನು ಸರಿಪಡಿಸಿಕೊಳ್ಳಬೇಕಾಗಿತ್ತು. ಇಲ್ಲದೇ ಹೋದರೆ ರಾಜೀನಾಮೆ ಕೊಟ್ಟು ಬರಬೇಕಾಗಿತ್ತು. ಅವರು ಎಷ್ಟು ಕಡೆ ಅನಿರೀಕ್ಷಿತ ಭೇಟಿ ಕೊಟ್ಟಿದ್ದಾರೆ? ಯಾವ ಅಂಗನವಾಡಿ ಕೇಂದ್ರಕ್ಕೆ ಭೇಟಿ ಕೊಟ್ಟಿದ್ದಾರೆ, ಯಾವ ರಿಮ್ಯಾಂಡ್ ಹೋಂಗೆ ಭೇಟಿ ಕೊಟ್ಟಿದ್ದಾರೆ? ಪ್ರಧಾನ ಮಂತ್ರಿಗಳಾದ ನಮ್ಮ ರಾಜೀವ್‌ಗಾಂಧಿಯವರ ಜೀವಕ್ಕೆ ಅಪಾಯ ಇದೆ. ಆದರೂ ಕೂಡ ಅವರು ಟ್ರೈಬಲ್ ಕಾಲೋನಿಗಳಿಗೆ ಕಾಲು ನಡಿಗೆಯಲ್ಲಿ ಭೇಟಿ ಕೊಟ್ಟಿದ್ದಾರೆ. ಇಲ್ಲಿರುವ ಮಂತ್ರಿಗಳು ರಸ್ತೆ ಬಿಟ್ಟು, ಮೇಯಿನ್ ರೋಡ್ ಬಿಟ್ಟು ಎಲ್ಲಿ ಓಡಾಡುತ್ತಾರೆ. ಜಿಲ್ಲೆಗೊಂದು ಬಾಲಭವನ ಕೊಡಬೇಕೆಂದು ತೀರ್ಮಾನವಾಗಿದೆ. ಈ ವಿಚಾರದಲ್ಲಿ ನಾನು ಬಹಳ ಬೇಸರದಿಂದ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲೂ ಒಂದು ಬಾಲಭವನ ಉಂಟು. ಅಲ್ಲಿಗೆ ತಾವು ಹೋಗಿಲ್ಲ. ಎಲ್ಲಿಯವರೆಗೆ ಅದರ ಅವ್ಯವಸ್ಥೆ ಬಂದಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಭೇಟಿ ಮಾಡುವ ಸಂದರ್ಭ ಬಂತು. ಪುಟಾಣಿ ಎಕ್ಸ್‌ಪ್ರೆಸ್ ರೈಲನ್ನು ನಿಲ್ಲಿಸಿದ್ದಾರೆ, ಡ್ರೈವರ್ ಸಸ್ಪೆಂಡ್ ಮಾಡಿದ್ದಾರೆ. ಅದರ ಒಂದು ಭೋಗಿಯನ್ನು ರಿಪೇರಿ ಮಾಡಿಲ್ಲ. ಅದನ್ನು ರಿಪೇರಿ ಮಾಡುವುದಕ್ಕೆ ಆಗತಕ್ಕಂಥ ಖರ್ಚು ಸುಮಾರು ೫೦೦ ರೂಪಾಯಿಗಳನ್ನು ಕೊಡುವುದಕ್ಕಾಗಿಲ್ಲ. ಅದರ ವೀಲ್ ರಿಪೇರಿ ಮಾಡಿಸಿ, ಮಕ್ಕಳಿಗೆ ರೈಲನ್ನು ಒದಗಿಸಿಕೊಡಬೇಕು. ಅಲ್ಲಿರುವ ಬಾತ್‌ರೂಂ ಹಾಳಾಗಿ ಒಂದು ವರ್ಷವಾಯಿತು. ಅದನ್ನೂ ರಿಪೇರಿ ಮಾಡಿಲ್ಲ. ಬಡ ಮಕ್ಕಳಿಗೆ ಇವೆಲ್ಲವನ್ನೂ ರಿಪೇರಿ ಮಾಡಿ ಕೊಡಲಿ. ಅನಾಥ ಮಕ್ಕಳಿಗೆ ಸವಲತ್ತನ್ನು ಮಾಡಿಕೊಡಲಿ. ಮಕ್ಕಳಿಗೆ ಅಲ್ಲಿ ಕುಡಿಯುವ ನೀರು ಇಲ್ಲ. ಶನಿವಾರ ಮತ್ತು ಭಾನುವಾರ ಮಕ್ಕಳಿಗೆ ಚಲನಚಿತ್ರ ತೋರಿಸುತ್ತಿದ್ದು ಈಗ ಅದನ್ನು ತೋರಿಸುತ್ತಾ ಇಲ್ಲ. ಈ ಪರಿಸ್ಥಿತಿಯಲ್ಲಿ ಇದ್ದರೆ, ನಾವು ಏಕೆ ಇಲ್ಲಿ ಮಾತನಾಡಬೇಕು? ಇಲ್ಲಿ ನಿಜವಾಗಿ ನನಗೆ ಮಾತನಾಡತಕ್ಕಂಥ ಮನಸ್ಸು ಇಲ್ಲ. ಅಷ್ಟು ಬೇಜಾರಿನಿಂದ ಈ ಮಾತನ್ನು ಹೇಳಬೇಕಾಗಿದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎಂದರೆ, ಜನರಿಗೆ ಒಂದು ತರಹ ಅಸಡ್ಡೆ ಭಾವನೆ ಇದೆ. ಇದನ್ನು ತಾವು ಲಘುವಾಗಿ ತೆಗೆದುಕೊಳ್ಳಬಾರದು. ತಾವು ವಿಧವೆಯರಿಗೆ ೫೦ ರೂಪಾಯಿಗಳನ್ನು ಪ್ರತಿ ತಿಂಗಳು ಕೊಡುತ್ತಿದ್ದೀರಿ. ನಾನು ಮಂತ್ರಿಯಾಗಿದ್ದಾಗ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೆ. ೧೮ ವರ್ಷದಿಂದ ೩೫ ವರ್ಷದೊಳಗೆ ಯಾರು ವಿಧವೆಯರಾಗುತ್ತಾರೆ, ಅವರು ಪುನರ್ ವಿವಾಹ ಆದರೆ ಮೂರು ಸಾವಿರ ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಡುತ್ತೇವೆಂದು. ನಿಮ್ಮ ಅರ್ಥದಲ್ಲಿ ಇದು ಏನಾಗಿದೆ ಎಂದರೆ, ಯಾರೇ ಆಗಲೀ, ವಿಧವೆಯರಿಗೆ ೫೦ ರೂಪಾಯಿ ಕೊಟ್ಟು, ಅವರು ಸುಮ್ಮನೆ ಕುಳಿತುಕೊಳ್ಳಬೇಕು. ಅವರು ಪುನರ್ ವಿವಾಹ ಆಗುವುದಕ್ಕೆ ಏಕೆ ಅವಕಾಶ ಕೊಡಬಾರದು? ನೀವು ೫೦ ರೂಪಾಯಿಗಳನ್ನು ಕೊಟ್ಟರೆ, ಅದರ ಆಸೆಯಿಂದ ಅವರು ಸುಮ್ಮನೆ ಕುಳಿತುಕೊಳ್ಳಬೇಕೇ?

ಶ್ರೀ ವಿ.ಎಲ್. ಪಾಟೀಲ್.—ಅವರು ಮದುವೆ ಆಗುವುದಕ್ಕೆ ನಾವು ಅಡ್ಡಿ ಹೋಗಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ನೀವು ಆಸಕ್ತಿ ತೆಗೆದುಕೊಂಡು ಮಾಡಿ. ಹಿಂದೆ ೩ ಸಾವಿರ ರೂಪಾಯಿಗಳ ಸಹಾಯ ಧನವನ್ನು ಕೊಟ್ಟಿದ್ದೇವೆ, ಬೇಕಾದರೆ ಹಿಂದಿನ ರೆಕಾರ್ಡ್ ತೆಗೆದುಕೊಂಡು ನೋಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಚರ್ಚೆ ಗಂಭೀರವಾಗಿ ನಡೆದಿದೆ, ಸಲಹೆಗಳನ್ನು ಚೆನ್ನಾಗಿ ಕೊಡುತ್ತಿದ್ದಾರೆ. ಎಲ್ಲಿ ತಪ್ಪು ಮಾಡುತ್ತಿದ್ದಾರೆ, ಅದನ್ನು ಸರಿಮಾಡಿ ಎನ್ನತಕ್ಕಂಥ ವಿಚಾರದ ಬಗ್ಗೆ ಅವರ ಅನುಕಂಪ ಇದೆ.

† ಶ್ರೀ ಕೆ. ಮಲ್ಲಪ್ಪ.—ತಮ್ಮ ಅಧಿಕಾರದಲ್ಲಿ ಈ ರೀತಿ ಎಷ್ಟು ಮದುವೆಗಳನ್ನು ಮಾಡಿದ್ದೀರಿ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಹಿಂದಿನ ರೆಕಾರ್ಡ್ ತೆಗೆದುನೋಡಿ, ನಿಮಗೆ ತಿಳಿಯುತ್ತದೆ. ಇಂತಹ ಕುಂದುಕೊರತೆಗಳನ್ನು ಹೇಳುವುದಕ್ಕೆ ನಾವು ಇದ್ದರೂ. ಸ್ತ್ರೀ ಕುಲಕ್ಕೇ ನಮ್ಮ ಅನುಕಂಪವನ್ನು ತೋರಿಸಬೇಕಾಗುತ್ತದೆ. ಬರೀ ೫೦ ರೂಪಾಯಿಗಳನ್ನು ಒಂದು ದೊಡ್ಡ ದಕ್ಷಿಣೆ ಕೊಟ್ಟಹಾಗೆ ಕೊಡುವುದು ಬೇಡ. ಅವರು ಸ್ವಂತವಾಗಿ ಜೀವನ ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಡಿ. ಆ ೫೦ ರೂಪಾಯಿಗಳಿಂದ ಏನೂ ಪ್ರಯೋಜನ ಇಲ್ಲ. ಈಗಿನ ಬೆಲೆ ಏರಿಕೆಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಹಿಂದೆ ನಾವು ಮೂರು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದಕ್ಕೆ ಬೇಕಾದರೆ ಇನ್ನೂ ಎರಡು ಸಾವಿರ ಜಾಸ್ತಿ ಮಾಡಿ. ಮಹಿಳೆಯರನ್ನು ಪಾತಾಳಕ್ಕೆ ತುಳಿಯುತ್ತಿದ್ದಾರೆ ಎನ್ನುವ ನಿದರ್ಶನವನ್ನು ನೋಡುತ್ತಿದ್ದೇವೆ. ನೀವು ದೊಡ್ಡ ಕೆಲಸವನ್ನು ಮಾಡಿದ್ದೇವೆಂದು ಹೇಳುವುದಲ್ಲ. ಜೀವನ ಪರ್ಯಂತ ನಿರ್ಭೀತಿಯಿಂದ ಇರುವಂತಹ ವ್ಯವಸ್ಥೆಯಾಗಬೇಕು. ಇವತ್ತು ಗಂಡಸರು, ತಮ್ಮ ಹೆಂಡತಿ ಕಾಲವಾದರೆ ಅವರು ಇನ್ನೊಂದು ಮದುವೆಯಾಗುವುದಿಲ್ಲವೇ? ಅದೇರೀತಿ ಇವಳೂ ಮದುವೆಯಾಗಲೀ, ಅದರಲ್ಲಿ ಏನು ತಪ್ಪು? ಇಲ್ಲದೆ ಹೋದರೆ ಪ್ರಯೋಜನವಾಗುವುದಿಲ್ಲ.

೨–೩೦ ಪಿ. ಎಂ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರು ಬೇಡವೆಂದು ಹೇಳುವುದಿಲ್ಲ, ನಿಮ್ಮ ಪಾಲಿಸಿ ಪ್ರಕಾರ ಅವರನ್ನು ರೀಹಾಬಿಲಿಟೇಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ ಪ್ರಯೋಜನವಾಗುತ್ತದೆ. ಅವರು ಸ್ವತಂತ್ರರಾಗಿ ಇರುವುದಕ್ಕೆ ಸಾಧ್ಯವಿದೆ. ದಯಮಾಡಿ ಅವರು ಹೇಳಿದುದನ್ನು ಅರ್ಥಮಾಡಿಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅವರಿಗೆ ೩೫ ವರ್ಷವಾದ ಮೇಲೂ ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—೩೫ ವರ್ಷ ಮೇಲ್ಪಟ್ಟವರಿಗೂ ಕೊಡಿ, ಅವರು ಇನ್ನೊಂದು ಮದುವೆ ಮಾಡಿಕೊಂಡರೆ ಅದಕ್ಕೆ ಅಡ್ಡ ಬರುವುದಿಲ್ಲ. ಅದುವರೆವಿಗೂ ಕೊಡಿ, ಶ್ರೀಮಾನ್ ಪಿ.ಜಿ.ಆರ್. ಸಿಂಧ್ಯ ಅವರು ಮಧ್ಯೆ ಮಧ್ಯೆ ನಿಂತುಕೊಂಡು ಮಾತನಾಡುತ್ತಾರೆ, ಅವರಿಗೆ ಪವರ್ ಅಟಾರ್ನಿ ಕೊಟ್ಟವರು ಯಾರು ? ಇದಕ್ಕೆ ಉತ್ತರ ಹೇಳಲು ಸಂಬಂಧಪಟ್ಟ ಮಂತ್ರಿಗಳಿಗೆ ಶಕ್ತಿ ಇಲ್ಲವೆ, ನಾಳೆ ಇದರ ಬಗ್ಗೆ ಉತ್ತರ ಏನು ಕೊಡುತಾರೋ ನೋಡುವ.

ಉಪಾಧ್ಯಕ್ಷರು.—ನೀವು ಸಂಬಂಧಪಟ್ಟ ವಿಷಯದ ಬಗ್ಗೆ ಮಾತನಾಡಿ.

ಶ್ರೀಮತಿ ಮನೋರಮಾ ಮಧ್ವರಾಜ್.—ತಮಗೆ ಹೆಣ್ಣು ಮಕ್ಕಳ ವಿಷಯದಲ್ಲಿ ಹೇಳುವುದಾದರೆ ಹೆಣ್ಣು ಬಾಲ್ಯದಲ್ಲಿ ತಂದೆತಾಯಿಗಳನ್ನು ಅನುಸರಿಸಿಕೊಂಡು ಬರಬೇಕು, ಮಧ್ಯೆ ಪ್ರಾಯದಲ್ಲಿ ಗಂಡನನ್ನು ಅನುಸರಿಸಿಕೊಂಡು ಬರಬೇಕು, ಮುದಿಪ್ರಾಯದಲ್ಲಿ ಮಕ್ಕಳನ್ನು ಅನುಸರಿಸಿಕೊಂಡು ಬರಬೇಕು, ನೀವು ಏನೋ ಹೇಳುತ್ತೀರಿ, ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ ಎಂದು ಹೇಳುತ್ತೀರಿ, ಕೀರ್ತಿ ತರುವುದು ಮಗನೆಯೆಂದು ತಿಳಿದುಕೊಂಡಿದ್ದೀರಿ, ತಮಗೆ ಹೇಳಬೇಕಾದರೆ, ಹೆಣ್ಣು ಮಕ್ಕಳು ಗಂಡಸರ ಹಾಗೇ ಸರಿಸಮಾನಳು, ಆದರೆ ಒಂದು ಮಾತು ನಾವು ದೈಹಿಕವಾಗಿ ದುರ್ಬಲರಾಗಿರಬಹುದು, ಮಾನಸಿಕವಾಗಿ ನಾವು ಯಾರೂ ಅಬಲೆಯರಲ್ಲ. ಮಹಿಳೆಯ ಬಗ್ಗೆ ಯಾವಾಗಲೂ ಅನುಕಂಪ ತೋರಿಸಬೇಕು. ನಾನೇ ಕಣ್ಣಾರೆ ನೋಡಿದ್ದೇನೆ, ತಹಶೀಲ್ದಾರ್ ಕಚೇರಿಗೆ ಎಷ್ಟು ಜನ ಹೆಣ್ಣುಮಕ್ಕಳು ಈ ಮಾಶಾಸನ ಬಗ್ಗೆ ತಿರುಗುತ್ತಿದ್ದಾರೆ ? ಅಂದಿನಿಂದ ಇಂದಿನವರೆವಿಗೂ ಈ ಮಾಶಾಸನ ಸಿಕ್ಕದೆ ಇರುವವರು ಬಹಳ ಜನ ಇದ್ದಾರೆ. ಮಾನ್ಯ ಸಿಂಧ್ಯರವರು ಕೆ.ಎಸ್.ಆರ್.ಟಿ.ಸಿ. ಬಸ್ ನಾಲ್ಕು ಬಸ್‌ನ್ನು ಕಳುಹಿಸಿದರೆ, ನಾನು ಅವರೆಲ್ಲರನ್ನು ಕರೆದು ತರುತ್ತೇನೆ. ಇಲ್ಲಿ ಕುಳಿತುಕೊಂಡು ಹಾಗೆ, ಹೀಗೆಯೆಂದು ಮಾತನಾಡುವುದು, ಅವರ ಪರವಾಗಿ ಉತ್ತರ ಕೊಡುವುದು ಇಂತಹ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ಸ್ವಲ್ಪ ಜಾಗ್ರತೆಯಿಂದ ಇರಿ. ಈ ಸಂದರ್ಭದಲ್ಲಿ ಈ ಬಗ್ಗೆ ನಾನು ಒಂದು ಇಂಗ್ಲೀಷ್ ಗಾದೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಏನೆಂದರೆ

"Boy is a boy till he gets a wife,
Girl is girl till she gets a life."

ಒಂದು ಹೆಣ್ಣು ಮಗು ಮದುವೆಯಾಗಿ ಹೋದರೆ, ಆ ಹೆಣ್ಣು ಬೇರೆಯೆಂದು ತಿರಸ್ಕಾರವಾಗಿ ಕಾಣುತ್ತಾರೆ. ಕೆಲವು ಸಂದರ್ಭದಲ್ಲಿ ಹುಡುಗ ಮದುವೆಯಾದ ಮೇಲೆ ತಂದೆತಾಯಿಯರನ್ನು ಆಚೆಗೆ

ಕಳುಹಿಸುತ್ತಾರೆ. ಆದರೆ ಹೆಣ್ಣು ಮಕ್ಕಳು ಮದುವೆಯಾಗಿದ್ದರೂ ಕೂಡ ತಂದೆ ತಾಯಿಂಗಳನ್ನು ತೃಣೀಕರಿಸುವುದಿಲ್ಲ. ಆದುದರಿಂದ ತಾವು ಹೆಣ್ಣು ಮಕ್ಕಳನ್ನು ತುಚ್ಛೀಕರವಾಗಿ ಕಾಣುವುದು ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಗಂಡು ಮದುವೆಯಾದ ಮೇಲೆ, ಮೊದಲು ಅತ್ತೆಯನ್ನು ಓಡಿಸುತ್ತಾರೆ.

ಶ್ರೀಮತಿ ಮನೋರಮಾ ಮಧ್ವರಾಜ್.—ನಾನು ಮೊದಲೇ ಹೇಳಿದ್ದೇನೆ. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಇದ್ದೇ ಇದೆ. ಮಾನ್ಯ ಸದಸ್ಯರು ಅತ್ತೆಯನ್ನು ಓಡಿಸುತ್ತಾರೆಂದು ಹೇಳುತ್ತಾರೆ ಅದಕ್ಕೇನಾದರೂ ಸರ್ಕಾರದ ಆರ್ಡರ್ ಇದೆಯೇ ? ನಾನು ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಮಾತು ಹೇಳಿದರು. ಅದೇನೆಂದರೆ ಅಗರಬತ್ತಿ ಕಾರ್ಖಾನೆಯಲ್ಲಿ ಏನು ಕೆಲಸ ಮಾಡುವವರು, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಇರುತ್ತಾರೆ. ಈ ಒಂದು ಉದ್ಯೋಗದಲ್ಲಿ ನಿರಂತರವಾಗಿ ಮಹಿಳೆಯರೇ ಕೆಲಸ ಮಾಡುತ್ತಾ ಇರುವುದರಿಂದ, ಆ ಮಹಿಳೆಯರು ಈ ಆಗರಬತ್ತಿಯ ವಾಸನೆಯನ್ನು ಸಹಿಸಿಕೊಂಡು ಕೆಲಸ ಮಾಡುವುದರಿಂದ ಅವರಿಗೆ ಬೇಗನೆ ಟಿ. ಬಿ. ಕಾಯಿಲೆಯ ಲಕ್ಷಣಗಳು ಬರುತ್ತವೆ. ಅವರಿಗೆ ಯಾವುದೇ ಒಂದು ಸೆಕ್ಯೂರಿಟಿ ಇಲ್ಲ. ಆದ್ದರಿಂದ ಈಗಲಾದರೂ ಆ ಬಗ್ಗೆ ಕಾನೂನು ತಿದ್ದುಪಡಿ ತಂದು ಅವರನ್ನು ರಕ್ಷಣೆ ಮಾಡುವುದಕ್ಕೆ ಅವರ ಬಗ್ಗೆ ನಿಮಗೆ ಕಾಳಜಿ ಇದ್ದರೆ ಆ ಕೆಲಸವನ್ನು ನೀವು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಇನ್ನೊಂದು ವಿಷಯ ಏನೆಂದರೆ, ಮಾನ್ಯ ವಿದ್ಯಾ ಮಂತ್ರಿಗಳು ಈ ವರ್ಷ ಸುಮಾರು ೩೦೦–೪೦೦ ಹೈಸ್ಕೂಲುಗಳನ್ನು ಸ್ಥಾಪನೆ ಮಾಡಿದ್ದಾರೆ. ಅದೇ ರೀತಿಯಾಗಿ ಹಿಂದುಳಿದ ವರ್ಗದ ಮಕ್ಕಳಿಗೆ, ಹರಿಜನ ಮಕ್ಕಳಿಗೆ, ಹಾಸ್ಟೆಲುಗಳನ್ನು ಏನಾದರೂ ಜಾಸ್ತಿ ಮಾಡಿದ್ದೀರಾ ? ನನ್ನ ಅನುಭವದ ಮೇಲೆ ಹೇಳಬೇಕಾದರೆ ಎಷ್ಟು ಹೈಸ್ಕೂಲುಗಳನ್ನು ಸ್ಥಾಪನೆ ಮಾಡಿದ್ದೀರಿ ಅಷ್ಟು ಹಾಸ್ಟೆಲುಗಳನ್ನು ಸ್ಥಾಪನೆ ಮಾಡಿಲ್ಲವೆಂದು ಹೇಳುತ್ತೇನೆ. ತಮಗೆ ಹಾಸ್ಟೆಲ್ ವಿಚಾರಗಳನ್ನು ಹೇಳಬೇಕಾದರೆ ಎಷ್ಟೋ ಹಾಸ್ಟೆಲುಗಳನ್ನು ಸರಿಯಾಗಿ ಕ್ಲೀನ್ ಮಾಡಿಲ್ಲ. ಮಡಕೇರಿಯಲ್ಲಿ ಒಂದು ಹರಿಜನರ ಹಾಸ್ಟೆಲು ಬಿದ್ದು ಹೋಗಿ ಆ ಮಕ್ಕಳಿಗೆ ತುಂಬಾ ಅವಸ್ಥೆಯಾಗಿದೆ, ಅದರ ಬಗ್ಗೆ ತಾವು ತಿಳಿಸಬೇಕು. ಹಾಗೆಯೇ ವೀರಾಜ್‌ಪೇಟೆಯಲ್ಲಿ ಎಷ್ಟು ಹೈಸ್ಕೂಲ್‌ಗಳನ್ನು ಕಟ್ಟಿದ್ದೀರಿ ಅಲ್ಲಿಗೆ ಎಷ್ಟು ಹಾಸ್ಟೆಲ್‌ಗಳನ್ನು ಸ್ಯಾಂಕ್ಷನ್ ಮಾಡಿದರೆ ಒಳ್ಳೆಯದು. ನಾನು ಮೊನ್ನೆ ತಾನೇ ಅಲ್ಲಿ ಹೋಗಿ ವಿಸಿಟ್ ಮಾಡಿ ಬಂದಿದ್ದೇನೆ. ಅಲ್ಲಿನ ಪರಿಸ್ಥಿತಿ ಏನು ಇದೆ ಎನ್ನುವುದನ್ನು ನೋಡಿದ್ದೇನೆ, ಇಲ್ಲಿ ನಿಮ್ಮನ್ನು ನೋಡಿದರೆ ಅಲ್ಲಿನ ಪರಿಸ್ಥಿತಿಯ ಬಗ್ಗೆ, ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಅಷ್ಟು ಆಸಕ್ತಿ ಇಲ್ಲ ಎಂದು ಕಾಣುತ್ತದೆ. ಆದುದರಿಂದ ನೀವು ಈ ಇಲಾಖೆಯನ್ನು ಏನು ವಹಿಸಿಕೊಂಡಿದ್ದೀರೋ, ಅದನ್ನು ಬಿಟ್ಟು ಖಾತಾರಹಿತ ಮಂತ್ರಿಗಳಾಗಿ ಇರಿ, ಈ ಬಡಮಕ್ಕಳಿಗೆ ತೊಂದರೆ ಮಾಡದೇ ಇದ್ದ ಹಾಗೆ ತಾವು ದೊಡ್ಡ ಮನಸ್ಸು ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲೇ ನಿಮ್ಮ ಕಣ್ಣಿಗೆ ಕಾಣದೇ ಇರುವ ಇನ್ನೊಬ್ಬರು ಮಹಿಳೆಯರು, ಲೀಲಾದೇವಿ ಆರ್ ಪ್ರಸಾದ್‌ರವರು ಇದ್ದಾರೆ, ಅವರಿಗಾದರೂ ಅವಕಾಶ ಮಾಡಿಕೊಡಿ.

ಶ್ರೀ ಬಸವರಾಜ ಪಾಟೀಲ್.—ದಕ್ಷಿಣ ಕನ್ನಡ ಜಿಲ್ಲೆಗೆ ಯಾವಾಗಲೂ ಇಬ್ಬರು ಮಂತ್ರಿಗಳು ಇರಬೇಕು, ಅದರಲ್ಲಿ ಈಗಾಗಲೆ ಒಂದು ಕೊಟ್ಟಿದ್ದಾರೆ, ಇನ್ನೊಂದನ್ನೂ ಕಳೆದುಕೊಳ್ಳಬೇಡಿ, ಅವರಿಗೆ ಕೊಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅವರ ಕೈಯಲ್ಲಿ ಆಗುವುದಿಲ್ಲ ಎಂದರೆ ನನ್ನ ಕೈಯಲ್ಲೂ ಆಗುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಇನ್ನು ಭಿಕ್ಷಾಟನೆ ಬಗ್ಗೆ ಹೇಳಬೇಕಾದರೆ ಈ ಬಗ್ಗೆ ಒಂದು 'ಚ' ಕಾರ ಶಬ್ದ ಇಲ್ಲ. ಯಾರೇ ಆಗಲಿ ದೇವಸ್ಥಾನಕ್ಕೆ ನೆಮ್ಮದಿಯಿಂದ ಹೋಗಲಿಕ್ಕಾಗುವುದಿಲ್ಲ. ಸಾಲಾಗಿ ಇವರು ಭಿಕ್ಷಾಟನೆಗೆ ಕುಳಿತ್ತಿರುತ್ತಾರೆ. ಇದಕ್ಕೇನಾದರೂ ತಾವು ಒಂದು ವ್ಯವಸ್ಥೆ ಮಾಡಿದ್ದೀರಾ ? ಹಳ್ಳಿಗಳಲ್ಲಿ ಅಂಥಾವರಿಗೇನಾದರೂ ಉದ್ಯೋಗವನ್ನು ಕಲ್ಪಿಸಿಕೊಟ್ಟಿದ್ದೀರಾ ? ದಯವಿಟ್ಟು ತಾವು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಳ್ಳಿಯಲ್ಲಿ ಜಮೀನೇನಾದರೂ ಇದ್ದರೆ

ಅಲ್ಲೇ ಅವರಿಗೇನಾದರೂ ಒಂದು ವ್ಯವಸ್ಥೆ ಮಾಡಿ ಅವರನ್ನು ಅಲ್ಲೇ ದುಡಿಸುವ ಹಾಗೆ ಏನಾದರೂ ಮಾಡಿದ್ದೀರಾ ? ನಿಜವಾಗಿಯೂ ಹೇಳಬೇಕಾದರೆ ಈ ಭಿಕ್ಷಾಟನೆ ನಮ್ಮ ಕರ್ನಾಟಕದಲ್ಲಿರುವಷ್ಟು ಬೇರೆ ಯಾವ ರಾಜ್ಯದಲ್ಲೂ ಇಲ್ಲ ಈ ಬಗ್ಗೆ ಒಂದು ರೀಹ್ಯಾಬಿಲಿಟೇಷನ್ ಸೆಂಟರ್ ಮಾಡಿಕೊಂಡು ಅವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಹರಿಜನರಿಗೆ ಒಂದು ಕೋರ್ಟ್ ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದೀರಿ. ಬಹುಶಃ ಇನ್ನೊಂದು ಚುನಾವಣೆ ಬರುವ ತನಕ ಮಾಡುತ್ತೀರೊ ಇಲ್ಲವೋ, ಏನೋ ನನಗೆ ಅರ್ಥವಾಗುವುದಿಲ್ಲ. ಈ ಕೋರ್ಟಿಗೆ ಹರಿಜನ ಜಡ್ಜನ್ನೂ ಏನಾದರೂ ನೇಮಕ ಮಾಡುವ ವ್ಯವಸ್ಥೆ ಮಾಡಿದ್ದೀರಾ ? ಅಥವಾ ಇದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ಎನ್ನುವುದರ ಬಗ್ಗೆ ತಾವು ವಿವರಣೆ ಕೊಡಬೇಕು ಎಂದು ಕೇಳುತ್ತೇನೆ. ಈ ಇಲಾಖೆಯ ಆಡಳಿತದ ಬಗ್ಗೆ ಹೇಳುವುದಾದರೆ ಆಡಳಿತದಲ್ಲಿ ನೀವು ಸುಧಾರಣೆಯನ್ನು ತರದಿದ್ದರೆ ಖಂಡಿತವಾಗಿಯೂ ಇದರಲ್ಲಿ ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ, ಸಮಾಜ ಕಲ್ಯಾಣ ಇಲಾಖೆ ಎಂದು ಮಾಡಿದ್ದೀರಿ, ಆದರೆ ಮಹಿಳಾ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಕ್ಕೆ ಬೇರೆ ಬೇರೆ ನಿರ್ದೇಶಕರನ್ನಿಟ್ಟಿದ್ದೀರಿ, ಇದರಲ್ಲಿ ಸಮಾಜ ಕಲ್ಯಾಣ ಮತ್ತು ಲೇಬರ್ ಇಲಾಖೆ ಎರಡನ್ನೂ ಸೇರಿಸಿ ಒಬ್ಬರೇ ಕಾರ್ಯದರ್ಶಿಯನ್ನು ಇಟ್ಟಿದ್ದೀರಿ. ಅವರು ಹೆಚ್ಚಿನ ಒಂದು ಸಮಯವನ್ನು ಈ ಕಾರ್ಮಿಕರ ವಿವಾದಕ್ಕೇ ಕಳೆಯುವುದರಿಂದ ಬೇರೆ ವಿಷಯಕ್ಕೆ ಗಮನ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಕಾರ್ಮಿಕರ ಬಗ್ಗೆ ಕಾಳಜಿ ವಹಿಸುತ್ತೇನೆ, ನೀವು ಸಮಾಜ ಕಲ್ಯಾಣದ ಬಗ್ಗೆ ಕಾಳಜಿ ವಹಿಸಿದ್ದೀರಿ, ಒಬ್ಬರಿಗೂ ಏನೂ ಮಾಡಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ನಾವು ಮೊದಲೆ ಹೇಳಿದಹಾಗೆ, ಈ ಸಮಾಜ ಕಲ್ಯಾಣ ಇಲಾಖೆಗೆ ಪ್ರತ್ಯೇಕವಾದ ಕಾರ್ಯದರ್ಶಿಯನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಯಾವುದೇ ಹೆಡ್ ಆಫೀಸ್‌ಗೆ ಹೋಗಿ ನೋಡಿ ಮೂರು ಜನ ಜಾಯಿಂಟ್ ಡೈರೆಕ್ಟರ್ಸ್, ೫ ಜನ ಡೆರೆಕ್ಟರ್ಸ್, ೩ ಜನ ಅಸಿಸ್ಟೆಂಟ್ ಡೈರೆಕ್ಟರ್ಸ್ ಇದ್ದಾರೆ, ಅವರಿಗೇನು ಕೆಲಸ ? ನಮ್ಮ ತಾಲ್ಲೂಕಿನಲ್ಲಿ ಒಬ್ಬನೇ ಒಬ್ಬ ಅಧಿಕಾರಿ ಎಲ್ಲಾ ಕೆಲಸವನ್ನು ನೋಡಿಕೊಳ್ಳುತ್ತಾನೆ. ಹಾಸ್ಟೆಲ್‌ಗಳನ್ನು ನೋಡಿಕೊಳ್ಳುತ್ತಾನೆ ಇದನ್ನೆಲ್ಲಾ ತಿಳಿದುಕೊಳ್ಳಲು ತಾವು ಅಲ್ಲಿಗೆ ಪ್ರವಾಸ ಮಾಡುವುದಿಲ್ಲ, ನೋಡುವುದಿಲ್ಲ. ನೀವು ಪ್ರವಾಸ ಮಾಡಿ ಇದನ್ನೆಲ್ಲಾ ನೋಡಬೇಕು. ಅಲ್ಲಿಗೆ ಯೋಗ್ಯ ಅಧಿಕಾರಿಗಳನ್ನು ನೇಮಕ ಮಾಡಬೇಕು. ಇದನ್ನೆಲ್ಲಾ ನೋಡಿಕೊಂಡು ಹೋಗುವವರು ಯಾರು ಎನ್ನುವುದನ್ನು ತಿಳಿಯಬೇಕು. ಆ ಇಲಾಖೆಯಲ್ಲಿ ಇಂತಹ ಒಂದು ಪರಿಸ್ಥಿತಿ ಇರುವಾಗ ನೀವು ಈ ಒಂದು ಬೇಡಿಕೆಯನ್ನು ಇಟ್ಟಿದ್ದೀರಿ. ಇದಕ್ಕೆ ನಾವು ಹೇಗೆ ಹಣವನ್ನು ಮಂಜೂರು ಮಾಡುವುದು ಸಾಧ್ಯ ಎನ್ನುವುದನ್ನು ಆಲೋಚನೆ ಮಾಡಬೇಕೆಂದು ನನಗೆ ಕಾಣುತ್ತದೆ. ನಾನು ಹಿಂದೆ ಮಂತ್ರಿಯಾಗಿದ್ದಾಗ ವಹಿಸಿಕೊಂಡಿದ್ದ ಇಲಾಖೆಯಲ್ಲಿ ೫ ಜನ ಮಹಿಳಾ ಐ.ಎ.ಎಸ್. ಅಧಿಕಾರಿಗಳು ಅಧಿಕಾರವನ್ನು ವಹಿಸಿಕೊಂಡಿದ್ದರು, ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಇಂತಹ ಒಂದು ಇಲಾಖೆ ಈಗ ಅಧೋಗತಿಯ ಇಲಾಖೆಯಾಗಿ ಆದರೆ ಯಾವ ರೀತಿಯಾಗಿ ಸಮಾಜ ಕಲ್ಯಾಣ ಉದ್ಧಾರವಾಗುತ್ತದೆ ? ಹಿಂದುಳಿದ ವರ್ಗದ ಮಕ್ಕಳಿಗೆ, ಕೆಲವು ಕಡೆ ಹಾಸ್ಟೆಲ್ ಪ್ರಾರಂಭವಾಗಿದೆ, ಇನ್ನು ಕೆಲವು ಕಡೆ ಹಾಸ್ಟೆಲ್ ಇನ್ನೂ ಪ್ರಾರಂಭವಾಗಿಲ್ಲ. ಅವರಿಗೆ ಕಟ್ಟಡವನ್ನು ಸಹಾ ಕಟ್ಟದಿದ್ದರೆ ಏನು ಪ್ರಯೋಜನ ? ಅವರನ್ನು ಇನ್ನು ಬಾಡಿಗೆಯ ಕಟ್ಟಡದಲ್ಲಿಯೆ ಇಟ್ಟು ಬಿಟ್ಟರೆ ಆ ಮಕ್ಕಳಿಗೆ ಇರುವ ಸೌಲಭ್ಯವನ್ನು ಕಳೆದುಕೊಳ್ಳುತ್ತಾರೆ. ಕೆಲವು ಕಡೆ ಕಟ್ಟಡವನ್ನು ನೋಡಿದರೆ ನೀರಿದ್ದರೆ ಲೈಟ್ ಇರುವುದಿಲ್ಲ, ಲೈಟ್ ಇದ್ದರೆ ನೀರಿರುವುದಿಲ್ಲ. ಕೆಲವು ಕಟ್ಟಡಗಳು ಅಯೋಗ್ಯವಾಗಿರುತ್ತವೆ. ಆದ್ದರಿಂದ ಯೋಗ್ಯವಾದ ಕಟ್ಟಡವನ್ನು ಕಟ್ಟಿಸಿಕೊಡುವುದರ ಕಡೆಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬೆಂಗಳೂರಿನ ಒಂದು ಹೈಸ್ಕೂಲ್‌ನಲ್ಲಿ ಬಹುಶಃ ತಾವು ಯಾರೂ ಹೋಗಿ ನೋಡಿಲ್ಲವೆಂದು ಕಾಣುತ್ತದೆ, ಎರಡು ವರ್ಷದಿಂದಲೂ ಸರ್‌ಪ್ರೈಸ್ ಇನ್‌ಸ್ಪೆಕ್ಷನ್ ಸಹಾ ಯಾರೂ ಮಾಡಿಲ್ಲ ಆ ಶಾಲೆಗೆ ೪೫ ಮಕ್ಕಳು ಹೋಗುತ್ತಿದ್ದರು. ಅಲ್ಲಿರತಕ್ಕಂತಹ ಹೌಸ್ ಫಾದರ್ ಚೆನ್ನಾಗಿ ಥಳಿಸಿದ್ದರಿಂದ ಎಲ್ಲಾ ಮಕ್ಕಳು ಬಿಟ್ಟು ಕೊನೆಗೆ ೧೨ ಮಕ್ಕಳು ಉಳಿದುಕೊಂಡಿದ್ದಾರೆ. ಈ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ? ಇದು ಬಹಳ ಒಳ್ಳೆಯ ಖಾತೆ. ಕೈಗಾರಿಕಾ ಖಾತೆಗಿಂತ ಲೋಕೋಪಯೋಗಿ ಇಲಾಖೆಗಿಂತ ಮಹಾ ದೊಡ್ಡ ಖಾತೆ. ಬಡವರ ಬಗ್ಗೆ ಚಿಂತನೆ ಮಾಡತಕ್ಕಂತಹ ವ್ಯಕ್ತಿಗೆ ಮಹಿಳೆಯರ ಮತ್ತು

ಮಕ್ಕಳ ಕಲ್ಯಾಣದ ಬಗ್ಗೆ ಚಿಂತನೆ ಮಾಡತಕ್ಕಂಥ ವ್ಯಕ್ತಿಗೆ ಇದು ಬಹಳ ಒಳ್ಳೆಯ ಖಾತೆ. ನಾನು ಈ ಒಂದು ಇಲಾಖೆ ಮಂತ್ರಿಯಾಗಿದ್ದಾಗ, ಅನೇಕ ಕೆಲಸ ಕಾರ್ಯಗಳ ಬಗ್ಗೆ ಒಂದು ರೂಪರೇಷೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇದಕ್ಕಾಗಿ ಪ್ರತ್ಯೇಕವಾಗಿ ಇಲಾಖೆಯನ್ನು ಮಾಡಿ, ಹಲವಾರು ಕೆಲಸಗಳನ್ನು ಮಾಡಿಸಿದ್ದೇನೆಂದು ಹೆಮ್ಮೆಯಿಂದ ಹೇಳುತ್ತೇನೆ. ಈ ಇಲಾಖೆಯಲ್ಲಿ ನಾನು ಪ್ರಾಮಾಣಿಕವಾಗಿ ದುಡಿದಿದ್ದೇನೆ. ಡಾ॥ ಪುಷ್ಪಾವತಿಯವರು ಹೇಳಿದಹಾಗೆ, ಈ ಇಲಾಖೆಯಲ್ಲಿ ಭಾರೀ ಹೆಗ್ಗಣಗಳಿವೆ. ಅವುಗಳನ್ನು ಕೊಲ್ಲುವುದಕ್ಕೆ ಪಂಜಾಬಿನಲ್ಲಿ ಬಳಸುವಂತಹ ಸ್ಟೆನ್‌ಗನ್ನುಗಳಿಂದ, ಮೆಷಿನ್ ಗನ್ನುಗಳಿಂದ ಹೊಡೆಯಬೇಕಾಗುತ್ತದೆ, ಸಾಧಾರಣ ಗನ್ನುಗಳಿಂದ ಸಾಧ್ಯವಿಲ್ಲ. ಬಹಳ ಕೆಟ್ಟ ಅಧಿಕಾರಿಗಳಿದ್ದಾರೆ, ಅವರಿಗೆ ದಯವಿಟ್ಟು ರಕ್ಷಣೆ ಕೊಡುವುದಕ್ಕೆ ಹೋಗಬೇಡಿ. ಅಧ್ಯಕ್ಷರಾಗಿರತಕ್ಕಂಥ ಅಪ್ರಾಮಾಣಿಕರಾಗಿರತಕ್ಕಂತಹ ಅಧಿಕಾರಿಗಳನ್ನು ತೆಗೆದುಹಾಕಿ, ಅದಷ್ಟು ಒಳ್ಳೆಯ ಅಧಿಕಾರಿಗಳನ್ನು ತರುವುದಕ್ಕೆ ಪ್ರಯತ್ನಮಾಡಿ. ನಾನು ಇದ್ದಾಗ, ಭ್ರಷ್ಟ ಅಧಿಕಾರಿಗಳನ್ನು ದೂರ ಹಾಕಿದ್ದೆ. ಇವೊತ್ತು ತಾವು ಅವರೆಲ್ಲರನ್ನೂ ಸೇರಿಸಿಕೊಂಡಿದ್ದೀರಿ. ಇದು ನಿಮ್ಮ ಪ್ರಾಮಾಣಿಕತೆಯನ್ನು ತೋರಿಸುತ್ತದೆ. ಇನ್ನು ಸಮಗ್ರ ಬಾಲವಿಕಾಸ ಯೋಜನೆ ವ್ಯಾಪ್ತಿಯಲ್ಲಿ ಹುಟ್ಟಿದ ಮಗುವಿನಿಂದ ೬ ವರ್ಷದ ಮಗುವಿನವರೆಗೂ ಮತ್ತು ಗರ್ಭಿಣಿ ಸ್ತ್ರೀಯರಿಗೂ ಸವಲತ್ತುಗಳನ್ನು ಕಲ್ಪಿಸಬೇಕಾಗಿದೆ. ದೇವರ ದಯೆಯಿಂದ ಹೊಸದಾಗಿ ಯಾವುದೇ ರೀತಿಯ ಕಟ್ಟಡಗಳನ್ನು ಒದಗಿಸಿಲ್ಲ. ವರ್ಷೇ ವರ್ಷೇ ಇಂತಹ ಯೋಜನೆಗಳನ್ನು ಜಾರಿಮಾಡದಿದ್ದರೂ, ವಾಸ್ತವ್ಯಕ್ಕೆ ಒಳ್ಳೆಯ ಕಟ್ಟಡಗಳನ್ನು ಒದಗಿಸಬೇಕಾದ್ದು ನಿಮ್ಮ ಕರ್ತವ್ಯ. ಬಾಡಿಗೆ ಕಟ್ಟಡದಲ್ಲಿ ಮಕ್ಕಳನ್ನು ಇಡುವುದು ಸಮಂಜಸವಲ್ಲ. ಆದಷ್ಟೂ ಎಲ್ಲಾ ಭಾಗದಲ್ಲಿಯೂ ಅಂಗನವಾಡಿ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಹಿಳಾ ಮಂಡಳಿಗಳು ಕೂಡ ಹಾಗೇ ಇವೆ ಮುಖ್ಯವಾಗಿ ಹಳ್ಳಿಯ ಮಹಿಳೆಯರಿಗೆ ತಮ್ಮ ಸ್ವಂತ ಕಾಲಮೇಲೆ ನಿಂತುಕೊಂಡು ಜೀವನ ನಿರ್ವಹಣೆಗೆ ಅವಕಾಶ ಮಾಡಿಕೊಡುವಂತಹ ಹಲವಾರು ಯೋಜನೆಗಳು ಇವೆ. ಈ ಯೋಜನೆಗಳ ಫಲ ಪಟ್ಟಣಪ್ರದೇಶಗಳಲ್ಲಿರತಕ್ಕಂಥ ವಿದ್ಯಾವಂತ ಮಹಿಳೆಯರಿಗೆ ಮಾತ್ರ ಸಿಗುತ್ತಿದೆ. ಹಳ್ಳಿಯ ಮಹಿಳೆಯರಿಗೆ ಯಾವುದೇ ರೀತಿಯ ಸವಲತ್ತುಗಳು ಸಿಗುವುದಿಲ್ಲ. ಅವರಿಗೆ ಪ್ರಚಾರ ಮಾಧ್ಯಮವೂ ಇಲ್ಲ. ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ತೀರಾ ಬಡವರಿಗೆ ಒಂದೊಂದು ರೇಡಿಯೋಗಳನ್ನು ಒದಗಿಸಿಕೊಡಿ. ಅದರ ಮುಖಾಂತರ ಸರ್ಕಾರ ಕೊಡತಕ್ಕಂತಹ ಸವಲತ್ತುಗಳನ್ನು ತಿಳಿದುಕೊಂಡು, ಮಧ್ಯವರ್ತಿಗಳ ಕೈಗೆ ಸಿಕ್ಕದಂತೆ, ನೇರವಾಗಿ ಸರ್ಕಾರದ ಯೋಜನೆಯ ಫಲ ಬಡವರಿಗೆ ಸಿಗುವುದಕ್ಕೆ ಅನುಕೂಲವಾಗುತ್ತದೆ. ಇವತ್ತೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾವಂತರಿಲ್ಲ. ಪತ್ರಿಕೆಗಳನ್ನು ಓದುವುದಕ್ಕೆ ಬರುವುದಿಲ್ಲ. ಸರ್ಕಾರದ ಯೋಜನೆಗಳ ಬಗ್ಗೆ ಅವರಿಗೆ ಓದುವುದಕ್ಕೆ ಬರುವುದಿಲ್ಲ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ಶಾಸಕರುಗಳಿಗೆ ಬ್ರೀಫ್‌ಕೇಸ್ ಕೊಡುವ ಬದಲು, ಹಳ್ಳಿಯಲ್ಲಿರುವ ತೀರಾ ಬಡವರಿಗೆ ಒಂದೊಂದು ರೇಡಿಯೋಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಉಪಾಧ್ಯಕ್ಷರೆ, ಹರಿಜನ ಕಾಲೋನಿಗಳಿಗೆ ಸ್ಪೆಷಲ್ ಕಾಂಪೋನೆಂಟ್ ಯೋಜನೆಯಲ್ಲಿ ರಸ್ತೆಗಳನ್ನು ಮಾಡಿಸುವ ಬಗ್ಗೆ, ಇನ್ನಿತರ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದರ ಬಗ್ಗೆ ಕೇಂದ್ರದವರು ಬಹಳಷ್ಟು ಹಣವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿ ಇರತಕ್ಕ ಹರಿಜನ ಕೇರಿಗಳಿಗೆ ಏನೇನು ಸೌಲಭ್ಯಗಳನ್ನು ಒದಗಿಸಿದ್ದೀರಿ ? ಒಂದು ತಾಲ್ಲೂಕಿನಲ್ಲಿ ೧೦೦ ಹರಿಜನ ಗಿರಿಜನ ಕುಟುಂಬಗಳಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದ್ದೀರಿ. ರಾಜ್ಯದಲ್ಲಿ ೧೭೫ ತಾಲ್ಲೂಕುಗಳಿದ್ದು, ಎಷ್ಟು ತಾಲ್ಲೂಕುಗಳಲ್ಲಿ ಹರಿಜನ ಗಿರಿಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ ಎನ್ನುವ ಅಂಕಿಸಂಖ್ಯೆಗಳನ್ನು ಸದನದ ಮುಂದಿಡಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲ, ಪುರಸಭೆಗಳಲ್ಲಿ ಮತ್ತು ಪಂಚಾಯಿತಿಗಳಲ್ಲಿ ಅವುಗಳ ಆದಾಯದ ಶೇಖಡ ೧೮ರಷ್ಟು ಭಾಗವನ್ನು ಹರಿಜನ ಗಿರಿಜನರ ಅಭಿವೃದ್ಧಿ ಸಲುವಾಗಿ ಖರ್ಚು ಮಾಡಬೇಕೆಂದು ಕಾನೂನಿದೆ. ಆ ಕಾನೂನಿನಂತೆ, ರಾಜ್ಯದಲ್ಲಿರತಕ್ಕ ಎಷ್ಟು ಪಂಚಾಯಿತಿಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆಯೆಂದು ಅಂಕಿಅಂಶಗಳನ್ನು ಸದನದ ಮುಂದಿಡಬೇಕು. ನನಗೆ ತಿಳಿದಮಟ್ಟಿಗೆ ನಮ್ಮ ಜಿಲ್ಲೆಯಲ್ಲಿ ಈ ಒಂದು ಕೆಲಸ ಸ್ಥಗಿತಗೊಂಡಿದೆ. ತಾವು ಅಧಿಕಾರಕ್ಕೆ ಬಂದಮೇಲೆ, ಪಂಚಾಯಿತಿಗಳನ್ನು ರದ್ದುಮಾಡಿ, ಮಹಾ ದೊಡ್ಡ ಸಾಧನೆಯನ್ನು ಮಾಡಿದ್ದೀರಿ. ಪಂಚಾಯಿತಿಗಳ ಕೆಲಸಕಾರ್ಯಗಳು ಸಂಪೂರ್ಣ ಸ್ಥಗಿತಗೊಂಡಿವೆ. ಮಾನ್ಯ ಉಪಾಧ್ಯಕ್ಷರೆ, ಬಹಳ ದುಃಖದಿಂದ ಈ ಮಾತನ್ನು ನಾನು ಹೇಳಬೇಕಾಗಿದೆ. ಸಮಾಜ ಕಲ್ಯಾಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವೆರಡನ್ನು ಪ್ರತ್ಯೇಕ ಮಾಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಮಹಿಳೆಯರನ್ನೇ ಮಂತ್ರಿಗಳನ್ನಾಗಿ ಮಾಡಿ, ಇಲಾಖೆಯಲ್ಲಿ ಕೆಲಸಕಾರ್ಯಗಳು

ಚುರುಕಾಗಿ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕಾಗಿದೆ. ನಿಮ್ಮಿಂದ ಈ ಇಲಾಖೆಯನ್ನು ಚುರುಕಾಗಿ ನಡೆಸುವುದಕ್ಕೆ ಸಾಧ್ಯವಿಲ್ಲ. ನಿಮಗೆ ಸಹನೆ ಕೂಡ ಕಡಿಮೆ ಉಂಟು. ಮಹಿಳೆಯರ ಜೊತೆಗೆ ವರ್ತನೆ ಮಾಡುವಾಗ ಸಮಾಧಾನದಿಂದ ಕಳಕಳಿಯಿಂದ ನಡೆದುಕೊಳ್ಳಬೇಕಾಗುತ್ತದೆ. ನಾನು ಮಾನ್ಯ ಉಪಾಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಈ ಇಲಾಖೆಯನ್ನು ಪ್ರತ್ಯೇಕ ಮಾಡಿ, ಡಾ॥ ಪುಷ್ಪಾವತಿಯವರು ವೈದ್ಯರಾಗಿರುವುದರಿಂದ, ಅವರಿಗೆ ಆರೋಗ್ಯ ಇಲಾಖೆಯನ್ನು ವಹಿಸಿಕೊಟ್ಟು, ಶ್ರೀಮತಿ ಲೀಲಾವತಿ ಪ್ರಸಾದ್‌ರವರಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ವಹಿಸಿಕೊಟ್ಟರೆ, ತುಂಬಾ ಉಪಕಾರ ಮಾಡಿದಂತಾಗುತ್ತದೆ.

ಶ್ರೀ ವಿ.ಎಲ್. ಪಾಟೀಲ್.—ತಮಗೆ ಯಾವ ಇಲಾಖೆ ಬೇಕು ?

ಶ್ರೀಮತಿ ಮನೋರಮಾ ಮಧ್ವರಾಜ್.—ನಾವು ಅಲ್ಲಿಗೆ ಬಂದಾಗ ನೋಡಿಕೊಳ್ಳುತ್ತೇವೆ. ಅದರ ಬಗ್ಗೆ ನಿಮಗೆ ಕಾಳಜಿ ಬೇಕಾಗಿಲ್ಲ. ಶ್ರೀಮತಿ ಲೀಲಾವತಿಪ್ರಸಾದ್‌ರವರು ಚುರುಕಿನ ಮಹಿಳೆಯಾಗಿದ್ದು, ಅನುಭವಿ ಹೆಂಗಸು ಕೂಡ ಆಗಿರುವುದರಿಂದ, ಅವರಿಗೆ ಮಹಿಳಾ ಖಾತೆಯನ್ನು ಕೊಡಿ ನನಗಂತೂ ಇದು ಅತ್ಯಂತ ಪ್ರಿಯವಾದ ಖಾತೆ. ಅದಕ್ಕಾಗಿಯೇ ನಾನು ಈ ವಿಷಯವನ್ನು ಮಾತನಾಡುವುದಕ್ಕೆ ಆರಿಸಿಕೊಂಡೆ, ನಾನು ಮಂತ್ರಿಯಾಗಿದ್ದಾಗ, ಬಡಮಕ್ಕಳ ವಿಚಾರದಲ್ಲಿ, ಬಡ ಮಹಿಳೆಯರ ವಿಚಾರದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿರುವುದರ ಬಗ್ಗೆ ತೆರೆದ ಇತಿಹಾಸ ಉಂಟು. ಅದನ್ನು ಬೇಕಾದರೆ ತಾವು ನೋಡಿಕೊಳ್ಳಬಹುದು. ಇದನ್ನು ಗೌರವದ ಪ್ರಶ್ನೆಯಾಗಿ ಎತ್ತಿಕೊಳ್ಳದೇ ಶ್ರೀಮತಿ ಲೀಲಾವತಿ ಪ್ರಸಾದ್‌ರವರಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯನ್ನು ಕೊಟ್ಟು ರಾಚಯ್ಯನವರಿಗೆ ಸಮಾಜ ಕಲ್ಯಾಣ ಖಾತೆಯನ್ನು ವಹಿಸಿಕೊಡಿ. ಅವರು ಹಿರಿಯರೂ ಆಗಿದ್ದು ಒಳ್ಳೆಯ ವ್ಯಕ್ತಿಯಾದ್ದಾರೆ. ತಾವು ಬೇಕಾದರೆ ರೆವಿನ್ಯೂ ಖಾತೆಯಲ್ಲೇ ಇದ್ದುಕೊಂಡು ಮುಂದುವರಿಯಿರಿ ಎಂದು ಹೇಳಿ, ನನಗೆ ನಾಲ್ಕು ಮಾತುಗಳನ್ನಾಡಲು ಕಾಲಾವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಈ ದಿನ ಎರಡು ಮುಖ್ಯ ಬೇಡಿಕೆಗಳು ನಮ್ಮ ಮುಂದಿವೆ. ಒಂದು ಸಮಾಜ ಕಲ್ಯಾಣ ಇಲಾಖೆ, ಇನ್ನೊಂದು ಕಾರ್ಮಿಕ ಇಲಾಖೆ. ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಚೆನ್ನಾಗಿ ಮಾತನಾಡಿದ್ದಾರೆ. ಬಹಳ ಅರ್ಥಗರ್ಭಿತವಾದ ವಿಚಾರಗಳನ್ನು ಅವರು ಹೇಳಿದ್ದಾರೆ. ಆದ್ದರಿಂದ ಕಾರ್ಮಿಕ ಇಲಾಖೆಯ ಬಗ್ಗೆ ಮಾತ್ರ ನಾನು ಕೆಲವು ವಿಚಾರಗಳನ್ನು ಹೇಳಲಿಚ್ಛಿಸುತ್ತೇನೆ. ಈ ಕಾರ್ಮಿಕ ಇಲಾಖೆ ಬಗ್ಗೆ ಪ್ರತಿ ಬಾರಿಯೂ ನಾನು ಈ ಸದನದಲ್ಲಿ ಮಾತನಾಡುತ್ತಿದ್ದೇನೆ. ಇದರ ಬಗ್ಗೆ ಹಿಂದಿನ ಮಂತ್ರಿಗಳು ಹೂ ಗುಟ್ಟುವುದು, ನಾನು ಮತ್ತೆ ಅದನ್ನು ಹೇಳುವುದು ನಡೆದೇ ಇದೆ. ಈಗ ನನಗೆ ಏನು ಅನ್ನಿಸುತ್ತಿದೆ ಎಂದರೆ ನಾವು ಏನು ಇಲ್ಲಿ ಮಾತನಾಡಿದರೂ ಸಹ ಅದು ಕಾರ್ಯಗತಗೊಳ್ಳುವುದಿಲ್ಲ ಎಂಬ ಭಾವನೆ ನನ್ನದಾಗಿದೆ. ಕಳೆದ 10 ವರ್ಷಗಳ ಅವಧಿಯಲ್ಲಿ ಯಾರುಯಾರು ಕಾರ್ಮಿಕ ಮಂತ್ರಿಗಳಾಗಿದ್ದರೋ ಅವರೆಲ್ಲರೂ ಇಲ್ಲಿ ಕಾರ್ಮಿಕರ ಬಗ್ಗೆ ಅನುಕಂಪ ವ್ಯಕ್ತಪಡಿಸಿದವರೇ, ಆದರೆ ಮೂಲಭೂತವಾಗಿ ನೋಡಿದರೆ ಕಾರ್ಮಿಕರ ಕಲ್ಯಾಣದ ಬಗ್ಗೆ ಹೊರಗಡೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈ ಅಭಿಪ್ರಾಯವನ್ನು ನಾನು ಹಿಂದಿನ ಸರ್ಕಾರಕ್ಕೆ ಹೇಳಿದ್ದೇನೆ. ಅದಕ್ಕೆ ಈ ಸರ್ಕಾರವೂ ಏನೂ ಹೊರತಲ್ಲ. ಹಿಂದೆ ಅರಸರು ಕಾರ್ಮಿಕ ಮಂತ್ರಿಗಳಾಗಿದ್ದಾಗಲೂ ನಾವು ಈ ಇಲಾಖೆ ಚೆನ್ನಾಗಿರುತ್ತದೆ ಎಂದು ತಿಳಿದುಕೊಂಡಿದ್ದೆವು. ಅನಂತರ ಶ್ರೀ ಪ್ರಕಾಶರು ಮಂತ್ರಿಯಾದರು. ಅವರು ಚೆನ್ನಾಗಿ ಕೆಲಸ ಮಾಡುತ್ತಾರೆಂದು ಇದ್ದೆವು. ಆದರೆ ಮೂಲಭೂತವಾಗಿ ಏನೂ ಆಗಲಿಲ್ಲ. ಬರೀ ಅನುಕಂಪ ಅಷ್ಟೆ. ಅವರ ಕಲ್ಯಾಣದ ಬಗ್ಗೆ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಎಲ್ಲರ ಮನಸ್ಸಿನಲ್ಲೂ ಬಹಿರಂಗವಾಗಿ ಅನುಕಂಪ ಇದ್ದರೂ ಒಳಮನಸ್ಸಿನಲ್ಲಿ ಮಾತ್ರ ಇದೇನೋ ತಲೆನೋವಿನ ವಿಷಯವೆಂದು ತಿಳಿದುಕೊಂಡಿರುತ್ತಾರೆ. ಈ ಕಾರ್ಮಿಕರು ಯಾವಾಗಲೂ ತೊಂದರೆ ಕೊಡುವವರು, ಸ್ಟ್ರೈಕ್ ಮಾಡುವವರು, ಲಾಕ್‌ಔಟ್ ಮಾಡಿಸುವವರು ಎಂಬ ಅಂಶ ಎಲ್ಲರ ಮನಸ್ಸಿನಲ್ಲೂ ಸೇರಿಸಿಕೊಂಡಿದೆ. ಮಂತ್ರಿಗಳ ಮನಸ್ಸಿನಲ್ಲೇ ಈ ರೀತಿ ಇರುವಾಗ ಸದಸ್ಯರ ಮನಸ್ಸಿನಲ್ಲಿರುವುದು ಆಶ್ಚರ್ಯದ ವಿಷಯವಲ್ಲ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾನ್ಯ ಸಿಂಧ್ಯಾ ಅವರು ತಲೆ ಆಡಿಸುತ್ತಿದ್ದಾರೆ ಅಂದರೆ ನಾನು ಹೇಳುವುದನ್ನು ಅವರು ಒಪ್ಪಿಕೊಳ್ಳುತ್ತಿದ್ದಾರೆ ಎಂದಾಯಿತು. ಈ ಕಾರ್ಮಿಕ ವರ್ಗದ ಮುಖಂಡರಾದ ನಾವು ಆಡಳಿತಕ್ಕೆ ಬಂದರೆ ಮಾತ್ರ ಈ ಸಮಾಜ ಪರಿವರ್ತನೆ ಆಗಬಹುದು. ಈ ಸರ್ಕಾರ ಕಾರ್ಮಿಕ ವರ್ಗದ ಬಗ್ಗೆ ಏನು ಧೋರಣೆ ತನ್ನದು ಎಂದು ತಿಳಿಸಿದರೆ ಬಹಳ ಅನುಕೂಲವಾಗುತ್ತದೆ. ಹಿಂದಿನ ಸರ್ಕಾರವಾಗಲೀ, ಇಂದಿನ ಸರ್ಕಾರವಾಗಲೀ ಈ ಬಗ್ಗೆ ಹೇಗೆ ನಡೆದುಕೊಳ್ಳುತ್ತಿವೆ ಎಂಬುದನ್ನು ಇಲ್ಲಿ ಹೇಳಬೇಕಾಗಿದೆ. ಸ್ವಲ್ಪ ವ್ಯತ್ಯಾಸ ಮಾತ್ರ ಇರಬಹುದು. ಅವರನ್ನು ಜಾಸ್ತಿ ಟೀಕೆ ಮಾಡಿದರೆ ಇವರನ್ನು ಸ್ವಲ್ಪ ಕಡಿಮೆ ಮಾಡುತ್ತೇವೆ ಅಷ್ಟೇ. ಆದರೆ ಮೂಲಭೂತವಾದ ಬದಲಾವಣೆ ಮಾಡುವ ಗೋಜಿಗೇ ಈ ಸರ್ಕಾರ ಹೋಗಿಲ್ಲ.

ನಮ್ಮ ರಾಜ್ಯದಲ್ಲಿ ೨೦ ರಿಂದ ೨೫ ಲಕ್ಷ ಅಸಂಘಟಿತ ಕಾರ್ಮಿಕರಿದ್ದಾರೆ. ಇದರ ಬಗ್ಗೆ ಏನು ಮಾಡಿದ್ದೀರಿ ? ದುರದೃಷ್ಟವೆಂದರೆ ಏನೂ ಕಾರ್ಯಕ್ರಮ ತೆಗೆದುಕೊಳ್ಳದಿರುವುದು. ಶ್ರೀಮತಿ ಇಂದಿರಾಗಾಂಧಿ ಮಾತನಾಡಿದರು, ಶ್ರೀ ರಾಜೀವಗಾಂಧಿ ಮಾತನಾಡುತ್ತಿದ್ದಾರೆ, ಮಾನ್ಯ ಅಂಜಯ್ಯನವರು ಆಡಳಿತ ನಡೆಸುತ್ತಿದ್ದಾರೆ. ಆದರೆ ಅಸಂಘಟಿತ ವರ್ಗದವರ ಶೋಷಣೆಯನ್ನು ನಿಲ್ಲಿಸಲು ಇನ್ನೂ ಆಗಿಲ್ಲ. ಈ ಜನ ಬೀಡಿ ಹೊಸೆಯುವುದರಲ್ಲಿ, ಅಗರಬತ್ತಿ ತಯಾರಿಸುವುದರಲ್ಲಿ ಕಲ್ಲು ಹೊಡೆಯುವ ಕೆಲಸದಲ್ಲಿ ಮುಂತಾದ ಕಡೆಗಳಲ್ಲೆಲ್ಲಾ ನಿರತರಾಗಿದ್ದಾರೆ. ಕನಿಷ್ಠ ಕೂಲಿಯನ್ನು ಗೊತ್ತುಮಾಡುವ ಶಾಸನ ಎಂದು ಒಂದು ಇದೆ. ಅದರ ಪ್ರಕಾರ ಕೂಲಿ ನಿಗದಿಮಾಡುವಲ್ಲಿ ಈ ವರ್ಗಕ್ಕಾಗಿರುವ ಅನ್ಯಾಯ ವಂಚನೆ ಮೋಸ ಇನ್ನಾವ ವರ್ಗಕ್ಕೂ ಆಗಿಲ್ಲ. ಮಿನಿಮಮ್ ವೇಜಸ್ ಫಿಕ್ಸ್ ಮಾಡುವಾಗ ಯಾವ ರೀತಿ ಮಾಡುತ್ತಾರೆಂಬುದು ನನಗೆ ಗೊತ್ತಿದೆ. ಇದೊಂದು ದೊಡ್ಡ ಕರ್ಮಕಾಂಡ. ಉಪಾಧ್ಯಕ್ಷರ ಸ್ಥಳವಾದ ತುಮಕೂರಲ್ಲೂ ಕ್ವಾರಿ ವರ್ಕರ್ಸ್ ಇದ್ದಾರೆ. ಗಣಿ ಕೆಲಸಗಾರರಿದ್ದಾರೆ. ಚಿಕ್ಕನಾಯಕನಹಳ್ಳಿ ಮುಂತಾದ ಜಾಗಗಳಲ್ಲಿ ಕೂಲಿ ಕೆಲಸ ಮಾಡುವ ಜನರಿದ್ದಾರೆ. ಅವರ ಜೊತೆಗೆ ಸಿನಿಮಾ ಕೆಲಸಗಾರರು ಹೋಟೆಲ್ ಕೆಲಸಗಾರರು ಎಲ್ಲಾ ಇದ್ದಾರೆ. ಇವರೆಲ್ಲರೂ ಈ ಶಾಸನದ ಪ್ರಕಾರ ಮಿನಿಮಂ ವೇಜಸ್ ಪಡೆಯಲು ಅರ್ಹರಾಗಿರುತ್ತಾರೆ.

ಈಗ ಏನಾಗಿದೆ ಎಂದರೆ ೧೯೮೧ರಲ್ಲಿ ಒಂದು ಡ್ರಾಫ್ಟ್ ನೋಟಿಫಿಕೇಷನ್ ಹೊರಡಿಸಿದರು. ಆಮೇಲೆ ತಿದ್ದುಪಡಿ ಮಾಡಿ ೫ ಪೈಸೆ ಎಂದು ಮಾಡಿದರು. ಈ ನೋಟಿಫಿಕೇಷನ್ ೮೨ರಲ್ಲಿ ಫೈನಲೈಸ್ ಆಯಿತು. ೮೨ರಲ್ಲಿ ಏನು ಮಾಡಿದರು ಎಂಬುದನ್ನು ಹೇಳುತ್ತೇನೆ. ಹಿಂದೆ ಪಾಯಿಂಟಿಗೆ ೫ ಪೈಸೆ ಇದ್ದದ್ದನ್ನು ಎರಡು ಪೈಸೆ ಮಾಡಿದರು. ಒಂದು ಪಾಯಿಂಟ್‌ಗೆ ಎರಡು ಪೈಸೆ ಎಂದು ೮೩ರಲ್ಲಿ ಜಾರಿಗೆ ಕೊಟ್ಟರು. ಆಗ ಮಾನ್ಯ ಜಕನೂರ್ ಅವರು ಮಂತ್ರಿಗಳಾಗಿದ್ದರು. ನಾವು ಅವರ ಬಗ್ಗೆ ಕೂಡ ಟೀಕೆ ಮಾಡಿದ್ದೆವು. ಇದರ ಬಗ್ಗೆ ಯಾರುಯಾರ ಕೈಗೆ ಎಷ್ಟೆಷ್ಟು ಹೋಯಿತು ಎಂಬುದು ನನಗೆ ಗೊತ್ತಿಲ್ಲ. ಅನೇಕ ಜನ ಮಾಲೀಕರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಜಡ್ಜ್ ಬೋಪಣ್ಣನವರು ಏನು ಹೇಳಿದರು ಎಂದರೆ ಮಿನಿಮಂ ವೇಜಸ್ ಏನು ಫಿಕ್ಸ್ ಮಾಡಿದ್ದಾರೆ ಅದು ಸರಿಯಾಗಿ ಮಾಡಿದ್ದಿಲ್ಲ. ಅದಕ್ಕೆ ಚೇರ್ಮನ್ ಮಂತ್ರಿಗಳೇ ಆಗಿದ್ದರು. ಆದ್ದರಿಂದ ಆಗಿನ ಮಂತ್ರಿಗಳಾದ ಜಕನೂರ್ ಅವರು ಚೇರ್ಮನ್ ಆಗಕೂಡದೆಂದು ಬೋಪಣ್ಣ ತೀರ್ಪು ಕೊಟ್ಟಿದ್ದಾರೆ. ಮಿನಿಮುಮಂ ವೇಜಸ್ ಏನು ಮಾಡಿದ್ದಾರೆ ನ್ಯೂಟ್ರಲೈಜೇಷನ್ ೪೫೦ ಪಾಯಿಂಟ್ ಮಾಡಿಕೊಡಬೇಕೆಂದು ಇರುವುದನ್ನು ಬದಲಾವಣೆ ಮಾಡಿಲ್ಲ. ಸರ್ಕಾರದ ಅದನ್ನು ಮಾಡಬೇಕೆಂದು ಹೇಳಿದ್ದಾರೆ. ೧೯೮೪ರಲ್ಲಿ ಕೋರ್ಟಿನಲ್ಲಿ ತೀರ್ಮಾನವಾದ ಮೇಲೆ ಏನಾಯಿತು ? ನಿಮ್ಮ ಸರ್ಕಾರ ಬಂತು. ೮೪ರಲ್ಲಿ ನಮ್ಮ ಸ್ನೇಹಿತ ಅಜೀಜ್ ಶೇಠರೇ ಮಂತ್ರಿಯಾಗಿದ್ದರು. ಈಗ ನಿಮ್ಮ ಪಕ್ಷದಲ್ಲೂ ಅವರು ಇಲ್ಲ. ಅವರ ಹತ್ತಿರ ಕೂಡ ನಾನು ಇದರ ಬಗ್ಗೆ ಮಾತನಾಡಿದ್ದೆ. ಅವರು ಏನು ಹೇಳಿದರು ಎಂದರೆ ನೋಟಿಫಿಕೇಷನ್ ಬಂದಿದೆ ಅದನ್ನು ಸರಿ ಮಾಡೋಣ ಎಂದರು. ಅದೇನು ಸರಿ ಮಾಡಿದರೋ ನನಗೆ ಗೊತ್ತಿಲ್ಲ.

೩–೦೦ ಪಿ.ಎಂ.

೪೫೦ ಪಾಯಿಂಟನ್ನು ೬೦೦ ಮಾಡಿದರು. ಡಿ.ಎ.ಯನ್ನು ಸೀಲಿಂಗ್ ಮಾಡಿದರು. ಈ ಎರಡನ್ನು ಶಿಫ್ಟ್ ಮಾಡಿದ್ದರಿಂದ ಒಬ್ಬೊಬ್ಬ ಕಾರ್ಮಿಕರಿಗೆ ಎಷ್ಟು ನಷ್ಟವಾಗಿದೆ ಎಂದು ನಾನು ಲೆಕ್ಕಾಚಾರ ಹಾಕಿದ್ದೇನೆ. ೪೭೦ರಿಂದ ೪೫೦ ಪಾಯಿಂಟ್ ಆಯಿತು, ೬೦೬ರಿಂದ ೧೫೬ ಪಾಯಿಂಟ್‌ಗೆ ಹೋಗಿತ್ತು. ೧೯೮೪ರಲ್ಲಿ ೬೦೬ ಆಗಿದೆ. ೬೦೦ ಎಂದರೆ ಇವರಿಗೆ ಏನೂ ಬರುವುದಿಲ್ಲ. ಲಕ್ಷಾಂತರ ಜನ ಕಾರ್ಮಿಕರಿಗೆ ಇದರಿಂದ ಕೋಟ್ಯಂತರ ರೂಪಾಯಿಗಳ ವಂಚನೆಯಾಗಿದೆ. ನಮ್ಮ ರಾಜ್ಯದಲ್ಲಿ ಒಂದೇ ಒಂದು ಶಿಫ್ಟ್ ಮಾಡಿದ್ದರಿಂದ ಈ ವಂಚನೆಯಾಗಿದೆ. ಇದರಲ್ಲಿ ಅಪಾದನೆ ಮಾಡಲಿಕ್ಕೆ ಹೋಗಿದ್ದೇನೆ ಎಂದು ಯಾರೂ ತಪ್ಪು ತಿಳಿದುಕೊಳ್ಳಕೂಡದು. ಮಾನ್ಯ ಅಜೀಜ್ ಸೇಠರು ಇಲ್ಲ ಅವರ

ಬಗ್ಗೆ ಮಾತನಾಡುವುದು ಸರಿಯಲ್ಲ. ಇದರಿಂದ ಕೋಟ್ಯಾಂತರ ರೂಪಾಯಿಗಳ ಅನುಕೂಲತೆಯನ್ನು ಮಾಲೀಕರಿಗೆ ಮಾಡಿಕೊಟ್ಟಿದ್ದಾರೆ. ಶ್ರೀಮಾನ್ ಅಜೀಜ್‌ಸೇಠರು ಎಂದು ಹೇಳಬೇಕಾಗಿದೆ. ಸರ್ಕಾರ ಇದನ್ನು ಬದಲಾವಣೆ ಮಾಡಿ ತಿದ್ದುಪಡಿ ಮಾಡುವುದರ ಬಗ್ಗೆ ಕಾರ್ಯಕ್ರಮ ಏನೂ ತೆಗೆದುಕೊಳ್ಳಲಿಲ್ಲ. ಅಷ್ಟು ಮಾತ್ರವಲ್ಲ. ಹೋಟೆಲ್ ಕಾರ್ಮಿಕರಿಗೆ ಅನ್ಯಾಯವಾಯಿತು. ಈ ಕಾರ್ಮಿಕರಿಗೆ ೧೯೮೧–೮೨ರ ನಿಯಮದ ಪ್ರಕಾರ ಊಟಕ್ಕೆ ಎಂದು ೬೦ ರೂಪಾಯಿನಂತೆ ಡಿಡೆಕ್ಟ್ ಮಾಡುತ್ತಿದ್ದರು. ಇವರು ಬಂದಮೇಲೆ ಅದು ೧೨೦ ರೂಪಾಯಿಗಳು ಆಯಿತು. ಹೋಟೆಲ್ ಕಾರ್ಮಿಕರು ಅಸಂಘಟಿತರಲ್ಲ. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ದುಡಿಯುತ್ತಾರೆ. ಎಲ್ಲರೂ ಅಶೋಕ ಹೋಟೆಲ್‌ನಲ್ಲಿರುವುದಕ್ಕಾಗುವುದಿಲ್ಲ. ಇದರಿಂದ ಇವರಿಗೆ ಅನ್ಯಾಯವಾಯಿತು. ಇದನ್ನು ಪುನರ್‌ವಿಮರ್ಶೆ ಮಾಡಲೇ ಇಲ್ಲ. ಇಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ಜಾತಿಯ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾರು ಮುಸ್ಲಿಮರು ಹೋಟೆಲುಗಳನ್ನು ಇಟ್ಟಿದ್ದಾರೆ ಅಲ್ಲಿ ತೀರ ಶೋಷಣೆ ನಡೆಯುತ್ತಿದೆ, ಮುಸ್ಲಿಂ ಕಾರ್ಮಿಕರಿಗೆ ಮುಸಲ್ಮಾನರ ಹೋಟೆಲುಗಳಲ್ಲಿ ತೀರ ಶೋಷಣೆ ನಡೆಯುತ್ತಿದೆ, ಇವರ ಬಗ್ಗೆ ಮಾನ್ಯ ಅಜೀಜ್‌ಸೇಠರು ಏನೂ ಮಾಡಲಿಲ್ಲ ಅಂದರೆ ಇದಕ್ಕಿಂತ ಅಕ್ಷಮ್ಯ ಅಪರಾಧ ಯಾವುದೂ ಇಲ್ಲ ಎಂದು ಹೇಳಬೇಕಾಗಿದೆ. ನಂತರ ಈ ಕಾಂಟ್ರಿಬ್ಯೂಷನ್ ಏನಾಗಿದೆಯೆಂದರೆ ೧೯೮೪ರ ನೋಟಿಫಿಕೇಷನ್‌ನ್ನು ಕೊಶ್ಚನ್ ಮಾಡಿದರು. ಮಾಲೀಕರು ಚಾಲೆಂಜ್ ಮಾಡಿ ಇವೊತ್ತಿನದಿವಸ ಅದರ ಬಗ್ಗೆಯೂ ಸಹ ಒಂದು ತೀರ್ಮಾನ ಬಂದಿದೆ. ಈಗ ರಾಮಜೋಯಿಸ್ ಅವರು ಒಂದು ತೀರ್ಮಾನ ಕೊಟ್ಟಿದ್ದಾರೆ. ಅವರು ಶ್ರೀಮಾನ್ ಬೋಪಣ್ಣನವರ ತೀರ್ಮಾನವನ್ನು ಬದಲಾವಣೆ ಮಾಡಿದ್ದಾರೆ. ಬದಲಾವಣೆ ಮಾಡಿದ್ದರಿಂದ ಏನಾಗಿದೆಯೆಂದರೆ ೧೯೮೪ರ ನೋಟಿಫಿಕೇಷನ್ ಎಲ್ಲಾ ಹೋದಹಾಗೆ ಆಗುತ್ತದೆ. ಬದಲಾವಣೆ ಮಾಡಿ ೫ ಪೈಸೆ ಡಿ.ಎ. ಇದ್ದದ್ದನ್ನು ೧.೫ ಪೈಸೆ ಮಾಡಿದರು. ೨ ಪೈಸೆ ಪ್ಲಾಂಟೇಷನ್ ಕೆಲಸಗಾರರಿಗೆ ಕೊಡಬಹುದು ಎಂದು ಮಾಡಿದರು. ಇದು ಒಂದಕ್ಕೊಂದು ವಿರೋಧಾಭಾಸವಾದ ಆರ್ಡರ್ ಬಂತು. ನನಗೆ ಕೋರ್ಟಿನ ಬಗ್ಗೆ ಅಭಿಮಾನ ಇದೆ. ಈ ಆರ್ಡರ್ ಏನಿದೆ ಇದು ಕಾರ್ಮಿಕರಿಗೆ ವಿರೋಧವಾಗಿತ್ತು. ಹಿಂದೆ ಇದ್ದಂಥ ನೋಟಿಫಿಕೇಷನ್ ವಿರುದ್ಧ ತೀರ್ಮಾನವನ್ನು ಕೊಟ್ಟಿದ್ದಾರೆ. ಇದರಿಂದ ಜಿಜ್ಞಾಸೆಯುಂಟಾಗಿ ಸರ್ಕಾರಕ್ಕೆ ೨ ಪೈಸೆ ಕೊಡಬೇಕೋ ೧.೫ ಪೈಸೆ ಕೊಡಬೇಕೋ ಎಂದು ಗೊತ್ತಾಗಲಿಲ್ಲ. ಇದರಿಂದ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ. ಅಪೀಲ್ ಹಾಕಿಕೊಳ್ಳಿ ಎಂದು ಹೇಳಿದರು. ಡಿವಿಜನ್ ಬೆಂಚಿಗೆ ಅಪೀಲ್ ಹೋಗಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳನ್ನೂ ಕೇಳಿಕೊಂಡೆ, ಮಾನ್ಯ ಮಂಜುನಾಥ್‌ರವರನ್ನು ಕೇಳಿಕೊಂಡೆ. ಆಲಂಪಲ್ಲಿ ವೆಂಕಟರಾಂರವರು ಹಂಗರ್‌ಸ್ಟ್ರೈಕ್ ಕೂಡ ಮಾಡಿದರು. ಮಾನ್ಯ ರಾಮಕೃಷ್ಣ ಹೆಗಡೆಯವರು ಹೋಗಿ ಅವರಿಗೆ ನ್ಯಾಯ ದೊರಕಿಸಿ ಕೊಡುತ್ತೇನೆ ಎಂದು ಭರವಸೆ ಕೊಟ್ಟರು. ಆದರೆ ಅಪೀಲ್ ಹೋಗಲಿಲ್ಲ. ನನಗೆ ತಿಳಿದಹಾಗೆ ಅಡ್ವೋಕೇಟ್ ಜನರಲ್‌ರವರು ಅಪೀಲ್ ಮಾಡಕೂಡದು ಎಂದು ಹೇಳಿಬಿಟ್ಟರು ಎಂದು ಗೊತ್ತಾಗಿದೆ. ಅಡ್ವೋಕೇಟ್ ಜನರಲ್‌ರವರು ಹೀಗೆ ತಳ್ಳಿ ಹಾಕಿರಬೇಕು ಅಂದರೆ ಅಡ್ವೋಕೇಟ್ ಜನರಲ್‌ರವರದು ತಪ್ಪಿರಬೇಕು ಇಲ್ಲವೇ ಸರ್ಕಾರದ ತಪ್ಪಿರಬೇಕು.

ಶ್ರೀ ಡಿ. ಮಂಜುನಾಥ್.—ಅಪೀಲ್ ಹೋಗುವುದಕ್ಕೆ ಲಾ ಡಿಪಾರ್ಟ್‌ಮೆಂಟ್ ಕನ್‌ಸಿಡರ್ ಮಾಡಿದ್ದುದು ನಿಜ. ಅಡ್ವೋಕೇಟ್ ಜನರಲ್‌ರವರು ಎಲ್ಲಾ ನೋಟಿಫಿಕೇಷನ್‌ನ್ನು ಸ್ಟ್ರೈಕ್‌ಡೌನ್ ಮಾಡಿಲ್ಲ. ಮೂರು ನೋಟಿಫಿಕೇಷನ್ ಬಗ್ಗೆ ಮಾಡಿದ್ದಾರೆ, ಹೋಟೆಲ್, ಕಾಫಿ ಕ್ಯೂರಿಂಗ್, ಟೈಲರಿಂಗ್ ಬಗ್ಗೆ ಮಾಡಿದ್ದಾರೆ. ಡಿ.ಎ. ಬಗ್ಗೆ ಮಾತ್ರ ಸರ್ಕಾರಕ್ಕೆ ಡೈರೆಕ್ಷನ್ ಕೊಟ್ಟರು. ಅದರ ಬಗ್ಗೆ ಅನಾಮಲೀಸ್ ಇದೆ.

ಶ್ರೀ ಎಂ.ಎಸ್. ಕೃಷ್ಣನ್.—ಇವರ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲ. ರಾಮಾಜೋಯಿಸ್‌ರವರ ತೀರ್ಮಾನ ಬಂದಮೇಲೆ ಒಂದು ಕಡೆ ಡಿ.ಎ. ಕಡಿಮೆ ಮಾಡಿ ನೋಟಿಫಿಕೇಷನ್‌ನಲ್ಲಿರುವಂಥಾದ್ದನ್ನು ಹಾಗೇ ಉಳಿಸಿಕೊಂಡರು. ಒಂದಕ್ಕೊಂದಕ್ಕೆ ಲಿಂಕ್ ಮಾಡಿದ್ದಾರೆ. ಇದರಿಂದ ಲಿಟಿಗೇಷನ್‌ಗೆ ಅವಕಾಶವಾಗುತ್ತದೆ. ಕ್ಲಾರಿಫಿಕೇಷನ್ ಇಲ್ಲದೇ ಹೋದರೆ ಖಂಡಿತವಾಗಿಯೂ ಲಿಟಿಗೇಷನ್‌ಗೆ ಅವಕಾಶವಾಗುತ್ತದೆ. ಅಪೀಲ್ ಹೋಗಿದ್ದರೆ ಅದು ಬರುತ್ತಿತ್ತು. ನಿಮ್ಮ ಲಾ ಆಫೀಸರ್ಸ್ ಅಪೀಲ್ ಹೋಗಬೇಡಿ ಎಂದು ಹೇಳಿದರೆ, ಮಾಲೀಕರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಆ ರೀತಿ ಮಾಡಿದ್ದಾರೆ ಎಂದು ನಾನು ಆರೋಪ ಮಾಡುತ್ತೇನೆ. ಕಾರ್ಮಿಕರಿಗೆ ನ್ಯಾಯ ದೊರಕಿಸಿಲ್ಲ. ಟೈಪಿಸ್ಟ್, ಪ್ಯೂನ್ಸ್ ಎಲ್ಲರಿಗೂ ಒಂದೇ ರೀತಿಯಾದ ಸಂಬಳಗಳನ್ನು ಎಲ್ಲಾ ಕೈಗಾರಿಕೆಗಳಲ್ಲೂ ಕೊಡಬೇಕು ಎಂದು ಅದು ಬೇರೆ ಯೂನಿಫಾರಂ ಆರ್ಡರ್ ಪಾಸ್ ಮಾಡಿದ್ದಾರೆ. ಸ್ಕಿಲ್ಡ್ ವರ್ಕರ್ಸ್‌ಗೆ ಒಂದೊಂದು ಕೈಗಾರಿಕೆಯಲ್ಲಿ ಒಂದೊಂದು ರೀತಿ ಇದೆ. ಹಾಗಿರಬೇಕಾದರೆ ಎಲ್ಲಾ ಸ್ಕಿಲ್ಡ್ ವರ್ಕರ್ಸ್‌ಗೆ

ಒಂದೇ ಸಂಬಳ ಕೊಡಿ ಅಂದರೆ, ಅದು ಸಾಧ್ಯವಾಗದೇ ಇರುವ ಮಾತು. ಈಗ ಪರಿಸ್ಥಿತಿ ಏನಾಗುತ್ತಿದ್ದೆಯೆಂದರೆ, ರಾಮಾಜೋಯಿಸ್‌ರವರ ತೀರ್ಮಾನ ಬಂದಮೇಲೆ ಹಿಂದೆಯೂ ಹೋಗಿಲ್ಲ, ಮುಂದೆಯೂ ಹೋಗಿಲ್ಲ, ಅಪೀಲ್ ಹೋಗಿದ್ದರೆ ಮುಂದೆ ಹೋಗುವುದಕ್ಕೆ ಸಾಧ್ಯವಿರುತ್ತಿತ್ತು. ಅಪೀಲ್ ಹೋಗದೇ ಇರುವುದಕ್ಕೆ ಕಾರಣ ನೀವು ಮತ್ತು ಅಡ್ವೋಕೇಟ್ ಜನರಲ್ ಎಂದು ಆರೋಪ ಮಾಡಬೇಕಾಗಿದೆ. ಅಪೀಲ್ ಹೋಗಲಿಕ್ಕೆ ನೀವು ಏಕೆ ಧೈರ್ಯ ಮಾಡಲಿಲ್ಲ. ಲೇಟೆಸ್ಟ್ ಪೊಸಿಷನ್ ಏನು ? ಎಐಟಿಯುಸಿ ನಾಯಕರು ಮತ್ತು ಅಧ್ಯಕ್ಷರಾದ ನರಸಿಂಹನ್‌ರವರು ಮಾತನಾಡಿದಾಗ ಅಪೀಲ್ ಮಾಡುತ್ತೇವೆ ಎಂದು ಕಾರ್ಯದರ್ಶಿಗಳು ಹೇಳಿದರು ಎಂದು ಅವರು ಹೇಳಿದರು. ಡೆಪ್ಯುಟಿ ಸೆಕ್ರೆಟರಿ ಇಲ್ಲ. ನಾವು ಮಾಡುವುದಿಲ್ಲ ಎಂದು ಹೇಳಿದರು. ಸೆಕ್ರೆಟರಿ ಫೈಲ್ ಮಾಡುತ್ತೇವೆ ಎಂದು ಹೇಳಿದರು. ಅದರ ಬಗ್ಗೆ ನೀವು ಏನು ಆಕ್ಷನ್ ತೆಗೆದುಕೊಂಡಿರಿ. ನಾನು ಅಥೆಂಟಿಕೇಟಾಗಿ ಮಾತನಾಡುತ್ತಾ ಇದ್ದೇನೆ. ಈಗ ರಾಮಾಜೋಯಿಸ್ ಕೋರ್ಟ್ ಮುಂದೆ ಪಿಟೀಷನ್ ಫೈಲ್ ಮಾಡಿದ್ದಾರೆ. ಸೀಕಿಂಗ್ ಫಾರ್ ಕ್ಲಾರಿಫಿಕೇಷನ್, ರಿಪಿಕ್ಸ್ ಮಾಡುವುದಕ್ಕೆ ಕೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ವಕೀಲರು ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಪ್ರಶ್ನೆ ಏನೆಂದರೆ, ಯಾವ ಜಡ್ಜ್ ತೀರ್ಮಾನ ಕೊಟ್ಟರೋ ಅವರನ್ನೇ ಇವರು ಕ್ಲಾರಿಫಿಕೇಷನ್ ಕೇಳಿದ್ದಾರೆ. ಇವತ್ತಿನ ದಿವಸ ನೀವು ಮಾಡಿರುವುದೇನಿದೆ, ಅದರಿಂದಾಗಿ ಕಾರ್ಮಿಕರಿಗೆ ಅನ್ಯಾಯವಾಗುವಂತಹ ಪರಿಸ್ಥಿತಿ ಇದೆಯೆಂದು ಸ್ಪಷ್ಟವಾಗಿ ನಾನು ಹೇಳಬೇಕಾಗುತ್ತದೆ. ಹೈಕೋರ್ಟ್ ಕೂಡ ಇದನ್ನು ಡಿಸ್ಟರ್ಬ್ ಮಾಡುವುದಕ್ಕಾಗುವುದಿಲ್ಲ. ಸುಪ್ರೀಂ ಕೋರ್ಟ್ ತೀರ್ಮಾನ ಬಂದ ಮೇಲೆ ಹೈಕೋರ್ಟ್ ತೀರ್ಮಾನಗಳು They have become untenable Supreme Court ತೀರ್ಮಾನದ ಪ್ರಕಾರ You cannot question the merits ಅದರ ಆಧಾರದ ಮೇಲೆ ಗೌರ್ನಮೆಂಟ್‌ನವರು ಕೊಶ್ಚನ್ ಮಾಡುವ ಹಾಗಿಲ್ಲವೆಂದು ಇರಬೇಕಾದರೆ, ಈ ಆರ್ಡರ್ ಮತ್ತು ಶ್ರೀಮಾನ್ ಬೋಪಣ್ಣನವರ ಆರ್ಡರ್ ಏನಾಗುತ್ತದೆಂಬುದನ್ನು ಹೇಳುವುದಕ್ಕಾಗುತ್ತದೆಯೋ ಈಗಲೂ ಅಪೀಲ್‌ಗೆ ಡಿಲೇ ಆಗಿದೆ You must file a condonation of delay application ಅದರ ಆಧಾರದ ಮೇಲೆ ಮುಂದುವರಿದರೆ ಕನಿಷ್ಠ ಕೂಲಿ ಕಾರ್ಮಿಕರಿಗೆ ನ್ಯಾಯ ದೊರಕುತ್ತದೆಂದು ಹೇಳಬಹುದು. ಅದು ಬಿಟ್ಟು ನೀವು ಎಷ್ಟೇ ಮಾತನಾಡಿದರೂ ಅದರಿಂದ ಅವರಿಗೆ ಮಾತ್ರ ನ್ಯಾಯ ಸಿಗುವುದಿಲ್ಲ.

ಶ್ರೀ ಡಿ. ಮಂಜುನಾಥ್.—ಈಗ ನಾವು ೩೦ ನೋಟಿಫಿಕೇಷನ್ಸ್ ಬಗ್ಗೆ ಇಂಪ್ಲಿಮೆಂಟೇಷನ್ಸ್ ಅನೌನ್ಸ್ ಮಾಡಿದ್ದು, ಅದು ಜಾರಿಯಲ್ಲಿದೆ. ಮೂರರ ಬಗ್ಗೆ ಮಾತ್ರ ಅನಾಮಲೀಸ್ ಇದೆ. ಅದರ ಬಗ್ಗೆ ಆರು ತಿಂಗಳೊಳಗೆ ಮಾಡಬೇಕೆಂದು ಕೋರ್ಟ್‌ನವರು ಡೈರೆಕ್ಷನ್ ಕೊಟ್ಟರು. ನಾವು ಲಾ ಡಿಪಾರ್ಟ್‌ಮೆಂಟ್ ಮತ್ತು ಅಡ್ವೋಕೇಟ್ ಜನರಲ್‌ರವರ ಜೊತೆಯಲ್ಲಿ ಕನ್‌ಸಲ್ಟ್ ಮಾಡುವುದು ತಡವಾಯಿತು ಇನ್ನೂ ಸ್ವಲ್ಪ ಸಮಯ ಬೇಕೆಂದು ಅರ್ಜಿಹಾಕಿದ್ದೇವೆ. ಬೇರೆಯದು ಜಾರಿಯಲ್ಲಿದೆ.

SRI. M.S. KRISHNAN.—Every body is waiting to file an appeal ಹಿಂದಿನ ನೋಟಿಫಿಕೇಷನ್ ಪ್ರಕಾರ ಎಷ್ಟು ಜನ ಅಪ್ಲಿಕೇಷನ್ ಹಾಕಿಕೊಂಡರು. ಮೂರು ಜನರಿಗೆ ಮಾತ್ರ ಇದು ಅನ್ವಯಿಸುತ್ತದೆ. ಬೇರೆಯರಿಗೆ ಇದು ಅನ್ವಯಿಸುವುದಿಲ್ಲವೇ ? ಹಿಂದೆ ಶ್ರೀಮಾನ್ ಬೋಪಣ್ಣನವರ ತೀರ್ಮಾನದ ಪ್ರಕಾರ ೫೦ ಪರ್ಸೆಂಟ್ ಕೊಡಬೇಕೆಂದು ತೀರ್ಮಾನವಾಗಿತ್ತು. ಆದರೆ ಅದನ್ನು ಯಾರೂ ಇಂಪ್ಲಿಮೆಂಟ್ ಮಾಡಲಿಲ್ಲ. ಆಗ ಮಾನ್ಯ ಅಜೀಜ್ ಸೇಠ್‌ರವರಿದ್ದರು ಅವರೂ ಕೂಡ ಇದರ ಬಗ್ಗೆ ಏನೂ ಆಕ್ಷನ್ ತೆಗೆದು ಕೊಳ್ಳಲಿಲ್ಲ. ಇದು ಸಾಮಾನ್ಯವಾದ ವಿಷಯವಲ್ಲ. ಸುಮಾರು ೨೦ ಲಕ್ಷ ಕಾರ್ಮಿಕರು ನಮ್ಮ ರಾಜ್ಯದಲ್ಲಿದ್ದಾರೆ. ಇಂತಹ ಎಕ್ಸ್‌ಪ್ಲಾಯಿಟೆಡ್ ಲೇಬರರ್ಸ್ ಬಗ್ಗೆ ಇಷ್ಟೊಂದು ಅನಾದರಣೆ ತೋರಿಸಿದರೆ, ನಮ್ಮ ಕಾರ್ಮಿಕ ವರ್ಗದವರಿಗೆ ವಂಚನೆಯಾಗುತ್ತದೆ ಎಂದು ಹೇಳಿ ಅಷ್ಟಕ್ಕೆ ಮುಗಿಸುತ್ತೇನೆ. ನಾನು ಹೇಳಿರುವ ಸೂಚನೆಗಳನ್ನು ಗಮನಿಸಿ ಕಾರ್ಮಿಕ ವರ್ಗಗಳ ಸಮಸ್ಯೆಗಳು ಬಹಳ ಇವೆ, ಇದನ್ನು ಪುನರ್ ವಿಮರ್ಶೆ ಮಾಡಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ಈ ಸಮಸ್ಯೆಗಳು ಬರುತ್ತಲೇ ಇರುತ್ತವೆ ಎಂದರೆ. ಎಲ್ಲಿಯತನಕ ಕಾರ್ಮಿಕರು ಬಂಡವಾಳಗಾರರು ಇರುತ್ತಾರೆ, ಅಲ್ಲಿಯವರೆಗೆ ಈ ಶಿಕ್ಕಾಟ ಇರುತ್ತದೆ. ಎಲ್ಲಿಯತನಕ ನಮ್ಮ ಸಮಾಜ ಪರಿವರ್ತನೆಯಾಗುವುದಿಲ್ಲ, ಅಲ್ಲಿಯ ತನಕ ಇದು ಬದಲಾವಣೆ ಆಗುವುದಿಲ. ಬಂಡವಾಳಶಾಹಿಗಳನ್ನು ರೆಸಗ್ನೈಸ್ ಮಾಡುವುದಕ್ಕೆ ಹೋಗುತ್ತೀರಿ, ಅದು ಮಾಡಬೇಕಾದುದೇ, ನಮ್ಮಲ್ಲಿ ಕೈಗಾರಿಕೆಗಳೂ ಉಳಿಯಬೇಕು ಮತ್ತು ಕಾರ್ಮಿಕ ವರ್ಗವಾದರೂ ಉಳಿಯಬೇಕು. ಅವರೂ ಇರಲಿ. ಬೇಡವೆಂದು ಹೇಳುವುದಿಲ್ಲ. ಅದರ ಬಗ್ಗೆ ಸರ್ಕಾರದವರು ಆದಷ್ಟು ಬೇಗ ಇತ್ಯರ್ಥ ಮಾಡಬೇಕು. ಆದಷ್ಟು ಶೀಘ್ರವಾಗಿ ಇತ್ಯರ್ಥ ಮಾಡಬೇಕು. ಅವರು ತಪ್ಪು ಮಾಡಿದ್ದಾರೆ, ಅವರಿಗೆ

ಹೇಳಬೇಕು ಇವರು ತಪ್ಪು ಮಾಡಿದ್ದರೆ ಇವರಿಗೆ ಹೇಳಬೇಕು. ಇಬ್ಬರನ್ನೂ ಕೂಡಿಸಿ ಇತ್ಯರ್ಥ ಮಾಡಬೇಕು. ಇಂತಹ ಮನೋಭಾವ ಇದೆಯೇ ಎಂದು ಕೇಳಿದರೆ, ಇಲ್ಲವೆಂದು ಹೇಳಬೇಕಾಗುತ್ತದೆ. ಆ ಮನೋಭಾವ ತಮ್ಮಲ್ಲಿ ಇರಬೇಕಾಗುತ್ತದೆ. ಮಾನ್ಯ ಮಂಜುನಾಥ್ ರವರು ೨೪ನೇ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅದರಲ್ಲಿ ಒಂದು ಮಾತನ್ನು ಹೇಳಿದ್ದಾರೆ.

> "The State Government will effect charges in the labour law to make the presence of the management and labour representatives mandatory at consiliation meetings. He said that it was his intention to seek solution to the workers problems through conciliation as other wise the workers themselves would suffer. He said that he would do everything possible within the legal frame-work to solve their problems but he would not hesitate to take measures if the managements maintained adamant o posures." ಎಂದು.

ಶ್ರೀ ಎ. ಲಕ್ಷ್ಮೀಸಾಗರ್.—ಸೆಂಟ್ರಲ್ ಗವರ್ನ್‌ಮೆಂಟ್‌ನಿಂದ ಇನ್‌ಕಾರ್ಪೊರೇಟ್ ಆಗಿ ಬರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.–ಧೀರೋಧಾತ್ತವಾದ ಮಾತು. What are the stringent measure that you have taken ಎನ್ನುವ ಪ್ರಶ್ನೆ ನಮಗೆ ಬಂದಿದೆ. ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ. ಈ ಪ್ರಾಬ್ಲಂಸ್ ಬಗ್ಗೆ ಹೇಳುತ್ತಿದ್ದೇನೆ. ಇನು ಮೈಸೂರ್ ವೈರ್ ಅಂಡ್ ಮೆಟಲ್ ವರ್ಕ್ಸ್ ತಾವು ಬಂದ ಮೇಲೆ ಆದದ್ದೆಂದು ಕಾಣುತ್ತದೆ. ಅದರ ಬಗ್ಗೆ ದೀರ್ಘವಾದ ಚರ್ಚೆಗೆ ಹೋಗುವುದಿಲ್ಲ. ಅಲ್ಲಿ ಕಾರ್ಮಿಕರು ೧೦ ತಿಂಗಳ ಹೋರಾಟ ನಡೆಸಬೇಕಾಯಿತು, ಆ ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕೆ ಸರ್ಕಾರದವರು ಮುಂದೆ ಬರಲಿಲ್ಲ. ಇವತ್ತು ನಾಳೆ ಮಾಡುತ್ತೇವೆ "ಟೂಸ್ವಾಮಿ ಟೆಸ್ವಾಮಿ ಎನ್ನುವ ರೀತಿಯಲ್ಲಿ ಆಯಿತೇ ವಿನ್ ಹೋರಾಟ ನಡೆಸಿ ೧೦ ತಿಂಗಳಾದರೂ ಕೂಡ ಏನು ಮಾಡುವುದಕ್ಕೆ ಆಗಿಲ್ಲ. ಮಾಲೀಕ ತಮ್ಮ ಹತ್ತಿರ ಬರುವುದಿಲ್ಲವೆಂದು ಹೇಳಿದರೆ, ಅವರನ್ನು ಕಿವಿ ಹಿಂಡಿ ಕರೆದುಕೊಂಡು ಬರಬೇಕು. ಅವರು ತಮ್ಮ ಹತ್ತಿರ ಬರುವುದಿಲ್ಲವೆಂದರೆ ಏನು, ಮಂತ್ರಿಗಳು ಕರೆದರೆ ಒಬ್ಬ ಮಾಲೀಕ ಬರದೇ ಹೋದರೆ, ಮಂತ್ರಿಯಾಗಿ ಏಕೆ ಇರಬೇಕು? ನೀವು ಕರೆದಾಗ ಒಂದೆರಡು ಸಲ ಬಂದಿರಬಹುದು.

ಶ್ರೀ ಡಿ. ಮಂಜುನಾಥ್.—ಅಧಿಕಾರಿಗಳು ಕರೆದಾಗ ಬಾರದೇ ಇರಬಹುದು ನಾನು ಕರೆದಾಗ ಬಂದಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಕರೆದಿದ್ದೀರಿ ಆಗ ಬರಲಿಲ್ಲ. ಹಿಂದಿನ ಮಂತ್ರಿಗಳು ಏನೂ ಮಾಡಲಿಲ್ಲ. ಪೋಲೀಸಿನವರ ಸಹಾಯವನ್ನು ಅವರಿಗೆ ಕೊಟ್ಟರು. ೧೦ ತಿಂಗಳಕಾಲ ಈ ಕಾರ್ಮಿಕರು ಏಕೆ ಹೋರಾಟ ನಡೆಸಬೇಕಾಯಿತೆಂದರೆ, ಪೋಲೀಸಿನವರು ಮಾಲೀಕರಿಗೆ ಸಹಾಯ ಮಾಡಿದ್ದರಿಂದ. ಪೋಲೀಸಿನವರ ಸಹಾಯವನ್ನು ಮಾಲೀಕರಿಗೆ ಕೊಡುವುದಕ್ಕೆ ಯಾವಾಗ ನೀವು ತೀರ್ಮಾನ ಮಾಡಿದ್ದು ? ಹಿಂದಿನಿಂದ ಈ ಪರಂಪರೆ ನಡೆದುಕೊಂಡು ಬಂದಿದೆ. ಹಿಂದಿನ ಮಂತ್ರಿಗಳಾದ ಶ್ರೀ ದೇವರಾಜ ಅರಸ್‌ರವರು ಮತ್ತು ಶ್ರೀ ಗುಂಡೂರಾಯರು ಮಾತನಾಡಿದ್ದರು. ಈ ವಿಷಯದಲ್ಲಿ ಪೋಲೀಸಿನವರನ್ನು ಕಾರ್ಮಿಕ ವರ್ಗಕ್ಕೆ ವಿರುದ್ಧವಾಗಿ ಕಳಿಸುವುದಿಲ್ಲವೆಂದು ಹೇಳಿದ್ದರು. ನಮ್ಮ ಕಣ್ಣೆದುರಿಗೇ ೧೫ ವ್ಯಾನ್‌ಗಳನ್ನು ಕಳುಹಿಸಿ, ಅವರನ್ನು ಹೊತ್ತುಕೊಂಡು ಹೋದರು. ೨೦೦ ಜನ ವರ್ಕರ್ಸ್ ಏನು ಮಾಡುವುದಕ್ಕಾಗುತ್ತದೆ. ಲಾಠಿ ಚಾರ್ಜ್ ಆಯಿತು ಕೆಲಸಗಾರರು ಏಟು ತಿಂದರು. ಈ ರೀತಿ ೪–೫ ತಿಂಗಳು ಮುಂದುವರಿಯಿತೇ ವಿನಹ ಇತ್ಯರ್ಥ ಮಾತ್ರ ಆಗಲಿಲ್ಲ. ಸರ್ಕಾರದ ಧೋರಣೆಯು ಇಂತಹ ವಿಷಯದಲ್ಲಿ ತಪ್ಪಾಗಿ ನಡೆದಿದೆ. ಯಾವ ಕಾರ್ಮಿಕರೂ, ಯಾರ ತಲೆಯನ್ನು ಹೊಡೆಯುವುದಕ್ಕೆ ಹೋಗಿಲ್ಲ. ಅವರ ಪಾಡಿಗೆ ಅವರಿದ್ದರು. ಜೀಪ್ ಇಂಡಸ್ಟ್ರೀ, ಮೈಸೂರಿನಲ್ಲಿ ಪೋಲೀಸ್ ಅಧಿಕಾರಿಯ ಅಟ್ಟಹಾಸವು ಕಾರ್ಮಿಕ ಸಂಘವೇ ಇರಕೂಡದೆಂದು ಇದೆ. ಅಲ್ಲಿ ಮಾಲೀಕ ಮತ್ತು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಇಬ್ಬರೂ ಒಂದಾಗಿದ್ದಾರೆ. ಮಾಲೀಕರಿಗೆ ಸಂಬಂಧಪಟ್ಟವರು

ಪಾರ್ಲಿಮೆಂಟ್ ಮೆಂಬರ್ ಆಗಿದ್ದಾರೆ. ಅನೇಕ ಕೇಸುಗಳು ಇವೊತ್ತು ಕೂಡ ನಡೆಯುತ್ತಿವೆ. ಸರ್ಕಾರವು ಇದರಲ್ಲಿ ಮಧ್ಯೆ ಪ್ರವೇಶ ಮಾಡಲಿಲ್ಲ. ಇನ್ನು ಅಲೆಂಬಿಕ್ ಗ್ಲಾಸ್ ಇಂಡಸ್ಟ್ರೀಯಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಅಲ್ಲಿ ಕ್ಲೋಷರ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಅಲ್ಲಿನ ಕೆಲಸಗಾರರನ್ನು ಲೇ ಆಫ್ ಮಾಡಿದ್ದಾರೆ. ೬–೭ ತಿಂಗಳಿಂದ ಅರ್ಧ ಸಂಬಳವನ್ನು ಕೊಡು ತ್ತಿದ್ದಾರೆ. ಅದನ್ನೂ ಕೊಡುವುದಿಲ್ಲವೆಂದರೆ ಕಾನೂನಿಗೆ ವಿರುದ್ಧವಾಗಿ ತೀರ್ಮಾನ ಮಾಡಿದ ಹಾಗೆ ಆಗುತ್ತದೆ. ಮಾಲೀಕನು ಕಾರ್ಖಾನೆಗೆ ಎಲೆಕ್ಟ್ರಿಸಿಟಿ ಕೊಡಿ ನಡೆಸುತ್ತೇನೆಂದು ಹೇಳುತ್ತಾನೆ. ಎಲೆಕ್ಟ್ರಿಸಿಟಿ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಮಾನ್ಯ ಮಂಜುನಾಥ್‌ರವರೂ ಹೇಳಿದರು ಬಹಳ ಸಂತೋಷ. ಆದರೆ ಎಲ್ಲರೂ ಹೇಳಿದರೂ ಕೂಡ ಮಾಲೀಕ ಇದುವರೆಗೆ ಕಾರ್ಖಾನೆಯನ್ನು ತೆಗೆದಿಲ್ಲ. ಎಲೆಕ್ಟ್ರಿಸಿಟಿಯನ್ನು ಸರ್ಕಾರ ಕೊಡುತ್ತೇವೆಂದರೂ ಸಹ ಮಾಲೀಕ ತೆಗೆಯುವುದಿಲ್ಲವೆಂದು ಹೇಳುತ್ತಾನೆ. ನಾವು ಸರ್ಕಾರದ ಪತ್ತಿರ ಬಂದು ಇದನ್ನು ಹೇಳಿದರೆ, ಅಗಲಿ ನೋಡೋಣ ಕೊಡಿಸಿ ಬಿಡೋಣ, ಮಾಡಿಬಿಡೋಣ ತಡೆಯಿರಿ ಎಂದು ಹೇಳುತ್ತೀರಿ. ನಾವು ನಿಮ್ಮ ಮಾತಿಗೆ ಗೌರವ ಕೊಟ್ಟು ಸುಮ್ಮನಿದ್ದೇವೆ. ಹಸಿದ ಹೊಟ್ಟೆ ಎಷ್ಟು ದಿವಸ ಸುಮ್ಮನಿರುವುದಕ್ಕೆ ಆಗುತ್ತಿದೆ ? ಪಕ್ಕದ ವೈಟ್ ಫೀಲ್ಡ್‌ನಲ್ಲಿ ಈ ರೀತಿ ನಡೆಯುತ್ತಿದೆ. ಈ ಮಾಲೀಕನನ್ನು ಹದ್ದುಬಸ್ತಿನಲ್ಲಿಡುವುದಕ್ಕೆ ಆಗಿಲ್ಲ. ನಿಮ್ಮ ಲೆವೆಲ್‌ನಲ್ಲಿ ಒಂದು ಮೀಟಿಂಗ್ ಕರೆದರೆ, ಚೀಫ್ ಮಿನಿಸ್ಟರ್ ಎದುರಿಗೆ ಮೀಟಿಂಗ್ ನಡೆಯಲಿ, ಅಲ್ಲಿಗೆ ಎಲ್ಲರೂ ಬರಲಿ, ಲೇಬರ್ ಮಿನಿಸ್ಟರ್‌ರವರೂ ಬರಲಿ, ಪವರ್ ಮಿನಿಸ್ಟರವರೂ ಬರಲಿ ನಮ್ಮ ಎದುರಿಗೆ ಅವರು ಹೇಳಲಿ ಕಾರ್ಖಾನೆಯ ಬಾಗಿಲನ್ನು ತೆಗೆಯುವುದಕ್ಕೆ ಯೋಚನೆ ಮಾಡುತ್ತೇನೆಂದು ಉದ್ಧಟ ತನವಾಗಿ ಮಾತನಾಡುವ ಮಾಲೀಕನಿಗೆ ನಾವು ಪಾಠ ಕಲಿಸದೇ ಹೋದರೆ, ಲೇಬರ್ ಡಿಪಾರ್ಟ್‌ಮೆಂಟ್ ಇದ್ದೂ ಕೂಡ ಪ್ರಯೋಜನವೇನು ? ಸರ್ಕಾರ ಮಾಲೀಕ ವರ್ಗದವರ ಪರವಾಗಿ ಇದೆಯೋ ಇಲ್ಲವೇ, ಕಾರ್ಮಿಕ ವರ್ಗದವರ ಪರವಾಗಿದೆಯೋ ಎನ್ನುವುದನ್ನು ಹೇಳಬೇಕು. ಇನ್ನು ಕರ್ನಾಟಕ ಅಲ್ಯೂಮಿನಿಯಮ್ ಇಂಡಸ್ಟ್ರಿಯಲ್ಲಿ ಇಲ್ಲೀಗಲ್ ಆಗಿ ರಿಟ್ರೆಂಚ್ ಮಾಡಿದ್ದಾರೆ. ಕನ್‌ಸಿಲಿಯೇಷನ್ ನಡೆದು ಎಂಟು ತಿಂಗಳು ಆಯಿತು. ಲೇಬರ್ ಡಿಪಾರ್ಟ್‌ಮೆಂಟಿನವರು ಕನ್‌ಸಿಲಿ ಯೇಷನ್ ಮಾಡಿದರು, ಲೇಬರ್ ಸೆಕ್ರೆಟರಿಗೆ ರಿಪೋರ್ಟ್ ಹೋಗಿದೆ. ಅದು ಏನಾಗಿದೆ ಎಂದು ಗೊತ್ತಿಲ್ಲ. ಅದು ಎಲ್ಲಿ ಬಿದ್ದಿದೆಯೋ ಏನೋ ನನಗೆ ಗೊತ್ತಿಲ್ಲ. ಅಲ್ಲಿಯ ವೈಖರಿ ಏನು ಅಂದರೆ ನಮ್ಮಂಥವರು ಕೇಳಿದರೆ ಅವರು ನಮ್ಮನ್ನೇ ಕೇಳುತ್ತಾರೆ. ಕಾನ್‌ಫಿಡೆನ್ಷಿಯಲ್ ರಿಪೋರ್ಟ್ ರೆಫೆರೆನ್ಸ್ ತೆಗೆದುಕೊಂಡು ಬನ್ನಿ ಎಂದು ನಮಗೆ ಹೇಳುತ್ತಾರೆ. ಅದನ್ನು ನಮಗೆ ಎಲ್ಲಿ ಕೊಡುತ್ತಾರೆ ಈ ಪರಿಸ್ಥಿತಿ ಇದೆ. ಇನ್ನು ಮೈಸೂರು ಟೊಬ್ಯಾಕೋ ಕಂಪನಿಯ ಬಗ್ಗೆ ಹೇಳಬೇಕೆಂದರೆ ಬಹಳ ದುಃಖವಾಗುತ್ತದೆ ನೆನ್ನೆಯ ದಿವಸ ಅದನ್ನು ಮುಚ್ಚಬೇಕೆಂದು ತೀರ್ಮಾನ ಮಾಡಿದ್ದಾರೆ. ಅದರಿಂದ ಸುಮಾರು ಮೂರು ಸಾವಿರ ಜನ ಬೀದಿ ಪಾಲಾಗುತ್ತಾರೆ, ಇದು ಕಾರ್ಮಿಕರಿಗೆ ಸಂಬಂಧಪಟ್ಟ ವಿಚಾರ. ಇವರಲ್ಲಿಯೂ ಸಾಕಷ್ಟು ದುರ್ವ್ಯವಹಾರ ನಡೆದಿದೆ ಎಂದು ಹೇಳುತ್ತಾರೆ. ಅದನ್ನು ಸರಿಯಾದ ರೀತಿ ಯಲ್ಲಿ ನಡೆಸಿಕೊಳ್ಳಲಿಕ್ಕೆ ಸಾಧ್ಯತೆ ಇತ್ತು. ಅಲ್ಲಿ ಮುಕ್ಕಾಲು ಜನ ಹರಿಜನ ಗಿರಿಜನರಿದ್ದಾರೆ, ಸುಮಾರು ಎರಡು ಸಾವಿರ ಜನ ಹೆಂಗಸರು ಇದ್ದಾರೆ. ಇದನ್ನು ಮುಚ್ಚಲಿಕ್ಕೆ ಬಿಡುವುದಿಲ್ಲ ಎಂದು ತಾವು ಹೇಳಬೇಕು. ಇನ್ನು ಟೆಕ್ಸ್‌ಟೈಲ್ ಇಂಡಸ್ಟ್ರಿ ಬಗ್ಗೆ ಬಿಜಾಪುರ, ಶಂಕರ್ ಟೆಕ್ಸ್‌ಟೈಲ್, ನರಗುಂದ, ಮತ್ತೆ ಕೆ. ಆರ್. ಮಿಲ್ಸ್ ಇವೆಲ್ಲಾ ಇತ್ಯರ್ಥವಾಗದೇ ಹಾಗೆ ಉಳಿದಿದೆ. ಒಂದೊಂದು ಕಡೆಯೂ ಏನು ನಡೆದಿದೆ ಎಲ್ಲವನ್ನೂ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆ ಬಗ್ಗೆ ಮಾನ್ಯ ಸದಸ್ಯರಾದ ಪಂಪಾಪತಿ ಯವರು ಹೇಳುತ್ತಾರೆ. ಅಂಡರ್ ಯುಟಿಲೈಸೇಷನ್ ಕೆಪಾಸಿಟಿ ೩೦ ಪರ್ ಸೆಂಟ್ ದುರ್ವ್ಯವಹಾರ ನಡೆಯುತ್ತಿದೆ. ಈ ತರಹ ಇಂಡಸ್ಟ್ರಿಗಳು ಮುಚ್ಚಿಕೊಂಡು ಹೋಗುತ್ತಿದ್ದರೆ ಸರ್ಕಾರಕ್ಕೆ ಒಂದು ಧೋರಣೆ ಬೇಡವೇ ? ಕೈಗಾರಿಕೆಯಲ್ಲಿ ಕೆಲಸ ಮಾಡತಕ್ಕ ಸಾವಿರಾರು ಜನರು ಹಲವಾರು ಸಾರಿ ದಾವಣಗೆರೆಯಿಂದ ಬಿಜಾಪುರದಿಂದ ಬಂದು ಇಲ್ಲಿ ಅರೆಸ್ಟ್ ಆಗಿದ್ದಾರೆ. ಅವರ ಜೊತೆಯಲ್ಲಿ ನಾನು ಸಹ ಅರೆಸ್ಟ್ ಆಗಿದ್ದೆ. ಆದರೆ ಯಾವ ಪ್ರಶ್ನೆಯೂ ಇತ್ಯರ್ಥವಾಗಿಲ್ಲ. ಮೈಸೂರು ಕೆ.ಆರ್. ಮಿಲ್ ವಿಚಾರ ಹಾಗೆ ಉಳಿದಿದೆ. ಇನ್ನು ವಾಣಿವಿಲಾಸ್ ಷುಗರ್ ಫ್ಯಾಕ್ಟರಿ, ಗೌರಿಬಿದನೂರು ಷುಗರ್ ಫ್ಯಾಕ್ಟರಿ ಇದು ಎಲ್ಲಾ ಹಾಗೆ ಉಳಿದಿದೆ. ಪೋಲೀಸ್ ಇಂಟರ್‌ಫಿಯರೆನ್ಸ್ ಬಗ್ಗೆ ಎರಡು ಮಾತು ಹೇಳಬೇಕು ಎಂದರೆ ಮಾಲೀಕರು ಮತ್ತು ಕಾರ್ಮಿಕರ ಪ್ರಶ್ನೆಗಳು ಬಂದಾಗ ಪೋಲೀಸರು ಮಾಲೀಕರ ಪರವಾಗಿ ರಕ್ಷಣೆ ಕೊಡುತ್ತಾರೆ ವಿನಹ ಕಾರ್ಮಿಕರಿಗೆ ರಕ್ಷಣೆ ಕೊಡಲಿಕ್ಕೆ ಬರುವುದಿಲ್ಲ. ನನ್ನನ್ನು ಸೇರಿಸಿ ಹೇಳುತ್ತಿದ್ದೇನೆ. ನನ್ನ ಕೈಗೆ ಏಟು ಬಿದ್ದಿದೆ, ತಲೆಗೆ ಏಟು ಬಿದ್ದಿಗೆ, ಕಾಲಿಗೆ ಏಟು ಬಿದ್ದಿದೆ. ಕಾರ್ಮಿಕರು ಏನಾದರೂ ತಪ್ಪು ಮಾಡಿದಾಗ ಅವರಿಗೆ ನೋಟೀಸ್ ಕೊಡುವಂಥಾದ್ದು ಇವೆಲ್ಲಾ ಇರುತ್ತವೆ. ಆದರೆ ಈ ತರಹ ತೊಂದರೆ ಕೊಡುವುದು ಬಹಳ ತಪ್ಪು. ಮೈಸೂರು ಐಡಿಯಲ್ ಜಾವಾ ವರ್ಕ್‌ರ್ಸ್ ಮೇಲೆ ಯಾವರೀತಿ ನಡೆಯಿತು, ಇದರ ಬಗ್ಗೆ ಎಲ್ಲಾ ಮಾಲ್ಯಾಧಾರಿತ ಎಂದು

ಹೇಳುವವರು ಯೋಚನೆ ಮಾಡಬೇಕಾಗುತ್ತದೆ. ಇವೊತ್ತು ಸರ್ಕಾರದ ಧೋರಣೆ ಯಾವರೀತಿ ಇದೆ ಅದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಇವರಿಗೆ ಫಾರವರ್ಡ್ ಲುಕಿಂಗ್ ಅಪ್ರೋಚ್ ಇಲ್ಲ ಮುಂದೆ ಯಾವರೀತಿ ಮಾಡಬೇಕೆಂದು ಯೋಚನೆ ಮಾಡುವ ಪರಿಸ್ಥಿತಿ ಇದ್ದಿದ್ದರೆ ಅನೇಕ ಪ್ರಶ್ನೆಗಳು ಇತ್ಯರ್ಥವಾಗುತ್ತಿದ್ದವು. ಆ ರೀತಿ ಯೋಚನೆ ಮಾಡುವ ಮನೋಭಿಪ್ರಾಯ ಇಲ್ಲ. ಯಾರಿಗೂ ಬೇಡದೆ ಇರುವ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಪೋಸ್ಟ್ ಮಾಡಬೇಕು ಎಂದು ಮಾಡುತ್ತೀರಿ. ಮಾನ್ಯ ಮಂಜುನಾಥ್ ಅವರು ಬಹಳ ಒಳ್ಳೆಯ ಮಂತ್ರಿಗಳು, ಹಸು ಸಾಧುವಾದ ಪ್ರಾಣಿ. ಆ ತರಹ ಇದ್ದಾರೆ ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರು ಈ ಮಾಲೀಕರನ್ನು ಬಗ್ಗಿಸಲಿಕ್ಕೆ ಇನ್ನೂ ಸ್ವಲ್ಪ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಈಗಾಗಲೇ ತೆಗೆದುಕೊಂಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೂ ಸ್ವಲ್ಪ ಬಗ್ಗಿಸುವಂತೆ ಮಾಡಬೇಕು. ನಾವು ಏನು ಬೇಕಾದರೂ ಮಾಡಿಕೊಂಡು ಹೋಗಬಹುದು ಎನ್ನುವುದು ಅವರಲ್ಲಿ ಬರಬಾರದು. ಯಾರು ತಪ್ಪು ಮಾಡುತ್ತಾರೆ ಅವರಿಂದ ದಂಡ ತೆಗೆದುಕೊಳ್ಳಿ, ಅದನ್ನು ಮಾಡದೇ ಹೋದರೆ ಜನರಿಗೆ ನಿಮ್ಮ ಬಗ್ಗೆ ಹೇಗೆ ನಂಬಿಕೆ ಬರುತ್ತದೆ ? ಇನ್ನು ಬೋನಸ್ ಅಮೆಂಡ್‌ಮೆಂಟ್, ಬಗ್ಗೆ ಹೇಳಬೇಕೆಂದರೆ, ೭೫೦–೧೬೦೦ ರೂಪಾಯಿಗಳ ಸೀಲಿಂಗ್ ಆಧಾರದ ಮೇಲೆ ಕೊಡಬೇಕೆಂದು ಅಮೆಂಡ್‌ಮೆಂಟ್ ಆರ್ಡರ್ ಏನಾಗಿದೆ ಅದರ ಬಗ್ಗೆ ತಕರಾರು ಬಂದಿದೆ. ಅದನ್ನು ೧೯೮೪ರಿಂದ ಕೊಡಬೇಕೋ ೧೯೮೫ರಿಂದ ಕೊಡಬೇಕೋ, ೧೯೭೬ರಿಂದ ಕೊಡಬೇಕೋ ಆ ಬಗ್ಗೆ ಒಂದು ಪ್ರಶ್ನೆ ಬಂದಿದೆ. ಕರ್ನಾಟಕ ರಾಜ್ಯದಲ್ಲಿಯೇ ಇದು ಜಿಜ್ಞಾಸೆಯಾಗಿದೆ.

ಶ್ರೀ ಡಿ. ಮಂಜುನಾಥ್.—ಬೋನಸ್ ಆಕ್ಟ್‌ಗೆ ಅಮೆಂಡ್‌ಮೆಂಟ್ ಆಗಿದೆ. ಅದರ ಬಗ್ಗೆ ನೋಟಿಫಿಕೇಷನ್ ಆಗಬೇಕಾಗಿದೆ. ಪ್ರಾಸ್‌ಪೆಕ್ಟೀವ್‌ನಿಂದ ಕೊಡಬೇಕೆ, ರೆಟ್ರಾಸ್‌ಪೆಕ್ಟೀವ್‌ನಿಂದ ಕೊಡಬೇಕೆ ಎನ್ನುವ ಬಗ್ಗೆ ಜಿಜ್ಞಾಸೆ ಬಿದ್ದಿದೆ. ಅದನ್ನು ಯಾವ ದಿವಸದಿಂದ ಜಾರಿಗೆ ಕೊಡಬೇಕು ಎನ್ನುವ ಬಗ್ಗೆ ಚರ್ಚೆಯಾಗುತ್ತಿದೆ. ಅದರ ಬಗ್ಗೆ ಇಷ್ಟರಲ್ಲಿಯೇ ಇತ್ಯರ್ಥವಾಗುತ್ತದೆ.

SRI M. S. KRISHNAN.—The Minister is not as much informed as I am on this question ಪೇಮೆಂಟ್ ಆಫ್ ಬೋನಸ್ ಆಕ್ಟ್ ಪ್ರಕಾರ ಅಮೆಂಡ್‌ಮೆಂಟ್ ಬಿಲ್ ನೋಡಿ. ಗವರ್ನ್‌ಮೆಂಟ್ ಆಫ್ ಇಂಡಿಯಾ ನೋಟಿಫಿಕೇಷನ್ ಇದೆ ಅದನ್ನು ಕಳುಹಿಸಿಕೊಡುತ್ತೇನೆ ದಯುಮಾಡಿ ನೋಡಿ. ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ದಿನಾಂಕ ೫ನೇ ಆಗಸ್ಟ್ ೧೯೮೫.

> "Public Sector Enterprises have made references to the BPE as to whether bonus could be paid bythem for the financialyear 1984-85 on actual basis by plus dearness alowance *i.e.* in accordance with the amended provisions of the payment of Bonus Act, The matter was taken up with the Labour Ministry. Labour Ministry who have examined the matter in consultation with the Law Ministry have advised the Bureau that Bonus under the amended act can be paid for the year 1984-85."

ಇದರಲ್ಲಿ ಬಹಳ ಕ್ಲೀಯರ್ ಆಗಿದೆ. ಪಬ್ಲಿಕ್ ಸೆಕ್ಟಾರ್ ಮಾತ್ರ ಹೇಳಿದ್ದಾರೆ. ಪ್ರೈವೇಟ್ ಸೆಕ್ಟಾರ್ ಹೇಳಿಲ್ಲ ನಿಜ. ಇವೊತ್ತು ನಮ್ಮ ರಾಜ್ಯದಲ್ಲಿ ಸ್ಟೇಟ್ ಸೆಕ್ಟಾರ್ ಇಂಡಸ್ಟ್ರೀಸ್ ಕೊಡಲಿಕ್ಕೆ ತಯಾರಿಲ್ಲ ಎನ್.ಜಿ.ಇ.ಎಫ್.ನಲ್ಲಿ ನಿನ್ನೆ ರಾತ್ರಿ ಹತ್ತು ಗಂಟೆಯುವರೆವಿಗೂ ವಿವಾದ ನಡೆಯಿತು. ಇವೊತ್ತು ನೀವು ಸ್ಟೇಟ್ ಸೆಕ್ಟಾರ್‌ನವರಿಗೆ ಏತಕ್ಕೆ ಕೊಡಿ ಎಂದು ಹೇಳಬಾರದು. ಪ್ರೈವೇಟ್ ಸೆಕ್ಟಾರ್‌ನವರನ್ನು ಕರೆಯಿಸಿ ನೀವು ಇದನ್ನು ಮಾಡಬೇಕೆಂದು ಹೇಳಲಿಕ್ಕೆ ನಿಮಗೆ ಹಕ್ಕು ಇದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರಿಗೆ ಬಿಡಬೇಕಾಗಿಲ್ಲ. ತಾವು ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ, ಜಿ.ಕೆ.ಡಬ್ಲ್ಯು. ಮಾಲೀಕ

ರನ್ನು ಕರೆಯಿಸಿ ಈ ತರಹ ಬಂದಿದೆ, ಇದನ್ನು ಜಾರಿಗೆ ತನ್ನಿ ಎಂದು ಹೇಳುವ ಪ್ರವೃತ್ತಿ ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತೀರಿ, ಕೆಲವು ಕಾರ್ಯಕ್ರಮ ತೆಗೆದುಕೊಂಡಿರುವುದರಲ್ಲಿ ಒಳ್ಳೆಯವು ಇವೆ. ಕಾರ್ಮಿಕರಿಗೆ ವಿರುದ್ಧವಾಗಿ ಬಂದಂಥಾದ್ದಕ್ಕೆ ಏತಕ್ಕೆ ಸಪೋರ್ಟ್ ಮಾಡುತ್ತೀರಿ ? ಎಸೆನ್‌ಷಿಯಲ್ ಸರ್ವೀಸ್ ಮೈಂಟೆನೆನ್ಸ್ ಆಕ್ಟ್ ಈ ದೇಶದಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡು ಬಂದಿದೆ. ಇದನ್ನು ಮತ್ತೆ ೫ ವರ್ಷಕ್ಕೆ ಪೀರಿಯಡ್ ಎಕ್ಸ್‌ಟೆಂಡ್ ಮಾಡುವ ಬಗ್ಗೆ ಚರ್ಚೆ ನಡೆದಿದೆ. ಸರ್ಕಾರದ ಪ್ರತಿನಿಧಿಗಳ ಸಭೆ ಕರೆಯಿಸಿದ್ದಾರೆ. ಮಂತ್ರಿಗಳು ಸಭೆಯೊಳಗೆ ಇದನ್ನು ಸ್ವೀಕರಿಸಿದರೋ ಏನೋ ಗೊತ್ತಿಲ್ಲ. ಕರ್ನಾಟಕ ರಾಜ್ಯದ ಪ್ರತಿನಿಧಿಯ ಅಭಿಪ್ರಾಯ ಏನು ಇತ್ತು ಎಂದರೆ ಅದನ್ನು ಎಕ್ಸ್‌ಟೆಂಡ್ ಮಾಡಲಿ ಎಂದು ಹೇಳಿದ್ದಾರೆ. ಈ ತರಹ ಆದರೆ ಪ್ರಜಾಪ್ರಭುತ್ವದ ಮೌಲ್ಯಕ್ಕೆ ಬೆಲೆ ಕೊಡುತ್ತಿದ್ದೀರಾ ನೀವು ಎಂದು ಕೇಳಬೇಕಾಗಿದೆ.

೩–೩೦ ಪಿ. ಎಂ.

ಪ್ರಜಾಪ್ರಭುತ್ವವನ್ನು ಬಗ್ಗು ಬಡಿಯುವುದಕ್ಕೆ ತಾವು ಬೆಂಬಲ ಕೊಡುತ್ತಿದ್ದೀರಿ. ಎಸೆನ್ಸಿಯಲ್ ಕಮಾಡಿಟೀಸ್ ಮತ್ತು ಮೇಂಟೆನೆನ್ಸ್ ಆಕ್ಟ್ ಅದು ಕರಾಳ ಶಾಸನ. ಅದಕ್ಕೆ ತಾವು ಬೆಂಬಲ ಕೊಡುತ್ತಿದ್ದೀರಿ. ಅದಕ್ಕಿಂಥ ಮತ್ತೊಂದು ಪದವನ್ನು ಇವಕ್ಕೆ ಬಳಸುವುದಕ್ಕೆ ಆಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇನ್ನೊಂದು ವಿಷಯ ಏನೆಂದರೆ ಶಾಸನಗಳನ್ನು ನಾವು ಮಾಡಬೇಕು. ಕಾರ್ಮಿಕರಿಗೆ ಸಂಬಂಧಪಟ್ಟ ಶಾಸನಗಳು ಬರಬೇಕು. ಪ್ರಗತಿಪರವಾದ ಶಾಸನಗಳನ್ನು ತರುತ್ತಿದ್ದೇವೆಂದು ತಾವು ಹೇಳಿದ್ದೀರಿ. ಮಾನ್ಯ ಟಿ. ಅಂಜಯ್ಯನವರು ಕೇಂದ್ರದಲ್ಲಿ ಕಾರ್ಮಿಕ ಮಂತ್ರಿಗಳಾದ ಮೇಲೆ ಅದನ್ನು ಮಾಡಬೇಕೆಂದು ಅವರೂ ಸಹ ಹೇಳಿದ್ದಾರೆ. ನಾವು ಅದು ಬರಬೇಕೆಂದು ಒಂದು ಮೆಮೊರಾಂಡಮ್ ಕೊಟ್ಟಿದ್ದೇವೆ. ಅಖಿಲ ಭಾರತೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನವರು ೧೨ನೇ ನವೆಂಬರ್ ೧೯೭೭ರಂದು ಒಂದು ದೀರ್ಘವಾದ ಮೆಮೊರಾಂಡಮ್ ಅನ್ನು ಕೊಟ್ಟಿದ್ದಾರೆ ಅದರ ಬಗ್ಗೆ ಇದುವರೆಗೆ ಚರ್ಚೆ ಕೂಡ ಮಾಡಲಿಲ್ಲ. ಮೆಮೊರಾಂಡಮ್ ಏನು ಕೊಟ್ಟಿದ್ದೇವೆ ಅದರಲ್ಲಿ ಸರ್ವಿಸಸ್ ಬಗ್ಗೆ, ಮಿನಿಮಂ ವೇಜಸ್ ಬಗ್ಗೆ, ಕೈಗಾರಿಕಾ ನೀತಿಯ ಬಗ್ಗೆ, ಸ್ಟ್ಯಾಟಿಸ್ಟಿಕ್ಸ್ ಬಗ್ಗೆ, ಲೆಜಿಸ್‌ಲೇಟಿವ್ ಮೆಜರ್ಸ್ ಬಗ್ಗೆ ಮೀಟಿಂಗ್ ಕರೆದು ಚರ್ಚೆಮಾಡಿಯೆಂದು ಕೇಳಿಕೊಂಡಿದ್ದೇವೆ. ಚರ್ಚೆ ಮಾಡುವಂತಹ ಸೌಜನ್ಯವನ್ನು ತೋರಲಿಲ್ಲ. ನೀವು ಕಾರ್ಮಿಕರ ಹಿತರಕ್ಷಣೆಯನ್ನು ಹೇಗೆ ಮಾಡುತ್ತೀರಿ? ಅದರ ಚರ್ಚೆ ನಡೆದಿಲ್ಲ. ನನ್ನ ಒಬ್ಬನನ್ನೇ ಕರೆದು ಚರ್ಚೆಮಾಡಿರೆಂದು ಹೇಳುತ್ತಿಲ್ಲ. ನನ್ನ ಮಿತ್ರರನ್ನು ಕರೆಯಿಸಿ ಚರ್ಚೆಮಾಡಿ. ೧೯೭೭ರಿಂದ ಇಲ್ಲಿಯವರೆಗೆ ಜನತಾ ಸರ್ಕಾರವನ್ನು ಕೇಳುತ್ತಿದ್ದೇವೆ. ಒಂದು ಶಾಸನವನ್ನು ಇಲ್ಲಿಯವರೆಗೆ ಏತಕ್ಕೆ ಕಾರ್ಮಿಕರ ಪರವಾಗಿ ತೆಗೆದುಕೊಂಡು ಬಂದಿಲ್ಲ? You have brought a small amendment and a wrong amendment. That Amendment goes against 75,000 workers in Bangalore City. ತಮಿಳುನಾಡಿನಲ್ಲಿ ಮತ್ತು ಕೇರಳದಲ್ಲಿ ಒಂದು ಶಾಸನವನ್ನು ಮಾಡಿದ್ದಾರೆ. ಕಾರ್ಮಿಕರಿಗೂ ಮತ್ತು ಮಾಲೀಕರಿಗೂ ವಾದವಿವಾದಗಳು ಬಂದು ಅದು ಕೋರ್ಟಿಗೆ ಹೋಗುತ್ತದೆ. ಅದು ಕೋರ್ಟ್‌ಗೆ ಹೋಗುವುದಕ್ಕೆ ಮುಂಚೆ ಅವರ ಡಿಮ್ಯಾಂಡ್ ಏನಿದೆ ಅದರ ಬಗ್ಗೆ ಇಂಟೀರಿಯಂ ಆರ್ಡರ್ ಪಾಸ್ ಮಾಡತಕ್ಕಂತಹ ಅಧಿಕಾರವನ್ನು ತಮಿಳುನಾಡು ಸರ್ಕಾರ ಮತ್ತು ಕೇರಳ ಸರ್ಕಾರಗಳು ಪಡೆದುಕೊಂಡಿವೆ. ತಮಗೆ ಶಾಸನ ಮಾಡುವುದಕ್ಕೆ ಅಧಿಕಾರವಿದೆ. ಅದು ವರ್ಷಾನುಗಟ್ಟಲೆ ಎಳೆದಾಡಿಕೊಂಡು ಹೋಗುತ್ತಿದೆ. ರಿಲೀಫ್ ಇಂಟೀರಿಯಂ ಆಗಿ ಆರ್ಡರ್ ಪಾಸ್ ಮಾಡಿದರೆ ಕಾರ್ಮಿಕರಲ್ಲಿ ಇರತಕ್ಕ ಅಶಾಂತಿ ಕಡಿಮೆಯಾಗುತ್ತದೆ. ಆ ತರಹ ಮಾಡಿರೆಂದು ನಾನು ಹೇಳುತ್ತಾ ಬಂದಿದ್ದೇನೆ. ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಆಕ್ಟ್‌ಗೆ ಸೆಕ್ಷನ್ ೧೦ (ಬಿ)ಗೆ ಅಮೆಂಡ್ ಮಾಡಬೇಕೆಂದು ಕೇಳಿದ್ದೇನೆ. ಅದರ ಬಗ್ಗೆ ಇದುವರೆಗೆ ತಾವು ಗಮನಹರಿಸಿಲ್ಲ.

ಇನ್ನು ಅಗರಬತ್ತಿ ಇಂಡಸ್ಟ್ರಿ ಬಗ್ಗೆ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಹೇಳಿದ್ದಾರೆ. ಅಗರಬತ್ತಿ ಇಂಡಸ್ಟ್ರಿಯಲ್ಲಿ ಸುಮಾರು ೧ ಲಕ್ಷ ಕಾರ್ಮಿಕರು ಇದ್ದಾರೆ, ಬೆಂಗಳೂರು ನಗರದಲ್ಲೇ ಮಹಿಳಾ ಕಾರ್ಮಿಕರು ಬಹಳ ಜನಗಳು ಇದ್ದಾರೆ. ಅವರಿಗೆ ಬರಬಾರದ ರೋಗಗಳು ಬರುತ್ತವೆ. ಅವರಿಗೆ ಯಾವುದೇ ತರಹ ಶಾಸನವಿಲ್ಲ. ಅಗರಬತ್ತಿ ಇಂಡಸ್ಟ್ರಿಗಳಲ್ಲಿ ಬಹುಭಾಗ ಷೆಡ್ಯೂಲ್ಡ್ ಕಾಸ್ಟ್‌ನವರು ಕೆಲಸ ಮಾಡುತ್ತಿದ್ದಾರೆ. ನಾನು ತಮಾಷೆ ಮಾಡುತ್ತಿಲ್ಲ. ನಾನು ಅವರುಗಳ ಮನೆಗೆ ಹೋಗಿದ್ದೇನೆ, ಅವರ ಮನೆಯಲ್ಲಿ ಊಟ ಮಾಡಿದ್ದೇನೆ. ಪೋಲಿಸ್‌ನವರು ನನ್ನನ್ನು ಹುಡುಕಿಕೊಂಡು ಬಂದಾಗ ನನಗೆ ಅವರ ಮನೆಗಳಲ್ಲಿ ರಕ್ಷಣೆ ಕೊಟ್ಟಿದ್ದಾರೆ. ಅಂತಹವರ ಪರಿಸ್ಥಿತಿ ಇವತ್ತು ಏನಾಗಿದೆ? ಅವರುಗಳ ಬಗ್ಗೆ ನಾವು ಒಂದು ಡ್ರಾಫ್ಟ್ ಬಿಲ್ ಮಾಡಿ ಕಳುಹಿಸಿದ್ದೇವೆ.

ನೀವು ಡ್ರಾಫ್ಟ್ ಬಿಲ್ ಮಾಡಿಲ್ಲ, ನಾವು ಮಾಡಿದ್ದೇವೆ. ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ವರ್ಕರ್ಸ್ ಬಗ್ಗೆ ಅವರುಗಳ ಸರ್ವೀಸ್ ಕಂಡೀಷನ್ಸ್ ಬಗ್ಗೆ ಶಾಸನ ಬರಲಿಲ್ಲ. ಅಗ್ರಿಕಲ್ಚರ್ ವರ್ಕರ್ಸ್ ಬಗ್ಗೆ ನಾನು ಶಾಸನಸಭೆಗೆ ಬಂದಾಗಿನಿಂದಲೂ ಹೇಳುತ್ತಿದ್ದೇನೆ. ಶೇಕಡ ೨೭ರಷ್ಟು ಇರುವ ಕೃಷಿ ಕಾರ್ಮಿಕರಿಗೆ ಕನಿಷ್ಟ ಶಾಸನ ಇಲ್ಲ. ಕೇರಳದಲ್ಲಿ ಅಚ್ಯುತಮೆನನ್‌ರವರು ಕೃಷಿ ಕಾರ್ಮಿಕರ ಬಗ್ಗೆ ಒಂದು ಕಾನೂನು ತಂದರು. ಅದೇರೀತಿ ಪಶ್ಚಿಮ ಬಂಗಾಳದಲ್ಲಿ ತಂದಿದ್ದಾರೆ. ಅದೇರೀತಿ ನಮ್ಮಲ್ಲಿ ತೆಗೆದುಕೊಂಡು ಬನ್ನಿ ಎಂದು ಕೇಳಿದ್ದೇವೆ. ಆ ಕಾನೂನು ಎಲ್ಲಿದೆಯೋ ಅದು ಲಾ ಡಿಪಾರ್ಟ್‌ಮೆಂಟ್‌ನಲ್ಲಿದೆಯೋ ಏನೋ ಗೊತ್ತಿಲ್ಲ. Conditions of Service of Agriculture Workers ಅವರಿಗೆ ಲೀವ್ ಬೆನಿಫಿಟ್, ಮೆಡಿಕಲ್ ಬೆನಿಫಿಟ್. ಬೋನಸ್ ಗ್ರಾಜುಯಿಟಿ ಈ ಎಲ್ಲಾ ಸೌಲಭ್ಯಗಳು ಸಿಗುವಹಾಗೆ ಮಾಡಬೇಕು.

ಶ್ರೀ ಡಿ. ಮಂಜುನಾಥ್.—ಮಿನಿಮಂ ವೇಜಸ್ ಆಕ್ಟ್ ಈಗಾಗಲೇ ಜಾರಿಯಲ್ಲಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಿನಿಮಂ ವೇಜಸ್ ಒಂದೇ ಅಲ್ಲ. ಅವರಿಗೆ ಎಲ್ಲಾ ಸೌಲಭ್ಯಗಳು ದೊರೆಯಬೇಕು. ಶೇಕಡ ೨೭ರಷ್ಟು ಜನರಲ್ಲಿ ಬಹುಪಾಲು ಷೆಡ್ಯೂಲ್ಡ್ ಕಾಸ್ಟ್‌ನವರು ಇದ್ದಾರೆ. ಮಾನ್ಯ ಬಸವಲಿಂಗಪ್ಪನವರೇ ಅವರೆಲ್ಲರೂ ನಿಮ್ಮವರು.

ಶ್ರೀ ಬಿ. ಬಸವಲಿಂಗಪ್ಪ.—ಅವರು ನಮ್ಮವರಲ್ಲ, ಭಾರತ ದೇಶದವರು.

ಶ್ರೀ ಎಂ.ಎಸ್. ಕೃಷ್ಣನ್.—ಅವರೆಲ್ಲರೂ ಶೋಷಣೆಗೆ ಒಳಪಟ್ಟಿರತಕ್ಕ ವರ್ಗದವರಿದ್ದಾರೆ. ಅವರ ಬಗ್ಗೆ ಏನೂ ಮಾಡಿಲ್ಲವೆಂದು ಆರೋಪಣೆ ಮಾಡಿದರೆ ತಪ್ಪಾಗಲಾರದು. ಟ್ರೇಡ್ ಯೂನಿಯನ್ಸ್ ರೆಕಗ್ನೀಷನ್ ಮಾಡಬೇಕೆಂದು ಕೇಳಿದ್ದೇವೆ. ಬ್ಯಾಲೆಟ್ ಅದನ್ನು ಮಾಡುವುದಕ್ಕೆ ತಯಾರಾಗಿಲ್ಲ. ಅದರ ಬಗ್ಗೆ ಪ್ರಿನ್ಸಿಪಲ್ಸ್ ತಯಾರು ಮಾಡುವುದಕ್ಕೆ ನೀವು ತಯಾರಾಗಿಲ್ಲ. ಪೇಮೆಂಟ್ ಆಫ್ ವೇಜಸ್ ಆಕ್ಟ್ ಬಗ್ಗೆ ನ್ಯೂ ರೂಲ್ಸ್ ಫ್ರೇಮ್ ಮಾಡಬೇಕು. ಬೇರೆ ರಾಜ್ಯಗಳಲ್ಲಿ ಮಾಡಿದ್ದಾರೆ. ಅದರ ಪ್ರಕಾರ ವೆಲ್‌ಫೇರ್ ಫಂಡ್ ಕಾನ್ಸಿಟಿಟ್ಯೂಟ್ ಮಾಡಿದರೆ ಕಾರ್ಮಿಕರಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಹಣಕಾಸಿನ ನೆರವು ಪಡೆಯುವುದಕ್ಕೆ ಸಹಾಯಕ ವಾಗುತ್ತದೆ. ಅದರ ಜೊತೆಗೆ Trade Union subscription of dues including levies ಅದನ್ನು ಮಾಡಲಿಲ್ಲ. ಇದಕ್ಕೆಲ್ಲಾ ತಿದ್ದುಪಡಿ ತರಬೇಕೆಂದು ಹೇಳಿದ್ದೇವೆ ಇವೆಲ್ಲಾ ಸಣ್ಣ ಸಣ್ಣ ವಿಷಯಗಳು. ಮೇ ಡೇ ವಿಷಯದಲ್ಲಿ ಏನೋ ಒಂದು ತಪ್ಪು ಮಾಡಿ ಸೆಂಟ್ರಲ್ ಗೌರ್ನಮೆಂಟ್ ನವರಿಗೆ ಇಲ್ಲದ ಹಾಗೆ ಮಾಡಿದ್ದಾರೆ. ಪುನಃ ಅದರ ಬಗ್ಗೆ ಒತ್ತಾಯಮಾಡಿ ಮೇ ಡೇ ಅವರಿಗೂ ಸಿಗುವಹಾಗೆ ಮಾಡಬೇಕು. ಅದರ ಬಗ್ಗೆ ತಿದ್ದುಪಡಿ ತರಬೇಕಾಗುತ್ತದೆ. ತಾವು ಮಾಡದೇ ಇರುವ ಶಾಸನಗಳ ಬಗ್ಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಪ್ರಾರಂಭಮಾಡಿ ಈಗಾಗಲೇ ೫೦ ನಿಮಿಷಗಳು ಆಗಿವೆ. ತಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನೊಂದು ೧೦ ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಶಾಸನಗಳನ್ನು ತರಬೇಕೆಂದು ಹೇಳಿದ್ದೇನೆ. ನೀವು ಒಂದು ಶಾಸನವನ್ನು ತಂದಿಲ್ಲ. ನಾವೇ ಡ್ರಾಫ್ಟ್ ಬಿಲ್ ಮಾಡಿಕೊಟ್ಟಿದ್ದೇವೆ. ಅಗ್ರಿಕಲ್ಚರಲ್ ವರ್ಕರ್ಸ್ ಬಗ್ಗೆ ಇದೇ ಮನೆಯಲ್ಲಿ ಮಾನ್ಯ ಅಜೀಜ್‌ಸೇಠ್‌ರವರು ತರುತ್ತೇವೆಂದು ಹೇಳಿದ್ದರು. ನಾನು ಕೂಡ ಅವರು ಆ ರೀತಿ ತಿದ್ದುಪಡಿಯನ್ನು ತರುತ್ತಾರೆಂದು ತಿಳಿದುಕೊಂಡಿದ್ದೆ. ಅವರು ನಮಗೆ ಮೂರು ನಾಮ ಹಾಕಿದರು. ತಾವು ಅದನ್ನೇ ಮಾಡುವುದಕ್ಕೆ ಹೋಗಬೇಡಿ. ಇನ್ನೊಂದು ವಿಷಯ, ತಮ್ಮ ಸರ್ಕಾರಿ ಇಲಾಖೆಗಳಿರತಕ್ಕ ಕಾರ್ಮಿಕರ ಬಗ್ಗೆ ಆಗಿರತಕ್ಕ ತೀರ್ಮಾನಗಳನ್ನು ಜಾರಿಗೆ ತನ್ನಿ. ಅವು ಹಾಗೆಯೇ ಉಳಿದುಕೊಂಡು ಬಿಟ್ಟಿವೆ. ಲೋಕೋಪಯೋಗಿ ಇಲಾಖೆಯ ಗ್ಯಾಂಗ್‌ಮ್ಯಾನ್ ವಿಷಯ ದಲ್ಲಿ ಗುಲ್ಬರ್ಗದಲ್ಲಿ ತೀರ್ಮಾನವಾಗಿದೆ, ಅದನ್ನು ಇದುವರೆಗೆ ಜಾರಿಗೆ ತಂದಿಲ್ಲ. ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ, ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ, ಮುನಿಸಿಪಾಲಿಟಿಗಳಲ್ಲಿರತಕ್ಕ ಕಾರ್ಮಿಕರ ಬಗ್ಗೆ ಯೂನಿವರ್ಸಲ್ ಆಗಿ ಕಾರ್ಮಿಕರ ಬಗ್ಗೆ ಆಗಿರತಕ್ಕ ತೀರ್ಮಾನಗಳನ್ನು ಜಾರಿಗೆ ತಂದಿಲ್ಲ. ತಾವು ಸ್ವಲ್ಪ ಡ್ರಿಲ್ ಮಾಡಿಸಿ. ಅದನ್ನು ಮಾಡದಿದ್ದರೆ ಏನೂ ಪ್ರಯೋಜನವಿಲ್ಲ. ಅಸಿಸ್ಟೆಂಟ್ ಲೇಬರ್ ಕಮೀಷನರ್ ಒಬ್ಬ ಚೀಫ್ ಇಂಜಿನಿಯರ್‌ಗೆ ಈ ತರಹ ಮಾಡಿ ಎಂದು ಬರೆದರೆ, ಚೀಫ್ ಇಂಜಿನಿಯರ್ ಏನು ಹೇಳುತ್ತಾರೆ ಗೊತ್ತೆ ? Who are

you? I am begger official of the Government. Afterall, you are a small chota fellow. ಈ ತರಹ ಮಾಡಿದರೆ ಏತಕ್ಕೆ ಕಳುಹಿಸಬೇಕು ? Assistant Labour Commissionerಗೆ ಬೈಯ್ಯುತ್ತಾರೆ? What is the relationship between the employees and the Labour Department? Have you tried to bring over that? ಆದ್ದರಿಂದ ತಾವು ಇಲಾಖೆಗಳ ಅಧಿಕಾರಿಗಳನ್ನು ಕರೆಯಿಸಿ ಯಾರು ಕಾನೂನು ಪ್ರಕಾರ ನಡೆದುಕೊಳ್ಳುವು ದಿಲ್ಲವೋ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಅಧಿಕಾರವನ್ನು ನಿಮ್ಮ ಇಲಾಖೆಯ ಅಧಿ ಕಾರಿಗಳಿಗೆ ಕೊಡಿ. ಆಗ ಬೇರೆ ಇಲಾಖೆಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಕಾಂಟ್ರ್ಯಾಕ್ಟ್ ಲೇಬರ್ ಅಬಾಲಿಷನ್ ಆಕ್ಟ್ ಏನಿದೆ ಅದಕ್ಕೊಂದು ಅಡ್ವೈಜರಿ ಬೋರ್ಡನ್ನು ಮಾಡಿಲ್ಲ.

ಶ್ರೀ ಡಿ. ಮಂಜುನಾಥ್.—ಇದೆ.

ಶ್ರೀ ಎಂ.ಎಸ್. ಕೃಷ್ಣನ್.—ಅದನ್ನು ರೀ–ಕಾನ್ಸಿಟಿಟ್ಯೂಟ್ ಮಾಡಿಲ್ಲ, ರೂಲ್ಸ್‌ನ್ನು ಫ್ರೇಮ್ ಮಾಡಿದ್ದಾರೆ. ಕಾಂಟ್ರ್ಯಾಕ್ಟ್ ವರ್ಕರ್ಸ್ ಇನ್ನೂ ಭಾರಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಕಾಂಟ್ರ್ಯಾಕ್ಟ್ ಆಧಾರದ ಮೇಲೆ, ಅವರಿಂದ ಕೆಲಸಗಳನ್ನು ಎಚ್.ಎ.ಎಲ್.ನಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಅದೇ ರೀತಿ ಕಿರ್ಲೋಸ್ಕರ್‌ನಲ್ಲೂ ತೆಗೆದುಕೊಳ್ಳುತ್ತಿದ್ದಾರೆ, ಮೊನ್ನೆ ಆ ಬಗ್ಗೆ ಕಿರ್ಲೋಸ್ಕರ್‌ನಲ್ಲಿ ಗಲಾಟೆಯಾಗಿ ಅದು ಲಾಕ್‌ಔಟ್ ಆಯಿತು. ಕಾಂಟ್ರ್ಯಾಕ್ಟ್ ಕ್ಯಾರೇಜ್ ರೆಗ್ಯುಲೇಷನ್ ಆಕ್ಟ್ ಏನಿದೆ, ಅದಕ್ಕೆ ಅಡ್ವೈಜರಿ ಬೋರ್ಡ್ ಇಲ್ಲ. ಒಂದು ವೇಳೆ ಇದ್ದರೂ ಅದನ್ನು ರೀ–ಕಾನ್ಸಿಟಿಟ್ಯೂಟ್ ಮಾಡ ಬೇಕು. ಅದನ್ನು ಸರಿಮಾಡಬೇಕೆಂದು ಮಾತ್ರ ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಅನೇಕ ಜನ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಆದರೆ ಏನಾಗಿದೆ ಎಂದರೆ, ಅವರಿಗೆ ಯಾವುದೇ ಅನುಕೂಲಗಳು ಇಲ್ಲ, ಇದೇ ವಿಷಯವನ್ನು ಹಿಂದೆ ಅನೇಕ ಭಾರಿ ಇದೇ ಸದನದಲ್ಲಿ ನಾನು ಹೇಳಿದ್ದೇನೆ. ಅವರು ಅನೇಕ ರೀತಿಯ ಕೆಲಸಗಳನ್ನು ಮಾಡಬೇಕಾಗಿದೆ. ಆ ಕೆಲಸಗಳನ್ನೆಲ್ಲಾ ಮಾಡುವುದಕ್ಕೆ ಬೇಕಾದ ಸಲಕರಣೆಗಳನ್ನು ಆ ಅಧಿಕಾರಿಗಳಿಗೆ ಒದಗಿಸಿ. ಅವರ ಸಹಾಯಕ್ಕೆ ಇರತಕ್ಕಂತಹ ಸಿಬ್ಬಂದಿ ಬಹಳ ಕಡಿಮೆ. ಮಹಾರಾಷ್ಟ್ರ, ತಮಿಳುನಾಡು ಹಾಗೂ ಆಂಧ್ರ ಪ್ರದೇಶ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ, ನಮ್ಮಲ್ಲಿರತಕ್ಕಂತಹ ಸಿಬ್ಬಂದಿ ಬಹಳ ಕಡಿಮೆ. ಮಹಾರಾಷ್ಟ್ರವನ್ನೇ ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಅಲ್ಲಿರತಕ್ಕ ಒಬ್ಬ ಲೇಬರ್ ಆಫೀಸರ್ ಕೆಳಗೆ, ಇಬ್ಬರು ಎಫ್.ಡಿ.ಸಿ. ಒಬ್ಬರು ಆಫೀಸ್ ಅಸಿಸ್ಟೆಂಟ್, ಒಬ್ಬರು ಸ್ಟೇನೋಗ್ರಾಫರ್, ಒಬ್ಬರು ಟೈಪಿಸ್ಟ್, ಒಬ್ಬರು ಎಸ್.ಡಿ.ಸಿ. ಹಾಗೂ ಒಬ್ಬ ಪೀವನ್ ಇರುತ್ತಾರೆ. ಈ ರೀತಿಯ ವ್ಯವಸ್ಥೆ ಅಲ್ಲಿದೆ. ಆದರೆ ನಮ್ಮಲ್ಲಿರತಕ್ಕ ಒಬ್ಬ ಲೇಬರ್ ಆಫೀಸರ್ ಕೆಳಗೆ ಒಬ್ಬರು ಎಸ್.ಡಿ.ಸಿ., ಒಬ್ಬರು ಟೈಪಿಸ್ಟ್, ಹಾಗೂ ಒಬ್ಬರು ಪೀವನ್ ಇರುತ್ತಾರೆ. ಈ ರೀತಿಯ ವ್ಯವಸ್ಥೆಯಲ್ಲಿ ಎಷ್ಟು ಕೆಲಸವನ್ನು ಮಾಡುವುದಕ್ಕೆ ಸಾಧ್ಯ ? ಯಾವ ಕೆಲಸ ವನ್ನೂ ಅವರು ಸರಿಯಾಗಿ ಮಾಡುವುದಕ್ಕಾಗುವುದಿಲ್ಲ. ಅದೇ ರೀತಿ ಮಹಾರಾಷ್ಟ್ರದಲ್ಲಿರತಕ್ಕಂತಹ ಲೇಬರ್ ಇನ್ಸ್‌ಪೆಕ್ಟರ್‌ರವರಿಗೆ ಬಹಳಷ್ಟು ಸವಲತ್ತುಗಳು ಇವೆ. ಆದರೆ ನಮ್ಮಲ್ಲಿರತಕ್ಕಂತಹ ಲೇಬರ್ ಇನ್ಸ್‌ಪೆಕ್ಟರ್‌ಗಳಿಗೆ ಯಾವುದೇ ರೀತಿಯ ಅನುಕೂಲಗಳು ಇಲ್ಲ. ಅವರು ಕೆಲಸ ಮಾಡುತ್ತಿಲ್ಲ ವೆಂಬ ದೂರು ಮಾತ್ರ ಇದೆ. ಅವರು ಕೆಲಸ ಮಾಡುತ್ತಿಲ್ಲ, ಲಂಚ ತೆಗೆದುಕೊಳ್ಳುತ್ತಾರೆ, ಕರಪ್ಷನ್ ಇದೆ, ಇದೆಲ್ಲಾ ನಿಜ, ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮಲ್ಲಿರತಕ್ಕಂತಹ ಸಿಬ್ಬಂದಿ ಪ್ಯಾಟ್ರನ್ ಏನಿದೆ ಅದನ್ನು ತಾವು ಬದಲಾವಣೆ ಮಾಡಿ. ಒಬ್ಬ ಇನ್ಸ್‌ಪೆಕ್ಟರ್ ೫೦೦ ಕಾರ್ಖಾನೆಗಳನ್ನು ನೋಡಿಕೊಳ್ಳ ಬೇಕೆಂಬ ಜವಾಬ್ದಾರಿಯನ್ನು ನಿಗದಿಪಡಿಸಿದ್ದೀರಿ. ವರ್ಷದಲ್ಲಿ ಇರತಕ್ಕಂಥದ್ದು ೩೬೫ ದಿವಸಗಳು. ಒಂದು ದಿವಸಕ್ಕೆ ಒಂದು ಕಾರ್ಖಾನೆಯನ್ನು ನೋಡಬೇಕೆಂದರೂ ಒಂದು ವರ್ಷದಲ್ಲಿ ಎಲ್ಲಾ ಕಾರ್ಖಾನೆ ಗಳನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಇರತಕ್ಕಂತಹ ಸಿಬ್ಬಂದಿ ಪ್ಯಾಟ್ರನ್ ಅನ್ನು ಬದಲಾವಣೆ ಮಾಡದಿದ್ದರೆ, ಅವರಿಂದ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅದೇ ರೀತಿ ಷಾಪ್ಸ್ ಇನ್ಸ್‌ಪೆಕ್ಟರ್ ಎಂದು ಕೂಡ ಇದ್ದಾರೆ. ಅವರಿಗೆ ೩ ಸಾವಿರದಿಂದ ೪ ಸಾವಿರದವರೆಗೆ ಶಾಪ್ಸ್‌ಗಳನ್ನು ಒಬ್ಬರೇ ನೋಡಿಕೊಳ್ಳ ಬೇಕೆಂದು ಹೇಳಿದ್ದಾರೆ. ಅವನು ಒಂದೊಂದು ಷಾಪ್ಸ್‌ಗೆ ಹೋಗಿ ಅಲ್ಲಿ ಕಾಫಿ ಕುಡಿದುಕೊಂಡು ಮುಂದೆ ಹೋಗುವುದರೊಳಗೆ ಸಮಯ ಹೋಗಿಬಿಡುತ್ತದೆ, ಅವರು ಯಾವ ರೀತಿ ಕೆಲಸ ಮಾಡು ವುದಕ್ಕಾಗುತ್ತದೆ ? ಬೆಂಗಳೂರು ಮಂಗಳೂರು ಹಾಗೂ ಮೈಸೂರು ಇಂತಹ ಪಟ್ಟಣಗಳಲ್ಲೂ ಈ ಒಂದು ಷಾಪ್ಸ್‌ಗಳ ಪ್ರಶ್ನೆ ಬಹಳ ಜಟಿಲವಾಗಿದೆ. ಅವರಿಗೆ ಯಾವುದೇ ಟ್ರಾನ್ಸ್‌ಪೋರ್ಟ್ ಅನ್ನು

ಕೂಲತೆಗಳು ಇಲ್ಲ. ಎಚ್.ಎಂ.ಟಿ.ಗೆ ಹೋಗಬೇಕಾದರೆ ಅವರ ಹತ್ತಿರ ಕಾರು ಇರುವುದಿಲ್ಲ. ಅದೇ ರೀತಿ ಕಿರ್ಲೋಸ್ಕರನಲ್ಲಿ ಮಾಲೀಕರಿಗೂ ಹಾಗೂ ಕಾರ್ಮಿಕರಿಗೂ ತಕರಾರು ಬಂದಾಗ ತಕ್ಷಣ ಇವರು ಅಲ್ಲಿಗೆ ಹೋಗಬೇಕಾಗುತ್ತದೆ. ಆದರೆ ಅವರ ಹತ್ತಿರ ಕಾರು ಇರುವುದಿಲ್ಲ, ಇರುವುದೆಲ್ಲಾ ಒನ್–ಬೈಟು ಕಾರು. ಒನ್–ಬೈ–ಟು, ಸೈಕಲ್, ಒನ್–ಬೈ–ಟು ಮೊಪೆಡ್. ಇದರಲ್ಲೇ ಅವರು ಅಲ್ಲಿಗೆ ಹೋಗಬೇಕು. ಲೇಬರ್ ಇನ್ಸ್‌ಫೆಕ್ಟರ್ ಬೇರೆ ದಾರಿ ಇಲ್ಲದೆ ಮಾಲೀಕನಿಗೆ ಫೋನ್ ಮಾಡುತ್ತಾನೆ ಕಾರು ಕಳುಹಿಸಿಕೊಡಿ ಎಂದು ಅದಕ್ಕೆ ಒಪ್ಪಿ ಮಾಲೀಕ ಕಾರು ಕಳುಹಿಸಿಕೊಡುತ್ತಾನೆ. ಆ ಕಾರಿನಲ್ಲಿ ಆ ಇನ್ಸ್‌ಫೆಕ್ಟರ್ ಬಂದರೆ ಕಾರ್ಮಿಕರಿಗೆ ಇವರ ಮೇಲೆ ಸಿಟ್ಟು ಬರುತ್ತದೆ. ಇನ್ಸ್‌ಫೆಕ್ಟರ್ ಮಾಲೀಕರ ಏಜೆಂಟ್ ಎಂಬುದಾಗಿಯೂ ಕೂಡ ದೂರುತ್ತಾರೆ. ಈ ರೀತಿಯ ಜಿಜ್ಞಾಸೆಗೆ ಆ ಇನ್ಸ್‌ಫೆಕ್ಟರ್ ಒಳಗಾಗುತ್ತಾನೆ. ಇದರಿಂದ ಅವರು ಬಿಡುಗಡೆಯಾಗಬೇಕಾದರೆ, ದಯಮಾಡಿ ಅವರಿಗೆ ವೆಹಿಕಲ್ಸ್ ಅನುಕೂಲವನ್ನು ಒದಗಿಸಿಕೊಡಬೇಕು. ಹಾಗೂ ಇರತಕ್ಕಂತಹ ಸಿಬ್ಬಂದಿ ಪ್ಯಾಟ್ರನ್ ಅನ್ನು ಬದಲಾವಣೆ ಮಾಡುವ ಬಗ್ಗೆ ಪುನಪರ್ಯಾಲೋಚನೆ ಮಾಡಬೇಕು. ಹಾಗೂ ಅವರಿಗೆ ಸರಿಯಾದ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನೊಂದು ವಿಷಯವನ್ನು ತಮಗೆ ಹೇಳುವುದಾದರೆ, ನಿಮ್ಮ ಇಲಾಖೆಯಲ್ಲಿ ಸ್ಟ್ಯಾಟಿಸ್ಟಿಕಲ್ ವಿಂಗ್ ಇಲ್ಲ. ಅದೇ ರೀತಿ ನಿಮ್ಮದೇ ಆದಂತ ಲೀಗಲ್ ಸೆಲ್ ಕೂಡ ಯಾವುದೂ ಇಲ್ಲ. ಒಂದು ಅಫಿಡೆವಿಟ್‌ನ್ನು ಆಗಲಿ, ಅಥವಾ ಯಾವುದಾದರೊಂದು ಸ್ಟೇಟ್‌ಮೆಂಟ್‌ನ್ನು ಕೊಡ ಬೇಕಾದರೂ ಅವರು ವಿಧಾನಸೌಧಕ್ಕೆ ಬರಬೇಕು. ಆದ್ದರಿಂದ ನಿಮ್ಮ ಇಲಾಖೆಯಲ್ಲಿ ಒಂದು ಲೀಗಲ್ ಸೆಲ್ ಇರುವಂಥದು ಅತಿ ಅವಶ್ಯಕ. ಜೊತೆಗೆ ಟೆಕ್ನಿಕಲ್ ಸೆಕ್ಷನ್ ಪ್ರತ್ಯೇಕವಾಗಿರಬೇಕು. ಅದೇ ರೀತಿ ಸ್ಟ್ಯಾಟಿಸ್ಟಿಕಲ್ ಸೆಕ್ಷನ್ ಕೂಡ ಪ್ರತ್ಯೇಕವಾಗಿ ಇರಬೇಕು. ನಿಮ್ಮ ಇಲಾಖೆಯಲ್ಲಿ ಸ್ಟ್ಯಾಟಿಸ್ಟಿಕಲ್ ಬ್ಯೂರೋ ಮಾಡಬೇಕಾಗುತ್ತದೆ. ಮತ್ತೆ ಇಲಾಖೆಯ ಕಟ್ಟಡದ ಬಗ್ಗೆ ಹೇಳುವುದಾದರೆ, ನಿಮ ಇಲಾಖೆಗೆ ತಮ್ಮದೇ ಆದಂತಹ ಸ್ವಂತ ಕಟ್ಟಡ ಇಲ್ಲ. ಮೊದಲು ನಿಮ್ಮ ಇಲಾಖೆ ಇನ್‌ಫೆಂಟ್ರಿ ರಸ್ತೆಯಲ್ಲಿತ್ತು. ಅಲ್ಲಿಂದ ಓಡಿಸಿ, ಆ ಕಟ್ಟಡವನ್ನು ವಾರ್ತಾ ಇಲಾಖೆಗೆ ಕೊಟ್ಟರು. ನಂತರ ಪ್ಯಾಲೇಸ್ ರಸ್ತೆಯಲ್ಲಿ ಒಂದು ಹಳೇ ಕಟ್ಟಡದಲ್ಲಿತ್ತು. ಅದು ತುಂಬಾ ಚೆನ್ನಾಗಿತ್ತು. ಅಲ್ಲಿಂದ ಇವರನ್ನು ಓಡಿಸಿ ಅದನ್ನು ಯೂನಿಸೆಫ್‌ಗೆ ಕೊಟ್ಟರು. ಈಗ ವಿ.ಐ.ಎಸ್.ಎಲ್. ಕಟ್ಟಡದಲ್ಲಿ ಇವರು ಬಾಡಿಗೆಗೆ ಇದ್ದಾರೆ. ಒಂದು ತಿಂಗಳಿಗೆ ಸುಮಾರು ೪೦ ರಿಂದ ೫೦ ಸಾವಿರ ರೂಪಾಯಿಗಳವರೆಗೆ ಬಾಡಿಗೆಯನ್ನೇ ಕೊಡುತ್ತಿದ್ದಾರೆಂದು ಕೇಳಿದ್ದೇನೆ. ಬಾಡಿಗೆಯನ್ನು ಏನು ಕಟ್ಟುತ್ತಿದ್ದೀರಿ, ಅದನ್ನು ಉಳಿಸಿದರೆ ಅದರಿಂದಲೇ ನಿಮ್ಮದೇ ಆದಂತಹ ಸ್ವಂತ ಕಟ್ಟಡವನ್ನು ಕಟ್ಟಿಕೊಳ್ಳಬಹುದು. ನಿಮ್ಮದೇ ಆದಂತಹ ಲೇಬರ್ ಕಾಂಪ್ಲೆಕ್ಸ್‌ನ್ನು ಕಟ್ಟಿ ಎಂಬುದಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಕಾವೇರಿಭವನದ ಹತ್ತಿರ ಪಕ್ಕದಲ್ಲೇ ಖಾಲಿ ಜಾಗ ಇದೆ. ಅದನ್ನು ನಿಮ್ಮ ಇಲಾಖೆಗೆ ಪಡೆದುಕೊಂಡು, ಅದರಲ್ಲಿ ನಿಮ್ಮ ಕಛೇರಿಗೆ ಕಟ್ಟಡವನ್ನು ಕಟ್ಟಿಸಿದ್ದೇ ಆದರೆ, ನಿಜವಾಗಿಯೂ ಲೇಬರ್ ಇಲಾಖೆಯ ಬಗ್ಗೆ ನಿಮಗೆ ಅಭಿಮಾನ ಇದೆ ಎಂದು ಹೇಳಬಹುದು. ಒಂದೇ ಕಟ್ಟಡದಲ್ಲಿ ಬಾಯ್ಲರ್ ಸೆಕ್ಷನ್ ಕೂಡ ಇರುವುದಕ್ಕೆ ಅನುಕೂಲವಾಗುತ್ತದೆ. ಅದೇ ರೀತಿ ಲೇಬರ್ ಕೋರ್ಟ್ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ಸ್ ಎಲ್ಲವೂ ಒಂದೇ ಕಟ್ಟಡದಲ್ಲಿರುವುದಕ್ಕೆ ಅನುಕೂಲವಾಗುತ್ತದೆ. ಅದರಿಂದ ಅಡ್ಮಿನಿಸ್ಟ್ರೇಷನ್ ಸ್ಟ್ರೀಮ್‌ಲೈನ್ ಮಾಡುವುದಕ್ಕೂ ಸಹಾಯಕವಾಗುತ್ತದೆ. ಆ ಒಂದು ಕೆಲಸವನ್ನು ಮಾಡುವಂತಹ ಜವಾಬ್ದಾರಿ ತಮ್ಮ ಮೇಲೆ ಇದೆ.

ಅದೇ ರೀತಿ ತಮ್ಮಲ್ಲಿ ಲೇಬರ್ ಕೋರ್ಟುಗಳು ಇವೆ. ಅದಕ್ಕೆ ಬೇಕಾಗಿರುವಂತಹ ಸಿಬ್ಬಂದಿ ಕೂಡ ಇಲ್ಲ. ಲೇಬರ್ ಕೋರ್ಟಿನ ಜಡ್ಜ್ ಯಾರು ಇದ್ದಾರೆ. ಅವರಿಗೆ ಸ್ಟೆನೋಗಳೇ ಇಲ್ಲ. ಜಡ್ಜ್‌ಮೆಂಟ್ ಬರೆಯುವುದಕ್ಕೆ ಯಾರೂ ಅವರ ಮನೆಗೆ ಹೋಗುವುದಿಲ್ಲ ಮತ್ತೆ ಅವರು ಮನೆಯಿಂದ ಕೋರ್ಟಿಗೆ ಬರಬೇಕಾದರೂ ಕೂಡ ವ್ಯಾನ್ ಸೌಕರ್ಯವೂ ಇಲ್ಲ. ಲೇಬರ್ ಕೋರ್ಟಿನ ಜಡ್ಜ್ ಬೆಂಗಳೂರಿನಿಂದ ಕೋಲಾರಕ್ಕೆ ಕೋರ್ಟಿನ ವ್ಯವಹಾರದಲ್ಲಿ ಹೋಗಬೇಕಾದರೆ ಆ ಜಡ್ಜ್ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಹೋಗಬೇಕು. ಇಂತಹವರಿಗೆ ಯಾರು ಮರ್ಯಾದೆ ಕೊಡುತ್ತಾರೆ ? ಮಾಲೀಕರು ಕಾರಿನಲ್ಲಿ ಬಂದು ಬಿಡಿ ಎಂದು ಹೇಳುತ್ತಾರೆ. ಆದರೆ ಅವರು ಆ ರೀತಿ ಮಾಲೀಕರ ಕಾರಿನಲ್ಲಿ ಹೋಗುವುದಕ್ಕಾಗುವುದಿಲ್ಲ. ಆದ್ದರಿಂದ ಜ್ಯೂಡಿಷಿಯಲ್ ಆಫೀಸರ್ಸ್ ಯಾರು ಇದ್ದಾರೆ, ಅವರನ್ನು ಸಿವಿಲ್ ಜಡ್ಜಸ್‌ಗೆ ಸಮಾನಾಂತರವಾಗಿ ನೋಡಿಕೊಳ್ಳುವಂತಾಗಬೇಕು; ಆಮೇಲೆ ಜಡ್ಜಸ್ ಕೂಡ ಪೂರ್ ಸ್ಟಾಫ್. ನಿಮ್ಮ ಇಲಾಖೆಯಲ್ಲಂತೂ ವೆರಿ ಪೂರ್ ಸ್ಟಾಫ್. ಅವರಿಗೆ ಸರಿಯಾದ ತರಬೇತಿ ಕೊಡುವಂತಹ ಅವಶ್ಯಕತೆ ಇದೆ. ಆ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಅವರೂ ಕೂಡ ಲಂಚ ತೆಗೆದುಕೊಳ್ಳುತ್ತಾರೆಂಬ ದೂರು ನಮಗೆ ಬಹಳವಾಗಿ ಬರುತ್ತಾ ಇವೆ. ಇದರ ಬಗ್ಗೆ ಸರಿಯಾದ ಅನುಭವ ಇರತಕ್ಕಂತಹವರನ್ನು ಇಲ್ಲಿಗೆ ಹಾಕಬೇಕು. ಹಿಂದೆ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರ

ಈ ಇಲಾಖೆಯ ಮಂತ್ರಿಗಳಾಗಿದ್ದರು. ಅದಕ್ಕೂ ಮುಂಚೆ ಶ್ರೀಮಾನ್ ರಾಮರಾವ್‌ರವರು ಈ ಈ ಇಲಾಖೆಯ ಮಂತ್ರಿಗಳಾಗಿದ್ದರು. ಆಗ ಅವರುಗಳು ಏನು ಮಾಡುತ್ತಿದ್ದರು ಎಂದರೆ, ಲೇಬರ್ ಕೋರ್ಟುಗಳಿಗೆ ಜಡ್ಜಸ್‌ಗಳನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಜೊತೆಗೆ ಚರ್ಚೆ ಮಾಡಿ, ಒಳ್ಳೆಯವರನ್ನು ಆಯ್ಕೆ ಮಾಡಿ ಲೇಬರ್ ಕೋರ್ಟಿನ ಜಡ್ಜಸ್‌ಗಳನ್ನಾಗಿ ಹಾಕುತ್ತಿದ್ದರು. ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಹೇಳಿದವರನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಲೇಬರ್ ಕೋರ್ಟಿಗೆ ಬಂದಮೇಲೆ ಅವರ ಮೇಲೆ ಹಿಡಿತ ಹೈಕೋರ್ಟಿಗೂ ಇರುವುದಿಲ್ಲ. ನೀವೂ ಕೂಡ ನಿಮ್ಮ ಅಧಿಕಾರವನ್ನು ಅವರ ಮೇಲೆ ಚಲಾಯಿಸುವುದಕ್ಕಾಗುವುದಿಲ್ಲ. ಆದ್ದರಿಂದ ಲೇಬರ್‌ಕೋರ್ಟಿನ ಜಡ್ಜಸ್‌ಗಳನ್ನು ಆಯ್ಕೆ ಮಾಡುವಾಗ ಮುಖ್ಯನ್ಯಾಯಾಧೀಶರ ಹತ್ತಿರ ಚರ್ಚೆ ಮಾಡಿ, ಮೆನ್ ಆಫ್ ಇಂಟೆಗ್ರಿಟಿ, ನಾಲೆಡ್ಜ್, ಇಂತಹವರನ್ನು ಆಯ್ಕೆ ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ ಆಮೇಲೆ ಕೇಸುಗಳ ಡಿಸ್‌ಪೋಸಲ್ ಬಹಳ ಕಡಿಮೆ ಆಗುತ್ತಿವೆ. ೪೭೬೧ ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ೩೧–೧೨–೮೪ರವರೆಗೆ ಇವೆ. ಇದು ನಡೆಯುತ್ತಿರುವ ರೀತಿಯನ್ನು ನೋಡಿದರೆ ಇವುಗಳು ಮುಗಿಯುವ ಪರಿಸ್ಥಿತಿಗೆ ಬರುವುದೆ ಇಲ್ಲ. ಇವುಗಳು ಮುಗಿಯಬೇಕೆಂದು ನಾವೇನೋ ಹೇಳುತ್ತೇವೆ. ಆದರೆ ಅದಕ್ಕೆ ಸರಿಯಾದಂತಹ ರೂಲ್ಸ್‌ನ್ನೇ ಫ್ರೇಂ ಮಾಡಿಲ್ಲ. ರೂಲ್ಸನ್ನು ಫ್ರೇಂ ಮಾಡುವಾಗಲೇ ಏನೇನು ತೊಂದರೆಗಳು ಬರುತ್ತವೆ. ಎಂಬುದನ್ನು ನೋಡಬೇಕು. ಲೇಬರ್ ಕೋರ್ಟಿಗೂ ಹೋದರೆ ಮೊದಲು ನೋಟೀಸ್ ಕೊಡಬೇಕಾದರೆ ಇಂತಿಷ್ಟು ದಿವಸಗಳು ಎಂದು ಇದೆ. ಮೊದಲು ನೋಟೀಸ್ ಕೊಡುತ್ತಾರೆ ನಂತರ ಮೊದಲನೆಯಸಾರಿ ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳುತ್ತಾರೆ, ಅಷ್ಟರಲ್ಲಿ ಸುಮಾರು ದಿವಸಗಳು ಕಳೆದುಹೋಗುತ್ತವೆ. ನಾವು ಮೂರು ತಿಂಗಳಲ್ಲಿ ಅವುಗಳನ್ನು ಮುಗಿಸಬೇಕೆಂದು ಹೇಳುತ್ತೇವೆ. ಆದರೆ ಅದಕ್ಕೆ ಸಂಬಂಧಪಟ್ಟ ರೂಲ್ಸನ್ನು ಸರಿಯಾಗಿ ಫ್ರೇಂ ಮಾಡಿಲ್ಲದಿರುವುದರಿಂದ ಅವರು ಹೇಗೆ ತಾನೆ ಮೂರು ತಿಂಗಳ ಅವಧಿಯಲ್ಲಿ ಮುಗಿಸುವುದಕ್ಕೆ ಸಾಧ್ಯವಾಗುತ್ತದೆಂಬುದನ್ನು ತಾವೇ ಯೋಚನೆ ಮಾಡಬೇಕು. ಅದರ ಕಡೆ ತಾವು ಹೆಚ್ಚು ಗಮನವನ್ನು ಹರಿಸಬೇಕೆಂಬ ಸಲಹೆಯನ್ನು ಕೊಡುತ್ತಿದ್ದೇನೆ. ಸಣ್ಣ ಸಣ್ಣ ರೂಲ್ಸ್‌ನ್ನು ಫ್ರೇಂಮಾಡುವುದಕ್ಕೆ ಸಾಧ್ಯವಾಗಿಲ್ಲವೆಂದು ನೊಂದು ಹೇಳಬೇಕಾಗಿದೆ. ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ ಸ್ಟ್ಯಾಂಡಿಂಗ್ ಆರ್ಡರ್ಸ್ ೭೬ ಪೆಂಡಿಂಗ್ ಇವೆ ಎಂದು ಹೇಳಿದ್ದಾರೆ. ಅವು ಎಷ್ಟು ವರ್ಷಗಳಿಂದ ಪೆಂಡಿಂಗ್ ಇವೆ. ಒಂದು ೫ ವರ್ಷದಿಂದ ಪೆಂಡಿಂಗ್ ಇದ್ದು ಹೈಕೋರ್ಟಿಗೆ ಹೋಗಿ ಲೇಬರ್ ಡಿಪಾರ್ಟ್‌ಮೆಂಟಿನವರಿಗೆ ಛೀಮಾರಿ ಹಾಕಿದರು. ಆಂಗ್ಲೋ ಕಂಪನಿಯಲ್ಲಿ ಹೊಸ ಹೊಸ ವಿಷಯಗಳು ಇವೆ. ಅದಕ್ಕೆ ಸಂಬಂಧಪಟ್ಟ ಹಾಗೆ ರೆಕ್ರೂಟ್‌ಮೆಂಟ್, ಟ್ರಾನ್ಸ್‌ಫರ್ ಬಗ್ಗೆ ರೂಲ್ಸ್ ಫ್ರೇಂ ಮಾಡಬೇಕೆಂದು ಹೇಳಿದ್ದೇವೆ. ಪ್ರತಿಯೊಬ್ಬ ಎಂಪ್ಲಾಯಿಯು ಈ ಐಟಂಗಳನ್ನೆಲ್ಲಾ ಇನ್‌ಕಾರ್ಪೊರೇಟ್ ಮಾಡಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಸ್ಪೆಸಿಫಿಕ್ ಇನ್‌ಸ್ಟ್ರಕ್ಷನ್ಸ್ ಕೊಟ್ಟು ಮಾಡಬೇಕೆಂದು ಕೇಳುತ್ತೇನೆ. ಸೆಕ್ಷನ್ ೩೩(೨ಬಿ)ಗೆ ಎಂಪ್ಲಾಯೀಸ್ ಯಾರಿದ್ದಾರೆ ಅವರಿಗೆ ಸಬ್‌ಸಿಸ್ಟೆನ್ಸ್ ಅಲೋಯನ್ಸ್ ಕೊಡಬೇಕೆಂದು ತಿದ್ದುಪಡಿ ಮಾಡತಕ್ಕ ಅವಶ್ಯಕತೆ ಇದೆ. ಆಗ ಕಾರ್ಮಿಕರಿಗೆ ಅನುಕೂಲವಾಗುತ್ತದೆ. ಹೆಚ್.ಎ.ಎಲ್.ನಲ್ಲಿ ಹೊಸದಾಗಿ ಸ್ಟ್ಯಾಂಡಿಂಗ್ ಆರ್ಡರ್ ಏನು ಸೇರಿಸಬೇಕೆಂದು ಹೊರಟಿದ್ದಾರೆಂದರೆ ಯಾವುದೇ ಕಾರ್ಮಿಕರು ರಾಜಕೀಯ ಪಕ್ಷದ ಬೆಳವಣಿಗೆಗೆ ಹೋಗಬಾರದು, ಯಾವುದೇ ಸಿಬ್ಬಂದಿಯು ಹೋಗಬಾರದೆಂದು. ಇದಕ್ಕಿಂತ ಪ್ರತಿಗಾಮಿ ನೀತಿ ಯಾವುದು ಇದೆ ? ಇದು ಕೇಂದ್ರ ಸರ್ಕಾರದಲ್ಲಿ ನಡೆಯುತ್ತಿದೆ ಎಂದು ರಾಜ್ಯ ಸರ್ಕಾರಕ್ಕೆ ತರುವ ಅವಶ್ಯಕತೆ ಇದೆಯೇ ಎಂದು ಹೇಳುತ್ತೇನೆ. ಕೇಂದ್ರದಲ್ಲಿ ಮತ್ತು ಇಲ್ಲಿ ಇದನ್ನು ಸರ್ಟಿಫೈ ಮಾಡಕೂಡದೆಂದು ಹೇಳಬೇಕಾಗುತ್ತದೆ. ಇದರಿಂದ ಕಾರ್ಮಿಕರ ಹಣಕಾಸಿಗೆ ತಿಲಾಂಜಲಿ ಕೊಟ್ಟಂತಾಗುತ್ತದೆಂದು ಹೇಳುತ್ತೇನೆ. ವರ್ಕಿಂಗ್ ಜರ್ನಲಿಸ್ಟ್ ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ ಮಾಡತಕ್ಕ ಜವಾಬ್ದಾರಿ ತಮ್ಮ ಮೇಲಿದೆ, ಅವರು ಅದನ್ನು ಮಾಡಿಲ್ಲ. ಅದನ್ನು ಪ್ರಿಸ್ಕ್ರೈಬ್ ಮಾಡಬೇಕಾಗಿದೆ. ಈಗ ಕರ್ನಾಟಕ ರಿಲೀಫ್ ಅಂಡರ್‌ಟೇಕಿಂಗ್ ಆ್ಯಕ್ಟ್ ಎಂದು ಇದೆ. ಅದರನ್ವಯ ಕಳೆದ ಹತ್ತು ವರ್ಷಗಳಿಂದ ಸಿಕ್ ಇಂಡಸ್ಟ್ರಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಸಿಖ್ ಆದರೂ ಚಿಂತೆ ಇಲ್ಲ. ಅದರೆ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಎಂದು ಏನು ಹೇಳುತ್ತಾರೆ ಅದರಂತೆ ಮಾಲೀಕ ಕಾರ್ಮಿಕನನ್ನು ಡಿಸ್‌ಮಿಸ್ ಮಾಡಬಹುದು. ಕಾರ್ಮಿಕ ಕೋರ್ಟಿಗೆ ಹೋಗುವ ಹಾಗೆ ಇಲ್ಲ. ಇದನ್ನು ಎಕ್ಸಾಮಿನ್ ಮಾಡಬೇಕು. ಸುಮಾರು ೧೦–೧೨ ವರ್ಷದಿಂದ ಕಾರ್ಮಿಕರ ಸಮಸ್ಯೆಗಳು ಇತ್ಯರ್ಥವಾಗದೆ ಹೈಕೋರ್ಟಿನಲ್ಲಿ ಇವೆ, ಆದ್ದರಿಂದ ಇದಕ್ಕೆ ಒಂದು ಸಿಂಪಲ್ ಅಮೆಂಡ್‌ಮೆಂಟ್ ತರಬೇಕಾಗಿದೆ. ಇದನ್ನು ಮಾಡಿದರೆ ಖಂಡಿತ ಅನುಕೂಲವಾಗುತ್ತದೆ, ಮತ್ತು ಕೈಗಾರಿಕಾ ಸಮಾಜ ಬೆಳೆಯುವುದಕ್ಕೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ. ಪ್ರೈವೇಟ್

ಡಿಟೆಕ್ಟಿವ್ ಏಜೆನ್ಸಿ: ಗ್ಲೋಬ್ ಡಿಟೆಕ್ಟೀವ್ ಏಜೆನ್ಸಿ, ನಿಂಗಪ್ಪ ಡಿಟೇಕ್ಟಿವ್ ಏಜೆನ್ಸಿಗಳ ಮ್ಯಾನೇಜ್‌ಮೆಂಟಿನವರು ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದಾರೆ. ಭದ್ರಾವತಿಯಲ್ಲಿ ಹಾಗೆ ಮಾಡಿ ಬಹಳ ತೊಂದರೆಯಾಯಿತು. ಕೆಲವು ಕಾರ್ಮಿಕರನ್ನು ಅವರೇ ಕೊಲೆ ಮಾಡಿದ್ದಾರೆಂಬ ಆಪಾದನೆ ಇದೆ. ಇಂಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್ ಆಕ್ಷನ್ನು ಏನು ಮಾಡಿದರು ? ಕುದುರೆಮುಖದ ಗಲಾಟೆಯಲ್ಲಿ ಯಾರ್ಯಾರು ಸತ್ತರು ಎಂದು ಗೊತ್ತಿಲ್ಲ. ಈ ರೀತಿ ಏಜೆನ್ಸಿಗಳು ಹುಟ್ಟಿಕೊಂಡು ಎರಡೂ ಕಡೆ ಶೋಷಣೆ ಮಾಡುತ್ತಿದ್ದಾರೆ. ಭದ್ರಾವತಿಯಲ್ಲಿ ಜಗಳ ಬಂದು ಗ್ಲೋಬ್ ಡಿಟೆಕ್ಟೀವ್ ಏಜೆನ್ಸಿಯನ್ನು ಕ್ಯಾನ್ಸಲ್ ಮಾಡಿದರು. ಹಿಂದೆ ಒಂದು ಸಾರಿ ಜಗಳ ಆಗಿ ಏಜೆನ್ಸಿಯ ನೌಕರರು ಬೀದಿ ಪಾಲಾಗಿದ್ದಾರೆ. ಅವರ ಕೆಲಸ ಏನು ಎಂಬುದರ ಬಗ್ಗೆ ಮಹಾರಾಷ್ಟ್ರದಲ್ಲಿ ಆಕ್ಟ್ ತಂದಿದ್ದಾರೆ. ಅದರ ಪ್ರಕಾರ ನಮ್ಮ ರಾಜ್ಯದಲ್ಲೂ ಅನುಸರಿಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಟ್ರೈಪಾರ್ಟೆಟ್ ಕಮಿಟಿ, ಇವ್ಯಾಲ್ಯುಯೆಷನ್ ಕಮಿಟಿ, ಕಾಂಟ್ರಾಕ್ಟ್ ಇವಾಲ್ಯುಯೇಷನ್ ಕಮಿಟಿ ರೆಗ್ಯುಲೇಟರಿ ಕಮಿಟಿ ಇವುಗಳನ್ನು ರೀಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೇಂದ್ರ ಕಾರ್ಮಿಕರ ಸಂಘಟನೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಎ.ಐ.ಟಿ.ಯು.ಸಿ. ರಾಜ್ಯದಲ್ಲಿ ದೊಡ್ಡದಿದ್ದರೂ ಅದರಲ್ಲಿ ನಮಗೆ ಅವಕಾಶ ಮಾಡಿಕೊಟ್ಟಿಲ್ಲ, ಅದನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಬರೀ ಕಮಿಟಿ ಮಾಡಿದರೆ ಪ್ರಯೋಜನ ಇಲ್ಲ. ಅದು ಫಂಕ್ಷನ್ ಮಾಡಬೇಕೆಂದು ಒತ್ತಾಯಿಸುತ್ತೇನೆ. ಫ್ಯಾಕ್ಟರೀಸ್ ಇನ್ಸ್‌ಪೆಕ್ಟರೇಟನ್ನು ಬಲಗೊಳಿಸುತ್ತಿದ್ದಾರೆ. ಭೂಪಾಲ್‌ನಲ್ಲಿ ಒಂದು ದೊಡ್ಡ ಟ್ರಾಜಿಡೀನೆ ನಡೆದಿದೆ. ಅದು ಮಲ್ಟಿ ನ್ಯಾಷನಲ್ ಕಂಪನಿ. ಅಲ್ಲಿ ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ. ಈ ತರಹ ಇವೊತ್ತಿನ ದಿವಸ ನಮ್ಮ ದೇಶದಲ್ಲಿ ನಡೆಯುತ್ತಿದೆ. ಕಾರವಾರದಲ್ಲಿ ಸೋಡ ಆಷ್ ಫ್ಯಾಕ್ಟರಿ ಇದೆ. ಹಾಗೆಯೇ ಬೆಂಗಳೂರು ನಗರದ ಸುತ್ತಮುತ್ತ ಇವೆ. ಅಲ್ಲಿ ಇನ್ಸ್‌ಪೆಕ್ಟರೇಟ್ ಏನೂ ಮಾಡುತ್ತಿಲ್ಲ. ಎಲ್ಲ ಈ ಗ್ಯಾಸ್ ಲೀಕ್ ಆಗುತ್ತಿದೆ, ಎನ್ನುವುದು ಕೊನೆಗೆ ಗ್ಯಾಸ್ ಬರ್ಸ್ಟ್ ಆದಾಗ ತಲೆ ಎತ್ತುತ್ತದೆ. ಇನ್ಸ್‌ಪೆಕ್ಟರೇಟ್ ಫಂಕ್ಷನ್ ಮಾಡಬೇಕು. ಸ್ಪೆಷಲ್ ಮಾನಿಟರ್ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬೀಡಿ ಕಾರ್ಮಿಕರಿಗೆ ಅಜೀಜ್‌ಸೇಠ್‌ರು ಮನೆ ಕಟ್ಟಿಸಿಕೊಡುತ್ತೇವೆಂದರು. ಏನು ಕಟ್ಟಿಸಿಕೊಟ್ಟರೋ ಗೊತ್ತಿಲ್ಲ. ಕೇರಳದಲ್ಲಿ ದಿನೇಶ್ ಬೀಡಿಯವರು ಮಾಡಿದ್ದಾರೆ. ಅಲ್ಲಿ ಏನೋ ಫಂಕ್ಷನ್ ಆಗುತ್ತಿದೆ. ಅವಧಿಗೆ ಅನುಕೂಲತೆ ಜಾಸ್ತಿ ಇದೆ. ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಮಾಡಬೇಕೆಂದು ಮಾಡಿದ್ದಾರೆ. ಇಲ್ಲಿಯೂ ಬೀಡಿ ವರ್ಕರ್ಸ್‌ಗೆ ಅನುಕೂಲ ಮಾಡಿಕೊಡಬೇಕು. ಸೆಸ್ ಎಂದು ಏನು ಕಲೆಕಟ್ ಮಾಡುತ್ತಿದ್ದಾರೆ ಅ ಫಂಡು ಯಾವುದಕ್ಕೆ ಉಪಯೋಗವಾಗಿದೆ ? ಅದು ಬೀಡಿ ಕಾರ್ಮಿಕರಿಗೆ ಉಪಯೋಗವಾಗುವ ಹಾಗೆ ಕ್ರಮ ಕೈಗೊಳ್ಳಬೇಕಾಗಿದೆ. ಹಣ ಇದ್ದರೂ ಉಪಯೋಗ ವಾಗುತ್ತಿಲ್ಲವೆಂದು ವರ್ತಮಾನ ಬಂದಿದೆ. ಅದನ್ನು ಉಪಯೋಗವಾಗುವಂತೆ ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ, ಎಲ್ಲವನ್ನು ಕೇಳಿದ ಮೇಲೆ ತಮಗೆ ಭಾಸವಾಗುತ್ತದೆ, ಈ ರಾಜ್ಯದಲ್ಲಿ ಕಾರ್ಮಿಕ ಇಲಾಖೆ ಯಾವ ಮಟ್ಟದಲ್ಲಿ ಕೆಲಸ ಮಾಡಬೇಕೋ ಆ ಮಟ್ಟದಲ್ಲಿ ಮಾಡಿಲ್ಲ, ಮಾಡುವಂತೆ ಮಾಡಬೇಕು. ಸರಿಯಾದ ಕಾನೂನು ಜಾರಿಗೆ ತರಬೇಕು, ಕಾರ್ಮಿಕರಿಗೆ ರಕ್ಷಣೆ ಕೊಡಬೇಕು. ಇಲ್ಲದೆ ಹೋದರೆ ಕೈಗಾರಿಕೆಗಳು ಮುಂದೆ ಬರುವುದಕ್ಕೆ ಅವಕಾಶ ಆಗುವುದಿಲ್ಲವೆಂದು ಹೇಳಬೇಕಾಗಿದೆ. ಕೊನೆಯದಾಗಿ, ಎಚ್ಚರಿಕೆ ಕೊಟ್ಟು ಮುಗಿಸುವುದು ಏನೆಂದರೆ ಕಾರ್ಮಿಕ ವರ್ಗಕ್ಕೆ ತಾಳ್ಮೆಗೆ ಒಂದು ಮಿತಿ ಇದೆ. ಹೆಗಡೆಯವರು ಬಂಗಾರಪ್ಪನವರಿಗೆ ಒಂದು ಮಾತು ಹೇಳಿದರು. ನಮಗೂ ತಾಳ್ಮೆಗೆ ಒಂದು ಮಿತಿ ಇದೆ ಎಂದು. ಆದ್ದರಿಂದ, ಆ ಬಗ್ಗೆ ಎಚ್ಚರಿಕೆ ವಹಿಸಬೇಕು. ಆ ಆ್ಯಕ್ಟ್ ಜಾರಿ ಆಗದಂತೆ ಮಾಡಬೇಕು, ಹಾಗೆ ಮಾಡಬೇಕಾದರೆ ಸರಿಯಾದ ಆ್ಯಕ್ಷನ್ ತಾವು ತೆಗೆದುಕೊಳ್ಳಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೆ, ಕಾರ್ಮಿಕ, ಅನುಸೂಚಿತ ಜಾತಿ, ಹಿಂದುಳಿದ ವರ್ಗಗಳ ಕಲ್ಯಾಣ, ಹಾಗೂ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ಸಭೆಯ ಮುಂದಿಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಮಹಿಳಾ, ಮತ್ತು ಮಕ್ಕಳು ಹಾಗೂ ಕಾರ್ಮಿಕ ವರ್ಗ ಈ ಎರಡನ್ನು ವಿಭಾಗ ಮಾಡಿದಾಗ ನಮ್ಮ ಕರ್ನಾಟಕ ರಾಜ್ಯದ ಜನಸಂಖ್ಯೆ ೪ ಕೋಟಿ ಅಂದರೆ ಅದರಲ್ಲಿ ಮಹಿಳೆಯರು ೫೦ ಪರ್ಸೆಂಟ್ ಅಂದರೆ ೨ ಕೋಟಿ ಆಗುತ್ತಾರೆ, ಮಕ್ಕಳ ಸಂಖ್ಯೆ ೧೭–೧೮ ಪರ್ಸೆಂಟ್ ಅಂದರೆ ೬೬ ಲಕ್ಷ ಮಕ್ಕಳು ಬರು

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತ್ತಾರೆ. ಇವೊತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದವರು ಮಕ್ಕಳ ಕಲ್ಯಾಣಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಹಣವನ್ನು ಉಪಯೋಗಿಸುತ್ತಿದ್ದಾರೆ. ವಯಸ್ಸಾದವರು, ಕೈಕಾಲು ಇಲ್ಲದವರು ಬಿಕ್ಷುಕರು, ಕುಷ್ಠರೋಗಿಗಳು ಸೇರಿದ ಹಾಗೆ ೪ ಕೋಟಿ ಜನರಲ್ಲಿ ೨ ಕೋಟಿ ೫೦ ಲಕ್ಷ ಜನರ ಕಲ್ಯಾಣಕ್ಕೆ ಉಪಯೋಗವಾಗತಕ್ಕದ್ದು ಈ ಒಂದು ಇಲಾಖೆ. ಇದು ಬಹಳ ಪ್ರಮುಖವಾದ, ಮಹತ್ವವಾದ, ಜವಾಬ್ದಾರಿಯುತವಾದ ಇಲಾಖೆಯಾಗಿದೆ. ಆದರೆ ಸರ್ವೇಸಾಮಾನ್ಯವಾಗಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದರೆ ಬಹಳ ಜನರಿಗೆ ಉದಾಸೀನ. ಇದು ಬಹಳ ಒಳ್ಳೆಯ ಇಲಾಖೆ. ಹಿಂದೆ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಇಲಾಖೆಯನ್ನು ಮುಖ್ಯ ಮಂತ್ರಿಗಳೇ ಇಟ್ಟುಕೊಳ್ಳಬೇಕೆಂದು ಸಲಹೆ ಮಾಡಿದ್ದರು. ಇದನ್ನು ಅಷ್ಟು ತಾತ್ಸಾರವಾಗಿ ಕಾಣಬಾರದು, ತಾತ್ಸಾರವಾಗಿ ಮಾತನಾಡಬಾರದು. ಇದು ಸಮಗ್ರ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂಬಂಧಪಟ್ಟ ಇಲಾಖೆ. ೧೯೫೨-೫೩ರಲ್ಲಿ ಕೇಂದ್ರದಲ್ಲಿ ಸಮಾಜಕಲ್ಯಾಣ ಇಲಾಖೆ ಇರಲಿಲ್ಲ ಶ್ರೀಮತಿ ದುರ್ಗಾಬಾಯಿ ದೇಶ್‌ಮುಖ್‌ರವರು ಪ್ಲಾನಿಂಗ್ ಕಮೀಷನ್‌ನೊಡನೆ ಹೋಡೆದಾಟ ಮಾಡಿ ಇದಕ್ಕೆ ಪ್ರತ್ಯೇಕ ಸ್ಯಾಂಕ್ಷನ್ ಕೊಟ್ಟು ಕೇಂದ್ರ ಸರ್ಕಾರದಲ್ಲಿ ಒಂದು ಇಲಾಖೆಯನ್ನು ಮಾಡಿ ಆ ಬೇಸಿಸ್ ಮೇಲೆ ರಾಜ್ಯ ಸರ್ಕಾರದವರು ವುಮೆನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದು ಮಾಡಿದರು. ಇದಕ್ಕೆ ಪ್ರತ್ಯೇಕ ಹಣದ ವ್ಯವಸ್ಥೆಯನ್ನು ಕೂಡ ಮಾಡಿದರು. ಅಂದಾಗ ಇದು ಬಹಳ ಜವಾಬ್ದಾರಿಯುತವಾದ ಇಲಾಖೆ. ಇದರ ಕೆಲಸ ಕೂಡ ಅಷ್ಟೇ ಜವಾಬ್ದಾರಿಯುತವಾದುದು ಎಂದು ನಾನು ತಿಳಿದುಕೊಂಡಿದ್ದೇನೆ.

೪-೦೦ ಪಿ. ಎಂ.

ಇವತ್ತು ಬೆಳಿಗ್ಗೆ ನಮ್ಮ ನಾಯಕರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರಕೊಡುವಾಗ ಹೇಳಿದರು. ಮಹಿಳೆಯರ ಅಭಿವೃದ್ಧಿ ವಿಷಯದಲ್ಲಿ ಎರಡೂವರೆ ವರ್ಷಗಳಲ್ಲಿ ನಮ್ಮ ಪಕ್ಷ ಮತ್ತು ಸರ್ಕಾರ ಯಾವರೀತಿ ಸಾಧನೆ ಮಾಡಿದೆ ಎಂಬ ಬಗ್ಗೆ ಸ್ಪಷ್ಟವಾದ ಚಿತ್ರವನ್ನು ಇಟ್ಟಿದ್ದಾರೆ. ಯಾವುದೇ ಪ್ರಾಂತ್ಯದಲ್ಲಿ ಮಾಡದೇ ಇರುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ನಾವೆಲ್ಲರೂ ಇದನ್ನು ಸ್ವಾಗತ ಮಾಡಿ ಅಭಿನಂದನೆ ಸಲ್ಲಿಸುತ್ತಿದ್ದೇವೆ, ಈ ಮಹಿಳೆ ಮತ್ತು ಮಕ್ಕಳ ಕಲ್ಯಾಣದ ಅಭಿವೃದ್ಧಿ ನಿಗಮಕ್ಕೆ ವ್ಯಕ್ತಿಗಳನ್ನು ಆರಿಸುವಾಗ ಕಮಿಟೆಡ್ ಪರ್ಸನ್ಸ್ ಯಾರಿರುತ್ತಾರೆ ಅಂಥಹವರನ್ನು ಆರಿಸಬೇಕು, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ನೇಮಕಾತಿ ಮಾಡಬೇಕಾದರೆ ಇದರ ಬಗ್ಗೆ ಆಸಕ್ತಿಯುಳ್ಳ ಅಧಿಕಾರಿಗಳನ್ನು ನೇಮಕ ಮಾಡಿ ಕೆಲಸಕ್ಕೆ ತೊಡಗಿಸಬೇಕು, ಜವಾಬ್ದಾರಿ ಕೊಡಬೇಕು. ಆಗ ಮಾತ್ರ ಅದು ಒಳ್ಳೆಯ ನಿಗಮವಾಗುತ್ತದೆ. ಕರ್ನಾಟಕದಲ್ಲಿರತಕ್ಕ ಮಹಿಳೆಯರು ಬಹಳ ನಿರೀಕ್ಷೆ ಮಾಡುತ್ತಿದ್ದಾರೆ. ನಾವು ಏನಾದರೂ ಕೇಳಿದರೆ ಮಹನೀಯರಿಗೆ ಕೋಪ ಬರುತ್ತದೆ ಎಂದು ಕಾಣುತ್ತದೆ. ನಾವು ರಿಸರ್ವೇಷನ್ ಕೇಳಿದರೆ ಎಲ್ಲವನ್ನೂ ಮಹಿಳೆಯರೇ ಕೇಳುತ್ತಾರೆ ಎಂದು ಹೇಳುತ್ತಾರೆ. ಬಿಹಾರದಲ್ಲಿ ರಿಸರ್ವೇಷನ್ ಇದೆ. ಅಲ್ಲಿ ಮೂರು ಪರ್ಸೆಂಟ್ ರಿಸರ್ವೇಷನ್‌ನನ್ನು ಸರ್ಕಾರಿ ಕಚೇರಿಗಳಲ್ಲಿ ಕೊಟ್ಟಿದ್ದಾರೆ. ಇವತ್ತಿನ ದಿವಸ ಸಂವಿಧಾನದ ೧೫-೪ ಆರ್ಟಿಕಲ್ ಪ್ರಕಾರ ಇದಕ್ಕೆ ಅವಕಾಶವಿದೆ. ಕಡ್ಡಾಯವಾಗಿ ಮಹಿಳೆಯರಿಗೆ ಸ್ವಲ್ಪವಾದರೂ ರಿಸರ್ವೇಷನ್ ಇಡದೇ ಇದ್ದರೆ ಮಹಿಳೆಯರ ಪ್ರಗತಿಗೆ ಕಷ್ಟವಾಗುತ್ತದೆ ಎಂಬ ಸೂಚನೆಯನ್ನು ನಾನು ಕೊಡಬಯಸುತ್ತೇನೆ. ಗೌರ್ನಮೆಂಟ್ ಸೆಕ್ಟಾರ್‌ನಲ್ಲಿ ರಿಸರ್ವೇಷನ್ ಮಾಡಿದರೆ ಒಳ್ಳೆಯದು. ಸಂವಿಧಾನದಲ್ಲೂ ಕೂಡ ಅವಕಾಶವಿರುವುದರಿಂದ ಇದನ್ನು ಮಾಡಿದರೆ ತೊಂದರೆಯಾಗುವುದಿಲ್ಲ. ಮಹಿಳೆಯರಿಗೆ ರಿಸರ್ವೇಷನ್ ಬೇಡ ಎಂಬ ಮಾತನ್ನು ಇಲಾಖೆಯಲ್ಲಿರುವ ಉನ್ನತ ಐ.ಎ.ಎಸ್. ಅಧಿಕಾರಿಗಳು ಹೇಳಿದ್ದಾರೆ, ಇದನ್ನು ಏತಕ್ಕೆ ಹೇಳಿದರೋ ಅರ್ಥವಾಗಲಿಲ್ಲ. ಇದನ್ನು ಪುಷ್ಟೀಕರಿಸಿ ಪ್ರಧಾನ ಮಂತ್ರಿಗಳು ಕೂಡ ಹೇಳಿರುವುದು ಶೋಚನೀಯವಾದುದು. ಯಾರು ಇವೊತ್ತು ಪ್ರಧಾನಿಯಾಗಿದ್ದಾರೆ ಅವರ ತಾಯಿಯವರೂ ಪ್ರಧಾನಿಯಾಗಿದ್ದವರು. ಅಂಥವರು ರಿಸರ್ವೇಷನ್ ಮಹಿಳೆಯರಿಗೆ ಅಗತ್ಯ ಇಲ್ಲ ಎಂಬ ಮಾತನ್ನು ಹೇಳಿದನ್ನು ಕೇಳಿದಾಗ ನನಗೆ ದುಃಖವಾಯಿತು. ಈ ರೀತಿ ಆಗಬಾರದು ಎಂದು ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಪ್ರಧಾನಿಯವರು ರಿಸರ್ವೇಷನ್ ಇರಬಾರದು ಎಂದು ಹೇಳಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನನ್ನ ಹತ್ತಿರ ಪೇಪರ್ ಕಟಿಂಗ್ ಇದೆ.

ಶ್ರೀ ಕೆ, ಎಚ್. ಪಾಟೀಲ್.—೧೦ ಪರ್ಸೆಂಟ್, ೮ ಪರ್ಸೆಂಟ್ ಏತಕ್ಕೆ ಕೇಳುತ್ತಿದ್ದೀರಿ ? ನೀವು ೫೧ ಪರ್ಸೆಂಟ್ ಇದ್ದೀರಿ ಹೆಚ್ಚು ರೆಪ್ರಸೆಂಟೇಷನ್ ಕೇಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಪ್ರಧಾನಿಯವರು ರಿಸರ್ವೇಷನ್ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ನನ್ನ ಹತ್ತಿರ ಪತ್ರಿಕ್ಕೆ ಕಟಿಂಗ್ ಇದೆ. ಅದನ್ನು ನೋಡಿ ನಾನು ಹೇಳುತ್ತಿದ್ದೇನೆ. ನಾನೇನೂ ಖುದ್ದಾಗಿ ಅವರನ್ನು ಭೇಟಿಯಾಗಿಲ್ಲ. ತಾವು ಇನ್ನೊಂದು ಸಾರಿ ಡೆಲ್ಲಿಗೆ ಹೋದಾಗ ಕ್ಲಾರಿಫೈ ಮಾಡಿಕೊಂಡು ಬನ್ನಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ರಿಸರ್ವೇಷನ್ ಕೊಟ್ಟರೆ ಮಹಿಳೆಯರೇ ಎಲ್ಲಾ ಕಡೆ ಬರುತ್ತಾರೆ. ನಮ್ಮ ಪರಿಸ್ಥಿತಿ ಏನು ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಹೆಣ್ಣು ಮಕ್ಕಳಿಗೆ ೫೦ ಪರ್ಸೆಂಟ್ ರಿಸರ್ವೇಷನ್ ಕೊಡಲಿ ನಮ್ಮ ಅಭ್ಯಂತರ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಈಗಾಗಲೇ ೨೦ ಪರ್ಸೆಂಟ್ ಮಾಡಿದ್ದಾರೆ. ನಾವೇ ಮುಂದುವರೆದರೆ ಖಂಡಿತ ೫೦ ಪರ್ಸೆಂಟ್ ಮಾಡುತ್ತೇವೆ. ಈ ಇಲಾಖೆಯ ಅಭಿವೃದ್ಧಿ ಕಾರ್ಯ ಕ್ರಮಗಳಿಗೆ ಇಟ್ಟಿರುವ ಹಣ ಸಾಲದು ಎಂದು ಹೇಳಿದ್ದಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಇದಕ್ಕೆ ೧೯ ಪರ್ಸೆಂಟ್ ಹಣ ಇಟ್ಟಿದ್ದಾರೆ. ಪುಟ ೧೭ ರಲ್ಲಿ ಇದನ್ನು ಹೇಳಿದ್ದಾರೆ. ಹಿಂದುಳಿದ ವರ್ಗದವರಿಗೆ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ೧೮ ಪರ್ಸೆಂಟ್ ಮೀಸಲಾತಿ ಇಟ್ಟಿದ್ದರೂ ಕೂಡ ಇಟ್ಟಿರುವ ಹಣ ಸರಿಯಾಗಿ ಖರ್ಚಾಗುತ್ತಿಲ್ಲ. ಸಮಾಜ ಕಲ್ಯಾಣಕ್ಕೆ ಇಟ್ಟಿರುವ ೧೫ ಕೋಟಿ ರೂಪಾಯಿಗಳಲ್ಲಿ ೨ ಕೋಟಿ ರೂಪಾಯಿಗಳು ಮಾತ್ರ ಖರ್ಚು ಮಾಡಿ ಇನ್ನು ೧೩ ಕೋಟಿ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಮಾನ್ಯ ಮಂತ್ರಿಗಳ ಗಮನಕ್ಕೆ ಇದು ಬರಲಿಲ್ಲವೇ ? ಅಥವಾ ೧೩ ಕೋಟಿ ರೂಪಾಯಿಗಳು ಲ್ಯಾಪ್ಸ್ ಆಗುವುದಕ್ಕೆ ತೊಂದರೆಯಾಗಿತ್ತು ? ಇಲ್ಲಿ ಪಟ್ಟಿಯನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಮಾನ್ಯ ರಾಚಯ್ಯನವರು ಇದನ್ನು ಓದಿದರೆ ಎಲ್ಲರಿಗೂ ಷೋಕಾಸ್ ನೋಟೀಸ್ ಕೊಡುತ್ತಾರೆಂದು ಕಾಣುತ್ತದೆ, ನಾನು ೧೯೮೪–೮೫ರ ಅಂಕಿ ಅಂಶವನ್ನು ಹೇಳುತ್ತಿದ್ದೇನೆ. ಖರ್ಚು ಮಾಡಿರುವುದು ಎರಡು ಕೋಟಿ ರೂಪಾಯಿಗಳು ಲ್ಯಾಪ್ಸ್ ಆಗಿರುವುದು ೧೩ ಕೋಟಿ ರೂಪಾಯಿಗಳು. ಇದು ಸಣ್ಣ ಮೊತ್ತ ಅಲ್ಲ, ಇದನ್ನು ಬೇರೆ ಇಲಾಖೆಗಾದರೂ ಡೈವರ್ಟ್ ಮಾಡಿದ್ದರೆ ಅಲ್ಲಾದರೂ ಅನುಕೂಲವಾಗುತ್ತಿತ್ತು. ಅನ್ನೂ ಮಾಡಿಲ್ಲ. ೧೩ ಕೋಟಿ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿರುವುದನ್ನು ನೋಡಿ ನನಗೆ ಖೇದವಾಯಿತು. ಇಂಥದ್ದು ಆಗಬಾರದೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಬೇರೆ ಬೇರೆ ವಿಭಾಗಗಳಲ್ಲಿ ೨೪ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ವರದಕ್ಷಿಣೆ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಇದು ಬಹಳ ಮುಖ್ಯವಾದುದು, ನಾವೆಲ್ಲರೂ ಈ ಬಗ್ಗೆ ಮಾತನಾಡುತ್ತೇವೆ. ಕಾನೂನು ತಂದಿದ್ದೇವೆ. ಇದರಲ್ಲಿ ಯಾರು ವರದಕ್ಷಿಣೆ ತೆಗೆದುಕೊಳ್ಳುತ್ತಾರೋ ಅವರಿಗೆ ಶಿಕ್ಷೆ ಇದೆ, ಆದರೆ ಕೊಡುವವರಿಗೆ ಶಿಕ್ಷೆ ಇಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಇಲ್ಲೇ ಇದ್ದಾರೆ. ಇವರು ಕಾನೂನೂ ಮಂತ್ರಿಗಳು. ಇವರಿಗೆ ನಾನು ಹೇಳುತ್ತಿದ್ದೇನೆ ಯಾರು ವರದಕ್ಷಿಣೆ ಕೊಡುತ್ತಾರೆ ಅವರನ್ನೂ ಶಿಕ್ಷೆಗೆ ಒಳಪಡಿಸಬೇಕು.

ಶ್ರೀ ಯು. ಭೂಪತಿ.—ಮಾನ್ಯ ಲಕ್ಷ್ಮೀಸಾಗರ್ ಅವರು ತೆಗೆದುಕೊಳ್ಳುವವರೂ ಅಲ್ಲ ಕೊಡುವವರೂ ಅಲ್ಲ. ಅವರಿಗೆ ಏತಕ್ಕೆ ಹೇಳುತ್ತೀರಿ ?

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್.—ಆದರೂ ಅವರು ಕಾನೂನು ಮಂತ್ರಿಗಳು. ವರದಕ್ಷಿಣೆ ಜೊತೆಗೆ ಇನೊಂದು ವಿಷಯವನ್ನು ಸೇರಿಸಿ ಹೇಳುತ್ತಿದ್ದೇನೆ. ಬಹಳ ಮಹಿಳೆಯರು ವೇಶ್ಯಾವೃತ್ತಿಗೆ ಹೋಗುತ್ತಿದ್ದಾರೆ. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಬಡತನದಿಂದ ಮಹಿಳೆ ಅಡ್ಡದಾರಿಗೆ ಹೋಗುತ್ತಿದ್ದಾಳೆ. ಎಸ್.ಐ.ಟಿ. ಆಕ್ಟ್ ಪ್ರಕಾರ ಅವರ ಮೇಲೆ ಕೇಸ್ ಹಾಕುತ್ತಿದ್ದಾರೆ. ಹೊಟ್ಟೆಬಟ್ಟೆಗಾಗಿ ಕೆಟ್ಟ ದಾರಿ ಹಿಡಿದವರ ಮೇಲೆ ಕೇಸ್ ಹಾಕುತ್ತಿದ್ದಾರೆ, ಯಾರು ಗಂಡಸರು ಇದಕ್ಕೆ ಪ್ರಚೋದನೆ ಮಾಡುತ್ತಾರೆ. ಅವರ ಮೇಲೆ ಕೇಸ್ ಹಾಕಬೇಕು. ಅದೇ ರೀತಿ ವರದಕ್ಷಿಣೆ ಕೊಡುವವರಿಗೆ ಕೇಸ್ ಹಾಕಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ವೇಶ್ಯಾವೃತ್ತಿ ಮುಂದುವರೆಯಬೇಕು ಎಂದು ಹೇಳುತ್ತೀರೋ ? ಅಥವಾ ತಡೆಗಟ್ಟಬೇಕು ಎಂದು ಹೇಳುತ್ತೀರೋ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಪ್ರಚೋದನೆ ಮಾಡುವವರನ್ನೂ ಜೈಲಿಗೆ ಹಾಕಿದರೆ ಇದು ಕಡಿಮೆಯಾಗುತ್ತದೆ. ನಾವೆಲ್ಲರೂ ಮಾತನಾಡುತ್ತೇವೆ. ನಿರ್ಮೂಲನ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಎಸ್.ಐ.ಟಿ. ಆಕ್ಟ್ ಕೇಂದ್ರದ ಶಾಸನ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಆ ಕಡೆ ಕುಳಿತಿರತಕ್ಕ ಹಿರಿಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಎಸ್.ಐ.ಟಿ. ಆಕ್ಟ್ ಪ್ರಕಾರ ಎರಡೂ ಕಡೆಯವರ ಮೇಲೆ ಕೇಸ್ ಹಾಕಬೇಕೆಂದು ತಾವು ಹೇಳುತ್ತಿದ್ದೀರಿ. ಈ ಮಂತ್ರಿಗಳು ಒಟ್ಟು ಎಷ್ಟು ಕೇಸ್ ಹಾಕಿದ್ದಾರೆ ಎಂಬುದನ್ನು ಕೇಳಿ.

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್.—ಮಾನ್ಯ ಸದಸ್ಯರು ಏನಾದರೂ ಕೇಳಬೇಕಾದರೆ ಕ್ಲಾರಿಫಿಕೇಷನ್ ಕೇಳುವಾಗ ಕೇಳಲಿ.

(ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಅಧ್ಯಕ್ಷಸ್ಥಾನದಲ್ಲಿದ್ದರು)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅವರ ಆ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಆಮೇಲೆ ಉತ್ತರವನ್ನು ಕೊಡುತ್ತಾರೆ. ನನಗೆ ತಿಳಿದಹಾಗೆ ನಮ್ಮಲ್ಲಿ ಸೋಷಿಯಲ್ ವೆಲ್‌ಫೇರ್ ಪರಿಮಿತಿಯಲ್ಲಿ ಮೂರು ವಿಧವಾದ ವಿಭಾಗಗಳನ್ನು ಮಾಡಿದ್ದಾರೆ. ಒಂದನೆಯದು, ಸೆಂಟ್ರಲ್ ಫಂಡ್. ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನಿಂದ ಬರತಕ್ಕ ಹಣದ ಮೊತ್ತ ಒಂದು. ಇನ್ನೊಂದು ಸ್ಟೇಟ್ ಬಡ್ಜೆಟ್; ಸ್ಟೇಟ್ ಸೋಷಿಯಲ್ ವೆಲ್‌ಫೇರ್ ಬಡ್ಜೆಟ್. ಇನ್ನೊಂದು ಸ್ಟೇಟ್ ಸೋಷಿಯಲ್ ವೆಲ್‌ಫೇರ್ ಬೋರ್ಡ್ ಪ್ರಾಜೆಕ್ಟ್ಸ್. ಬಹಳ ಜನರಿಗೆ ಕರ್ನಾಟಕದಲ್ಲಿ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೂ ಸೋಷಿಯಲ್ ವೆಲ್‌ಫೇರ್ ಬೋರ್ಡಿಗೂ ವ್ಯತ್ಯಾಸ ಗೊತ್ತಾಗುತ್ತಾ ಇಲ್ಲ. ಅಧ್ಯಕ್ಷಿಣಿಯವರೇ, ತಮಗೂ ಕೂಡಾ ಸಾಕಷ್ಟು ಅನುಭವವಾಗಿದೆ, ಏಕೆಂದರೆ ತಾವೂ ಕೂಡಾ ಮಂತ್ರಿಗಳಾಗಿದ್ದವರು. ಅನೇಕ ಬಾರಿ ಡಿಪಾರ್ಟ್‌ಮೆಂಟ್‌ನಲ್ಲಿ ವ್ಯತ್ಯಾಸ ಗೊತ್ತಾಗದೇ ಅಲ್ಲಿಯ ಕಾಗದಗಳು ಇಲ್ಲಿಗೆ. ಇಲ್ಲಿಯ ಕಾಗದಗಳು ಅಲ್ಲಿಗೆ ಹೋಗಿವೆ. ಇವುಗಳ ವ್ಯತ್ಯಾಸವನ್ನು ಕೂಡಾ ಕಂಡುಹಿಡಿಯುವುದಕ್ಕೆ ಜನರಲ್ಲಿ ಆಗಿಲ್ಲ. ಇವುಗಳಲ್ಲಿ ಇವತ್ತು ಹೊಂದಾಣಿಕೆ ಸರಿಯಾಗಿಲ್ಲ. ೨೦ ವರ್ಷಗಳ ಕಾಲ ಸ್ಟೇಟ್ ಬೋರ್ಡ್‌ಗೆ ಮೆಂಬರ್ ಆಗಿ, ೧೦ ವರ್ಷಗಳ ಕಾಲ ಸೆಂಟ್ರಲ್ ಬೋರ್ಡ್‌ಗೆ ಮೆಂಬರ್ ಆಗಿ, ಇರತಕ್ಕ ವ್ಯತ್ಯಾಸಗಳನ್ನು ಯಾವ ರೀತಿ ಇವೆ ಹಾಗೂ ಯಾವ ರೀತಿ ಕೊ-ಆರ್ಡಿನೇಷನ್ ಇಲ್ಲ ಎನ್ನುವುದಕ್ಕೆ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡಿನವರು ಕೆಲವು ಪ್ರಾಜೆಕ್ಟ್‌ಗಳನ್ನು......

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯೆಯವರು ಮಹಿಳೆಯ ರೆಪ್ರಸೆಂಟೇಷನ್ ಇಲ್ಲ ಎಂದು ಹೇಳಿ ಮತ್ತೆ ೨೦ ವರ್ಷಗಳಿಂದ ಸತತವಾಗಿ ಸದಸ್ಯಳಾಗಿದ್ದೇನೆ ಎಂದು ಹೇಳಿದರು. ಇದು ನನಗೆ ಅರ್ಥವಾಗಲಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಾನು ೨೦ ವರ್ಷಗಳ ಕಾಲ ಸತತವಾಗಿ ಕೆಲಸ ಮಾಡಿದ್ದೇವೆ. ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡಿನವರು ಕೆಲವು ಪ್ರಾಜೆಕ್ಟ್‌ಗಳನ್ನು ರಾಜ್ಯ ಸರ್ಕಾರದ ಮೂಲಕ ರಾಜ್ಯದ ಸೋಷಿಯಲ್ ವೆಲ್‌ಫೇರ್ ಬೋರ್ಡ್‌ಗೆ ಕೆಲವು ಪ್ರಾಜೆಕ್ಟ್‌ಗಳನ್ನು ಕೊಟ್ಟರು. ಹಿಂದೆ ೩೪ ಐ.ಸಿ.ಡಿ.ಸಿ. ಪ್ರಾಜೆಕ್ಟ್‌ಗಳನ್ನು. ಇಂಟಿಗ್ರೇಟೆಡ್ ಪ್ರಾಜೆಕ್ಟ್‌ಗಳನ್ನು ಕೊಟ್ಟಾಗ ೫ ವರ್ಷಕ್ಕಿಂತ ಹೆಚ್ಚಿನ ಕೆಲಸಗಳನ್ನು ಒಂದು ದಿವಸ ಸರ್ಕಾರಿ ಆಜ್ಞೆ ಮಾಡಿ, ಅವೆಲ್ಲವನ್ನೂ ರಾಜ್ಯ ಸರ್ಕಾರಕ್ಕೆ ಹ್ಯಾಂಡ್ ಓವರ್ ಮಾಡಿ ಎಂದು ಹೇಳಿದರು. ಆ ಪ್ರಕಾರ ಸ್ಟೇಟ್ ಬೋರ್ಡಿನವರು ೫ ವರ್ಷದ ಮತ್ತು ಕೆಲವು ೧೦ ವರ್ಷದ ಪ್ರಾಜೆಕ್ಟ್‌ಗಳನ್ನು ಎಲ್ಲವನ್ನೂ ಹ್ಯಾಂಡ್ ಓವರ್ ಮಾಡಿದರು. ಹ್ಯಾಂಡ್ ಓವರ್ ಮಾಡತಕ್ಕಂತಹ ಕಾಲದಲ್ಲಿ ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ಬಗ್ಗೆ ಸ್ಪಷ್ಟವಾಗಿ ಹೇಳಿದರೂ ಕೂಡಾ ಸ್ಟೇಟ್ ಬೋರ್ಡಿನವರು ಈ ಒಂದು ಸಿಬ್ಬಂದಿಗಳ ಗತಿ ಏನೆಂದು ಯಾರೂ ಚಿಂತೆ ಮಾಡಿಲ್ಲ. ಆದರೆ ಒಂದು ಸಂತೋಷ ಪಡುವ ವಿಷಯ ಏನೆಂದರೆ, ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಮೊನ್ನೆ ಅಲ್ಲಿರತಕ್ಕ ಸ್ಟೇಟ್ ಬೋರ್ಡಿನ ಸಿಬ್ಬಂದಿಗಳನ್ನೆಲ್ಲಾ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಗ್ರಾಮಸೇವಕಿಯರು ಏನಿದ್ದಾರೆ ಅವರ ಸ್ಟೇಟಸ್‌ನ್ನು ಅಬ್ಸರ್ವ್ ಮಾಡಿ ಎಂದು

ಸರ್ಕಾರಿ ಆಜ್ಞೆ ಹೊರಡಿಸಿದ್ದು ಆ ಬಗ್ಗೆ ನಾನು ಅಭಿನಂದನೆಯನ್ನು ಈ ಸರ್ಕಾರಕ್ಕೆ ಸಲ್ಲಿಸುತ್ತೇನೆ. ಇದರ ಜೊತೆಯಲ್ಲಿ ಅನೇಕ ಪ್ರಾಜೆಕ್ಟ್‌ಗಳು ಇವೆ. ಡೆಸ್ಟಿಟ್ಯೂಟ್ ಹೋಮ್ಸ್ ಇವೆ, ಅವಕ್ಕೆ ಹಣವನ್ನು ಇವತ್ತು ನೇರವಾಗಿ ಕೊಡುವುದಿಲ್ಲ. ಸ್ಟೇಟ್ ಗೌರ್ನ್‌ಮೆಂಟ್ ಮುಖಾಂತರ ಇವತ್ತು ಹಣ ರಿಲೀಸ್ ಮಾಡುತ್ತೀರಿ ಸೋಷಿಯಲ್ ವೆಲ್‌ಫೇರ್ ಬೋರ್ಡಿಗೆ ಬಂದ ಹಣವನ್ನು ರಿಲೀಸ್ ಮಾಡುತ್ತೀರಿ. ಇದರಲ್ಲೇ ಬಹಳ ತಕರಾರು ಇದೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ, ಮಹಿಳಾ ಮಂತ್ರಿಗಳ ಗಮನಕ್ಕೆ ಇಲಾಖೆಯ ಮಂತ್ರಿಗಳ ಗಮನಕ್ಕೆ, ಬೆಳಗಾಗಿದ್ದರೆ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಲಾಗಿದೆ. ಈ ಡೆಸ್ಟಿಟ್ಯೂಟ್ ಹೋಮ್‌ಗಳನ್ನು ನಡೆಸತಕ್ಕವರು ತಮ್ಮ ಕಷ್ಟವನ್ನು ಕಳಕಳಿಯಿಂದ ಕೇಳುತ್ತಿದ್ದಾರೆ. ಇವತ್ತು ಆ ಜನ ೫೦–೧೦೦ ಪರದೇಶೀ ಮಕ್ಕಳನ್ನು ಒಂದು ಕಡೆ ಕಲೆ ಹಾಕಿ ಅವರಿಗೆ ಅನ್ನ, ವಸತಿ, ಊಟ ಕೊಡತಕ್ಕ ಕಾರ್ಯವನ್ನು ಏಪ್ರಿಲ್ ೧ನೇ ತಾರೀಖಿನಿಂದ ಪ್ರಾರಂಭ ಮಾಡಿದರೆ, ಅವರಿಗೆ ಹಣ ಬರುವುದು ೮–೧೦ ತಿಂಗಳುಗಳಾದ ಮೇಲೆ. ಇದು ಅನ್ಯಾಯ ಆಗದೇ ಇರುತ್ತದೆಯೇ? ಇದು ಹ್ಯೂಮನ್ ನೇಚರ್. ಪ್ರತಿ ವರ್ಷ ೫೦ ಮಕ್ಕಳನ್ನು ಇಟ್ಟು ಅದನ್ನು ನಡೆಸಬೇಕಾದರೆ ೪–೫ ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಆ ಸಂಸ್ಥೆಗಳು ಶಕ್ತಿಯುತವಾಗಿದ್ದರೆ ಸರ್ಕಾರದ ಹತ್ತಿರ ಹಣಕ್ಕೆ ಏಕೆ ಬರುತ್ತಿದ್ದರು ? ಅಲ್ಲಿ ಸಂಸ್ಥೆಯದು ೧೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಇದ್ದರೆ ಮಿಕ್ಕ ೯೦ ಪರ್ಸೆಂಟ್‌ನ್ನು ಸರ್ಕಾರ ಕೊಡಬೇಕು. ಆದ್ದರಿಂದ ಇವತ್ತು ಅಡ್ವಾನ್ಸ್ ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಅನ್ ಆಡಿಟೆಡ್ ಸ್ಟೇಟ್‌ಮೆಂಟ್ ಬಂದ ತಕ್ಷಣ ಮೂರು – ಮೂರು ತಿಂಗಳ ಕಂತನ್ನು ಅಡ್ವಾನ್ಸಾಗಿ ರಿಲೀಸ್ ಮಾಡದೇ ಇದ್ದರೆ ಇವತ್ತು ಎಲ್ಲಾ ಡೆಸ್ಟಿಟ್ಯೂಟ್ ಹೋಮ್‌ಗಳನ್ನು ಮುಚ್ಚತಕ್ಕ ಪರಿಸ್ಥಿತಿ ಬಂದೀತು ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಮಾಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಇನ್ನು ವರ್ಕಿಂಗ್ ಉಮನ್ ಹಾಸ್ಟೆಲ್‌ಗಳ ಬಗ್ಗೆ ಹೇಳಬೇಕೆಂದರೆ ಇದು ಒಳ್ಳೆಯ ಯೋಜನೆ ಇದೆ. ಆದರೆ ಈ ಎಲ್ಲಾ ಹಾಸ್ಟೆಲ್ ಗಳೂ ಪಟ್ಟಣಗಳಲ್ಲಿಯೇ ಇವೆ. ಹಳ್ಳಿಗಳ ಬಗ್ಗೆ ಹೇಳಬೇಕೆಂದರೆ ತಾಲ್ಲೂಕು ಮಟ್ಟದಲ್ಲಿ ಇವತ್ತು ಮಹಿಳಾ ಡಾಕ್ಟರುಗಳು, ಮಹಿಳಾ ದಾದಿಗಳು, ಮಹಿಳಾ ವರ್ಕರ್ಸ್ ಟ್ರಾನ್ಸ್‌ಫರ್ ಆದರೆ ಹೋಗುವುದಿಲ್ಲ. ಇದಕ್ಕೆ ಕಾರಣ ಅವರಿಗೆ ಅಲ್ಲಿ ವಾಸಕ್ಕೆ ಮನೆಗಳು ಸಿಗುವುದಿಲ್ಲ. ಪಟ್ಟಣಗಳಲ್ಲಿ ಏನು ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡಿನವರು ರೂಲ್ಸ್‌ನ್ನು ರಿಲ್ಯಾಕ್ಸ್ ಮಾಡಿದ್ದಾರೆ ಅದು ಬಹಳ ಸಂತೋಷ. ಶೇಕಡಾ ೭೫ ಭಾಗವನ್ನು ಕೇಂದ್ರದವರು, ಹನ್ನೆರಡೂವರೆ ಭಾಗವನ್ನು ರಾಜ್ಯ ಸರ್ಕಾರದವರು ಮತ್ತು ಮಿಕ್ಕ ಹನ್ನೆರಡೂವರೆ ಭಾಗವನ್ನು ಸಂಸ್ಥೆಯವರು ಹಾಕಬೇಕೆಂದು ಇದೆ. ಹಾಗೆ ಸಂಸ್ಥೆಯಲ್ಲಿ ಹಣ ಇಲ್ಲದ ಪಕ್ಷದಲ್ಲಿ ಜಮೀನು ಇದ್ದರೆ ಕಟ್ಟಡ ಕೊಡುವುದಕ್ಕೆ ಅವರಿಗೆ ಅನುಕೂಲವಾಗುತ್ತದೆ. ಆದರೆ ಇವತ್ತು ತಾಲ್ಲೂಕು ಮಟ್ಟದಲ್ಲಿ ೨೦–೨೫ ಮಹಿಳಾ ಕೆಲಸಗಾರರಿಗೆ ಹಾಸ್ಟೆಲುಗಳನ್ನು ಮಾಡದೇ ಇದ್ದರೆ ನಮಗೆ ಅಲ್ಲಿ ಡಾಕ್ಟರುಗಳು ಸಿಗುವುದಿಲ್ಲ, ಉಪಾಧ್ಯಾಯರು ಸಿಗುವುದಿಲ್ಲ, ದಾದಿಯರು ಸಿಗುವುದಿಲ್ಲ. ನನ್ನ ತಾಲ್ಲೂಕಿನಲ್ಲಿಯೇ, ೩೨ ಜನ ಮಹಿಳಾ ವರ್ಕರ್ಸ್ ಇದ್ದಾರೆ. ಅಲ್ಲಿ ವರ್ಕಿಂಗ್ ವುಮನ್ ಹಾಸ್ಟೆಲ್ ಮಾಡಿದರೆ, ಅಲ್ಲಿಂದ ೫ ಕಿ.ಮೀ., ೧೦ ಕಿ.ಮೀ.ವರೆಗೆ ಬಸ್‌ನಲ್ಲಿ ಅವರು ಓಡಾಡುವುದಕ್ಕೆ ಸೌಕರ್ಯ ಇದೆ. ತಾಲ್ಲೂಕು ಮಟ್ಟದಲ್ಲಿ ಇವು ಆಗಬೇಕು. ನಗರ ಪ್ರದೇಶದಲ್ಲಿ ಇವನ್ನು ಏನು ತೆರೆಯಲಾಗುತ್ತಿದೆ ಅದನ್ನು ನಿಲ್ಲಿಸಬೇಕು. ಹಾಗೂ ಪ್ರತಿಯೊಂದು ತಾಲ್ಲೂಕಿನಲ್ಲಿ ಈ ಹಾಸ್ಟೆಲ್‌ಗಳನ್ನು ತೆಗೆಯಬೇಕೆಂದು ನಾನು ಹೇಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಮಹಿಳಾ ಸದಸ್ಯರು ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ಮಕ್ಕಳು ಸಾಕುವ ಹೋಂ ಬಗ್ಗೆ ಮಾತನಾಡುತ್ತಿದ್ದರು. ಹೆಚ್ಚು ಕಡಿಮೆ ಕರ್ನಾಟಕದಲ್ಲಿ ಯಾವುದೇ ಪಟ್ಟಣದಲ್ಲಿ ತೆಗೆದುಕೊಂಡರೂ ಕೂಡಾ ಇವು ಸೆಲ್ಫ್ ವೆಲ್‌ಫೇರ್ ಹೋಂಗಳು ಆಗಿವೆಯೇ ಹೊರತು, ಸೋಷಿಯಲ್ ವೆಲ್‌ಫೇರ್ ಹೋಂಗಳನ್ನು ಉಪಯೋಗಿಸಿಕೊಂಡು ಹಣ ಹೊಡೆಯತಕ್ಕ ವ್ಯವಸ್ಥೆ ಆಗಿದೆ. ಈ ವ್ಯವಸ್ಥೆಯನ್ನು ಯಾವ ರೀತಿ ಸರಿ ಮಾಡಬೇಕೆಂದು ಮಾನ್ಯ ಸದಸ್ಯರು ಸರ್ಕಾರಕ್ಕೆ ತಿಳಿಸಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸಭಾಧ್ಯಕ್ಷಿಣಿಯವರೇ, ಮಕ್ಕಳಿಗಾಗಿ ಮಹಿಳೆಯರಿಗಾಗಿ ಕಲ್ಯಾಣಕ್ಕೋಸ್ಕರ ಕೊಡತಕ್ಕ ಹಣ ಅದು. ಆ ಬಗ್ಗೆ ಮನಸ್ಸು ಇರಬೇಕು. ನಮಗಂತೂ ದಾನ ಮಾಡುವ ಶಕ್ತಿ ಇಲ್ಲ. ಸರ್ಕಾರ ಕೊಡುತ್ತದೆ, ಅದನ್ನು ಸರಿಯಾಗಿ ವಿತರಣೆ ಮಾಡೋಣ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವನ್ನು ಪಡೆದುಕೊಳ್ಳುವ ಎನ್ನುವ ಮನಸ್ಸು ನಮ್ಮಲ್ಲಿ ಬರದೇ ಇದ್ದರೆ ಏನು ಮಾಡುವುದಕ್ಕಾಗುತ್ತದೆ ? ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಉದಾಹರಣೆಗೆ ಕೆಲಸ ಇಲ್ಲದ ಹೆಣ್ಣುಮಗಳಿಗೆ ಒಂದು ಬಾಳೆಹಣ್ಣಿನ ಅಂಗಡಿ ತೆರೆಯಲಿ, ಪೆಟ್ಟಿಗೆ ಅಂಗಡಿ ಹಾಕಲಿ,

ಹುರಿಗಾಳು ಮಾರಿ ತನ್ನ ಕಾಲಮೇಲೆ ತಾನು ನಿಂತುಕೊಳ್ಳಲಿ ಎಂದು ಸರ್ಕಾರ ೫೦೦ ರೂಪಾಯಿಗಳನ್ನು ಹೆಲ್ಪಿಂಗ್ ಹ್ಯಾಂಡ್ ಎಂದು ಕೊಡುತ್ತದೆ. ಆದರೆ ಇದರಲ್ಲಿ ಲಂಚ ಎಲ್ಲಿಗೆ ಹೋಗಿದೆ ಎಂಬುದನ್ನು ನೋಡಬೇಕು, ಇವತ್ತು ಕೇವಲ ಲೋಕೋಪಯೋಗಿ, ವಿದ್ಯಾ ಇಲಾಖೆಗಳಲ್ಲಿ, ಅಥವಾ ಬೇರೆ ಇಲಾಖೆಗಳಲ್ಲಿ ಮಾತ್ರ ಲಂಚ ಇದೆ ಎಂದು ತಿಳಿದುಕೊಳ್ಳಬೇಡಿ. ಆ ಒಂದು ರೋಗ ಸಮಾಜ ಕಲ್ಯಾಣ ಇಲಾಖೆಯಲ್ಲೂ ಇದೆ. ಆಕೆ ೫೦೦ ರೂಪಾಯಿಗಳ ಸಹಾಯಧನವನ್ನು ಮಲ್ಟೀ ಸ್ಟೋರೀಡ್ ಬಿಲ್ಡಿಂಗ್‌ನಿಂದ ತೆಗೆದುಕೊಂಡು ಅದರ ಮೆಟ್ಟಲು ಇಳಿದು ಬರುವಷ್ಟರಲ್ಲಿ ಆಕೆಯ ಕೈಯಲ್ಲಿ ೨೨೫ ರೂಪಾಯಿಗಳು ಉಳಿದಿರುತ್ತವೆ. ಆ ಹಣದಲ್ಲಿ ಆಕೆ ಜೀವನ ಮಾಡಲು ಹೇಗೆ ಸಾಧ್ಯ? ಇದರಿಂದ ಸೆಲ್ಫ್ ಎಂಪ್ಲಾಯ್‌ಮೆಂಟ್ ಹೇಗೆ ಆಗುತ್ತದೆ? ಇದಕ್ಕೆಲ್ಲಾ ಮನಸ್ಸು ಬೇಕು? ಕಮಿಟೆಡ್ ವರ್ಕರ್ಸ್ ಬೇಕು. ಇಂಥವರನ್ನು ಸೋಷಿಯಲ್ ವರ್ಕ್‌ರ್ ಎಂದು ಹೇಳುವುದಿಲ್ಲ. ಇವರೆಲ್ಲರಿಗೂ ಕಮಿಟೆಡ್ ಮೈಂಡ್ ಬೇಕು. ಇದು ಇಲ್ಲದಿದ್ದರೆ ಹಣವೆಲ್ಲಾ ಪೋಲಾಗುತ್ತಿರುವುದು ನಿರ್ವಿವಾದವೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕಮಿಟೆಡ್ ಪರ್ಸನ್ಸ್ ಹೆಂಗಸರೇ ಆಗಬೇಕೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅದಕ್ಕೆ ಜಂಡರ್ ಇಲ್ಲ. ಹೆಂಗಸರೇ ಆಗಬಹುದು; ಅಥವಾ ಗಂಡಸರೇ ಆಗಬಹುದು. Either men or women. There is not much difference. ಇದರ ಜೊತೆಯಲ್ಲಿ ಡಿಪಾರ್ಟ್‌ಮೆಂಟ್‌ನಲ್ಲಿ ಸಾಕಷ್ಟು ಬೋರ್ಡ್‌ಗಳು ಇವೆ. ಇದು ಬಹಳ ಜನರಿಗೆ ಗೊತ್ತಿಲ್ಲ, ನಾನು ಈ ಒಂದು ಇಲಾಖೆಯ ವರದಿಯನ್ನು ಓದುವಾಗ ಈ ಬೋರ್ಡ್‌ಗಳು ಯಾವತ್ತು ರಚನೆ ಆದವು ಎನ್ನುವ ಬಗ್ಗೆ ವರದಿ ಇಲ್ಲ. ಈ ಬೋರ್ಡ್‌ಗಳಿಗೆ ಸಂಬಂಧಪಟ್ಟಹಾಗೆ ರೆಕಮಂಡೇಷನ್ ರಿಪೋರ್ಟ್, ಅದಕ್ಕೆ ಇಟ್ಟಿರತಕ್ಕ ಹಣದ ಬಗ್ಗೆ ಒಂದು ಅಕ್ಷರ ಕೂಡಾ ಇಲ್ಲ. ಇವತ್ತು ಸಾಕಷ್ಟು ಬೋರ್ಡ್‌ಗಳು ಇವೆ. ಸ್ಟೇಟ್ ಲೆವೆಲ್ ಕಮಿಟೀಸ್ ಎಂದು ಪುಟ ೨೧ರಲ್ಲಿ ಇದೆ. ಐ.ಸಿ.ಡಿ.ಸಿ. ಏನೋ ಕೆಲಸ ಮಾಡುತ್ತಿದೆ. ಮಾನ್ಯ ಮಂತ್ರಿಗಳಾದ ವಿ.ಎಲ್. ಪಾಟೀಲ್ ಅವರು ಈ ವರ್ಷ ಹೆಚ್ಚಿಗೆ ಎಲ್ಲಾ ಜಿಲ್ಲೆಗಳಿಗೂ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು............Board for welfare of Disabled......... ಎಂದು ಇದೆ. ಇದು ಯಾವತ್ತು ಸ್ಥಾಪನೆ ಆಯಿತು? ಅದರ ಕಾರ್ಯಕ್ಷೇತ್ರವೇನು? ಅದರ ವರದಿ ಏನು ಎಂದು ಬಂದಿಲ್ಲ. ಮತ್ತೆ ಕರ್ನಾಟಕ ಸ್ಟೇಟ್ ಚಿಲ್ಡರನ್ಸ್ ಫಂಡ್ ಇದೆ. ಬಹುಶಃ ಇದು ಯಾವತ್ತು ಫಾರಂ ಆಯಿತು, ಈ ಚಿಲ್ಡರನ್ಸ್ ಫಂಡ್‌ನಲ್ಲಿ ಎಷ್ಟು ಹಣ ಇದೆಯೋ? ಇದು ಸ್ಥಾಪನೆ ಆಗುವಾಗ ೧೦ ಲಕ್ಷ ರೂಪಾಯಿಗಳು ಇತ್ತು ಎಂದು ಕೇಳಿದ್ದೆ. ಅದರ ಗತಿ ಏನಾಗಿದೆ? ಇದರಲ್ಲಿ ಎಷ್ಟು ಖರ್ಚು ಆಗಿದ್ದು ಎಷ್ಟು ಹಣ ಉಳಿದಿದೆ? ಈ ವಿವರ ನನಗೆ ಸಿಕ್ಕುತ್ತಾ ಇಲ್ಲ. ಇನ್ನು ಕರ್ನಾಟಕ ಸ್ಟೇಟ್ ಚಿಲ್ಡರನ್ಸ್ ರೀತಿ ಸುಮಾರು ೧೨ ಬೋರ್ಡ್‌ಗಳ ಪಟ್ಟಿ ಇಲ್ಲಿ ಇದೆ. ಇಂತಹ ಪ್ರತ್ಯೇಕ ಬೋರ್ಡ್‌ಗಳನ್ನು ಮಾಡುವಾಗ ಅವುಗಳ ಕಾರ್ಯಕ್ಷೇತ್ರ, ಅವುಗಳು ಮಾಡಬೇಕಾದ ಕೆಲಸದ ವ್ಯಾಪ್ತಿ ಹಾಗೂ ಅವರು ಮಾಡಿರತಕ್ಕ ರೆಕಮಂಡೇಷನ್ಸ್‌ನಲ್ಲಿ ಎಷ್ಟು ಕಾರ್ಯಗತವಾಗಿವೆ ಎನ್ನುವ ಬಗ್ಗೆ ಅಂಕಿ ಅಂಶ ವರದಿಯಲ್ಲಿ ಸಿಕ್ಕುತ್ತಾ ಇಲ್ಲ. ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಅಧಿಕಾರಿಗಳು ಏಕೆ ತರಲಿಲ್ಲ ಎನ್ನುವ ಪ್ರಶ್ನೆ ಕೇಳುತ್ತಿದ್ದೇನೆ. ೧೨ ಕಮಿಟಿಗಳು ಇದ್ದು, ರಾಜ್ಯ ಸರ್ಕಾರ ಮಾಡಿದ ಪರಿವೀಕ್ಷಣಾ ಸಲಹಾ ಸಮಿತಿ ಇದೆ. ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಇದಕ್ಕೆ ಅಧ್ಯಕ್ಷರು. ಇದು ಎಷ್ಟು ಸಲ ಭೇಟಿ ಆಯಿತು? ಇದು ಏನು ಸಲಹೆಗಳನ್ನು ಕೊಟ್ಟಿದೆ ಅದನ್ನು ಕಾರ್ಯರೂಪಕ್ಕೆ ತರಲಾಗಿದೆಯೋ? ಈ ರಿಪೋರ್ಟ್‌ನಲ್ಲಿ ಅದು ಒಂದೂ ಸಿಗುತ್ತಾ ಇಲ್ಲ ಇದು ಆಗಬಾರದು ಎಂದು ನಾನು ಹೇಳುತ್ತಿದ್ದೇನೆ. ಇವತ್ತು ನಮಗೆ ಸ್ಪಷ್ಟ ಚಿತ್ರವನ್ನು ಮಾನ್ಯಮಂತ್ರಿಗಳು ಕೊಡಬೇಕು. ಹಾಗೂ ಏನೇನು ಅನುಕೂಲಗಳು ಆಗಬೇಕು ಎನ್ನುವುದರ ಬಗ್ಗೆ ಇವತ್ತು ಯೋಚನೆ ಮಾಡಬೇಕು. ಇಂತಿಂಥ ಬೋರ್ಡ್‌ಗಳಲ್ಲಿರುವ ಹಣ ಲ್ಯಾಪ್ಸ್ ಆಗುತ್ತವೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಉತ್ತಮ ಕೆಲಸಕಾರ್ಯಗಳು ಆಗಿರತಕ್ಕ ಜಿಲ್ಲೆ ಎಂದರೆ ಬೀದರ್ ಜಿಲ್ಲೆ. ಇಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಕಾರ್ಯಗಳಾಗಿವೆ. ಕೇಂದ್ರ ಸರ್ಕಾರ ಮತ್ತು ಯೂನಿಸೆಫ್‌ನಿಂದ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಅಭಿವೃದ್ಧಿ ಕೆಲಸಕಾರ್ಯಗಳಿಗೋಸ್ಕರ ಹಣ ಬರುತ್ತಿದೆ. ಯೂನಿಸೆಫ್‌ನವರು ೮ ಜಿಲ್ಲೆಗಳಲ್ಲಿ ತಮ್ಮ ಕಾರ್ಯ ವ್ಯಾಪ್ತಿಯನ್ನು ಇಟ್ಟುಕೊಂಡಿದ್ದಾರೆ. ಇಲ್ಲಿ ಒಂದು ಉಗ್ರಾಣವನ್ನು ಕಟ್ಟಲು ಹಣ ಮಂಜೂರಾಗಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಇದು ಮಂಜೂರಾಗಿರತಕ್ಕ ಯೋಜನೆ. ಇದೇರೀತಿ ರಾಜ್ಯದ ವಿವಿಧ ಜಿಲ್ಲೆಗಳಲ್ಲೂ ಇಂಥಉಗ್ರಾಣಗಳನ್ನು ಕಟ್ಟಬೇಕೆಂದು ನಾನುಹೇಳುತ್ತಿದ್ದೇನೆ.

ಉಗ್ರಾಣವನ್ನು ಕಟ್ಟಲು ಜಾಗವನ್ನು ತೆಗೆದುಕೊಳ್ಳಲಾಗಿದೆಯೆಂದು ಹೇಳಿದ್ದಾರೆಯೇ ಹೊರತು ಇದಕ್ಕಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ ಎಂಬುದನ್ನು ಈ ವರದಿಯಲ್ಲಿ ಎಲ್ಲೂ ಕೂಡ ಹೇಳಿಲ್ಲ. ಆದರೂ ಪರವಾಗಿಲ್ಲ, ಈ ಯೋಜನೆಯನ್ನು ಕಾರ್ಯಗತ ಮಾಡಿದರೆ ತುಂಬಾ ಸಂತೋಷ. ಬೆಂಗಳೂರಿನಂಥ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವೇರ್ ಹೌಸ್‌ನ್ನು ಕಟ್ಟಲು ಜಾಗ ಬೇಕಾದರೆ ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರನ್ನು ಕೇಳಿದರೆ ಒದಗಿಸಿಕೊಡುತ್ತಾರೆಂದು ಹೇಳಬಯಸುತ್ತೇನೆ.

ಇನ್ನು ಮಹಿಳಾ ಮಂಡಲಗಳ ಬಗ್ಗೆ ಹೇಳುವುದಾದರೆ, ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಈ ಮಹಿಳಾ ಮಂಡಲಗಳನ್ನು ತೆರೆಯುವ ಪ್ರಯತ್ನ ಮಾಡಬೇಕು. ಇಲ್ಲಿ ಏನು ವಿಚಿತ್ರ ಎಂದರೆ ಸೆಕ್ಷನ್ ೭೪ರ ಪ್ರಕಾರ ಮಹಿಳಾ ಮಂಡಲಗಳನ್ನು ರಿಜಿಸ್ಟರ್ ಮಾಡುವ ಸಂದರ್ಭದಲ್ಲಿ ಆಡಿಟೆಡ್ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಇರಬೇಕು, ಫೈನಾನ್ಸಿಯಲ್ ಇಯರ್‌ನ್ನು ಏಪ್ರಿಲ್ ೧ನೇ ತಾರೀಖಿನಿಂದ ಮಾರ್ಚಿ ತಿಂಗಳ ಅಂತ್ಯದವರೆಗೆ ಎಂದು ಮಾಡುವುದಕ್ಕೆ ಬದಲಾಗಿ ಜನವರಿ ತಿಂಗಳಿಂದ ಡಿಸೆಂಬರ್ ತಿಂಗಳ ಅಂತ್ಯದವರೆಗೆ ಎಂದು ಮಾಡುತ್ತಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಏಪ್ರಿಲ್ ತಿಂಗಳಿಂದ ಮಾರ್ಚಿ ತಿಂಗಳ ಅಂತ್ಯದವರೆಗೆ ಎಂದು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಇದು ಫೈನಾಷಿಯಲ್ ಇಯರ್ ಆದ್ದರಿಂದ ಆಡಿಟ್ ಮಾಡುವುದಕ್ಕೂ ಅನುಕೂಲವಾಗುತ್ತದೆ. ಗ್ರಾಂಟ್‌ನ್ನು ರಿಲೀಸ್ ಮಾಡುವುದು ಕೂಡ ೩೧ನೇ ಏಪ್ರಿಲ್‌ಗೆ ಮಾಡುತ್ತಾರೆ. ಇದರಿಂದ ತುಂಬಾ ತೊಂದರೆ ಯಾಗುತ್ತದೆ. ಆದ್ದರಿಂದ ಇನ್ನು ಮುಂದೆ ಈ ರೀತಿ ತೊಂದರೆಗಳು ಆಗದಂತೆ ಸಂಬಂಧಪಟ್ಟವರಿಗೆ ಮಾನ್ಯ ಸಚಿವರು ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ, ಮತ್ತು ಫೈನಾನ್ಷಿಯಲ್ ಇಯರ್‌ನ್ನು ಏಪ್ರಿಲ್ ೧ ರಿಂದ ಮಾರ್ಚಿ ತಿಂಗಳವರೆಗೆ ಎಂದು ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಎಸ್. ಸಿ. ಎಸ್. ಟಿ. ಹಾಸ್ಟೆಲ್ ವಿಚಾರದಲ್ಲಿ ಮಾನ್ಯ ಸದಸ್ಯರು ಅನೇಕರು ಸಾಕಷ್ಟು ವಿಷಯಗಳನ್ನು ಮಾತಾನಾಡಿದ್ದಾರೆ. ಪ್ರತಿವರ್ಷವೂ ಈ ವರ್ಗದ ಮಕ್ಕಳು ಶಾಲೆಗಳಿಗೆ ಸೇರುವಾಗ, ಹಾಸ್ಟೆಲ್‌ಗಳಿಗೆ ಸೇರುವಾಗ ಮತ್ತಿತರ ಯಾವುದೇ ಸಂದರ್ಭದಲ್ಲಾಗಲಿ ಸರ್ಟಿಫಿಕೇಟ್‌ಗಳನ್ನು ತರಬೇಕಾದರೆ ತಹಸೀಲ್ದಾರ್‌ರವರ ಕಛೇರಿಗೆ ಅಲೆದಾಡಬೇಕಾಗುತ್ತದೆ. ಆದ್ದರಿಂದ ನಾನಾದರೂ ಹೇಳುವುದೇನೆಂದರೆ, ಪ್ರತಿವರ್ಷವೂ ಅವರಿಗೆ ಆಗುತ್ತಿರುವ ಈ ತೊಂದರೆಗಳನ್ನು ತಪ್ಪಿಸಲು ಬ್ಯಾಂಕ್‌ನ ಪಾಸ್ ಪುಸ್ತಕದ ರೂಪದಲ್ಲಿ ಇವರಿಗೂ ಕೂಡ ಒಂದು ಸಣ್ಣ ಪುಸ್ತಕವನ್ನು ಕೊಟ್ಟು ಅದನ್ನು ೫ ವರ್ಷ ಗಳವರೆಗೂ ಉಪಯೋಗಿಸಿಕೊಳ್ಳುವಂತೆ ವ್ಯವಸ್ಥೆ ಮಾಡಬೇಕು. ಈ ರೀತಿ ಮಾಡುವುದರಿಂದ ಅವರಿಗೆ ಬಹಳಷ್ಟು ಅನುಕೂಲವನ್ನು ಮಾಡಿಕೊಟ್ಟಂತಾಗುತ್ತದೆ.........

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ನಾವು ಈ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ತಾವು ಈಗಾಗಲೇ ಈ ಪದ್ಧತಿಯನ್ನು ಜಾರಿಗೆ ತಂದಿರುವುದಾಗಿ ಹೇಳುತ್ತಿರುವುದರಿಂದ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಆದರೆ ಈ ಮಕ್ಕಳಿಗಾಗಿ ಇರತಕ್ಕ ಹಾಸ್ಟೆಲ್‌ಗಳಲ್ಲಿ ಯಾವ ರೀತಿ ನಡೆಯುತ್ತಿದೆ ? ಅಲ್ಲಿ ಊಟ ಸರಿಯಾಗಿ ಹಾಕು ತ್ತಿದ್ದಾರೆಯೆ ? ಮಲಗಲು ಸರಿಯಾದ ವ್ಯವಸ್ಥೆ ಇದೆಯೆ ? ಅವರ ಆರೋಗ್ಯವನ್ನು ನೋಡಿ ಏನಾದರೂ ವ್ಯವಸ್ಥೆ ಮಾಡಲಾಗಿದೆಯೆ ? ಇನ್ನೂ ಮುಂತಾದ ವಿಷಯಗಳನ್ನು ನೋಡಿಕೊಳ್ಳಲು ಯಾವ ಅಧಿಕಾರಿಯೂ ಹೋಗುತ್ತಿಲ್ಲ. ಈ ವಿಚಾರದಲ್ಲಿ ನನಗೆ ಬಹಳಷ್ಟು ದೂರುಗಳು ಬಂದಿವೆ. ಆದ್ದರಿಂದ ಮಾನ್ಯ ಮಂತ್ರಿಯವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ನೀಡಿ ಇನ್ನು ಮುಂದೆ ಈ ರೀತಿಯ ತೊಂದರೆಗಳು ಆ ಬಡ ಮಕ್ಕಳಿಗೆ ಆಗದಂತೆ ನೋಡಿಕೊಳ್ಳ ಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಅತಿ ಮುಖ್ಯವಾದ ವಿಚಾರ ಎಂದರೆ, ಈ ಇಲಾಖೆಯಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳಿಗೆ ಕನ್ನಡ ಬರಬೇಕು. ಏಕೆಂದರೆ ಬಹಳ ಜನರು ಹಳ್ಳಿಗಳಿಂದ ಪತ್ರಗಳನ್ನು ಬರೆಯುತ್ತಾರೆ. ಆದರೆ ಅವರಿಗೆ ಈ ಅಧಿಕಾರಿಗಳು ಇಂಗ್ಲೀಷ್‌ನಲ್ಲಿ ಉತ್ತರವನ್ನು ಬರೆದರೆ ಅವರು ಹೇಗೆ ಅರ್ಥಮಾಡಿಕೊಳ್ಳಬೇಕು ? ಆದ್ದರಿಂದ ಆ ಹಳ್ಳಿಯ ಜನರಿಗೆ ಸುಲಭವಾಗಿ ತಿಳಿಯುವಂಥ ಕನ್ನಡದಲ್ಲೇ ಪತ್ರಗಳನ್ನು ಬರೆಯುವಂತೆ ತಿಳಿಸಬೇಕು, ಮತ್ತು ಕನ್ನಡ ಬರತಕ್ಕ ಅಧಿಕಾರಿಗಳನ್ನೇ ಅಲ್ಲಿಗೆ ವರ್ಗಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಕ್ಕಳ ಕಲ್ಯಾಣಕ್ಕೋಸ್ಕರ ಮೈಸೂರು, ಮಂಗಳೂರು, ಮುಂತಾದ ಸುಮಾರು ೮–೯ ಜಿಲ್ಲೆಗಳಲ್ಲಿ ಮಾತ್ರ ಬಾಲಭವನಗಳನ್ನು ನಿರ್ಮಾಣ ಮಾಡಿದ್ದೀರಿ. ಇದು ಸಾಲದು. ಬೇರೆ ಕ್ಷೇತ್ರ ಗಳಲ್ಲಿರತಕ್ಕ ಮಕ್ಕಳಿಗೆ ಈ ಸೌಲಭ್ಯಗಳಿಲ್ಲ. ಅವರಿಗೆ ರೈಲು ಹೇಗಿರುತ್ತದೆ ಎಂಬುದೂ ಕೂಡ ಗೊತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ದಿಸೆಯಲ್ಲಿ ಹೆಚ್ಚು ಗಮನವನ್ನು ಹರಿಸಿ ಬಾಲಭವನಗಳನ್ನು

ನಿರ್ಮಾಣ ಮಾಡಿಸಲು ಕ್ರಮ ಕೈಗೊಳ್ಳಬೇಕು. ಹಳ್ಳಿಗಾಡಿಗೆ ಹೋಗಿ ಅಲ್ಲಿನ ಮಕ್ಕಳನ್ನು ನಾವು ನೋಡಿದರೆ ಒಂದು ರೀತಿಯ ಕನಿಕರ ಬರುತ್ತದೆ. ಅವರಿಗೆ ಯಾವುದೇ ರೀತಿಯ ಸೌಕರ್ಯವಾಗಲಿ, ಮನರಂಜನೆಯಾಗಲಿ ಇಲ್ಲ. ಮಾನ್ಯ ಮಹಿಳಾ ಸಚಿವರು ಹೇಳಿದರು, ಬಾಲಭವನಗಳನ್ನು ಹಳ್ಳಿಗಳಲ್ಲೂ ಮಾಡೋಣ ಎಂದು. ಇದನ್ನೆಲ್ಲಾ ಇವರು ಯಾವಾಗ ಮಾಡುತ್ತಾರೋ ಗೊತ್ತಿಲ್ಲ. ಈ ವರ್ಷ ಕೆಲವಾರು ಹಳ್ಳಿಗಳನ್ನಾದರೂ ತೆಗೆದುಕೊಂಡು ಅಲ್ಲಿ ಈ ಭಾಲಭವನಗಳನ್ನು ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾರ್ಮಿಕರ ಸಂಘಟನೆಯ ಬಗ್ಗೆ ಹೇಳುವುದಾದರೆ, ಅನೇಕ ಕಾರ್ಖಾನೆಗಳ ಸಂಘ ಸಂಸ್ಥೆಗಳಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಕಾರ್ಮಿಕರ ಬಗ್ಗೆ ಬಹಳವಾಗಿ ಮಾತನಾಡಿದರು. ಆದರೆ ಮಹಿಳಾ ಕಾರ್ಮಿಕರ ಬಗ್ಗೆ ಒಂದೇ ಒಂದು ಮಾತನ್ನೂ ಕೂಡ ಮಾತನಾಡಲಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಪಬ್ಲಿಕ್ ಸೆಕ್ಟರ್ ಮತ್ತು ಪ್ರೈವೇಟ್ ಸೆಕ್ಟರ್‌ಗಳಲ್ಲಿಯೂ ಹೆಣ್ಣುಮಕ್ಕಳು ಕೆಲಸಕ್ಕೆ ಹೋದರೆ ಅವರನ್ನು ತೆಗೆದುಕೊಳ್ಳುವುದಿಲ್ಲವೆಂದು ಕೇಳಿಬರುತ್ತಿದೆ ಅದೇ ರೀತಿ ಮನೆಗಳನ್ನು ಕಟ್ಟತಕ್ಕ ಡ್ಯಾಂಗಳನ್ನು ಕಟ್ಟತಕ್ಕ ಕಂಟ್ರಾಕ್ಟರ್‌ಗಳ ಹತ್ತಿರ ಹೋಗಿ ಕೆಲಸವನ್ನು ಕೇಳಿದರೆ ಕೊಡುವುದಿಲ್ಲವೆಂದು ಹೇಳುತ್ತಾರೆಂದು ತಿಳಿದುಬಂದಿದೆ. ಇದಕ್ಕೆ ಕಾರಣ ಕೇಳಿದರೆ, ಮಹಿಳೆಯರು ಮಕ್ಕಳನ್ನು ಹೆತ್ತರೆ ಅವರು ಕೆಲಸಕ್ಕೆ ಬರುವುದಿಲ್ಲ, ನಮಗೆ ತೊಂದರೆಯಾಗುತ್ತದೆಂದು ಹೇಳುತ್ತಾರೆ, ಈ ರೀತಿಯ ಭಾವನೆ ಅವರಿಗೆ ಬರುವುದು ಸರಿಯಲ್ಲ. ಇದು ಹೋಗಬೇಕು. ಗಂಡಸಿನಷ್ಟೇ ಕೆಲಸವನ್ನು ಮಾಡತಕ್ಕ ಮಹಿಳೆಯರಿಗೂ ಕೆಲಸವನ್ನು ಕೊಡಬೇಕು. ಯಾವುದೇ ಕೆಲಸವನ್ನಾಗಲಿ ಮಾಡಲು ಮಹಿಳೆಯರಿಗೆ ಶಕ್ತಿ ಇಲ್ಲದಿದ್ದರೆ ಅಂಥ ಕೆಲಸವನ್ನು ಇವರಿಗೆ ಕೊಡುವುದು ಬೇಡ. ಇದೇ ರೀತಿ ಕಾರ್ಮಿಕರಿಗೂ ಕೂಡ ಕೂಲಿ ಕೊಡುವುದರಲ್ಲಿ ಮಹಿಳೆಯರಿಗೇ ಒಂದು ರೀತಿಯ ಕೂಲಿ, ಗಂಡಸರಿಗೇ ಒಂದು ರೀತಿಯ ಕೂಲಿಯನ್ನು ಕೊಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಮನೆಗಳನ್ನು ಕಟ್ಟುವ ಕಡೆಗಳಲ್ಲಿ ಗಂಡು ಕಾರ್ಮಿಕನಿಗೆ ೧೫ ರೂಪಾಯಿ ಕೂಲಿ ಕೊಟ್ಟರೆ, ಹೆಣ್ಣು ಕಾರ್ಮಿಕಳಿಗೆ ೭–೮ ರೂಪಾಯಿ ಕೊಡುತ್ತಾರೆ. ಗಂಡಸು ತನ್ನ ತಲೆಯಮೇಲೆ ೧೨ ಇಟ್ಟಿಗೆಗಳನ್ನು ಹೊತ್ತುಕೊಂಡು ಹೋಗುವಂತೆಯೇ ಹೆಂಗಸರೂ ಕೂಡ ತಮ್ಮ ತಲೆಯಮೇಲೆ ೧೨ ಇಟ್ಟಿಗೆಗಳನ್ನು ಹೊತ್ತುಕೊಂಡು ಹೋಗುತ್ತಾರೆ. ಅಂದಮೇಲೆ ಇವರಿಬ್ಬರಲ್ಲಿ ಮಾಡತಕ್ಕ ಕೆಲಸದಲ್ಲಿ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಆದರೂ ಕೂಡ ಕೂಲಿ ಹಣವನ್ನು ಕೊಡುವ ಸಂದರ್ಭದಲ್ಲಿ ಬಹಳ ವ್ಯತ್ಯಾಸ ಮಾಡುತ್ತಾರೆ. ನಾನು ಒಂದು ಸಾರಿ ಒಬ್ಬ ಕಂಟ್ರಾಕ್ಟರ್‌ನ್ನು ಕೇಳಿದೆ: ಮನೆ ಕಟ್ಟುವ ಕೆಲಸದಲ್ಲಿ ಗಂಡಸು ಎಷ್ಟು ಕೆಲಸವನ್ನು ಮಾಡುತ್ತಾನೋ ಅಷ್ಟೇ ಕೆಲಸವನ್ನು ಈ ಹೆಂಗಸೂ ಮಾಡುತ್ತಾಳೆ. ಹಾಗಿದ್ದರೂ ಕೂಡ ಈ ರೀತಿ ಕೂಲಿಯಲ್ಲಿ ತಾರತಮ್ಯವನ್ನು ಏತಕ್ಕೆ ಮಾಡುತ್ತೀರಿ ? ಅವನಿಗೆ ೧೫ ರೂಪಾಯಿ ಕೂಲಿ ಕೊಟ್ಟರೆ ಇವಳಿಗೆ ೮ ರೂಪಾಯಿಗಳನ್ನು ಏತಕ್ಕೆ ಕೊಡುತ್ತೀರಿ ಎಂದು ಕೇಳಿದಾಗ ಅವನು ಹೇಳಿದ್ದು ಏನೆಂದರೆ, ಹೆಣ್ಣುಮಕ್ಕಳಾದರೆ ತಮ್ಮ ಮಕ್ಕಳಿಗೆ ಹಾಲು ಕುಡಿಸುವುದಕ್ಕೆ ಎಂದು ಆರೇಳು ಸಾರಿ ಹೋಗುತ್ತಾರೆ. ಈ ರೀತಿ ಹೋಗುವುದರಿಂದ ನಮಗೆ ಕೆಲಸಕ್ಕೆ ತೊಂದರೆಯಾಗುತ್ತದೆ, ಎಂದು ಹೇಳಿದ. ಆಗ ನಾನು ಆತನನ್ನು ಕೇಳಿದೆ. ಹೆಂಗಸರು ಮಕ್ಕಳಿಗೆ ಹಾಲು ಕುಡಿಸುತ್ತೇವೆಂದು ಹೋಗುತ್ತಾರೆ, ಗಂಡಸರಾದರೆ ಬೀಡಿ, ಸಿಗರೇಟು ಸೇದುವುದಕ್ಕೆ ಹೋಗುವುದಿಲ್ಲವೇ ? ಅದರಿಂದ ನಿಮಗೆ ಕೆಲಸಕ್ಕೆ ತೊಂದರೆಯಾಗುವುದಿಲ್ಲವೇ ? ಎಂದು. ಆದ್ದರಿಂದ, ನಾನಾದರೂ ಹೇಳುವುದು ಏನೆಂದರೆ, ಗಂಡಸರು ತಲೆಮೇಲೆ ಎಷ್ಟು ಇಟ್ಟಿಗೆಗಳನ್ನು ಹೊರುತ್ತಾರೋ, ಅಷ್ಟೇ ಇಟ್ಟಿಗೆಗಳನ್ನು ಈ ಮಹಿಳೆ ಹೊತ್ತರೂ ಕೂಡ ಕೂಲಿ ಕೊಡುವುದರಲ್ಲಿ ಗಂಡಸರಿಗೆ ಒಂದು ರೀತಿ, ಹೆಂಗಸರಿಗೆ ಒಂದು ರೀತಿ ಅನುಸರಿಸುವುದು ಸರಿಯಲ್ಲ. ಈ ತಾರತಮ್ಯ ಹೋಗಬೇಕು.

ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರವನ್ನು ಹೇಳುವುದಾದರೆ. ಇವೊತ್ತು ಚಿಕ್ಕಮಕ್ಕಳ ಕಲ್ಯಾಣದ ಬಗ್ಗೆ ಯಾರೂ ಕೂಡ ಇದುವರೆಗೆ ಮಾತನಾಡಿದ ಸದಸ್ಯರು ಪ್ರಸ್ತಾಪವನ್ನು ಮಾಡಲಿಲ್ಲ. ಸಾಮಾನ್ಯವಾಗಿ ಚಿಕ್ಕಮಕ್ಕಳು ಎಂದರೆ, ೮ ರಿಂದ ೧೮ ವರ್ಷದೊಳಗೆ ಇರತಕ್ಕಂತಹವರು ಹೊಲಗಳಲ್ಲಿ ಕೆಲಸ ಮಾಡುತ್ತಾರೆ. ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಾರೆ. ಅವರು ಚಿಕ್ಕಮಕ್ಕಳು ಆಗಿದ್ದು, ಬಹಳಷ್ಟು ಕಷ್ಟಪಟ್ಟು ಕೆಲಸ ಮಾಡಿದರೂ ಅವರಿಗೆ ಸರಿಯಾಗಿ ಕೂಲಿಯನ್ನು ಕೊಡುತ್ತಿಲ್ಲ. ಈ ಮಕ್ಕಳಿಂದ ಕೆಲಸವನ್ನು ತೆಗೆದುಕೊಳ್ಳುವವರು ಸರಿಯಾದ ಕೂಲಿಯನ್ನು ಕೊಡದೇ ತುಂಬಾ ಅನ್ಯಾಯ ಮಾಡುತ್ತಿದ್ದಾರೆ.

೪-೩೦ ಪಿ. ಎಂ.

ಇಷ್ಟೊಂದು ಬೃಹದಾಕಾರವಾಗಿ ನಿರುದ್ಯೋಗಿಗಳು ಇದ್ದರೂ ಕೂಡ ಈ ನಿರುದ್ಯೋಗಿಗಳನ್ನು ಏತಕ್ಕೆ ಅಪಾಯಿಂಟ್ ಮಾಡುವುದಿಲ್ಲ. ಮಕ್ಕಳನ್ನೇ ಏತಕ್ಕೆ ಅಪಾಯಿಂಟ್ ಮಾಡುತ್ತೀರಿ Even regcognised public and private ಕಾರ್ಖಾನೆಗಳಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನೇ ಏತಕ್ಕೆ ಅಪಾಯಿಂಟ್ ಮಾಡುತ್ತಾರೆಂದರೆ ಅವರಿಗೆ ಕೂಲಿ ಕಡಿಮೆ, ಕೆಲಸ ಜಾಸ್ತಿ ತೆಗೆಸಿಕೊಳ್ಳಬಹುದು ಎಂದು ಅವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ. ಆದುದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಚೈಲ್ಡ್ ಲೇಬರ್‌ರ್ಸ್ ಬಗ್ಗೆ ಒಂದು ಶಾಸನ ತಂದು ಆ ಕೆಲಸಕ್ಕೆ ಅವರನ್ನು ತೆಗೆದುಕೊಳ್ಳಬಾರದು ಎಂದು ಮಾಡಿ, ಒಂದುವೇಳೆ ಅವರನ್ನು ಕೆಲಸಕ್ಕೆ ತೆಗೆದುಕೊಂಡರೆ ಇಷ್ಟು ದಂಡ ಹಾಕುತ್ತೇವೆ ಎಂದಾದರೂ ಮಾಡಿದರೆ ಆಗ ಸರಿಹೋಗಬಹುದು. ತಮಗೆ ಹೇಳಬೇಕಾದರೆ ೧೨-೧೩ ವರ್ಷದ ಮಕ್ಕಳು ದುಡಿಯದೇ ಹೋದರೆ ಅವರು ಆ ದಿವಸ ಉಪವಾಸ ಇರಬೇಕಾದ ಸಂದರ್ಭ ಇದೆ. ವಿಧಿ ಇಲ್ಲದೆ ಅವರು ಆ ಕೆಲಸಕ್ಕೆ ಹೋಗಬೇಕಾಗುತ್ತದೆ. ಆದುದರಿಂದ ಆ ಮಕ್ಕಳಿಗೆ ಪ್ರೊಟೆಕ್ಷನ್ ಕೊಡುವ ಹಾಗೆ ತಕ್ಕ ಫೆಶಲಿಟೀಸ್ ಕೊಡುವ ಹಾಗೆ ಒಂದು ತಿದ್ದುಪಡಿ ತರಬೇಕು ಎಂದು ಹೇಳುತ್ತೇನೆ. ಜೊತೆಗೆ ಆ ಮಕ್ಕಳಿಗೆ ವಿದ್ಯಾಭ್ಯಾಸವನ್ನೂ ಸಹ ಕೊಡುವ ಹಾಗೆ ಮಾಡಬೇಕು. ಲೇಬರ್ ಆಕ್ಟ್‌ನಲ್ಲಿ ಈ ಒಂದು ತಿದ್ದುಪಡಿ ತರಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಶ್ರೀ ಲಕ್ಷ್ಮೀಸಾಗರ್‌ರವರ ಗಮನಕ್ಕೆ ತಂದಾಗ ಇದು ಸೆಂಟ್ರಲ್ ಆಕ್ಟ್, ಈ ಲೇಬರ್ ಆಕ್ಟ್‌ನ್ನು ಅವರೇ ಮಾಡಬೇಕಾಗಿರುವುದರಿಂದ ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇವೆಂದು ಹೇಳಿದರು.

ಶ್ರೀ ಕೆ. ಹೆಚ್. ಪಾಟೀಲ್.—ಈಗಾಗಲೇ ಇದರ ಬಗ್ಗೆ ಆಕ್ಟ್ ಇದೆ. ಆದರೆ ಇದನ್ನು ಇಂಪ್ಲಿಮೆಂಟ್ ಮಾಡುವವರು ರಾಜ್ಯ ಸರ್ಕಾರದವರು. ರಾಜ್ಯ ಸರ್ಕಾರದವರು ಒಬ್ಬ ಹೆಣ್ಣುಮಗಳಿಗೆ ಮಾತ್ರ ಆ ಸ್ಥಾನ ಕೊಟ್ಟು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರನ್ನು ಏತಕ್ಕೆ ಅಲ್ಲಿ ಬಿಡಬೇಕಾಗಿತ್ತು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಆ ಮಾತು ನೀವು ಹೇಳಬೇಡಿ, ಕೆಲಸ ಚೆನ್ನಾಗಿ ನಡೆಯುತ್ತಾ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ಹಾಗಿದ್ದರೆ ಬೇಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಈ ಲೇಬರ್ ಆಕ್ಟ್ ಬಗ್ಗೆ ಒಂದು ತಿದ್ದುಪಡಿ ತಂದರೆ ಆ ಚಿಕ್ಕಮಕ್ಕಳಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಸಾಧ್ಯವಾದಷ್ಟು ಬೇಗನೆ ಈ ತಿದ್ದುಪಡಿ ಬರಬೇಕು ಎಂದು ಹೇಳುತ್ತೇನೆ

ಇನ್ನು ಕೊನೆಯದಾಗಿ, ಗ್ರಾಂಟ್ ಪಾಲಿಸಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ಎಷ್ಟೋ ಇನ್ಸ್ಟಿಟ್ಯೂಷನ್ಸ್‌ಗಳಿಗೆ ಗ್ರಾಂಟ್ ಕೊಡುತ್ತಿದ್ದೀರಿ. ಈ ಬಗ್ಗೆ ನನ್ನ ಅಭಿಪ್ರಾಯ ಹೇಳುವುದಾದರೆ ಒಂದು ಇನ್ಸ್ಟಿಟ್ಯೂಷನ್‌ಗೆ ಗ್ರಾಂಟ್ ಕೊಟ್ಟಮೇಲೆ ೨೦ ವರ್ಷದವರೆಗೂ ಅಥವಾ ನಿರಂತರವಾಗಿ ಗ್ರಾಂಟ್ ಕೊಡುವುದು ಸರಿಯಲ್ಲ. ಅವು ಗ್ರಾಂಟ್ ತೆಗೆದುಕೊಂಡ ಮೇಲೆ ಸ್ವಲ್ಪ ಕಾಲದ ವರೆಗೆ ಹತ್ತು ವರ್ಷ ಗ್ರಾಂಟ್ ಕೊಟ್ಟಾದ ಮೇಲೆ ತಮ್ಮ ಸ್ವಂತ ಕಾಲಮೇಲೆ ನಿಂತುಕೊಳ್ಳಬೇಕು. ಆಗ ಅದೇ ಗ್ರಾಂಟನ್ನು ಹೊಸ ಇನ್ಸ್ಟಿಟ್ಯೂಷನ್ಸ್‌ಗಳು ಯಾವುದಾದರೂ ಇದ್ದರೆ ಆ ಹಣವನ್ನು ಬೇರೆ ಕಡೆಗೆ ಎಂದರೆ ಹೊಸ ಇನ್ಸಿಟ್ಯೂಷನ್ಸ್ ಕಡೆಗೆ ಡೈವರ್ಟ್ ಮಾಡಬೇಕು. ಹಾಗಾದರೆ ಹೊಸ ಹೊಸ ಇನ್ಸ್ಟಿಟ್ಯೂಷನ್ಸ್‌ಗಳಿಗೆ ಒಂದು ರೀತಿಯಲ್ಲಿ ಎನ್‌ಕರೇಜ್ ಕೂಡ ಆಗುತ್ತದೆ, ಹೊಸ ಹೊಸ ಸಂಸ್ಥೆಗಳೂ ಸಹ ಚೆನ್ನಾಗಿ ಬೆಳೆಯುತ್ತವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಯೋಚನೆ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಇವೊತ್ತಿನ ದಿವಸ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರದವರಾಗಲಿ ಅಥವಾ ರಾಜ್ಯ ಸರ್ಕಾರದವರಾಗಲಿ ಇವರು ಎನ್‌ಮಾರ್ಕ್ ಮಾಡಿ ಇಟ್ಟಿದ್ದಾರೆ. ಅದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾಗಿದೆ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಒಂದು ವೇಳೆ ಇದಕ್ಕೆ ಕೊಟ್ಟಿರುವ ಹಣವನ್ನು ಯಾರಾದರೂ ಸಹ ದುರುಪಯೋಗ ಮಾಡಿಕೊಂಡರೆ ಅವರು ಪಾಪಕ್ಕೆ ಹೋಗುತ್ತಾರೆ. ಅಲ್ಲದೆ ಅವರ ಮನೆತನಕ್ಕೆ ಒಳ್ಳೆಯದಾಗುವುದಿಲ್ಲ. ಅವರು ಇದನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ಇದು ಒಳ್ಳೆಯ ಇಲಾಖೆ. ಈ ಇಲಾಖೆಯಲ್ಲಿ ಒಳ್ಳೆಯ ಜನರು ಇದ್ದಾರೆ. ಇದರಲ್ಲಿ ಒಳ್ಳೊಳ್ಳೆಯ ಕಾರ್ಯಗಳನ್ನು ಕೈಗೊಳ್ಳುತ್ತಾರೆಂದು ನಾನು ಆಶಿಸಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SMT. MUKTHARUNNISA(Narasimharaja).—Mr. speaker Sir, I am very thankfull to you for having given me an opportunity to speak on the demands pertaining to woman and children welfare. The world is progrssing is all fields like science, eduation, culture and etc., etc., the woman folk is also contributing their service along with the men in India in general, and Karnataka in particular. The woman are not given proper encouragement by men. Women are in no way inferior or behind men in field of progress and development. After independence women are playing a major role in all activities of life. women have also occupied highest posts in KAS IAS, IPS and other civil services. The international women year was also organised to promote the cause of women. In Karnataka the women have not given due encouragement and lift, there by they are still remaining as backwords.

Now I come to distribution of sarees and the programme of Talibhagya launched by the Govenment of Karnataka. Actually the Tali or the Mangalasutra is given to men but not to women. How can you say this programme is launched for the upliftment of the women ? Though women population in Karnataka is 52% they are not given due share in the development along with men. Therefore, I would request and suggest to create a separate *autonomous* body for the development of women folk. Women enterpreneus are not encouraged, they do not get loans from the Nationalised banks easilly; they do not get subsidy for small scale industries. The rate of interest should be less than what they charge to men. They are not doing such help to women organisation. Even KSFC is not encouraging women organisation. The Central Government is granting 75%grant for the construction of working women hostel for providing training to women and also for providing shelter, guidance and support to women. But, most of the womenflock do not know these schemes because there is no prope rguidance or propaganda with regard to it. Therefore, I request the information Minister to give wide publiclty though TV, AIR and other media. Due to lack of education, women are remaining backward. Every year grant is lapsed. If the details of the scheme are know women will approach the concerned and utilise the grant given by the Government of India. But, they do not know the details of it. Therefore, they should be given wide publicity to educate womenfolk.

Now I come to Mahila Co-operative Societies. Co-operative Societies and fair price shops may also be sanctioned and alloted to women given maximum finance help as the women are know for

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

their integrity and honesty. But, I learn for women societies they have fixed the share c pital as 25,000 rupees as maximum. Why it has happened like that; what is wrong with it? For this meagre share capital also they should come to the Regirstrars office so many times. The maximum share capital given to the women societi s and primary co-operative societes is very meagre and therefore to develop these societies you should enhance the same and encourage them. There are so many complaints against societies, they should be looked into. Some percentage should be earmarked while allotting fairprise shops. There are so many unemployed girls. If the women societies are comming forward to supply provisions, articles of ready made dresses, Govenment uniforms to offic s like Remand houses, shelter houses, State Home, deaf and dumb school etc., etc., genarlly the Woman and Chidran Welfare Department directors the Janatha Bazar to supply these articales. But they should actually encourage woman societies by giving orders to them tosupply these articles. It is their duty to do so. They should give first preference to women societies so that they will be encouraged and their societiess will be developed. If any women society is interested in any district to supply these articles they should be given first preference even if there is janatha bazar. I am sorry and I feel heart that our Women Welfare Department is keeping mum over all these things. Sir. film produccers and advertising agencies are making use of women for their petty gains. Women have become victims. There is something wrong with it. This should be prohibited by the Department. Lady actresses must be awarded. Lady anthors muse be encouraged by giving financial help for publication of their books. Pension also should be given to such outhors. There are so many social workers, educationists, scientists, co-operator, IAS Officers, IPS officers and other outstanding women, they should be encouraged by recognising their services and they should be awarded suitably. Women societies should be givan land and financial helpto construct schools and hostels buildings wherever they come faiword. While allotting sites by the BDA, CITB, Housing Board and other institutions women should be given preferance in general and handicappaed women, destitutes and widows in particular. Sir, last year they have allotted about 400 houses, but how much to the woman do you know? It is only 1 or 2. This is very wrong, at least 25% of the Houses should have been allotted to woman. While allotting seats of technical, medical and other professional courses very poor representation has been given to girls. There is some thing wrong with it. This is very bad. You should give more prefar-

ence to girls particularly to handicapped and poor girls. Let it be on merit only. Here you should see that injustice is rectified and more and more preference given to girls. In other word, girls should get correct quota. This is very much important. Just now my friend the hon. Member Smt. Leeladevi R. Prasad has narrated the stories of dowry deaths and other things. Everyday we see in newspapers that so many women are committing Suicide for the sake of dowry. In this connection, I read in newspapers that there are so many committees formed to enquire into the dowry deaths and enquiry was conducted, penalty was levied and etc., etc., I do not believe in all these things because this a devil. This is not dowry. Do you know what they do in other countries ? They cut hand of people who indulge in this type of ghastly activities. You also impose such severe punishment so that you can eliminate this dowry evil. Every time so many beautiful girls commit sucide due to this bad practice of dowry. Therefore, deterrent and strigent punishment should be imposed on such persons. I don't believe in imposing penalties because they pay Rs. 5,000 or Rs. 10,000 and wash away their hands. But, by doing so can you again bring those girls who have commited suicide, I would like to ask the Minister ? Therefore, very stringent and deterrent punishment should be given to those responsible for dowry deaths. This is must important and I request the Hon'ble Minister to answer this point when he answers tomorrow. Educationists, social workers, co-operators scientists, IAS and IPS officers are also there. In each taluk headquarters a seperate Girls School and Junior College should be opened to avoid co-education in taluks. co-education has given room for many problems. So, you should look after these things also. Hon. Minister should sanction Girls School and College in taluk level. In my opinion the highest qualification is I.A.S and I.P.S So, for that, separate coaching classes should be opened for ladies so as to enable them to appear for I.A.S, I.P.S. and K.A.S. examinations and also sufficient funds should be given for their boarding and lodging facilities. It is unfortunate to say that only a meagre amount is being given as scholarship or stipened to sports woman and they are unable to maintain within that amount. How can you expect any championship in the State when there is no strength of women in sports. You are giving only 50 rupees or 100 rupees which is not sufficient. They cannot get nutritious food out of it. So, I request that they should be given maximum scholarship and stipend.

Then, you have formed so many Committees but uufortunately adequate representation is not given to women. So, I request that women should be nominated in all the Government Committees.

ಶ್ರೀ ಜಿ. ನಾರಾಯಣಕುಮಾರ್.—ಇವರು ಸೊಗಸಾಗಿ ಕನ್ನಡ ಹಾಡು ಹೇಳಿದ್ದರು, ಇವೊತ್ತು ಬರೀ ಇಂಗ್ಲೀಷ್‌ನಲ್ಲೇ ಮಾತನಾಡಿದ್ದಾರೆ.

SRI R. S. NAIK.—Sir, I am on a point of order.

ಅಧ್ಯಕ್ಷರು.—ಶ್ರೀಮತಿ ಬೇಗಮ್‌ರವರು ಮಾತನಾಡುವುದು ಬಿಟ್ಟರೆ ಬೇರೆ ಯಾರೂ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

SMT. MUKHARUNNISSA.—Strict rules should be passed saying that women representatives should be there in all the Government Boards. I appeal to the concerned Minister and the Hon'ble Chief Minister also, he is not present here, to issue strict orders in this behalf. Then I would like to say that both husband and wife should be posted at one place and women should not be posted to a remote and interior places. This is very important.

Another thing is, it is seen in construction of private buildings as well as Government buildings, and cottage industries particularly Agarbathi factories the children who are below 12 years are being employed and they are forced to work through out the day. For a labourer or employee they give 10 rupees but to the children they give only 5 or 6 rupees. I would like to know what the Government or Department has taken action to prevent this child labour. Eventhough they work through out the day they get some nominal wages. They work from morning till evening. Have you sent your Inspector to check the facrories.

I would like to say a few words about the old age pension. what is the meaning of old age pension ? Persons who are above 60 years are eligible for old age pension. They are unable to walk, they are unable to see. But for submitting applications they have to go hundred times to the Tahsildar's office as a result pension has been given to some persons after death. It has happened in Mysore. Pension was sanctioned after her death. What is the use if it is sanctioned after the death ? They have to go to the Tahsildar's office, they have to go to the Revenue Inspector and they have to take the assistance of some brokers also because they don't know how to write and they don't know where to go. When our Government was there the Dy. Commissiner used to go to each locality and they used to sanction the old age pension on the spot. Now what has happened is, years together pension papers are pending. So, I request the Government to look into the matter.

(Sri B. G. Banakar Hon. Speaker in the Chair)

Sir, my last request to the concerned Labour Minister is, many poor people are working in Beedi factories. Poor ladies re also working there. In Mysore in our mohalla majority are beedi workers. Sir, 90% of the workers are suffering from

Tuberculosis, but they are not being treated properly in the Sanitorium. Sir, what is the meaning of sanitoriums. Sir, what is the meaning of sanitoriums I would like to ask your goodself.

5-00 P. M.

Supposing Beedi workers want to admit their family members in the hospitals, they have to move here and there, hundred times and they have to produce so many certificates. They are facing great hardship. The Government should look into this matter to relive them from this hardship. There are many schemes for Housing for the Beediworkers. But they are not implemented House loans and scholarships to the children have not been given to them. I request the Government to look into this matter seriously. With regard to the Scholarships to the children of Beedi workers, the Labour Department has not been sending the prescribed applications forms to the schools in time, as a result of which these children are deprived of their scholarships. These application forms will be sent for few children, whom they like. I request that the Hon'ble Minister should see that the prescribed applications forms for Scholarship are sent to all deserving children within the time, so that they could avail the opportunity. Further, I find that the Government has not opened Beedi Workers Federations at the District/State Level. I request the Hon'ble Minister to establish Beedi Workers' Federation at the Disrict Level for the welfare of the Beedi Workers. I would only submit that the Beedi Workers are suffering to the maximum extent. I would request the Hon'ble Minister to send the Inspector of the Department to examine the sufferings of the ladies, chidren and other people and to redress their grievances. With these words, I thank the Chair, for having given me this opportunity to speak.

† ಶ್ರೀ ಬಿ. ಗುರುಪ್ರಸಾದ್(ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ೧೯೮೫-೮೬ನೇ ಸಾಲಿಗೆ ಸಂಬಂಧಿಸಿದಂತೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಬೇಡಿಕೆಗಳನ್ನು ಮಾನ್ಯ ಮಂತ್ರಿಗಳು ಏನು ಮಂಡಿಸಿದ್ದಾರೆ, ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವಾರು ವಿಚಾರಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತಿದ್ದೇನೆ. ಈ ವರ್ಷದ ಬಜೆಟ್‌ನಲ್ಲಿ ಸುಮಾರು ೩೦ ಕೋಟಿ ರೂಪಾಯಿಗಳನ್ನು ಹರಿಜನ ಮತ್ತು ಗಿರಿಜನರ ಅಭಿವೃದ್ಧಿಗೋಸ್ಕರವಾಗಿ ಇಟ್ಟಿದ್ದಾರೆ. ಇದರಲ್ಲಿ ೧೭೪ ಲಕ್ಷ ರೂಪಾಯಿಗಳನ್ನು ಎಸ್ಟಾಬ್ಲಿಸ್‌ಮೆಂಟ್ ಖರ್ಚಿಗೋಸ್ಕರವಾಗಿ ಇಟ್ಟಿದ್ದಾರೆ. ಈ ಜನರ ವಿದ್ಯಾಭ್ಯಾಸಕ್ಕೋಸ್ಕರವಾಗಿ ೧೫ ಕೋಟಿ ೪೬ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಈ ಜನರ ಎಕನಾಮಿಕ್ ವೆಲ್‌ಫೇರ್‌ಗೋಸ್ಕರವಾಗಿ, ಈ ಜನಾಂಗದ ಲೇಡೀಸ್ ವೆಲ್‌ಫೇರ್‌ಗೋಸ್ಕರವಾಗಿ, ಟ್ರೈನಿಂಗ್ ಸೆಂಟರ್‌ಗಳಿಗಾಗಿ ಮತ್ತು ಸ್ಪೆಷಲ್ ಕಾಂಪೋನೆಂಟ್ ಪ್ಲಾನ್ ಬಗ್ಗೆ ೩ ಕೋಟಿ ೫೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಜನತಾ ಮನೆಗಳಿಗೋಸ್ಕರವಾಗಿ ೮೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಕಟ್ಟಡಗಳಿಗೋಸ್ಕರವಾಗಿ ೧೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಎಸ್.ಟಿ. ವೆಲ್‌ಫೇರ್‌ಗೋಸ್ಕರವಾಗಿ ಎಂದರೆ ಈ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತು ಹಾಸ್ಟೆಲ್ ಖರ್ಚಿಗಾಗಿ ಒಂದು ಕೋಟಿ ೭೬ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಈ ಜನರಿಗೆ ಮನೆಗಳನ್ನು ಕಟ್ಟಿಸಿಕೊಡಲು ಮತ್ತು ಈ ಜನರ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಒದಗಿಸಲು ಟ್ರೈಬಲ್ ಸಬ್ ಪ್ಲಾನ್‌ನಲ್ಲಿ ೬೪ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದೆಲ್ಲಾ ಸೇರಿದರೆ ಒಟ್ಟು ೩೦ ಕೋಟಿ ರೂಪಾಯಿಗಳಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೧೯೮೧ನೇ ಸೆನ್‌ಸಸ್ ಪ್ರಕಾರ ಪರಿಶಿಷ್ಟ ಜಾತಿಯವರು ೫೬ ಲಕ್ಷದಷ್ಟು ಇದ್ದರೆ, ಪರಿಶಿಷ್ಟ ಜನಾಂಗದವರು ೧೮ ಲಕ್ಷದಷ್ಟು ಇದ್ದಾರೆ. ಈ ಕಾರಣದಿಂದ ಈ ಜನರ ಅಭಿವೃದ್ಧಿಗಾಗಿ ಇಟ್ಟಿರುವಂತಹ ೩೦ ಕೋಟಿ ರೂಪಾಯಿಗಳಷ್ಟು ಬಹಳ ಕಡಿಮೆ ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ಕಾರಣದಿಂದ ಇದನ್ನು ೫೦ ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೋಸ್ಕರವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಜನತಾ ಮನೆಗಳನ್ನು ಏನು ಕಟ್ಟಿಸಲಾಗುತ್ತಿದೆ. ಇದರ ಕೆಲಸ ಬಹಳ ಮಂದ ಗತಿಯಲ್ಲಿ ನಡೆಯುತ್ತಿದೆ. ಈ ಕೆಲಸ ಜಾಗ್ರತೆಯಾಗಬೇಕಾದರೆ ಇನ್ಸ್‌ಪೆಕ್ಟಿಂಗ್ ಆಫೀಸರ್‌ಗಳನ್ನು ನೇಮಕ ಮಾಡಬೇಕು. ಈ ಜನತಾ ಮನೆಗಳ ಒಂದು ಪ್ರಯೋಜನಾ ಜಾಗ್ರತೆ ಈ ಜನರಿಗೆ ಸಿಗುವಂತಹ ಒಂದು ಏರ್ಪಾಡು ಮಾಡಬೇಕೆಂದು ಸಮಾಜ ಕಲ್ಯಾಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳು ತಮ್ಮ ಕುಂದುಕೊರತೆಗಳನ್ನು ನಾನು ಅವರ ಹಾಸ್ಟೆಲ್‌ಗಳಿಗೆ ಭೇಟಿಕೊಟ್ಟಿದ್ದ ಸಮಯದಲ್ಲಿ ನನ್ನ ಬಳಿ ಹೇಳಿಕೊಂಡಿದ್ದಾರೆ, ಈಗ ಅದನ್ನು ಮಾನ್ಯ ಸಚಿವರ ಗಮನಕ್ಕೆ ತಮ್ಮ ಮೂಲಕ ತರುತ್ತಿದ್ದೇನೆ. ಈ ವಿದ್ಯಾರ್ಥಿನಿಲಯಗಳಿಗೆ ಇವರು ಪುಸ್ತಕಗಳನ್ನು ಏನು ಸರಬರಾಜು ಮಾಡುತ್ತಿದ್ದಾರೆ, ಅವು ಸರಿಯಾಗಿ ಈ ವಿದ್ಯಾರ್ಥಿಗಳಿಗೆ ಸಿಗುತ್ತಿಲ್ಲವೆಂದು ನನ್ನ ಬಳಿ ಹೇಳಿದ್ದಾರೆ ಈ ವಿದ್ಯಾರ್ಥಿಗಳು ಓದಲು ಹಾಸ್ಟೆಲ್‌ಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ. ಕೆಲವು ಹಾಸ್ಟೆಲ್‌ಗಳಲ್ಲಿ ವಿದ್ಯುತ್ ಸರಬರಾಜು ಇದ್ದರೂ ಸಹ ಬಲ್ಬುಗಳು ಮತ್ತು ಟ್ಯೂಬ್ ಲೈಟ್‌ಗಳು ಇರುವುದಿಲ್ಲ. ಈ ಹಾಸ್ಟೆಲ್‌ಗಳಲ್ಲಿರುವಂತಹ ಬಾತ್ ರೂಮ್‌ಗಳಲ್ಲಿ ಸಹ ದೀಪದ ವ್ಯವಸ್ಥೆಯಿಲ್ಲದ ಕಾರಣ ಎಷ್ಟೋ ಸಲ ವಿದ್ಯಾರ್ಥಿಗಳು ಜಾರಿ ಬಿದ್ದಿದ್ದಾರೆಂದು ನನ್ನ ಬಳಿ ಹೇಳಿದ್ದಾರೆ. ಎಷ್ಟೋ ಬಾತ್ ರೂಮ್‌ಗಳು ಸರಿಯಾಗಿ ರಿಪೇರಿಯಾಗದ ಕಾರಣದಿಂದ ಅಧೋಗತಿಯಲ್ಲಿವೆ. ಒಟ್ಟಿನಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎಂದು ಹೇಳಬಹುದು. ಈ ಹಾಸ್ಟೆಲ್‌ಗಳನ್ನು ನೋಡಿಕೊಳ್ಳುವಂತಹ ವಾರ್ಡನ್‌ಗಳು ಸಹ ಇದರ ಕಡೆಗ ಸರಿಯಾದ ಗಮನ ಕೊಡುತ್ತಿಲ್ಲವೆಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈ ಜನಾಂಗದ ವಿದ್ಯಾರ್ಥಿಗಳಿಗೆಂದು ಇರುವ ಸ್ಕೂಲ್ ಹಾಸ್ಟೆಲ್‌ಗಳಲ್ಲಿ ಮತ್ತು ಕಾಲೇಜ್ ಹಾಸ್ಟೆಲ್‌ಗಳಲ್ಲಿ ಲೈಬ್ರರಿಗಳನ್ನು ನಿರ್ಮಾಣ ಮಾಡಬೇಕೆಂದು ಸರ್ಕಾರ ಆದೇಶ ನೀಡಿದ್ದರೂ ಸಹ ಇಲ್ಲಿಯವರೆಗೆ ಒಂದು ಲೈಬ್ರರಿಯೂ ನಿರ್ಮಾಣವಾಗಿಲ್ಲ ಎಂದು ನನಗೆ ವರದಿ ಬಂದಿದೆ. ಆದ್ದರಿಂದ ಎಲ್ಲಾ ಕಡೆಯೂ ಪುಸ್ತಕ ಭಂಡಾರಗಳನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಇಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಏನು ಸ್ಕಾಲರ್‌ಶಿಪ್‌ಗಳನ್ನು ಕೊಡಲಾಗುತ್ತಿದೆ, ಅದರ ಹಣವನ್ನು ಅಲ್ಲಿನ ಮೇಲ್ವಿಚಾರಕರು ಸರಿಯಾಗಿ ವಿತರಣೆ ಮಾಡುತ್ತಿಲ್ಲ. ಈ ಹಣದ ದುರುಪಯೋಗವಾಗುತ್ತಿದೆ ಎಂಬತಕ್ಕಂಥ ವರದಿ ನನಗೆ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಕಡೆಗೂ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಮೈಸೂರು ಮಹಾನಗರ, ಬೆಂಗಳೂರು ಮಹಾನಗರ, ಹಾಗೂ ಇನ್ನಿತರ ಮಹಾನಗರಗಳಿಗೆ ಈ ಜನಾಗಂದ ವಿಧ್ಯಾರ್ಥಿಗಳು ಹಳ್ಳಿಗಳಿಂದ ಓದಲು ಬರುತ್ತಾರೆ. ಆದರೆ ಪಿ.ಯು.ಸಿ. ಮಟ್ಟದಲ್ಲಿ ಓದಲು ಬರುವಂತ ವಿದ್ಯಾರ್ಥಿಗಳಿಗೆ ಸರಿಯಾದ ವಸತಿ ಸೌಕರ್ಯ ಇಲ್ಲವಾಗಿದೆ. ಈ ಕಾರಣದಿಂದ ಈ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವನ್ನು ಏರ್ಪಾಡು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ತಾಲ್ಲೂಕ್ ಮಟ್ಟದಲ್ಲಿ ಏನು ಹಾಸ್ಟೆಲ್‌ಗಳು ಇವೆ, ಇವುಗಳ ಸಂಖ್ಯೆಯನ್ನು ಪ್ರತಿ ೩ ಕಾಲೇಜ್‌ಗಳಿಗೆ ಒಂದರಂತೆ ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರ ಆರ್ಥಿಕಾಭಿವೃದ್ಧಿಗಾಗಿ ಮತ್ತು ಈ ಜನಾಂಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸರ್ಕಾರದವರು ಇನ್ನೂ ಹೆಚ್ಚಿನ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಕಾರ್ಮಿಕ ಇಲಾಖೆಯ ಬಗ್ಗೆ ಚರ್ಚೆ ಶುರು ಮಾಡುವಾಗ ನಾನು ಹೇಳುವುದೇನೆಂದರೆ, ಈ ಕಾರ್ಮಿಕ ಇಲಾಖೆಗೆ ಸರಿಯಾದ ಸ್ಥಾನಮಾನವನ್ನು ಈ ಸರ್ಕಾರದವರು ಕೊಟ್ಟಿಲ್ಲವೆಂದು ನನಗನಿಸುತ್ತದೆ. ಅದೃಷ್ಟವಶಾತ್ ಈ ಕಾರ್ಮಿಕ ಇಲಾಖೆಗೆ ಕ್ಯಾಬಿನೆಟ್ ದರ್ಜೆಯ ಮಿನಿಸ್ಟರನ್ನು ಕೊಟ್ಟಿದ್ದಾರೆ, ಈ ಮಂತ್ರಿ ಸ್ಥಾನವನ್ನು ಮಾನ್ಯ ಮಂಜುನಾಥ್‌ರವರು ಅಲಂಕರಿಸಿದ್ದಾರೆ. ಇವರು ಇದ್ದರೂ ಕೂಡ ಈ ಕಾರ್ಮಿಕ ಇಲಾಖೆಗೆ ಒಂದು ಸರಿಯಾದ ಸ್ಥಾನಮಾನ ಇಲ್ಲ. ಈ ಇಲಾಖೆಗೆ ಸರಿಯಾದ ಒಂದು ಬಿಲ್ಡಿಂಗ್ ಇಲ್ಲ. ಅಧಿಕಾರ ವರ್ಗ ಕೂಡ ಸರಿಯಾಗಿಲ್ಲ, ನಮ್ಮ ರಾಜ್ಯದಲ್ಲಿ ೪ ಲಕ್ಷ ಕೇಸ್‌ಗಳು ಲೇಬರ್ ಕೋರ್ಟಿನಲ್ಲಿ ಇವೆ, ಬೇಕಾದಷ್ಟು ಕೇಸ್‌ಗಳು ಕನ್‌ಸೀಲಿಯೇಷನ್ ಮಾಡಬಹುದಾಗಿದ್ದರೂ ಯಾವುದನ್ನೂ ಮಾಡದೇ ಹಾಗೆಯೇ ಪೆಂಡಿಂಗ್ ಇಟ್ಟಿದ್ದಾರೆ. ಇದನ್ನು ನೋಡಿದರೆ ಈ ಲೇಬರ್ ಡಿಪಾರ್ಟ್‌ಮೆಂಟ್ ಇದೆಯೋ ಇಲ್ಲವೋ ಎಂದು ಅನುಮಾನ ಬರುತ್ತದೆ. ಮಾನ್ಯ ಮಂತ್ರಿಗಳಾದ ಮಂಜುನಾಥ್‌ರವರು ಈ ಇಲಾಖೆಗೆ ಒಂದು ಒಳ್ಳೆಯ ಸ್ಥಾನ ಮಾನವನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂಧರ್ಭದಲ್ಲಿ ಹೇಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಒಬ್ಬ ಲೇಬರ್ ಆಫೀಸರ್ ಮಾತ್ರ ಇದ್ದಾರೆ ಅಲ್ಲಿ ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಬೇಕು. ಕೋಲಾರ ಜಿಲ್ಲೆಯಲ್ಲಿ ಬೇಕಾದಷ್ಟು ಕೇಸ್‌ಗಳು ಕನ್‌ಸೀಲಿಯೇಷನ್ ಮಾಡಬಹುದು ಆದರೆ ಅದರ ಬಗ್ಗೆ ಯಾವ ಅಧಿಕಾರಿಯೂ ಗಮನ ಕೊಡುತ್ತಿಲ್ಲ ಕೆಲವು ಕನ್‌ಸೀಲಿಯೇಷನ್‌ಗಳು ಬಂಡವಾಳ ಶಾಹಿಗಳ ಪರವಾಗಿಯೇ ಆಗಿ ಕಾರ್ಮಿಕ ವರ್ಗಕ್ಕೆ ಬಹಳ ಅನ್ಯಾಯವಾಗುತ್ತವೆ. ಇಂತಹ ಅನ್ಯಾಯಗಳನ್ನು ತಪ್ಪಿಸುವ ಕಡೆಯೂ ಸಹ ಮಾನ್ಯ ಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕು. ಕೆಲವು ಸಾರಿ ಕಾರ್ಮಿಕರಿಗೂ ಮತ್ತು ಬಂಡವಾಳಶಾಹಿಗಳ ನಡುವೆ ವಿವಾದ ಎದ್ದಾಗ ಸರಿಯಾದ ಸಮಯದಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಭಾಗವಹಿಸದೆ ಆ ವಿವಾದಗಳ ಬಹಳ ದಿನಗಳು ನಡೆದು ಕೊನೆಗೆ ಅವರವರೇ ತೀರ್ಮಾನ ಮಾಡಿಕೊರಡ ಪ್ರಸರಗಗಳೂ ಉಂಟು. ಇನ್ನು ಲೇಬರ್ ಇನ್ಸ್‌ಪೆಕ್ಟರ್‌ಗಳು ಎಂದು ಇದ್ದಾರೆ ಇವರುಗಳು ಅಂಗಡಿಗಳನ್ನು ನೋಡಿ ಕೊಳ್ಳುತ್ತಾರೆ. ಇವರು ಷಾಪಿಂಗ್ ಕಾಂಪ್ಲೆಕ್ಸ್‌ಗಳಲ್ಲಿ ತಿರುಗಾಡಿಕೊಂಡು ಮಾಮೂಲಿ ವಸೂಲಿ ಮಾಡುವುದೇ ಇವರ ಕೆಲಸ. ಇವರು ವಸೂಲಿ ಮಾಡುವ ಹಣದಲ್ಲಿ ದೊಡ್ಡವರಿಗೂ ಹೋಗುತ್ತದೆ ಯೋ ನೋ ಗೊತ್ತಿಲ್ಲ. ಈ ರೀತಿ ಇವರು ಕೆಲಸ ಮಾಡುವುದನ್ನು ಮೊದಲು ತಪ್ಪಿಸಬೇಕು. ಮೂಲ ಭೂತವಾಗಿ ಇವರುಗಳನ್ನು ಯಾವ ಉದ್ದೇಶಕ್ಕೆ ಅಪಾಯಿಂಟ್‌ಮೆಂಟ್ ಮಾಡಿದ್ದಾರೋ ಅದರ ಬಗ್ಗೆ ಈ ಲೇಬರ್ ಇನ್ಸ್‌ಪೆಕ್ಟರುಗಳು ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಕಾರ್ಮಿಕ ಇಲಾಖೆಗೆ ಸರಿಯಾದ ಅಧಿಕಾರವನ್ನು ಕೊಟ್ಟು ಕಾರ್ಮಿಕರಿಗೆ ನ್ಯಾಯ ಸಿಗುವಂತೆ ಮಾಡಬೇಕು. ಈಗ ಕಾರ್ಮಿಕರಿಗೆ ನ್ಯಾಯ ಸಿಗುವಂತೆ ಮಾಡಬೇಕು. ಈಗ ಕಾರ್ಮಿಕರಿಗೆ ಅನುಕೂಲ ಏನು ಸಿಗಬೇಕಾಗಿತ್ತು ಅದು ಸಿಕ್ಕುತ್ತಿಲ್ಲ. ಇನ್ನೊಂದು ಶೋಚನೀಯವಾದ ವಿಷಯವೆಂದರೆ ಕನಿಷ್ಟ ವೇತನದ ವಿಷಯ. ಕನಿಷ್ಟ ವೇತನದ ಬಗ್ಗೆ ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಬಹಳ ವಿವರವಾಗಿ ಹೇಳಿದ್ದಾರೆ. ೧೯೮೨ನೇ ಇಸವಿಯಲ್ಲಿ ಮಾನ್ಯ ಜಕನೂರ್‌ರವರು ಕಾರ್ಮಿಕ ಮಂತ್ರಿಗಳಾಗಿದ್ದರು ಅವರು ಈ ಕನಿಷ್ಟ ವೇತನದ ಬಗ್ಗೆ ಏನೊಂದೂ ತೀರ್ಮಾನ ಮಾಡಲಿಲ್ಲ. ಮಾನ್ಯ ಅಜೀಜ್ ಸೇಠ್‌ರವರೂ ಕಾರ್ಮಿಕ ಮಂತ್ರಿಗಳಾಗಿದ್ದರು ಈಗ ಕಾರ್ಮಿಕ ಮಂತ್ರಿಗಳಾಗಿ ಮಾನ್ಯ ಮಂಜುನಾಥ್‌ರವರು ಇದ್ದಾರೆ. ಇವರು ಕಾಲದಲ್ಲಿಯಾದರೂ ಕನಿಷ್ಟ ವೇತನದ ಬಗ್ಗೆ ತೀರ್ಮಾನವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಕನಿಷ್ಟ ವೇತನದ ಬಗ್ಗೆ ಕೋರ್ಟಿನಲ್ಲೂ ಸಹ ವಿಷಯ ಬಂದಿತ್ತು. ಮಂಗಳೂರು ಗಣೇಶ ಬೀಡಿ ಮಾಲೀಕರು ಹಾಗೂ ಇನ್ನಿತರ ದೊಡ್ಡ ದೊಡ್ಡ ಮಾಲೀಕರು ಸೇರಿಸಿಕೊಂಡು ಈ ಕನಿಷ್ಟ ವೇತನದ ಜಾರಿಗೆ ಬರದ ರೀತಿಯಲ್ಲಿ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದಾರೆ. ಕೋರ್ಟ್ ಸಹ ಕ್ಯಾಪಿಟಲಿಸ್ಟ್‌ಗಳ ಕಡೆಗೆ ತನ್ನ ಜಡ್ಜ್‌ಮೆಂಟನ್ನು ಕೊಡುತ್ತದೆ. ಈ ಜಡ್ಜ್‌ಮೆಂಟಿಗೆ ಸರಿಯಾಗಿ ಅಡ್ವೊಕೇಟ್ ಜನರಲ್‌ರವರು ಈ ಜಡ್ಜ್‌ಮೆಂಟಿನ ವಿರುದ್ಧ ಕಾರ್ಮಿಕರು ಅಪೀಲ್ ಹೋಗ ಬಾರದೆಂದು ಹೇಳಿದರು. ಇದರಿಂದ ಏನು ಕಾಣುತ್ತದೆ ಎಂದರೆ ಕೋರ್ಟ್ ಸಹ ಬಂಡವಾಳಶಾಹಿಗಳ ಕಡೆಗೆ ವಾಲುತ್ತದೆಯೋ ಏನೋ ಎಂಬ ಭಾವನೆ ಬರುತ್ತದೆ. ನಾನೂ ಸಹ ಲಾಯರ್ ಆಗಿದ್ದೆ ಮಾನ್ಯ ಮಂತ್ರಿಗಳಾದ ಮಂಜುನಾಥ್‌ರವರೂ ಲಾಯರ್ ಆಗಿದ್ದವರು. ಅವರಿಗೂ ಸಹ ಇದರ ವಿಷಯ ಚೆನ್ನಾಗಿ ಗೊತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿ, ಆದರೆ ಕೋರ್ಟಿನಲ್ಲಿ ನೀಡಿರುವ ಜಡ್ಜ್‌ಮೆಂಟನ್ನು ಇಲ್ಲಿ ಯಾವುದೇ ರೀತಿಯಲ್ಲಿ ತೆಗಳ ಬಾರದು. ಮಾನ್ಯ ಸದಸ್ಯರು ಯಜಮಾನರಿದ್ದಾರೆ, ಹಿರಿಯರಿದ್ದಾರೆ, ಅವರಿಗೆ ಎಲ್ಲಾ ಚೆನ್ನಾಗಿ ಗೊತ್ತಿದೆ. ಜಡ್ಜ್‌ಮೆಂಟಿನ ಹೆಸರನ್ನು ತೆಗೆದುಕೊಂಡು ಸದನದಲ್ಲಿ ಹೇಳುವುದು ಸರಿಯಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾದರೆ, ಸುಪ್ರೀಂ ಕೋರ್ಟಿನಲ್ಲಿ ಒಂದು ಕ್ಯಾಟಗರಿ ಮಾಡಿದ್ದಾರೆ, ಅಲ್ಲಿ ಸ್ವಲ್ಪ ಪ್ರೋಗ್ರೇಸೀವ್ ಜಡ್ಜ್‌ಮೆಂಟನ್ನು ಕೊಡುತ್ತಾರೆ. ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಈ ರೀತಿ ಪ್ರೋಗ್ರೆಸೀವ್ ಜಜ್‌ಮೆಂಟ್‌ನ್ನು ಕೊಡುತ್ತಾರೆಂದು ಪಾಟೀಲರಿಗೂ ಗೊತ್ತುಂಟು. ಈಗ ಹೈಕೋರ್ಟಿನಲ್ಲಿ ಇಂತಹ ಪರಿಸ್ಥಿತಿ ಬಂದಿದೆ. ಈ ರೀತಿ ಕಾರ್ಮಿಕರ ಹಿತಕ್ಕೆ ವಿರುದ್ಧವಾಗಿ ಅನುಕೂಲಗಳನ್ನು ಮಾಡಿದರೆ ಅದು ಕಾರ್ಮಿಕರಿಗೆ ದ್ರೋಹ ಮಾಡಿದಂತಾಗುತ್ತದೆ. ಹಾಗೂ ವಂಚನೆ ಮಾಡಿದಂತಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಕನಿಷ್ಟ ವೇತನವನ್ನು ತಿಂಗಳಿಗೆ ಸುಮಾರು ೫೦೦ ರೂಪಾಯಿಗಳಾದರೂ ಕೊಡಬೇಕು. ಕಾರ್ಮಿಕರು ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಬಂದು ದೊಡ್ಡ ಹೋರಾಟವನ್ನು ಮಾಡುವವರಿದ್ದಾರೆ. ಈ ಕಾರ್ಮಿಕರ ಸಮಸ್ಯೆಗಳನ್ನು ನಿವಾರಣೆ ಮಾಡಲು ಮೊದಲಿಂದಲೂ ನಾವು ಕಮಿಟಿಗಳನ್ನು ಮಾಡಿಕೊಂಡು ಬಂದಿದ್ದೇವೆ. ಕಮಿಟಿಗಳನ್ನೇ ೧೦-೧೫ ಮಾಡಿದ್ದೇವೆ. ಆದರೆ ಇದುವರೆಗೂ ಯಾವ ಕಮಿಟಿಯವರು ಸಹಾ ಕಾರ್ಮಿಕರ ಸಮಸ್ಯೆಗಳನ್ನು ಇತ್ಯರ್ಥ ಮಾಡಿಲ್ಲ. ಕಾರ್ಮಿಕರ ಸಮಸ್ಯೆಗಳನ್ನು ಸರಿಪಡಿಸಬೇಕೆಂದು ಹೋರಾಟ ಮಾಡುವ ಸಂಸ್ಥೆಗಳಲ್ಲಿ ಎ. ಐ. ಟಿ. ಯು. ಸಿ., ಇದೆ ಹೆಚ್. ಎಂ. ಎಸ್. ಇದೆ, ಇಂಟಕ್ ಇದೆ, ಹೀಗೆ ಹಲವಾರು ಸಂಘ ಸಂಸ್ಥೆಗಳು ಕಾರ್ಮಿಕರ ಕಲ್ಯಾಣಕ್ಕಾಗಿ ಹೋರಾಡುತ್ತಿವೆ ಯಾದರೂ ಇದುವರೆಗೆ ಕಾರ್ಮಿಕರ ಕಲ್ಯಾಣವಾಗಲಿಲ್ಲ. ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಸರ್ಕಾರದಲ್ಲಿರುವ ನಿಲುವನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ೬ ಷುಗರ್ ಫ್ಯಾಕ್ಟರಿಗಳು ಲಾಕ್ ಔಟ್ ಆಗಿವೆ. ಹಿರಿಯೂರಿನಲ್ಲಿರುವ ಷುಗರ್ ಫ್ಯಾಕ್ಟರಿಯೂ ಲಾಕ್ ಔಟ್ ಆಗಿದ್ದು ಅದರ ಬಗ್ಗೆ ವಿಚಾರ ಮಾಡಲು ಮಾನ್ಯ ಸಚಿವರಾದ ಜಾಲಪ್ಪನವರು ಮೊನ್ನೆ ಹೋಗಿದ್ದಾಗ ಅವರ ಮೇಲೆ ದುರ್ವರ್ತನೆಯನ್ನು ಅಲ್ಲಿನ ಕಾರ್ಮಿಕರು ಮಾಡಿದ್ದಾರೆ. ಈ ಕಾರ್ಖಾನೆಯು ಕಳೆದ ೪ ತಿಂಗಳಿನಿಂದ ಮುಚ್ಚಿ ಸುಮಾರು ೮೦೦ ಜನ ಕಾರ್ಮಿಕರಿಗೆ ತೊಂದರೆಯಾಗಿದೆ. ಇದರ ಬಗ್ಗೆ ಹೈಕೋರ್ಟಿನವರು ಒಂದು ಅವಾರ್ಡನ್ನು ಕೊಟ್ಟು ಕಾರ್ಮಿಕರಿಗೆ ಹತ್ತುವರೆ ಲಕ್ಷ ರೂಪಾಯಿಗಳನ್ನು ಪರಿಹಾರ ಧನವಾಗಿ ಕೊಡಬೇಕೆಂದು ಸೂಚಿಸಿದೆ. ಈ ಹಣವನ್ನು ಅಲ್ಲಿನ ಮ್ಯಾನೇಜ್‌ಮೆಂಟಿನವರು ಕಟ್ಟಿಕೊಡಬೇಕಾಗುತ್ತದೆ. ಈ ಕಾರ್ಖಾನೆಯ ಆಡಳಿತ ಮಂಡಳಿಯವರು ಏನೋ ಕಾರಣಗಳನ್ನು ಹೇಳಿಕೊಂಡು ಆ ಹಣವನ್ನು ಇನ್ನೂ ಕೊಟ್ಟಿಲ್ಲ. ಸುಮಾರು ೪೫ ದಿವಸಗಳಿಂದ ಕಾರ್ಮಿಕರು ಇಲ್ಲಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ನನಗೆ ಇದರ ಬಗ್ಗೆ ವಿಷಾದವಾಗುವುದು ಏನೆಂದರೆ ಇದುವರೆಗೂ ಸಂಬಂಧಪಟ್ಟ ಮಂತ್ರಿಗಳು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಲೇಬರ್ ಡಿಪಾರ್ಟ್‌ಮೆಂಟಿನವರು ಸಹ ಈ ೮೦೦ ಜನ ಕಾರ್ಮಿಕರ ಬಗ್ಗೆ ಯಾವುದೇ ಕಾಳಜಿಯನ್ನು ವಹಿಸಿಲ್ಲ. ಗೌರಿಬಿದನೂರು ಸಕ್ಕರೆ ಕಾರ್ಖಾನೆಯ ಕಾರ್ಮಿಕರೂ ಸಹ ಇದೇ ರೀತಿ ಚಳುವಳಿ ಮಾಡುತ್ತಿದ್ದಾರೆ. ಈಗ ಸರಕಾರದವರಿಗೆ ಬಲವಾದ ಒಂದು ಆಯುಧ ಸಿಕ್ಕಿದೆ. ಅದನ್ನಾದರೂ ಉಪಯೋಗಿಸಿ, ಮಾನೇಜ್‌ಮೆಂಟ್‌ನವರಿಗೆ ಹೇಳಿ ತತ್‌ಕ್ಷಣ ಆ ೮೦೦ ಜನ ಕಾರ್ಮಿಕರು ಏನಿದ್ದಾರೆ ಅವರಿಗೆ ಕೆಲಸಕೊಡಬೇಕು. ಅದರ ಜೊತೆಗೆ ಇಂತಹ ಪರಿಸ್ಥಿತಿ ಆರು ಕಾರ್ಖಾನೆಗಳಲ್ಲಿ ಇವೆ. ಹಿರಿಯೂರುಕಾರ್ಖಾನೆಯಲ್ಲಿಯೂ ಕೂಡ ಇದೆ. ಅಲ್ಲಿಯೂ ಸತ್ಯಾಗ್ರಹ ಮಾಡಿದ್ದಾರೆ. ನಾನು ಮತ್ತು ಭೂಪತಿಯವರು ಹೋಗಿ ನೋಡಿದ್ದೇವೆ. ಅವೊತ್ತು ಸತ್ಯಾಗ್ರಹ ನಡೆಯುತ್ತಾ ಇತ್ತು. ಬಹಳಷ್ಟು ದಿನ ಇದನ್ನು ಬಿಟ್ಟರೆ, ಯಾರಾದರೂ ಮಂತ್ರಿಗಳು ಅಲ್ಲಿಗೆ ಹೋದರೆ ಮತ್ತೆ ಪುನಃ ಗಲಾಟೆ ಆಗುತ್ತದೆ. ಹಾಗೆಯೇ ಬೇರೆ ಬೇರೆ ಸಮಸ್ಯೆಗಳೂ ಪ್ರಾರಂಭ ಆಗುತ್ತವೆ. ನಾವೂ ಯೋಚನೆ ಮಾಡಬೇಕು. ಅವರೂ ಕೂಡಾ ಜೀವನ ಮಾಡಬೇಕಾಗುತ್ತದೆ. ಆದುದರಿಂದ ದಯಮಾಡಿ, ಎಲ್ಲೆಲ್ಲಿ ಲೇ ಅಫ್ ಲಾಕ್‌ಔಟ್ ಆಗಿದೆಯೋ ಅಲ್ಲಿ ಸ್ವಲ್ಪ ಶ್ರದ್ಧೆವಹಿಸಿ, ಅವರ ಸಮಸ್ಯೆಗಳನ್ನು ಪರಿಹಾರ ಮಾಡಬೇಕು ಹಾಗೆ ಆಗುವುದನ್ನು ತಾವು ನಿಲ್ಲಿಸಬೇಕು. ನಾವು ೧೯೭೩-೮೪ ರಿಂದ ೧೯೮೪-೮೫ರ ಅಂಕಿಅಂಶಗಳನ್ನು ತೆಗೆದುಕೊಂಡರೂ ಸಹ ಇದರ ಸಂಖ್ಯೆ ಜಾಸ್ತಿ ಆಗಿದೆ. ಇಂಡಸ್ಟ್ರಿಯಲ್ ರಿಲೇಷನ್ಸ್ ೧೯೮೩-೮೪, ೧೯೮೪-೮೫ ನೋಡಿದರೆ, ನಮಗೆ ಅದು ಗೊತ್ತಾಗುತ್ತದೆ ಮೊದಲು ಐದು ಇದ್ದುದು ಈಗ ಎಂಟು ಆಗಿದೆ. ಅದೇ ಲೇಆಫ್ ಮಾನ್ ಡೇಸ್ ಲಾಸ್ ಮೊದಲು ೪೬ ಸಾವಿರ ಇದ್ದುದು, ಈಗ ೬೫ ಸಾವಿರದ ೧೭೭ ಆಗಿದೆ. ಒಂದು ಲಕ್ಷ, ೨೬ ಮ್ಯಾನ್ ಡೆಯಸ್ ಲಾಸ್ ಆಗಿದೆ. ಇದರ ಜೊತೆಗೆ ಲಾಕ್ ಔಟ್ಸ್ ನೋಡಿದರೆ ನಿಜವಾಗಿಯೂ ನಮಗೆ ಇಂತಹ ಪರಿಸ್ಥಿತಿ ಬಂದಿದೆಯಲ್ಲ ಎಂದು ಸಂಕಟ ಆಗುತ್ತದೆ. ಲೇ ಆಫ್ಸ್ ತೆಗೆದುಕೊಂಡರೆ ೩ ಇದ್ದುದು ೧೨ ಆಗಿದೆ. ನಂಬರ್ ಆಫ್ ಲಾಕ್‌ಔಟ್ಸ್ ಅದೇ ರೀತಿ ಆಗಿದೆ. ಇದರಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ, ಒಳ್ಳೆಯ ಪರಿಸ್ಥಿತಿ ಮತ್ತು ಶಾಂತಿಯುತವಾದ ಪರಿಸ್ಥಿತಿ ಇಲ್ಲ, ಕಾರ್ಮಿಕ ಇಲಾಖೆಯು ಕೂಡಾ ಶ್ರದ್ಧೆ ವಹಿಸುತ್ತಾ ಇಲ್ಲ, ಲೆ ಅಫ್ಸ್ ಆಗಬಾರದು ಎಂದು ಕಾನೂನು ಇದ್ದರೂ ಕೂಡಾ, ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದ್ದರೂ ಕೂಡಾ ಲೇಆಫ್ಸ್

ಆಗುವುದಕ್ಕೆ ಕಾರ್ಮಿಕ ಇಲಾಖೆಯವರು ಬಿಡುತ್ತಾರೆ ಎಂದರೆ, ಇದರಿಂದ ಕಾರ್ಮಿಕ ಮಂತ್ರಿಯವರು ಈ ವಿಷಯದಲ್ಲಿ ಶ್ರದ್ಧೆ ವಹಿಸಿಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಅವರೂ ಕೂಡಾ ಪರಿಶಿಷ್ಟ ಜಾತಿಗೆ ಸೇರಿದವರು, ಬಡವರ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲವರು. ಕಾರ್ಮಿಕರು ೫೦೦ ಕೇಳುತ್ತಾರೆ, ಇಲ್ಲದಿದ್ದರೆ ಅವರಿಗೆ ಬದುಕುವುದಕ್ಕೆ ಆಗುವುದಿಲ್ಲ. ಆದಕಾರಣ ಅವರ ಬಗ್ಗೆ ಸ್ವಲ್ಪ ಶ್ರದ್ಧೆವಹಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಗೆಯೇ ಪೋಲೀಸರು ಕಾರ್ಮಿಕ ವಿವಾದಗಳಲ್ಲಿ ಎಂಟರ್ ಆಗಬಾರದು. ಇದೇ ವಿಷಯದಲ್ಲಿ ವಾದ ವಿವಾದಗಳು ಎದ್ದುಬಿಟ್ಟು ತಕರಾರು ಬಿತ್ತು. ಏತಕ್ಕೆಂದರೆ, ಮೊನ್ನೆ ನಿಜವಾಗಿಯೂ ಕೂಡಾ ಕರ್ನಾಟಕ ಪೋಲೀಸರು ಹೊಡೆದದು ಇಲ್ಲ, ಕುದುರೆಮುಖದಲ್ಲಿ ಸೆಂಟ್ರಲ್ ಇಂಡಸ್ಟ್ರೀಸ್ ಸೆಕ್ಯುರಿಟಿ ಫೋರ್ಸ್ ಪೋಲೀಸರು ಮನೆ ಮನೆಗೂ ಹೋಗಿ ಹೊಡೆದಿದ್ದಾರೆ ಎಂದು. ಲೋಕ ಸಭಾ ಸದಸ್ಯರಾದ ತಾರಾದೇವಿಯವರು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಅದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಮೊದಲಿನಿಂದಲೂ ನಾನು ಇದರ ಬಗ್ಗೆ ಹೇಳುತ್ತಾ ಇದ್ದೇನೆ, ಅವರು ಬಂದರೆ ಯಾರನ್ನೂ ನೋಡುವುದಿಲ್ಲ, ಅವರು ಯಾರ ಕಂಟ್ರೋಲ್‌ನಲ್ಲಿಯೂ ಇರುವುದಿಲ್ಲ, ಅದನ್ನು ನಮ್ಮ ಕಾಂಗ್ರೆಸ್ ನಾಯಕರು ಒಪ್ಪಲಿಲ್ಲ, ಈಗ ಅವರಿಗೆ ಅನುಭವ ಬಂದಿದೆ. ನಾವುಗಳು ಏಟು ತಿಂದಾಗ ಅವರು ನಗುತ್ತಾ ಇದ್ದರು, ಈಗ ಅವರೇ ಏಟು ತಿಂದು ಅವರ ಅನುಭವವನ್ನು ಪಡೆದಿದ್ದಾರೆ. ಆದುದರಿಂದ ಸೆಂಟ್ರಲ್ ಪೋಲೀಸ್‌ನ್ನು ವಾಪಸ್ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಈ ಹಿಂದುಳಿದ ವರ್ಗಗಳ ಹಾಸ್ಟಲ್ ಬಗ್ಗೆ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಬಗ್ಗೆ ಯೋಜನೆಯನ್ನು ಮಾಡುವಾಗ ಸ್ವಲ್ಪ ಜಾಸ್ತಿ ಶ್ರದ್ಧೆಯನ್ನು ವಹಿಸಬೇಕಾಗುತ್ತದೆ. ಈ ಹಿಂದೆ ಈ ಹಾಸ್ಟೆಲ್ಸ್‌ಗಳ ಬಗ್ಗೆ ನಮ್ಮ ಹಿರಿಯ ಸದಸ್ಯರುಗಳಾದ ಮಾನ್ಯ ದೊಡ್ಡಮೇಟಿಯವರು, ಹೆಗರೆಯವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಯಾವುದೇ ಒಂದು ಹಾಸ್ಟಲ್ಸ್‌ನ್ನು ಪ್ರಾರಂಭ ಮಾಡುವುದಿದ್ದರೆ ಅದನ್ನು ಖಾಸಗಿಯವರಿಗೆ ಕೊಡಬೇಡಿ, ಅದನ್ನು ಸರ್ಕಾರಕ್ಕೆ ನಡೆಸಲಿಕ್ಕೆ ಕೊಡಿ ಎಂದು ಹೇಳಿದ್ದಾರೆ. ನಾನು ತಿಳಿದಂತೆ ಈ ಹಾಸ್ಟೆಲ್ಸ್‌ಗಳ ಕೆಲವು ಹೆಸರುಗಳನ್ನು ಹೇಳುತ್ತೇನೆ. ಇವು ಖಾಸಗಿಯವರು ನಡೆಸತಕ್ಕಂತದ್ದು. ಎಲ್ಲವೂ ದೇವರ ಹೆಸರಿನಲ್ಲಿ ಇದೆ. ವಿಶ್ವೇಶ್ವರ ಸ್ವಾಮಿ, ಕಾಳಿದಾಸ, ಗಣಪತಿ, ಮಾರುತಿ, ಸಿದ್ಧೇಶ್ವರ ಉಚಿತ ಪ್ರಸಾದನಿಲಯ, ಜವಹರಲಾಲ್ ಜನರಲ್ ಹಾಸ್ಟೆಲ್, ಸಿದ್ಧೇಶ್ವರ, ಬಲಭೀಮ, ಎಂದೆಲ್ಲಾ ಹೆಸರುಗಳು ಇವೆ. ನಮ್ಮಲ್ಲಿ ೭೫ ಪರ್ಸೆಂಟ್‌ಗಳಷ್ಟು ಹಾಸ್ಟೆಲ್‌ಗಳು ಇನ್ನು ಖಾಸಗಿಯವರ ಕೈಯಲ್ಲಿ ಇವೆ. ಅವರು ಏನು ಮಾಡುತ್ತಾರೆ ಎಂದರೆ, ಸುಮಾರು ೫೦ ಜನರನ್ನು ಸೇರಿಸಿಕೊಂಡು, ೧೫೦ ಜನರ ಹೆಸರನ್ನು ಲೆಕ್ಕಕ್ಕೆ ಕೊಡುತ್ತಾರೆ. ನಿಜವಾಗಿಯೂ ಕೂಡಾ ೫೦ ಜನಕ್ಕೂ ಕೂಡಾ ಸರಿಯಾದ ರೀತಿಯಲ್ಲಿ ಇವರುಗಳು ವ್ಯವಸ್ಥೆಯನ್ನು ಮಾಡುತ್ತಾ ಇಲ್ಲ. ಇದರ ಪರಿಸ್ಥಿತಿಯ ಬಗ್ಗೆ ಮಾನ್ಯರು ಬಹಳ ಚೆನ್ನಾಗಿ ರಿಪೋರ್ಟನ್ನು ಕೊಟ್ಟಿದ್ದಾರೆ. ಅಲ್ಲಿನ ವ್ಯವಸ್ಥೆ ಬಗ್ಗೆ ಮಾನ್ಯ ದೊಡ್ಡಮೇಟಿಯವರು ಮಾನನೊಂದು ಒಂದು ಒಳ್ಳೆಯ ರಿಪೋರ್ಟನ್ನು ತಯಾರು ಮಾಡಿದ್ದಾರೆ. ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡುವುದರ ಹಿಂದಿನ ಒಳ್ಳೆಯ ಉದ್ದೇಶಗಳನ್ನು ಗಾಳಿಗೆ ತೂರಬಾರದು ಎಂದು ಅದರಲ್ಲಿ ಅವರು ನಮೂದಿಸಿದ್ದಾರೆ. ಸದುದ್ದೇಶದಿಂದ ಅವುಗಳು ನಡೆಯುತ್ತಿರಬೇಕು, ಸಂಬಂಧಪಟ್ಟವರಿಗೆ ಅದರ ಪ್ರಯೋಜನ ಸೂಕ್ತ ರೀತಿಯಲ್ಲಿ ಸಿಗಬೇಕೆಂದು ಹೇಳಿದ್ದಾರೆ. ಹಾಗೆಯೇ ಪೇಜ್ ೨೩ ರಲ್ಲಿ ಕೆಲವು ರೆಕಮೆಂಡೇಷನ್ಸ್ ಮಾಡಿದ್ದಾರೆ, ವಿದ್ಯಾರ್ಥಿನಿಲಯಗಳ ನಿರ್ವಹಣ ಅಧಿಕಾರಿಗಳು, ಇಲಾಖೆಯ ನಿಯಮಗಳನ್ನು ಜವಾಬ್ದಾರಿಯಿಂದ ಪಾಲಿಸದೆ, ಅನೇಕಾನೇಕ ನ್ಯೂನತೆಗಳನ್ನು ಇಟ್ಟುಕೊಂಡಿದ್ದಾರೆ ಎಂದರೆ ತಪ್ಪಾಗ ಲಾರದು ಎಂದು ಹೇಳಿದ್ದಾರೆ. ಅವರು ೨-೩ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಯೋಜನೆ ಮಾಡಿದ್ದಾರೆಯೇ? ನಾನೂ ಕೂಡಾ ಒಂದೆರಡು ಕಾಲೇಜ್ ಹಾಸ್ಟೆಲ್‌ಗಳಿಗೆ ಹೋಗಿದ್ದೆ. ಅಲ್ಲಿ ಮಸಾಲೆ ದೋಸೆ ಕೊಟ್ಟಿದ್ದೇವೆ ಎಂದು ಲೆಕ್ಕದಲ್ಲಿ ಬರದು ಚಿತ್ರಾನ್ನ ವನ್ನು ಕೊಟ್ಟಿದ್ದರು. ಇವರಿಗೆ ಮಂಜೂರು ಮಾಡಿಕೊಡುವ ಹಣದಲ್ಲಿ ಯಾರೋ ಸೂಪರಿಂಟೆಂಡಂಟ್ ಅರ್ಧದಷ್ಟನ್ನು ತಿಂದು ಬಿಡುತ್ತಾರೆ. ಅಂತಹವರು ನಾಲ್ಕೈದು ಜನ ಏಜಂಟ್‌ಗಳನ್ನು ಇಟ್ಟುಕೊಂಡಿರು ತ್ತಾರೆ. ಏನಾದರೂ ಯಾರಾದರು ಇವರ ಬಗ್ಗೆ ಕೇಳಿದರೆ, ಯಾರಿಗಾದರೂ ಹೇಳಿದರೆ ತಮ್ಮನ್ನು ಹೊಡೆಯುತ್ತಾರೆ ಎಂದು ಅಲ್ಲಿನ ವಿದ್ಯಾರ್ಥಿಗಳು ಹೇಳಿದರು. ಮಂತ್ರಿಗಳಿಗೂ ಈ ವಿಷಯ ಗೊತ್ತಿದೆ. ಒಟ್ಟಿನಲ್ಲಿ ಅಲ್ಲಿ ವಿಪರೀತವಾದ ದುರುಪಯೋಗ ನಡೆಯುತ್ತಾ ಇದೆ. ಮಾನ್ಯ ಹೆಗರೆಯವರು ಒಂದು ರಿಪೋರ್ಟ್ ಬರೆದಿದ್ದಾರೆ, ಬಹಳ ದೊಡ್ಡದಾಗಿ ಬರೆದಿದ್ದಾರೆ. ಇಂತಹ ವರದಿಯಲ್ಲಿ ರಿಪೋರ್ಟಗಳನ್ನು

ಬರೆಸುವುದರ ಉದ್ದೇಶ ಏನೆಂದರೆ, ಇದರಿಂದ ಏನಾದರೂ ಉಪಯೋಗ ಆಗಲಿ ಎಂದು. ಡಿಪಾರ್ಟ್‌ಮೆಂಟ್‌ನ ಉದ್ದೇಶ ಈಡೇರಲಿ ಎಂದು ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಇಂತಹ ಉತ್ತಮವಾದಂತಹ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಬೇಕೆಂದು ವರದಿಯಲ್ಲಿ ಹೇಳಿದ್ದಾರೆ. ಎಂತಹ ವರದಿಯಿದ್ದರೂ ಕೂಡಾ ಅವರ ಕಡೆಗೆ ಇವರ ಗಮನ ಇಲ್ಲ. ದಿನೇ ದಿನೇ ಇಂಪ್ರೂವ್ ಆಗುವುದರ ಬದಲು ತನ್ನ ದಾರಿಯಲ್ಲಿಯೇ ಈ ಸಂಸ್ಥೆಗಳು ನಡೆದಿವೆ. ಒಳ್ಳೆಯ ಹಾಸ್ಟೆಲ್‌ಗಳು ಬೇಕೇಬೇಕು. ಅದನ್ನು ಮಾಡುವುದರಲ್ಲಿ ಸರಕಾರ ಆಸ್ಥೆಯನ್ನು ವಹಿಸಬೇಕು. ಮತ್ತು ಇಂತಹ ದುರುಪಯೋಗ ಮಾಡುವಂತಹ ಸಂಸ್ಥೆಗಳ ಬಗ್ಗೆ ಸರಕಾರ ಗಮನಕೊಡಬೇಕೆಂದು ಹೇಳುತ್ತಾ ಇದ್ದೇನೆ. ಇನ್ನು ಖಾಸಗಿ ಸಂಸ್ಥೆಗಳಿಗೆ ಈ ವಿದ್ಯಾರ್ಥಿನಿಲಯಗಳನ್ನು ಕೊಡುವುದನ್ನು ತಪ್ಪಿಸಬೇಕೆಂದು ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ೭೫ ರೂಪಾಯಿಗಳನ್ನು ಈಗ ಏನು ಅವರಿಗೆ ಕೊಡುತಿದ್ದಾರೆ ಇದು ಅನ್ಯಾಯ, ಇದನ್ನು ತಪ್ಪಿಸಿ ಹಣವನ್ನು ಹೆಚ್ಚು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ನಮ್ಮ ಉದ್ಯೋಗ ವಿನಿಮಯ ಕೇಂದ್ರದ ಬಗ್ಗೆ ಹೇಳುವುದಾದರೆ, ಅದರಲ್ಲಿ ಇರುವಷ್ಟು ಲಂಚಗುಳಿತನ ಬೇರೆ ಯಾವುದರಲ್ಲಿಯೂ ಇಲ್ಲ ಎಂದು ಹೇಳಬೇಕಾಗುತ್ತದೆ. ಇದು ಮಾನ್ಯ ಮಂತ್ರಿಯವರಿಗೂ ಗೊತ್ತಿದೆ. ಅಲ್ಲಿ ೨೦೦ ರೂಪಾಯಿಗಳನ್ನು ಕೊಟ್ಟರೆ ಸೀನಿಯಾರಿಟಿ ಲಿಸ್ಟ್‌ನಲ್ಲಿ ಬರಬಹುದು. ೫೦೦ ರೂಪಾಯಿಗಳನ್ನು ಖರ್ಚು ಮಾಡಿದರೆ ಸರ್ಟಿಫಿಕೇಟ್‌ಗಳನ್ನು ಕೊಡುತ್ತಾರೆ. ಹೊಸದಾಗಿ ಹೆಸರು ನೊಂದಾಯಿಸಿದವರಿಗೂ ಹೀಗೆ ಮಾಡಿ ಸೀನಿಯಾರಿಟಿ ಕೊಟ್ಟು ಬಿಡುತ್ತಾರೆ. ಇದನ್ನು ತಪ್ಪಿಸ ಬೇಕು. ಎಲ್ಲರಿಗೂ ಸಮಾನವಾದ ನ್ಯಾಯವನ್ನು ಕೊಡುವಲ್ಲಿ ಶ್ರದ್ಧೆ ವಹಿಸಬೇಕು ಇನ್ನು ಸ್ಟೈಪೆಂಡರಿಗಳ ಬಗ್ಗೆ ಸ್ವಲ್ಪ ಮಾತನಾಡಬೇಕಾಗುತ್ತದೆ. ಈಗ ಅವರಿಗೆ ೪೫೦ ರೂಪಾಯಿಗಳನ್ನು ಕೊಡುತ್ತಾ ಇದ್ದೀರಿ, ಸಂತೋಷ. ಅವರಿಗೆ ನೌಕರಿಗಳಿಗೆ ಕರೆದಾಗ ಏಜ್ ರಿಲೇಕ್ಸೇನ್ ಕೊಡಬೇಕು. ಕಾಂಟ್ರಾಕ್ಟ್ ನೇಮಕದವರಿಗೂ ಅದನ್ನು ಅನ್ವಯಿಸ ಬೇಕು. ಇತ್ತೀಚೆಗೆ ಇವರಿಗೆಲ್ಲಾ ಏನು ಫೇಸಿಲಿಟಿಗಳನ್ನು ಕೊಡುತ್ತಿದ್ದೀರೋ ಅದನ್ನು ಮುಂದುವರಿಸಬೇಕು. ಈಗಾಗಲೇ ೫೦ ಪರ್ಸೆಂಟ್ ಹುದ್ದೆಗಳಲ್ಲಿ ಇವರನ್ನು ನೇಮಿಸಿಕೊಳ್ಳುತ್ತಿದ್ದಾರೆ, ಅದನ್ನು ಮುಂದುವರಿಸಬೇಕು.

೫-೩೦ ಪಿ. ಎಂ.

ಅಧ್ಯಕ್ಷರು.—ದಯವಿಟ್ಟು ಕೊನೆಯದಾಗಿ ಹೇಳಿ ಮುಗಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನೂ ನನಗೆ ಸ್ವಲ್ಪ ಅವಕಾಶ ಬೇಕು.

ಅಧ್ಯಕ್ಷರು.—ಕೊನೆಯ ವಾಕ್ಯವನ್ನು ಹೇಳಿ ಸಹಕಾರ ಕೊಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರು ಟೈಂ ಇಲ್ಲ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳಿಗೆ ಒಂದು ವಿಷಯ ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ನಾವು ಕಾರ್ಯಕಲಾಪ ಮುಗಿಸಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಅವರು ಮಾತನಾಡಲಿ, ಅಭ್ಯಂತರವಿಲ್ಲ. ಇನ್ನೂ ಬೇಡಿಕೆ ಮೇಲೆ ಮಾತನಾಡುವವರು ೧೫ ಜನ ಇದ್ದಾರೆ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಬಿಸಿನೆಸ್ ಅಡ್ವೈಸರಿ ಕಮಿಟಿ ಇದೆ. ಅದರಲ್ಲಿ ತೀರ್ಮಾನ ಮಾಡಿದ ಪ್ರಕಾರ ಇವೊತ್ತು ಇದು ಮುಗಿಯಲೇಬೇಕು. ಇದು ಮುಗಿದು ಅಪ್ರೋಪ್ರಿಯೇಷನ್ ಬಿಲ್‌ನ್ನೂ ಕೂಡ ನಾವು ತೆಗೆದುಕೊಳ್ಳಬೇಕಾಗುತ್ತದೆ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೆಲವು ವಿಷಯಗಳನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಿದರೂ ಸಂದರ್ಭಾನುಸಾರ ಬದಲಾಯಿಸಿದ ನಿದರ್ಶನ ಇದೆ. ಕೆಲವು ವಿಷಯಗಳು ಎರಡು ತಾಸಿನಲ್ಲಿ ಮುಗಿಸಬೇಕೆಂದರೆ ನಾಲ್ಕು ತಾಸಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ರಿಪ್ಲೈ ಎರಡು ತಾಸಿನಲ್ಲಿ ಮುಗಿಯುತ್ತದೆಂದು ನಂಬಿದ್ದೆವು. ಕಾರಣಾಂತರದಿಂದ ಅದು ಪ್ರೋಲಾಂಗ್ ಆಯಿತು. ಇನ್ನೂ ಬಹಳ ಮುಖ್ಯ ಇಲಾಖೆಗಳಿವೆ. ಇದು ಸುಮಾರು ೮೦ ಪರ್ಸೆಂಟ್ ಜನರಿಗೆ ಸಂಬಂಧಪಟ್ಟ ಇಲಾಖೆ. ಇದರ ಮೇಲೆ ಮಾತನಾಡುವುದಕ್ಕಾಗುವುದಿಲ್ಲ ಎಂದ ಮೇಲೆ ಇನ್ನು ಯಾವ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡುವುದು?

ಅಧ್ಯಕ್ಷರು.—ಎಲ್ಲಿಯವರೆಗೆ ಆಗುತ್ತದೆಯೋ ನೋಡೋಣ ತಾವು ಕುಳಿತುಕೊಳ್ಳಿ.

ಶ್ರೀ ಪಟಮಕ್ಕಿ ರತ್ನಾಕರ್.—ನಾವು ಬೆಳಗಿನಿಂದ ಕುಳಿತಿದ್ದೇವೆ, ಈ ರೀತಿಯಾದರೆ ತೊಂದರೆಯಾಗುತ್ತಿದೆ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಈ ರೀತಿ ಇಂಟರ್‌ಫಿಯರ್ ಮಾಡಬೇಡಿ. ನೀವು ಎಲ್ಲಾದರೂ ಹೋಗುವುದಿದ್ದರೆ ಹೋಗಿ ಬನ್ನಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ಟೈಫಂಡರಿ ಪದವೀಧರರೇನಿದ್ದಾರೆ ಅವರನ್ನು ಯಾವ ರೀತಿಯಾದರೂ ಖಾಯಂ ಮಾಡಿ. ಅವರು ೧೦ ಸಾವಿರ ಜನರಿದ್ದಾರೆ. ಅವರನ್ನು ಹೇಗಾದರೂ ಖಾಯಂ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಪುಟ ೧೧ರಲ್ಲಿ ಯೋಜನೇತರ ವೆಚ್ಚ ಕೊಡಲಾಗಿದೆ. ೯೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಇನ್ನೂ ೨೦ ಲಕ್ಷ ರೂಪಾಯಿಗಳು ಮಿಕ್ಕಿದೆ. ಇದರಿಂದ ಅಲ್ಲಿ ಇಂಡಿಪೆಂಡೆಂಟ್ ಫೆಲೋಗಳು ಇದ್ದಾರೆ ಎಂದು ಅರ್ಥವಾಯಿತು. ಇರತಕ್ಕ ಅವಕಾಶವನ್ನು ಉಪಯೋಗಿಸಿಕೊಂಡು ಅನುಕೂಲವನ್ನು ಕೂಡ ಸರಿಯಾಗಿ ಕೊಡುವುದಕ್ಕೆ ಬುದ್ಧಿ ಇಲ್ಲದಿದ್ದರೆ ನಾನೇನು ಹೇಳುವುದು ? ಪ್ಲಾಂಟೇಷನ್ ಕಾರ್ಮಿಕರಿಗೆ ೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಅದರಲ್ಲಿ ೬ ಲಕ್ಷ ಖರ್ಚು ಮಾಡಿದ್ದಾರೆ. ಸಾಲಗಳಲ್ಲಿ ೬ ಲಕ್ಷ ರೂಪಾಯಿಗಳನ್ನು ಮಿಗಿಸಿದ್ದಾರೆ. ಸಾಲ ಕೊಡುವುದಕ್ಕೆ ಕೂಡ ಇವರಿಗೆ ಶಕ್ತಿ ಇಲ್ಲ. ಇದೆಲ್ಲಾ ನೋಡಿದಾಗ ಇವರಲ್ಲಿ ಎಫಿಷಿಯೆನ್ಸಿ ಇಲ್ಲ ಎಂದು ಹೇಳಬೇಕಾಗುತ್ತದೆ, ಅಸಂಘಟಿತ ಕಾರ್ಮಿಕರಿಗೆ ವಿಮಾ ಯೋಜನೆಯಲ್ಲಿ ಹಣ ಖರ್ಚು ಮಾಡಿಲ್ಲ. ಅದರಲ್ಲೂ ೯ ಲಕ್ಷ ೨೮ ಸಾವಿರ ರೂಪಾಯಿಗಳನ್ನು ಮಿಗಿಸಿದ್ದಾರೆ. ಇದನ್ನು ನೋಡಿದರೆ ಸರಿಯಾಗಿ ಕೆಲಸ ನಡೆಸುತ್ತಿಲ್ಲ ಎಂಬುದು ಗೊತ್ತಾಗುತ್ತದೆ. ಇದರ ಬಗ್ಗೆ ಶ್ರದ್ಧೆಯಿಟ್ಟು ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರಿಗೆ ಒಂದೇ ಒಂದು ಮಾತು ಹೇಳುತ್ತೇನೆ. ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತೆ ಹಾಸ್ಟೆಲ್‌ಗಳು ೫ ಪರ್ಸೆಂಟ್ ಕೂಡ ಕವರ್ ಆಗಿಲ್ಲ. ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಿಲ್ಲ. ಜಿಲ್ಲಾ ಮಟ್ಟದಲ್ಲಿ ಒಂದು ಹಾಸ್ಟೆಲ್ ಪ್ರಾರಂಭ ಮಾಡಿದ್ದಾರೆ. ಇದನ್ನು ತಾಲ್ಲೂಕು ಮಟ್ಟದಲ್ಲೂ ಓಪನ್ ಮಾಡಬೇಕು. ಎಲ್ಲೆಲ್ಲಿ ಹೈಸ್ಕೂಲುಗಳಿವೆ ಅಲ್ಲೆಲ್ಲಾ ಒಂದು ಹಾಸ್ಟೆಲ್ ಮಾಡಲೇಬೇಕು. ಮಾನ್ಯ ಮಂತ್ರಿಗಳನ್ನು ಕೇಳಿದರೆ ನಮ್ಮಲ್ಲಿ ಫಂಡ್ಸ್ ಇಲ್ಲ ಎಂದು ಹೇಳುತ್ತಾರೆ. ಇದು ಬಹಳ ಅನ್ಯಾಯ. ಪ್ರತಿಯೊಂದು ಹೋಬಳಿ ಮಟ್ಟದಲ್ಲೂ ಕೂಡಾ ಹಾಸ್ಟೆಲ್‌ಗಳನ್ನು ಮಾಡಬೇಕು. ಹೆಚ್ಚಾಗಿ ಫಂಡ್ಸ್ ತೆಗೆದುಕೊಂಡು ಎಲ್ಲೆಲ್ಲಿ ಹೈಸ್ಕೂಲುಗಳಿವೆ ಅಲ್ಲೆಲ್ಲಾ ಹಾಸ್ಟೆಲ್‌ಗಳನ್ನು ಮಾಡಬೇಕು. ಖಾಸಗಿಯವರಿಗೆ ಹಾಸ್ಟೆಲ್ ಮಾಡಲು ಅವಕಾಶ ಕೊಡದೆ ತಾವೇ ಸರ್ಕಾರದಿಂದ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ...

ಶ್ರೀ ಪಿ. ರತ್ನಾಕರ್.—ಅಧ್ಯಕ್ಷರೇ......

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಈ ಕಡೆ ವಿಪ್ ಮತ್ತು ಆ ಕಡೆ ವಿಪ್ ಇಬ್ಬರೂ ಕೂಡಿ ಹೆಸರುಗಳನ್ನು ಕೊಟ್ಟಿರುತ್ತಾರೆ. ಅದರ ಪ್ರಕಾರ ನಾನು ಹೋಗಬೇಕು.

ಶ್ರೀ ಪಿ. ರತ್ನಾಕರ್.—ನಮ್ಮ ಬಗ್ಗೆ ಕರುಣೆ ತೋರಿಸಿ. ಬೆಳಗ್ಗೆ ೯ ಗಂಟೆಯಿಂದ ಇಲ್ಲಿ ಕುಳಿತಿದ್ದೇವೆ. ಊಟ ಮಾಡಿಲ್ಲ. ನಾಳೆಗೆ ಸಭೆಯನ್ನು ಮುಂದುವರೆಸುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು.—ನೀವು ಈಗ ಐದು ಜನ ನಿಂತಿದ್ದೀರಿ. ನಿಮಗೆ ಇಷ್ಟಿಷ್ಟು ದಪ್ಪ ಪುಸ್ತಕ ಕೊಟ್ಟಿರುವುದು ಓದುವುದಕ್ಕೆ. ಒಬ್ಬರು ಎದ್ದಾಗ ಮತ್ತೊಬ್ಬರು ಏಳಬಾರದು ಎಂಬುದು ನಿಯಮ. ಮಾನ್ಯ ಭಾರ್ಗವರು ಈ ವಿಚಾರದಲ್ಲಿ ಆಗಲೇ ಕೇಳಿದಾಗ ಹೇಳಿದ್ದೇನೆ. ಇವೊತ್ತು ಎಲ್ಲಿಯವರೆಗೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಾಧ್ಯವಿದೆಯೋ ಅಲ್ಲಿಯವರೆಗೆ ನಡೆಸೋಣ ಎಂದು ಹೇಳಿದ್ದೇನೆ. ಈಗ ಯಡಿಯೂರಪ್ಪನವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ಗ್ರಾಮಾಂತರ ಜನಗಳಿಗೆ ನೇರವಾಗಿ ಸಂಬಂಧಪಟ್ಟಿರತಕ್ಕ ಪ್ರಮುಖವಾದ ಇಲಾಖೆ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ನಾನು ಅತ್ಯಂತ ದುಃಖದಿಂದ ಒಂದು ಮಾತನ್ನು ಹೇಳುತ್ತಾ ಅದಕ್ಕೆ ಆಧಾರವನ್ನೂ ಕೊಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಇಲಾಖೆ ಸಮಾಧಿಯಾಗಿದೆ ಎಂದು ಹೇಳುತ್ತೇನೆ. ಈ ಸದನದಲ್ಲಿ ಇಲಾಖೆಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನಾವು ಕಳುಹಿಸುತ್ತೇವೆ. ಅದೇರೀತಿ ಈ ಇಲಾಖೆಗೆ ಸಂಬಂಧಪಟ್ಟಂತೆಯೂ ಪ್ರಶ್ನೆ ಕಳುಹಿಸಿದ್ದೆ. ಪ್ರಶ್ನೆ ಕಳುಹಿಸಿ ಸದನದಲ್ಲಿ ಉತ್ತರ ಕೊಡಬೇಕೆಂದು ತಿಳಿಸಿದ್ದರೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯಾಗಿ ಪರಿವರ್ತನೆ ಮಾಡಿ ನಿನ್ನೆ ನನಗೆ ಉತ್ತರ ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರಾದ ತಾವು ನನ್ನ ರಕ್ಷಣೆಗೆ ಬರಬೇಕು ಎಂಬ ದೃಷ್ಟಿಯಿಂದ ಈ ಒಂದು ಮಾಹಿತಿಯನ್ನು ಕೊಡುತ್ತೇನೆ. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂಬುದನ್ನು ಉತ್ತರ ಕೊಡುವಾಗ ಸರಿಯಾಗಿ ಹೇಳಬೇಕು. ನಾನು ಹೇಳುವುದು ಸತ್ಯಸಂಗತಿಯಾದರೆ ಅಂಥ ಅಧಿಕಾರಿಗಳ ಮೇಲೆ ಕ್ರಮ ಏನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು. ನಾನು ಒಂದು ಮಾಹಿತಿ ಕೇಳಿದ್ದೆ. ಶಿವಮೊಗ್ಗ ಜಿಲ್ಲೆಯಲ್ಲಿ ಹೆರಿಗೆ ಭತ್ಯಕ್ಕಾಗಿ ಎಷ್ಟು ಅರ್ಜಿಗಳು ೧೯೮೫ನೇ ಮಾರ್ಚ್‌ವರೆಗೆ ಬಂದಿತ್ತು? ಎಷ್ಟು ಮಂಜೂರಾಗಿದೆ ? ಎಷ್ಟು ವಜಾ ಆಗಿದೆ ? ೧೯೮೫ರ ನಂತರ ಎಷ್ಟು ಅರ್ಜಿಗಳು ಬಂದಿವೆ? ಎಷ್ಟು ಮಂಜೂರಾತಿ ಆಗಿವೆ ? ತಾಲ್ಲೂಕುವಾರು ವಿವರ ಕೊಡಿ ಎಂದು ಕೇಳಿದ್ದೆ. ಸಮಯ ಮುಗಿದುಹೋದರೆ ನಾನು ಈ ವಿಷಯ ಬಿಟ್ಟು ಬೇರೆ ಏನೂ ಹೇಳುವುದಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಗರ್ಭಿಣಿ ಭತ್ಯ ಮಂಜೂರಾಗಿ ಹಣ ಪಾವತಿ ಆಗದೇ ಇರುವ ಸಂಖ್ಯೆ ಎಷ್ಟು ಎಂಬ ಬಗ್ಗೆ ತಾಲ್ಲೂಕುವಾರು ವಿವರ ಕೊಡಿ ಎಂದರೆ ಉತ್ತರದಲ್ಲಿ 'ಅಂಥ ಪ್ರಸಂಗಗಳು ವರದಿಯಾಗಿಲ್ಲ' ಎಂದು ಹೇಳಿದ್ದಾರೆ. ಅದರ ಬಗ್ಗೆ ಶಾಸಕರಾದ ನಾವು ಹೇಳಿದ್ದೇವೆ. ಶಿವಮೊಗ್ಗ ನಗರದಲ್ಲಿ ಮಾರ್ಚಿ ೮೫ರಲ್ಲಿ ಸ್ವೀಕೃತವಾದ ಅರ್ಜಿ ೬೯೦. ಮಂಜೂರಾದ ಅರ್ಜಿಗಳು ೩೩೩. ತಿರಸ್ಕರಿಸಲ್ಪಟ್ಟ ಅರ್ಜಿಗಳು ೧೩೩. ಬಾಕಿ ಉಳಿದಿರುವ ಅರ್ಜಿಗಳು ೨೨೪ ಎಂದು ಹೇಳಿದ್ದಾರೆ. ಒಂದು ತಾಲ್ಲೂಕಿನ ಉತ್ತರ ಈ ರೀತಿ ಕೊಟ್ಟು ಮತ್ತೆ ಡೀಟೈಲ್ಸ್ ಕೊಡುತ್ತಾ ಏಪ್ರಿಲ್ ೧೯೮೫ ರಿರೆದ ಜೂನ್ ೮೫ರವರೆಗೆ ಬಂದಿರುವ ಅರ್ಜಿಗಳು ೫೭೬. ಏಪ್ರಿಲ್ ೧೯೮೫ ರಿಂದ ಜೂನ್ ೧೯೮೫ರವುಗೆ ಮಂಜೂರಾದ ಸಂಖ್ಯೆ 'ಇಲ್ಲ'. ಏಪ್ರಿಲ್ ೧೯೮೫ರಿಂದ ಜೂನ್ ೧೯೮೫ರವರೆಗೆ ಉಳಿಕೆ ಆಗಿರವ ಸಂಖ್ಯೆ 'ಇಲ್ಲ' ಎಂದು ಹೇಳಿದ್ದಾರೆ. ಅವರು ಹೇಳಿರುವ ಪ್ರಕಾರ ಮಾರ್ಚ್ ಹಿಂದೆ ಕೊಟ್ಟ ಅರ್ಜಿಗಳಲ್ಲಿ ೨೨೪ ಅರ್ಜಿಗಳಿಗೆ ಹಣ ಪಾವತಿ ಮಾಡಬೇಕು ಎಂದು ಪಟ್ಟಿ ಕೊಟ್ಟಿದ್ದಾರೆ. ಮಾರ್ಚಿ ಆದಮೇಲೆ ೫೭೬ ಅರ್ಜಿಗಳು ಬಂದಿದೆ ಎಂದು ಹೇಳುತ್ತಾರೆ. ಈ ೨೨೪ ಮತ್ತು ೫೭೬ ಅರ್ಜಿಗಳಿದ್ದರೂ ಎಷ್ಟು ಹಣ ಕೊಟ್ಟಿದ್ದೀರಿ ಎಂದರೆ ಯಾರಿಗೂ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಕೊಡುವುದು ಉಳಿದಿದೆಯೋ ಎಂದರೆ ಕೊಡುವುದು ಇಲ್ಲ ಎಂದು ಹೇಳಿದ್ದಾರೆ. ಅದೇರೀತಿ ಭದ್ರಾವತಿ ಬಗ್ಗೆ ಹೇಳಿದ್ದಾರೆ. ೬೬೩ ಅರ್ಜಿಗಳು ಬಂದಿದ್ದವು. ೩೦೦ ಜನರಿಗೆ ಕೊಟ್ಟಿದ್ದಾರೆ. ೧೧೫ ಜನರಿಗೆ ಕ್ಯಾನ್ಸಲ್ ಆಗಿತ್ತು. ೨೪೮ ಅರ್ಜಿಗಳು ಉಳಿದಿದ್ದವು. ಹಣ ಕೊಟ್ಟಿದ್ದೀರಾ ಎಂದರೆ 'ಇಲ್ಲ' ಎಂದು ಹೇಳಿದ್ದಾರೆ, ಬಾಕಿ ಉಳಿದಿದೆಯೇ ಎಂದರೆ 'ಇಲ್ಲ' ಎಂದು ಹೇಳಿದ್ದಾರೆ. ಅದೇರೀತಿ ಚನ್ನಗಿರಿಯಲ್ಲಿ ೪೦೮ ಅರ್ಜಿಗಳು ಬಂದಿದ್ದವು. ಅದರಲ್ಲಿ ಹಣ ಕೊಡದೇ ಉಳಿದಿರುವುದು ೧೭. ಈ ವರ್ಷ ಏಪ್ರಿಲ್ ೧೯೮೫ರವರೆಗೆ ೧೭ ಉಳಿದಿದೆ. ೧೭ ಪ್ಲಸ್ ೧೭— ೩೪ ಅರ್ಜಿಗಳಾಯಿತು. ದುಡ್ಡು ಕೊಟ್ಟಿದ್ದೀರಾ ಎಂದರೆ 'ಇಲ್ಲ', ಕೊಡುವುದು ಇದೆಯೇ ಅಂದರೆ 'ಇಲ್ಲ' ಎಂದು ಹೇಳಿದ್ದಾರೆ. ತೀರ್ಥಹಳ್ಳಿಯಲ್ಲಿ ಹೆರಿಗೆ ಭತ್ಯ ಕೊಡಲಿಲ್ಲ ಎಂಬ ಬಗ್ಗೆ ಸತ್ಯಾಗ್ರಹ ನಡೆಯುತ್ತಿತ್ತು. ನಾನು ನಿಯಮ ೩೩೪ರಲ್ಲಿ ಈ ಪ್ರಶ್ನೆ ಕೇಳಿದಾಗ ಮಂತ್ರಿಗಳು ಉತ್ತರ ಕೊಟ್ಟು ತಕ್ಷಣ ಹಣ ಪಾವತಿ ಮಾಡುವ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು, ಆದರೂ ಹಣ ಪಾವತಿಯಾಗಿಲ್ಲ ಎಂದು ಐದಾರು ದಿವಸ್ಸು ಹಿಂದೆ ಬಿ.ಡಿ.ಓ. ಆಫೀಸ್ ಮುಂದೆ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ನಾನು ಇದನದ ಮಂತ್ರಿಗಳಿಗೆ ಹೇಳಿದಾಗ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಹಣ ಪಾವತಿ ಮಾಡಲು ಹೇಳುತ್ತೇನೆ ಎಂದು ಹೇಳಿದರು. ಉತ್ತರದಲ್ಲಿ ಏನು ಹೇಳಿದ್ದಾರೆಂದರೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ೨೨೪ ಅರ್ಜಿಯಲ್ಲಿ ಮಾರ್ಚಿಗೆ ಮುಂಚೆ ಮಂಜೂರಾದುದು ೧೫೬. ಕೊಟ್ಟಿದ್ದುದು ೫೨ ಜನರಿಗೆ ಮಾತ್ರ. ಮಾರ್ಚಿ ಆದಮೇಲೆ ಒಂದು ಅರ್ಜಿಯೂ ಬಂದಿಲ್ಲ ಎಂದು ಹೇಳಿದ್ದಾರೆ, ಮಾರ್ಚಿ ೮೫ರ ನಂತರ ಒಬ್ಬರಿಗೂ ಪೇಮೆಂಟ್ ಆಗಿಲ್ಲ. ಇದು ಕೊಟ್ಟಿರುವ ಉತ್ತರ. ಈ ರೀತಿ ಇಡೀ ೯ ತಾಲ್ಲೂಕಿನ

ಉತ್ತರ ಕೊಟ್ಟಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಶಾಸಕರಾಗಿ ನಮ್ಮ ನಮ್ಮ ಕ್ಷೇತ್ರಕ್ಕೆ ಮತ್ತು ರಾಜ್ಯಕ್ಕೆ ಸಂಬಂಧಿಸಿದ ಪ್ರಶ್ನೆ ಕೇಳಿದಾಗ ಶಾಸಕರಿಗೆ ಕೊಡುವ ಉತ್ತರ ಇದು. ಸಣ್ಣಪುಟ್ಟ ವ್ಯತ್ಯಾಸ ಆದರೆ ಪರವಾಗಿಲ್ಲ. ಈ ತರಹ ನಿರಾಧಾರವಾದ ಸುಳ್ಳು ವರದಿಯನ್ನು ಅಧಿಕಾರಿಗಳು ಕೊಡುತ್ತಾರೆ ಎಂದರೆ ಇದನ್ನು ನಂಬಿಕೊಂಡು ಶಾಸನಸಭೆಯಲ್ಲಿ ಕೆಲಸ ಮಾಡುವುದು ಹೇಗೆ ಎಂದು ನಿಮ್ಮನ್ನು ಕೇಳುತ್ತೇನೆ. ಇದು ಕೇವಲ ಶಿವಮೊಗ್ಗಕ್ಕೆ ಸೀಮಿತವಾದುದಲ್ಲ. ಈ ಇಲಾಖೆಯಲ್ಲಿ ನೂರೆಂಟು ಯೋಜನೆಗಳಿವೆ. ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡಿಕೊಂಡಿಲ್ಲ. ಹೆರಿಗೆ ಭತ್ಯ ಕೊಡುತ್ತೇವೆ ಎಂದು ಹೇಳಿ ಕೊಟ್ಟಿಲ್ಲ ಎಂದರೆ ಏನರ್ಥ? ಹೆರಿಗೆಭತ್ಯ ಅಲ್ಲಿ ಕೊಡು ವುದಕ್ಕೆ ಶುರು ಮಾಡಿದ ಮೇಲೆ ಏನಾದರೂ ಅಬಾರ್ಷನ್ ಶುರು ಆಯಿತೇ? ಅಥವಾ ಹೆರಿಗೆ ಆಗುವುದು ನಿಂತು ಹೋಯಿತೇ? ನಿಮ್ಮ ಮಾಹಿತಿ ಪ್ರಕಾರ ಶಿವಮೊಗ್ಗ ಜಿಲ್ಲೆಯಲ್ಲಿ ಯಾರೂ ಬಡವರು ಇಲ್ಲವೆ ? ಇವರು ಏನು ಹೇಳಿದ್ದಾರೆ ಎಂದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಮಾರ್ಚ್ ೨೫ ಆದಮೇಲೆ ಯಾವುದು ಪೇಮೆಂಟ್ ಆಗಿಲ್ಲ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ಭದ್ರಾವತಿಯಲ್ಲಿ ಯಾರಿಗೂ ಒಂದೇ ರೂಪಾಯಿ ಕೊಟ್ಟಿಲ್ಲ, ಹೊನ್ನಾಳಿಯಲ್ಲಿ ಮಾರ್ಚ್ ೭೫ರ ನಂತರ ಯಾರಿಗೂ ಒಂದು ರೂಪಾಯಿ ಕೊಟ್ಟಿಲ್ಲ, ಸೊರಬದಲ್ಲಿ ಯಾರಿಗೂ ಒಂದು ರೂಪಾಯಿ ಕೊಟ್ಟಿಲ್ಲ, ಸಾಗರದಲ್ಲಿ ಯಾರಿಗೂ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಮಾನ್ಯ ಸಚಿವರನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂದಲ್ಲ. ಯಾವ ಸಚಿವರಾದರೂ ಸಹ ಡಿಟೈಲ್ ಆಗಿ ಸ್ಟಡಿ ಮಾಡಿ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ ನಾಲ್ಕೈದು ಸಾವಿರ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ವಿಧಾನಸಭೆ ನಡೆಯತಕ್ಕ ಕಾಲದಲ್ಲಿ, ಕೊಡತಕ್ಕಂಥ ಬೇಜವಾಬ್ದಾರಿ ಉತ್ತರ ಏನಿದೆ ಅದನ್ನು ತೋರಿಸುವುದಕ್ಕೆ ಇದನ್ನೆಲ್ಲಾ ಹೇಳುತ್ತಿದ್ದೇನೆ. ಈ ರೀತಿ ಬೇಜವಾಬ್ದಾರಿ ಉತ್ತರ ಕೊಟ್ಟಿರತಕ್ಕ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ? ಅವರನ್ನು ಸಸ್ಪೆಂಡ್ ಮಾಡುತ್ತೀರಾ ? ಸುಳ್ಳು ಉತ್ತರ ಕೊಟ್ಟು ನಿಮ್ಮನ್ನು ಪೇಚಿಗೆ ಸಿಕ್ಕಿಸತಕ್ಕಂಥ ಕೆಲಸವನ್ನು ಅವರು ಏತಕ್ಕೆ ಮಾಡುತ್ತಿದ್ದಾರೆ ? ಈ ರೀತಿಯ ಉತ್ತರ ನಮಗೆ ಸಿಕ್ಕಿದಾಗ ಅದು ಸರಿಯಾದ ಮಾಹಿತಿ ಎಂದು ನಾವು ತಿಳಿದುಕೊಳ್ಳಬೇಕೇ ? ಈ ಕಚೇರಿಗೆ ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸುವಂತಹ ಈ ರೀತಿಯ ಮಾಹಿತಿಯನ್ನು ಈ ಶಾಸನಸಭೆಯಲ್ಲಿ ಕೊಡುತ್ತಿದ್ದರೆ, ನಿಜವಾಗಿಯೂ ರಾಜ್ಯದ ಜನತೆಯ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಶಾಸಕರಾಗಿ ನಾವು ಏನು ಬಂದಿದ್ದೇವೆ, ಆದರ ಉಪಯೋಗ ಆಗುವುದಿಲ್ಲ ಎಂದು ನೊಂದು ನಾನು ಈ ವಿಷಯವನ್ನು ಹೇಳಬೇಕಾಗಿದೆ. ತಾವು ಕೊಟ್ಟಿರುವ ಉತ್ತರ ತಮ್ಮ ಇಲಾಖೆಯ ಅಧಿಕಾರಿಗಳಿಂದ ತಾವು ತರಿಸಿಕೊಂಡಿರತಕ್ಕದ್ದು. ಅವರು ಏತಕ್ಕೆ ಈ ರೀತಿ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂಬುದರ ಬಗ್ಗೆ ವಿಚಾರಿಸಿ, ಈ ವಿಚಾರದಲ್ಲಿ ನನಗೆ ಸರಿಯಾದ ಮಾಹಿತಿಯನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಎರಡನೆಯದಾಗಿ, ನಮ್ಮ ರಾಜ್ಯದಲ್ಲಿ ನಿಮ್ಮ ಇಲಾಖೆಯ ಮೂಲಕ ಬಹಳಷ್ಟು ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದೀರಿ. ಅದು ಪ್ರೀಮೆಟ್ರಿಕ್ ಹಾಸ್ಟೆಲ್ ಇರಬಹುದು, ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಇರಬಹುದು ಅಥವಾ ಬೇರೆ ಹಾಸ್ಟೆಲ್‌ಗಳಿರಬಹುದು. ಬಹಳಷ್ಟು ಹಾಸ್ಟೆಲ್‌ಗಳಿಗೆ ನಾನೂ ಹೋಗಿ ಬಂದಿದ್ದೇನೆ. ಅಲ್ಲಿ ಏನು ಮಾಡುತ್ತಿದ್ದಾರೆ ಎಂದರೆ, ಪ್ರತಿಯೊಂದು ಹಾಸ್ಟೆಲ್‌ಗಳಿಗೂ, ಪ್ರತಿಯೊಂದು ತಾಲ್ಲೂಕಿನಲ್ಲಿ ಅಥವಾ ಪ್ರತಿಯೊಂದು ಜಿಲ್ಲೆಯಲ್ಲಿ, ನಿಶ್ಚಿತವಾದ ಇಬ್ಬರು ಮೂವರು ಕಂಟ್ರಾಕ್ಟರ್‌ಗಳು ಇರುತ್ತಾರೆ. ಯಾವ ರೀತಿ ಆಸ್ಪತ್ರೆಗಳಲ್ಲಿ ಊಟೋಪಚಾರಕ್ಕೆ ಒಂದು ಏಜೆನ್ಸಿ ತೆಗೆದುಕೊಂಡಿರುವ ಕಂಟ್ರಾಕ್ಟರುಗಳು ಇರುತ್ತಾರೆ, ಅದೇ ರೀತಿ ನಿಶ್ಚಿತವಾದ ಕಂಟ್ರಾಕ್ಟರುಗಳು ಈ ಹಾಸ್ಟೆಲ್‌ಗಳಿಗೂ ಸಹ ಇರುತ್ತಾರೆ. ಅವರು ಬೇರೆ ಬೇರೆ ಹೆಸರಿನಲ್ಲಿ ಅರ್ಜಿಗಳನ್ನು ಹಾಕುತ್ತಾರೆ. ಅವರು ಹಾಸ್ಟೆಲ್‌ಗಳನ್ನು ನಡೆಸಿಕೊಂಡು ಹೋಗುತ್ತಾರೆ. ಅಲ್ಲಿ ಕೊಡತಕ್ಕಂಥ ಆಹಾರ ಪದಾರ್ಥಗಳ ಸ್ಥಿತಿ ಯಾವ ರೀತಿ ಇರುತ್ತದೆ ಎಂದರೆ. ಬೀದಿಭಿಕಾರಿಗಳೂ ಸಹ ತಿನ್ನಲಿಕ್ಕೆ ಸಾಧ್ಯ ಇಲ್ಲದಂಥ ಆಹಾರ ಪದಾರ್ಥಗಳನ್ನು ಅಲ್ಲಿ ಸಪ್ಲೈ ಮಾಡುವುದನ್ನು ನಾವು ನೋಡಬಹುದು. ಒಂದೆರಡು ತಿಂಗಳುಗಳ ಹಿಂದೆ ನಾನು ಶಿಕಾರಿಪುರ, ಶಿರಾಳಕೊಪ್ಪ ಹಾಸ್ಟೆಲುಗಳಿಗೆ ಹೋಗಿದ್ದೆ. ಅಲ್ಲಿ ಮಕ್ಕಳು ಊಟ ಮಾಡುವಂತಹ ಸಂದರ್ಭದಲ್ಲಿ ಹೋಗಿ ನೋಡಬೇಕು. ಅಲ್ಲಿ ಬೇರೆ ಕಡೆ ಒಂದು ೨೫–೩೦ ಕೆ.ಜಿ. ಉತ್ತಮವಾದ ಅಕ್ಕಿಯನ್ನು ಇಟ್ಟಿರುತ್ತಾರೆ. ಆದರೆ ಅಲ್ಲಿ ಅಡಿಗೆ ಮಾಡಿದಂತಹ ಅನ್ನವನ್ನು ತೆಗೆದುಕೊಂಡು ನೋಡಿದರೆ, ಬೇರೆ ಅಕ್ಕಿಯಲ್ಲಿ ಅನ್ನವನ್ನು ಮಾಡಿರುತ್ತಾರೆ. ನಮ್ಮಂಥವರು ನಿಮ್ಮಂಥವರು ಯಾರಾದರೂ ಹೋದರೆ ತೋರಿಸುವುದಕ್ಕೆ ಬೇರೆ ಅಕ್ಕಿ ಇಟ್ಟಿರುತ್ತಾರೆ. ಬೇರೆ ಅಕ್ಕಿಯಲ್ಲಿ ಅನ್ನ ಮಾಡುತ್ತಾರೆ. ಅದೇ ರೀತಿ ತರಕಾರಿ ವಿಷಯದಲ್ಲೂ ಅಷ್ಟೆ. ಆಲೂಗಡ್ಡೆ, ಈರುಳ್ಳಿ ಎಲ್ಲಾ ತರಕಾರಿ ಸ್ಯಾಂಪಲ್‌ಗೆ ಅಲ್ಲಿ ಇಟ್ಟಿರುತ್ತಾರೆ. ಅಲ್ಲಿ ಮಾಡ

ತಕ್ಕ ಸಾಂಬಾರನ್ನು ತೆಗೆದುಕೊಂಡು ನೋಡಿದರೆ ಅದರಲ್ಲಿ ಯಾವ ತರಕಾರಿಯೂ ಇರುವುದಿಲ್ಲ. ನಾನು ಹೊಸ ವಿಚಾರವನ್ನು ಸದನದಲ್ಲಿ ಹೇಳುತ್ತಿದ್ದೇನೆ. ದಯಮಾಡಿ ಕೇಳಬೇಕು. ಕೋಟ್ಯಾಂತರ ರೂಪಾಯಿಗಳ ಹಣವನ್ನು ಇಲಾಖೆಯಿಂದ ಖರ್ಚು ಮಾಡುತ್ತಿದ್ದೀರಿ. ಆದರೆ ಅದು ಯಾವ ರೀತಿ ಬಡವರಿಗೆ ತಲುಪುತ್ತಿಲ್ಲ, ದುರುಪಯೋಗ ಆಗುತ್ತಿದೆ ಎನ್ನುವುದನ್ನು ತೋರಿಸುವ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಹಾಸ್ಟೆಲ್‌ನಲ್ಲಿ ಬರತಕ್ಕಂಥವರು ಕಡುಬಡವರ ಮಕ್ಕಳು. ಅವರ ಹಿತದೃಷ್ಟಿಯಿಂದ, ಅಲ್ಲಿಗೆ ಸರಿಯಾದಂಥ ಆಹಾರವನ್ನು ಸರಬರಾಜು ಮಾಡಬೇಕು. ಪಡಿತರ ಪದ್ಧತಿಯ ಮೂಲಕ ಒಳ್ಳೆಯ ಅಕ್ಕಿಯನ್ನು ಕೊಡುತ್ತಿದ್ದೀರಿ. ಇವೊತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನೂ ಕೊಟ್ಟಿರುತ್ತೀರಿ. ಸರಕಾರ ಪಡಿತರ ಅಂಗಡಿಗಳಿಗೆ ಏನು ಅಕ್ಕಿಯನ್ನು ಸರಬರಾಜು ಮಾಡುತ್ತದೆ ಅದನ್ನೇ ಈ ಹಾಸ್ಟೆಲ್‌ಗಳಿಗೂ ಸರಬರಾಜು ಮಾಡಬೇಕೆಂದು ಇದೆ. ಆದರೆ ನೂರಾರು ಚೀಲ ಅಕ್ಕಿ ಉಳಿದಿದ್ದರೂ ಸಹ, ಹಾಸ್ಟೆಲ್ ಕಂಟ್ರಾಕ್ಟರುಗಳು ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಸಿದ್ಧರಿಲ್ಲದೆ, ಯಾವುದೊ ಕೆಲಸಕ್ಕೆ ಬಾರದ ಅಕ್ಕಿಯನ್ನು ತೆಗೆದುಕೊಂಡು ಬಂದು ಅನ್ನ ಮಾಡಿ ಹಾಕುತ್ತಾರೆ. ತರಕಾರಿಯನ್ನು ಉಪಯೋಗಿಸುವುದಿಲ್ಲ. ಇದರ ಬಗ್ಗೆ ಗಮನ ಕೊಡಬೇಕು.

ಇನ್ನು ಹಾಸ್ಟೆಲ್‌ಗಳಲ್ಲಿರತಕ್ಕಂಥ ಬಡ ಮಕ್ಕಳಿಗೆ ಯೂನಿಫಾರಂ ಕೊಡುತ್ತೀರಿ. ನಾನು ಒಂದು ಸಲ ಈ ಬಟ್ಟೆಗಳನ್ನು ವಿತರಣೆ ಮಾಡುವಂತಹ ಸಂದರ್ಭದಲ್ಲಿ ಹೋಗಿದ್ದೆ. ಶಾಸಕರಾಗಿ ನಾವು ಯಾವ ಪಾಪ ಮಾಡಿದ್ದೆವೋ ಏನೋ ಇದನ್ನೆಲ್ಲಾ ನಾವು ಈಗ ನೋಡುವಂತಹ ಸಂದರ್ಭ ಬಂದಿದೆ. ಬಟ್ಟೆಗಳನ್ನು ವಿತರಣೆ ಮಾಡುವಂತಹ ಸಂದರ್ಭದಲ್ಲಿ, ಹಾಸ್ಟೆಲ್‌ನಲ್ಲಿ ಇರತಕ್ಕ ಮಕ್ಕಳನ್ನು, ಹೋಗಿ ಬಟ್ಟೆ ಹಾಕಿಕೊಂಡು ಬನ್ನಿ ಎಂದು ಕಳುಹಿಸಿದರೆ, ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಆ ಬಟ್ಟೆಗಳ ಒಳಗಡೆ ಅವನ ಕೈಕಾಲುಗಳು ಹೋಗುವುದಿಲ್ಲ. ಎಲ್ಲಾ ಅನ್‌ಸೈಜ್. ಎಲ್ಲೋ ಬಟ್ಟೆಗಳನ್ನು ಹೊಲಿಸಿಕೊಂಡು ಬಂದು ಕೊಟ್ಟಿರುತ್ತಾರೆ. ವಿಶೇಷವಾಗಿ ನೀರಿಗೆ ಹಾಕಿದ ಮೇಲೆ ಅದನ್ನು ಹಾಕಿಕೊಳ್ಳುವುದಕ್ಕೇ ಆಗುವುದಿಲ್ಲ. ಈ ರೀತಿ ಆಗುತ್ತಿದೆ. ನಿಮ್ಮ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು .ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಸರ್‌ಪ್ರೈಸ್ ವಿಸಿಟ್ ಮಾಡಿ, ಇದನ್ನೆಲ್ಲಾ ಪರಿಶೀಲನೆ ಮಾಡಿ. ಯೋಗ್ಯರಾದ ಪ್ರಾಮಾಣಿಕರಾದ ಅಧಿಕಾರಿಗಳು ಇಲಾಖೆಯಲ್ಲಿ ಇರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ನೀವು ಅಧಿಕಾರಿಗಳಿಗೆ ತಿಳಿಸಬೇಡಿ, ನೀವು ಬರುವಂತಹ ವಿಷಯ ಹೇಳಬೇಡಿ, ಸರ್‌ಪ್ರೈಸ್ ವಿಸಿಟ್ ಮಾಡಿ, ಆಗ ನಿಮಗೆ ಎಲ್ಲಾ ಗೊತ್ತಾಗುತ್ತದೆ. ಈ ವಿಚಾರಗಳನ್ನು ನಾನು ನೊಂದುಕೊಂಡು ಹೇಳುತ್ತಿದ್ದೇನೆ. ಕಳಕಳಿಯಿಂದ ಹೇಳುತ್ತಿದ್ದೇನೆ. ನಾವು ಶಾಸಕರಾಗಿ ಬಂದಾಗ, ಚರ್ಚೆಯಲ್ಲಿ ಭಾಗವಹಿಸಿ, ಕೆಲವು ಅಭಿಪ್ರಾಯಗಳನ್ನು ಕೊಟ್ಟಾಗ, ಅದನ್ನು ತಾವು ಗಮನಿಸುತ್ತೀರೋ ಇಲ್ಲವೋ ಎಂಬ ಒಂದು ಅನುಮಾನ ಬಂದಿದೆ. ನ್ಯಾಯ ವಿಚಾರವನ್ನೂ ಯಾವುದೇ ವ್ಯಕ್ತಿಗಳು ತಿಳಿಸಿದಾಗ ಅದನ್ನು ಪರಿಶೀಲನೆ ಮಾಡಿ ಸರಿ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡದೇ ಹೋದರೆ, ನಾವು ನೀಡುವಂತಹ ಯೋಗ್ಯವಾದ ಸಲಹೆಗಳನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡದೇ ಹೋದರೆ, ಬಹುಶಃ ವಿರೋಧ ಪಕ್ಷಗಳು ಟೀಕೆ ಮಾಡುವುದಕ್ಕೋಸ್ಕರ ಕೆಲವು ಸಂಗತಿಗಳನ್ನು ಹೇಳುತ್ತಾರೆ ಎಂಬ ಭಾವನೆ ಬರುವುದಾದರೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಶಾಸಕರಾಗಿ ಬಂದು ಕೆಲಸ ಮಾಡುವುದರಿಂದ ಉಪಯೋಗ ಇಲ್ಲ ಎಂಬ ಭಾವನೆ ಬರುತ್ತದೆ. ಈ ತರಹ ನೂರಾರು ಮಾಹಿತಿಗಳು ಇವೆ. ಅದರಲ್ಲಿ ಒಂದೇ ಒಂದು ಉದಾಹರಣೆ ಎಂದರೆ, ನಿಮ್ಮ ಇಲಾಖೆಯ ಅಧಿಕಾರಿಗಳು ಲಿಖಿತ ಮೂಲಕ ತಪ್ಪು ಮಾಹಿತಿಯನ್ನು ಕೊಟ್ಟಾಗ, ನಿಮ್ಮ ಇಲಾಖೆಯ ಅಧೀನ ಕಾರ್ಯದರ್ಶಿಗಳು ಯಾರೋ ಕಲ್ಲಪ್ಪ ಎಂದು ಹೇಳಿ ಸೈನ್ ಮಾಡಿ ಕಳುಹಿಸಿರುವ ಪ್ರತಿ ನನ್ನ ಹತ್ತಿರ ಇದೆ. ನಮಗೆ ಇಷ್ಟೊಂದು ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ ಎಂದಮೇಲೆ ನಿಮ್ಮ ಇಲಾಖೆಯ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಯೋಚನೆ ಮಾಡಬಹುದು ಇನ್ನು ನೀವು ಕೇವಲ ತೋರಾಣಿಕೆಗೆ ಬಹಳಷ್ಟು ಸ್ಕೀಂಗಳನ್ನು ಮಾಡುತ್ತಿದ್ದೀರಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನೂರಾರು ಸಮಸ್ಯೆಗಳು ಇವೆ. ಎಲ್ಲಾ ಸಮಸ್ಯೆಗಳನ್ನೂ ಒಂದೇ ಸಲ ಬಗೆಹರಿಸುವುದಕ್ಕೆ ಆಗುವುದಿಲ್ಲ, ಒಂದೇ ಸಲ ಎಲ್ಲರಿಗೂ ಎಲ್ಲಾ ಸೌಲಭ್ಯಗಳನ್ನೂ ಕೊಡುವುದಕ್ಕೆ ಆಗುವುದಿಲ್ಲ. ಯಾವುದಾದರೂ ಒಂದು ಯೋಜನೆ ಪ್ರಾರಂಭ ಮಾಡಿದರೆ, ಅದನ್ನು ಮುಗಿಸಿದ ನಂತರ ಇನ್ನೊಂದು ಯೋಜನೆ ಕೈಗೊಳ್ಳಬೇಕು. ಇಲ್ಲ ಎಂದರೆ ಯಾವುದೂ ಸರಿಯಾಗಿ ಆಗುವುದಿಲ್ಲ. ಈಗ ಹೆರಿಗೆ ಭತ್ಯೆ ಕೊಡುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಇತರ ಅಧಿಕಾರಿಗಳ ಜೊತೆ ಚರ್ಚೆ ಮಾಡಿರುತ್ತೀರಾ ? ಹೆರಿಗೆ ಭತ್ಯೆ ಮಂಜೂರು ಮಾಡುವ ಸಂದರ್ಭದಲ್ಲಿ ಯಾವ ಕಳಕಳಿ ಇಟ್ಟುಕೊಂಡು ಮಂಜೂರು ಮಾಡಿದರೋ ಅದು ಆ ರೀತಿ

ಆಗುತ್ತಿಲ್ಲ. ಕಾರಣ ಮಂಜೂರಾತಿ ಮಾಡಿದ ಮೇಲೆ ಏನು ಮಾಡಬೇಕೋ ಅದನ್ನು ಮಾಡುತ್ತಿಲ್ಲ. ಏನೋ ಮಂಜೂರಾತಿ ಮಾಡಿದರು, ಅದಕ್ಕೆ ಸರಿಯಾದ ಏರ್ಪಾಡು ಮಾಡಿಲ್ಲ. ಅದಕ್ಕೆ ನಾನು ತಮ್ಮನ್ನು ಕೇಳುತ್ತೇನೆ, ಈ ರಾಜ್ಯದಲ್ಲಿ ಈ ಭತ್ಯೆ ಪಡೆಯಲು ಅರ್ಹರಾದ ಎಷ್ಟು ಜನ ಮಹಿಳೆಯರಿದ್ದಾರೆ ಎಂಬುದರ ಬಗ್ಗೆ ಸರಿಯಾದ ಅಂಕಿ ಅಂಶಗಳನ್ನು ಸಂಗ್ರಹ ಮಾಡಿ. ಈ ಹೆರಿಗೆ ಭತ್ಯವನ್ನು ವಾರ್ಷಿಕವಾಗಿ ಎಷ್ಟು ಜನ ಮಹಿಳೆಯರಿಗೆ ಕೊಡುವುದಕ್ಕೆ ಸಾಧ್ಯ ಇದೆ ಎಂಬುದನ್ನು ನೋಡಿ. ಅದಕ್ಕೆ ತಕ್ಕ ಏರ್ಪಾಡು ಮಾಡಿ. ಇಲ್ಲದೇ ಹೋದರೆ ಚೀಪ್ ಪಾಪ್ಯುಲಾರಿಟಿಗೋಸ್ಕರ ಇಂತಹ ಯೋಜನೆಗಳನ್ನು ಮಾಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ನಾವು ಹಳ್ಳಿಗಳ ಕಡೆ ಹೋದರೆ ನೂರಾರು ಜನ ಮಹಿಳೆಯರು ಬಂದು ನಮಗೆ ಇದು ಸಿಕ್ಕಿಲ್ಲ ಎಂದು ಹೇಳುತ್ತಾರೆ, ಅವರಿಗೆ ನಾವು ಏನು ಹೇಳುವುದು ? ಹಳ್ಳಿಗಳ ಕಡೆ ಹೋದರೆ ಸಾವಿರಾರು ಜನ ಬಂದು ನಮಗೆ ಯಾವುದೇ ಯೋಜನೆಯ ಸೌಲಭ್ಯವೂ ದೊರಕುತ್ತಿಲ್ಲ ಎಂದು ಹೇಳುತ್ತಾರೆ, ನಾವು ಅವರಿಗೆ ಏನು ಹೇಳುವುದು. ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ಈ ಹೆರಿಗೆ ಭತ್ಯಕ್ಕೆ ಸಂಬಂಧಿಸಿದಂತೆ ೬೦೦ ಅರ್ಜಿ ಪೆಂಡಿಂಗ್ ಇದೆ. ಇದಕ್ಕೆ ಸುಮಾರು ಮೂರು ಲಕ್ಷ ರೂಪಾಯಿಗಳನ್ನು ನಾವು ಕೊಡಬೇಕಾಗಿದೆ. ಒಂದು ಜಿಲ್ಲೆಗೆ ೨೫ ಲಕ್ಷ ರೂಪಾಯಿಗಳನ್ನಾದರೂ ಕೊಟ್ಟರೆ ಪೆಂಡಿಂಗ್ ಇರುವಂತಹ ಅರ್ಜಿಗಳನ್ನು ಮುಗಿಸಬಹುದು. ಈ ರೀತಿ ಆದರೆ ಉಳಿದವರಿಗೆ ಯಾವಾಗ ಕೊಡುವುದು ?

ಇನ್ನು ಬೆರಳಚ್ಚು ಮಾಡುವವರಿಗೆ, ಅಂದರೆ ಟೈಪ್‌ರೈಟಿಂಗ್‌ನಲ್ಲಿ ತರಬೇತಿ ಪಡೆಯುವವರಿಗೆ ಸ್ಟೈಪೆಂಡ್ ಕೊಡುತ್ತೀರಿ. ಒಬ್ಬರಿಗೆ ತಿಂಗಳಿಗೆ ೫೦ ರೂಪಾಯಿಗಳನ್ನು ಕೊಡುತ್ತೀರಿ. ಎಷ್ಟು ಜನಕ್ಕೆ ಕೊಟ್ಟಿದ್ದೀರಿ ಎಂದು ನೋಡಿದರೆ ೧೯೮೪-೮೫ರಲ್ಲಿ ೩೬೦ ಜನಕ್ಕೆ ಕೊಟ್ಟಿದ್ದೀರಿ. ಏನೋ ಒಂದು ಮೂರು ಸಾವಿರ ಜನಕ್ಕಾದರೂ ಕೊಟ್ಟಿದ್ದರೆ ಪರವಾಗಿಲ್ಲ ಎನ್ನಬಹುದಾಗಿತ್ತು. ಒಂದು ತಾಲ್ಲೂಕಿನಲ್ಲಿ ನೂರು ಜನಕ್ಕೆ ಕೊಡುವುದಕ್ಕೆ ಅವಕಾಶ ಇತ್ತು. ಇದನ್ನು ಯಾವ ತಾಲ್ಲೂಕಿನಲ್ಲಿ ಕೊಟ್ಟಿದ್ದೀರಿ ಏತಕ್ಕೆ ಕೊಟ್ಟಿದ್ದೀರಿ, ಯಾರಿಗೆ ಕೊಟ್ಟಿದ್ದೀರಿ. ಇಡೀ ರಾಜ್ಯದಲ್ಲಿ ನೀವು ಕೊಟ್ಟಿರ ತಕ್ಕಂಥ ಸಂಖ್ಯೆ ೩೬೦. ಮುಂದೇನಾದರೂ ಯೋಜನೆ ಇಟ್ಟುಕೊಂಡಿರುತ್ತೀರಾ ಎಂದರೆ ೧೯೮೫-೮೬ರಲ್ಲಿ ೪೨೦ ಜನಕ್ಕೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಇದೇ ರೀತಿ ಕರ್ನಾಟಕ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಚೈತನ್ಯ ಕಾರ್ಯಕ್ರಮ ಎಂದು ಹಾಕಿದ್ದೀರಿ. ಸ್ವಾಮಿ, ಈ ಕಾರ್ಯಕ್ರಮದಲ್ಲಿ ೧೯೮೪-೮೫ರಲ್ಲಿ ೩೦ ಲಕ್ಷ ರೂಪಾಯಿಗಳನ್ನು ಒದಗಿಸಿತ್ತು ಎಂದು ಹೇಳಿದ್ದೀರಿ. ಇದನ್ನು ಮಾನ್ಯ ಸಚಿವರಾಗಲೀ, ಯಾರಾದರೂ ಆಗಲಿ, ಬರೆದುಕೊಳ್ಳಿ, ತಾವು ಉತ್ತರ ಕೊಡುವುದರಲ್ಲಿ ಸಾಯಂಕಾಲ ಆಗುತ್ತದೆ. ಆಗ ನಾವು ಹೇಳಿದ್ದನ್ನು ಕೇಳುವಷ್ಟು ಸಂಯಮ ಇರುವುದಿಲ್ಲ. ಕಳೆದ ೨೫-೩೦ ದಿವಸಗಳಿಂದ ಸದನ ನಡೆಯುತ್ತಿದ್ದರೂ ನಮಗೇನೂ ಉಪಯೋಗ ಆಗುತ್ತಿಲ್ಲ. ೧೯೮೪-೮೫ರಲ್ಲಿ ಈ ಚೈತನ್ಯ ಕಾರ್ಯಕ್ರಮಕ್ಕೆ ೩೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ, ಇದರಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ಈ ಪುಸ್ತಕದಲ್ಲಿ ಏತಕ್ಕೆ ಹೇಳಲಿಲ್ಲ ? ೧೯೮೫-೮೬ರಲ್ಲಿ ಇದಕ್ಕೆ ೧೦ ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ. ಹೋದವರ್ಷ ೩೦ ಲಕ್ಷ ರೂಪಾಯಿಗಳಲ್ಲಿ ಖರ್ಚಾದುದು ಎಷ್ಟು ಎಂಬುದು ಈ ಪುಸ್ತಕದಲ್ಲಿ ಸಿಗುವುದಿಲ್ಲ. ಈ ವರ್ಷ ೧೦ ಲಕ್ಷ ರೂಪಾಯಿಗಳನ್ನು ಏನು ಮಾಡುತ್ತೀರಿ ಎಂಬುದು ನನಗೆ ಗೊತ್ತಿಲ್ಲ. ಇದೇ ರೀತಿ ಕರ್ನಾಟಕ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಬಂಡವಾಳ ಹೂಡಿಕೆ ಅಲ್ಪ ಹಣಕಾಸಿನ ಸಾಲ ಯೋಜನೆಗೆ ೧೯೮೪-೮೫ರಲ್ಲಿ ೩೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುತ್ತೀರಿ. ಅದರಲ್ಲಿ ಎಷ್ಟು ಖರ್ಚು ಮಾಡಿರುತ್ತೀರಿ ಎಂಬುದು ಇಲ್ಲ. ಈ ವರ್ಷ ಅದಕ್ಕೆ ಇಟ್ಟಿರುವಂತಹದು ೫ ಲಕ್ಷ ರೂಪಾಯಿಗಳು. ಇದು ಏನು ಅಂಕಿಸಂಖ್ಯೆ ಯಾವ ಆಧಾರದ ಮೇಲೆ ಇದನ್ನು ಇಟ್ಟಿರುತ್ತೀರಿ ಎಂದು ನಾನು ಕೇಳುತ್ತಿದ್ದೇನೆ. ಈ ರೀತಿ ಈ ಸದನದಲ್ಲಿ ನಾವು ಕೆಲಸ ಮಾಡಿ, ತಾವು ಕೊಟ್ಟ ಅಂಕಿ ಅಂಶಗಳನ್ನು ಒಪ್ಪಿಕೊಂಡು, ನಾವೂ ಸದನದಲ್ಲಿ ಕೆಲಸ ಮಾಡುತ್ತೇವೆಂದು ಸಮಾಧಾನ ಪಟ್ಟುಕೊಳ್ಳಬೇಕು ಅಷ್ಟೆ. ಈ ಐದು ಲಕ್ಷ ರೂಪಾಯಿ ಯಾವುದಕ್ಕೆ, ಈ ೩೫ ಲಕ್ಷ ರೂಪಾಯಿನಲ್ಲಿ ಎಷ್ಟು ಖರ್ಚು ಮಾಡಿರುತ್ತೀರಿ ಅದರ ವಿವರ ಕೊಡುವ ಪ್ರಯತ್ನ ಮಾಡಿ. ಪೇಜ್ ೧೧ರಲ್ಲಿ ಮರಗೆಲಸದ ಉತ್ಪಾದನಾ ಕೇಂದ್ರ ಎಂದು ಕೊಟ್ಟಿದ್ದೀರಿ. ತಾವು ಬಡವರನ್ನು ಉದ್ಧಾರ ಮಾಡುತ್ತೀರಿ. ತಾವು ಇಡೀ ರಾಜ್ಯದಲ್ಲಿ ಈ ತರಬೇತಿಯನ್ನು ಎಷ್ಟು ಜನಕ್ಕೆ ಕೊಟ್ಟಿದ್ದೀರಿ ಎಂದರೆ ೨೦ ಜನಕ್ಕೆ ಮಾತ್ರ ಕೊಟ್ಟಿದ್ದೀರಿ. ಏನು ಸ್ವಾಮಿ ಇದು, ಈ ಪುಸ್ತಕದ ಪ್ರಿಂಟಿಂಗ್ ಖರ್ಚಾಗಲಿಲ್ಲ ಇದು. ಇದನ್ನು ಏತಕ್ಕೆ ಪ್ರಿಂಟ್ ಮಾಡಿರುತ್ತೀರಿ ? ಇಡೀ ರಾಜ್ಯದಲ್ಲಿ ೨೦ ಜನಕ್ಕೆ ತರಬೇತಿ ಕೊಟ್ಟಿರುತ್ತಿರುತ್ತೇವೆಂದು ಹೇಳಿರುತ್ತೀರಿ. ಯಾರಿಗೋಸ್ಕರ ಈ ಪುಸ್ತಕ ಪ್ರಿಂಟ್ ಮಾಡಿರುತ್ತೀರಿ. ಇನ್ನು ಐದು ಹೊಲಿಗೆ ತರಬೇತಿ ಕೇಂದ್ರಗಳು ಇವೆ. ಇದರ ಮೂಲಕ ೧೯೮೪-೮೫ರಲ್ಲಿ ಇಡೀ ರಾಜ್ಯದಲ್ಲಿ ೯೬

ಜನಕ್ಕೆ ತರಬೇತಿ ಕೊಟ್ಟಿರುತ್ತೀರಿ. ಒಂದೊಂದು ತಾಲ್ಲೂಕಿಗೆ ಒಂದೊಂದು ಬರಲಿಲ್ಲವಲ್ಲ ಸ್ವಾಮಿ. ಇದೆಲ್ಲಾ ಏನು ಯೋಚಿಸಿ. ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿ ಪಡೆಯುವವರಿಗೆ ಸ್ಟೈಪೆಂಡ್ ಕೊಟ್ಟಿದ್ದೀರಿ. ೧೯೮೪-೮೫ರಲ್ಲಿ ಇಡೀ ರಾಜ್ಯದಲ್ಲಿ ೩೯೦ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ.

ನೀವು ಮೂರು ಸಾವಿರ ಜನಕ್ಕೆ ಕೊಡುವುದಕ್ಕಾಗುತ್ತದೆ ಎಂದಲ್ಲ. ಬರೀ ತೋರುಗಾಣಿಕೆಗೆ ನೂರೆಂಟು ಯೋಜನೆಗಳನ್ನು ಮಾಡುವುದು ಬೇಡ. ಹಿಂದಿನ ಸರ್ಕಾರ ಮಾಡಿದ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು, ಅವುಗಳನ್ನು ಮುಗಿಸುವುದಕ್ಕೆ ಇನ್ನೂ ೧೫-೨೦ ವರ್ಷಗಳು ಬೇಕು. ಅವುಗಳನ್ನು ಮಾಡದೇ ಹೊಸ ಹೊಸ ಯೋಜನೆಗಳನ್ನು ಮಾಡುವುದಾದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಮೊದಲು ಅವುಗಳಿಗೆ ಸಾಕಷ್ಟು ಹಣ ಸಂಗ್ರಹಣೆ ಮಾಡುವ ಪ್ರಯತ್ನವನ್ನು ತಾವು ಮಾಡಬೇಕು. ಈ ಯೋಜನೆಗಳಿಗಾಗಿ ಹಣವನ್ನು ಮುಡುಪಾಗಿಡಬೇಕು. ಇದರಲ್ಲಿ ಈ ಸಾರಿ ಐದು ಸಾವಿರ ಜನಕ್ಕೆ ಕೊಡುತ್ತೇವೆ, ಮುಂದಿನ ಸಾರಿ ೧೦ ಸಾವಿರ ಜನಕ್ಕೆ ಕೊಡುತ್ತೇವೆ ಎಂದು ಹೇಳುವಂತಹ ಯಾವುದೇ ಅಂಕಿ ಅಂಶ ಇಲ್ಲ.

ಇನ್ನು ವಿಶೇಷ ಘಟಕ ಯೋಜನೆ. ಇದಕ್ಕೆ ಒಂದು ತಾಲ್ಲೂಕಿನಲ್ಲಿ ಕೇವಲ ಎರಡು ಗ್ರಾಮಗಳನ್ನು ಮಾತ್ರ ಆರಿಸುವುದು. ನಾವೆಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗುತ್ತೇವೆ. ದೊಡ್ಡ ದೊಡ್ಡ ತಾಂಡಗಳನ್ನೂ, ಹರಿಜನರು ವಾಸ ಮಾಡುವಂತಹ ಸ್ಥಳವನ್ನೂ ಆರಿಸಿಕೊಂಡಿದ್ದೇವೆ. ಅಲ್ಲಿ ಈ ಸೌಲಭ್ಯಕ್ಕಾಗಿ ಅರ್ಜಿ ಹಾಕಿರುವವರು ೩೪೦-೩೫೦ ಜನ ಇದ್ದಾರೆ, ಆದರೆ ಅಲ್ಲಿ ಎಷ್ಟು ಜನಕ್ಕೆ ಕೊಡುತ್ತಾರೆ ಎಂದರೆ, ಮೂರು ಜನಕ್ಕೆ ಎಮ್ಮೆ, ನಾಲ್ಕು ಜನಕ್ಕೆ ಎತ್ತು, ೧೦ ಜನಕ್ಕೆ ಗೊಬ್ಬರ. ಇನ್ನು ಉಳಿದವರಿಗೆ ಏನು ಕೊಡೋಣ ? ನಾವು ಅಲ್ಲಿಗೆ ಹೋದರೆ ಜನ ನಮ್ಮನ್ನು ಹಿಡಿದುಕೊಂಡು ಒದೆಯುತ್ತಾರೆ.

ಶ್ರೀ ಎಂ.ಎಸ್. ಪಾಟೀಲ್.—ಒದ್ದರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ವಿಶೇಷ ಘಟಕ ಯೋಜನೆ ಒಂದು ತಾಲ್ಲೂಕಿನಲ್ಲಿ ೨೦೦-೩೦೦ ಹಳ್ಳಿ ಇದ್ದರೆ, ಅದರಲ್ಲಿ ತೆಗೆದುಕೊಳ್ಳುವುದು ಎರಡು ಗ್ರಾಮ ಮಾತ್ರ. ಅಲ್ಪಸಂಖ್ಯಾತರು ೫೦ ಪರ್ಸೆಂಟ್‌ಗಿಂತ ಹೆಚ್ಚು ಇದ್ದರೂ ಅಲ್ಲಿ ಈ ಸೌಲಭ್ಯ ಸಿಗಲಿಲ್ಲ ಎಂದರೆ, ಒಂದು ತಾಲ್ಲೂಕಿನಲ್ಲಿ ಒಂದೆರಡು ಗ್ರಾಮಗಳನ್ನು ಆರಿಸಿಕೊಳ್ಳುವ ಉದ್ದೇಶ ಏನು ? ಮುಂದಿನ ವರ್ಷ ಬಾಕಿ ಇದ್ದವರೂ ಪುನಃ ಕೇಳಿದರೆ, ಅವರಿಗೆ ಹಿಂದಿನ ವರ್ಷವೇ ಕೊಟ್ಟಿದೆ ಎಂದು ಹೇಳುತ್ತಾರೆ. ಆದರೆ ಪ್ರತ್ಯಕ್ಷವಾಗಿ ಹೋಗಿ ನೋಡಿದಾಗ, ಯಾವುದೇ ಸೌಲಭ್ಯ ಸಿಕ್ಕಿರುವುದಿಲ್ಲ. ಆದ್ದರಿಂದ ನೀವು ಯಾವುದೇ ಯೋಜನೆಯನ್ನು ಕೈಗೆತ್ತಿಕೊಂಡರೂ ಸಹ ನೂರಕ್ಕೆ.........

ಅಧ್ಯಕ್ಷರು.—೧೫ ನಿಮಿಷ ಆಗಿದೆ, ಇನ್ನು ೫ ನಿಮಿಷದಲ್ಲಿ ತಾವು ಮುಗಿಸಿಬಿಡಿ.

ಶ್ರೀ ಪಟಮಕ್ಕಿ ರತ್ನಾಕರ್. ಗ್ರಾಮೀಣ ಪ್ರದೇಶದ ಜನರು ಅನುಭವಿಸುತ್ತಿರತಕ್ಕ ಆಗು ಹೋಗುಗಳನ್ನು ಸಭೆಯ ಮುಂದಿಡುತ್ತಿದ್ದಾರೆ. ಚರ್ಚೆಯನ್ನು ನಾಳೆಗೆ ಬೇಕಾದರೂ ಮುಂದುವರಿಸಿ,

ಅಧ್ಯಕ್ಷರು.—ಮಾನ್ಯ ರತ್ನಾಕರ್ ಅವರೇ ತಾವು ಕುಳಿತುಕೊಳ್ಳಿ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಪೇಜ್ ೨೬ರಲ್ಲಿ ವಿಶೇಷ ಘಟಕ ಯೋಜನೆಗೆ ಏನೇನು ಸೌಲಭ್ಯ ಕೊಟ್ಟಿದ್ದೇವೆ ಎಂಬುದನ್ನು ಹೇಳಿದ್ದೀರಿ. ಒಂದು ಕಡೆ ಕೊಡುತ್ತೇವೆ ಎಂಬ ಮಾತನ್ನು ಹೇಳುತ್ತೀರಿ, ಮತ್ತೊಂದು ಕಡೆ ಹಣ ಇರಲಿಲ್ಲ ಅದಕ್ಕೋಸ್ಕರ ಹೆಚ್ಚು ಜನಕ್ಕೆ ಸೌಲಭ್ಯ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ. ಮತ್ತೊಂದು ಕಡೆ ಹಣ ಕೊಟ್ಟಿದ್ದೇವೆಂದು ಹೇಳುತ್ತೀರಿ. ನೀವು ಯಾವ ಯಾವ ಭಾಗಕ್ಕೆ ಹಣವನ್ನು ಇಟ್ಟಿದ್ದೀರಿ, ಆ ಭಾಗದಲ್ಲಿ ಕೊಟ್ಟಂಥ ಹಣವನ್ನು ನಿಮ್ಮ ಅಧಿಕಾರಿಗಳು ಖರ್ಚು ಮಾಡಿಲ್ಲ, ಕಾರಣ ಏನೋ ಗೊತ್ತಿಲ್ಲ. ತೋರುವಿಕೆಗೆ ೩೦ ಲಕ್ಷ ಎಂದು ಹೇಳಿ, ಅಲ್ಲಿ ಬರೀ ೫ ಲಕ್ಷ ಖರ್ಚು ಮಾಡಿ ಎಂದು ಸೂಚನೆ ಏನಾದರೂ ಕೊಟ್ಟಿದ್ದೀರೋ ಏನೋ ಅದು ಗೊತ್ತಿಲ್ಲ. ತಾವು ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ, ೮೫-೮೬ನೇ ಸಾಲಿಗೆ ವಿಶೇಷ ಘಟಕ ಯೋಜನೆಯಲ್ಲಿ ಸಣ್ಣ ನೀರಾವರಿ ಯೋಜನೆಗೋಸ್ಕರ ಭೂ ಅಭಿವೃದ್ಧಿ ಬ್ಯಾಂಕ್ ಮೂಲಕ ಇಟ್ಟಿರು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವುದು, ಪೇಜ್ ೨೬೮ರಲ್ಲಿ ೩೮ ಲಕ್ಷ. ಅದಕ್ಕಾಗಿ ಖರ್ಚು ಮಾಡಿರುವುದು ಎಷ್ಟು? ೧೫ ಲಕ್ಷ ೯೨ ಸಾವಿರ ಎಂದರೆ ೪೨ ಪರ್ಸೆಂಟ್ ಖರ್ಚು ಮಾಡಿದೆ ಎಂದು ಹೇಳಿದ್ದೀರಿ. ಉಳಿದವುಗಳಿಗೆ ದುಡ್ಡು ಇರಲಿಲ್ಲವೇ? ಅಥವಾ ಸೌಲಭ್ಯ ತೆಗೆದುಕೊಳ್ಳುವಂಥ ಜನ ಇರಲಿಲ್ಲವೇ? ಅಥವಾ ಖರ್ಚು ಮಾಡುವಂತಹ ಸಹೃದಯ ನಿಮ್ಮ ಅಧಿಕಾರಿಗಳಿಗೆ ಇರಲಿಲ್ಲವೇ? ಇದನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೇರೀತಿ ಗಂಗಾ ಕಲ್ಯಾಣ ಯೋಜನೆಗೆ ಪ್ರಚಾರಕ್ಕಾಗಿ ೩೦ ಲಕ್ಷ ಇಟ್ಟಿರುವುದು, ಆದರೆ ಖರ್ಚು ಮಾಡಿರುವುದು ೬ ಲಕ್ಷ ೪೬ ಸಾವಿರ ರೂಪಾಯಿಗಳು. ಎಂದರೆ ೨೧ ಪರ್ಸೆಂಟ್ ಖರ್ಚು ಮಾಡಿರುವುದು. ಇಂತಹ ನೂರೆಂಟು ಉದಾಹರಣೆಗಳು ಇವೆ. ನಾನು ಯಾವ ಉದಾಹರಣೆ ಕೊಡಬೇಕೋ ಗೊತ್ತಿಲ್ಲ. ವಿಶೇಷವಾಗಿ ಪ್ರತಿನಿತ್ಯ, ಹರಿಜನ, ಗಿರಿಜನರು, ದೀನದಲಿತರು ಇವರ ಅಭಿವೃದ್ಧಿಗೋಸ್ಕರ ಕೆಲಸ ಮಾಡುತ್ತಿದ್ದೇವೆಂದು ಪತ್ರಿಕೆಗಳಲ್ಲಿ, ರೇಡಿಯೋದಲ್ಲಿ ಹೇಳುತ್ತಿರುವುದನ್ನು ಕೇಳಿಕೇಳಿ ಸಾಕಾಗಿದೆ. ನಾವು ಗ್ರಾಮಾಂತರ ಪ್ರದೇಶಕ್ಕೆ ಹೋದಾಗ ಏನಾದರೂ ಸೌಲಭ್ಯ ಸಿಕ್ಕಿದೆಯೇ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಸ್ಥಿತಿ ನಮಗೆ ಇಲ್ಲ. ಅದಕ್ಕಾಗಿ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಹೊಸ ಹೊಸ ಯೋಜನೆಗಳನ್ನು ಮಾಡುವುದಾಗಿ, ಜನಗಳ ಮುಂದೆ ಹೇಳುವುದನ್ನು ಬಿಡಿ, ಅನಿವಾರ್ಯ ಸಂದರ್ಭಗಳು ಬಂದಾಗ ಘೋಷಣೆ ಮಾಡಬೇಕು, ಧೈರ್ಯವಾಗಿ ಹೇಳಬೇಕು. ಈಗ ತಾಳಿಭಾಗ್ಯ ಮಾಡಬೇಕು, ಅವಶ್ಯಕತೆ ಇದೆ. ಬಡವರಿಗೆ ಬಟ್ಟೆಬರೆ ಕೊಡಬೇಕು, ಅವಶ್ಯಕತೆ ಇದೆ. ಆದರೆ ಇವೊತ್ತು ದುಡ್ಡು ಇಲ್ಲ, ಹಣಕಾಸಿನ ಸೌಲಭ್ಯ ಇಲ್ಲ. ಅದಕ್ಕಾಗಿ ಇನ್ನು ಒಂದೆರಡು ವರ್ಷ ಕಳೆದ ಮೇಲೆ ಕೊಡುತ್ತೇವೆಂದು ಹೇಳುವಂತಹ ಧೈರ್ಯ ಬೇಡವೇ? ವಿರೋಧ ಪಕ್ಷದವರು ಹಿಡಿದು ಕೇಳುತ್ತಾರೆ, ಅದಕ್ಕೋಸ್ಕರ ಜಾರಿಗೆ ತಂದಿದ್ದೇವೆ ಎಂದು ಹೇಳಿ, ಹೊಸ ಹೊಸ ಯೋಜನೆಗಳನ್ನು ತರುವುದರಿಂದ, ಅದರ ಪರಿಣಾಮ, ಜನತೆಗೆ ಆಸೆಯನ್ನು ಒಡ್ಡಿದ ಹಾಗೆ ಆಗುತ್ತದೆ. ಆದ್ದರಿಂದ ಮುಂದೆಯಾದರೂ ಈ ತರಹ ಘೋಷಣೆ ಮಾಡುವುದನ್ನು ಕಡಿಮೆ ಮಾಡಬೇಕೆಂದು ವಿನಂತಿ ಮಾಡಿಕೊಂಡು, ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶಿವಮೊಗ್ಗಾದಲ್ಲಿ ಭಾರತ್ ಫೌಂಡರೀಸ್ ಎಂಬ ಕಾರ್ಖಾನೆ ಇತ್ತು, ಅಲ್ಲಿ ಸಾವಿರಾರು ನೌಕರರು ಕೆಲಸ ಮಾಡುತ್ತಿದ್ದರು. ಅವರು ತುಂಬಾ ತೊಂದರೆಯಲ್ಲಿ ಒಳಗಾಗಿದ್ದರು. ಅದಕ್ಕೋಸ್ಕರ ಚಳುವಳಿ ಕೂಡ ಮಾಡಿದ್ದಾರೆ. ಫ್ಯಾಕ್ಟರಿ ಮಾಲೀಕರು, ಗೂಂಡಾಗಳನ್ನು ನಿಯುಕ್ತಿ ಮಾಡಿ, ಅವರಿಗೆ ತೊಂದರೆ ಕೊಡುವಂತೆ ಪ್ರಯತ್ನ ಮಾಡಿದರು. ಸನ್ಮಾನ್ಯ ಸಚಿವರು ಧಾರವಾಡದಲ್ಲಿ ಇರುವಂತಹ ಸಂದರ್ಭದಲ್ಲಿ, ನಾನು ಹೋಗಿ ಮಾತನಾಡಿ ಬಂದಿದ್ದೆ. ಅಲ್ಲಿನ ಕಾರ್ಮಿಕರ ಸಂಘದೊಂದಿಗೆ, ಹಾಗೂ ಮಾಲೀಕರನ್ನು ಕರೆಯಿಸಿ, ಮಾತನಾಡಿ, ಏನಾದರೂ ಮಾಡಿ ಪರಿಶೀಲನೆ ಮಾಡಿ ಎಂದು ಹೇಳಿದ್ದೆ. ಆದರೆ ಜೂನ್‌ನಲ್ಲಿ ಮಾತುಕತೆ ಆಡುತ್ತೇವೆಂದು ಹೇಳಿ ಒಂದು ವರ್ಷವಾಯಿತು. ಇವೊತ್ತಿನವರೆಗೂ ಸಂಬಂಧಪಟ್ಟ ಮಾಲೀಕರು, ನಿಮ್ಮ ಅಧಿಕಾರಿಗಳ ಜೊತೆ ಮಾತುಕತೆಗೆ ಬರುತ್ತಾ ಇಲ್ಲ. ನ್ಯಾಯವಾದ ಬೇಡಿಕೆಗೆ ಹೋರಾಟ ಮಾಡುತ್ತಿರುವ ಕಾರ್ಮಿಕರ ಬಗ್ಗೆ ಸನ್ಮಾನ್ಯ ಸಚಿವರು ಕರೆಯಿಸಿ ಮಾತನಾಡಿದ ಮೇಲೂ ಸಹ ಹಣದ ಬಲದಿಂದ, ಅವರ ಮೇಲೆ ಹೇಗಾದರೂ ಮಾಡಿ, ಇಲ್ಲದಸಲ್ಲದ ದೂರು ಹೊರಿಸಿ, ಸಸ್ಪೆಂಡ್ ಇಡುವಂಥಾದ್ದು ಮಾಡುವ ಪ್ರವೃತ್ತಿಯನ್ನು ತಪ್ಪಿಸಬೇಕು ಎಂದು ಅವರು ಮಾಡುತ್ತಿದ್ದಾರೆ. ನಿಮ್ಮ ಇಲಾಖೆ ಬಗ್ಗೆ ಸರ್ಕಾರದ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ಇದೆ. ಈ ಕಮಿಟಿ ಗಮನಕ್ಕೆ ಬಂದ ಕೆಲವು ದೂರುಗಳನ್ನೂ ತಮಗೆ ಒದಗಿಸಿಕೊಡುತ್ತಾರೆ. ಇವೊತ್ತು ಪ್ರೈವೇಟ್ ಮಾಲೀಕರು ದೊಡ್ಡ ದೊಡ್ಡ ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ. ಅವರ ಕಪಿ ಮುಷ್ಟಿಯಲ್ಲಿ ಕಾರ್ಮಿಕರು ಇರಬಾರದು. ಅಂತಹ ಪರಿಸ್ಥಿತಿ ನಿಮ್ಮ ಕಾಲದಲ್ಲಿ ಆಗಬೇಕು. ಒಂದು ವರ್ಷದಿಂದ ಮಾತುಕತೆಗೆ ಬರುತ್ತಾರೆಂದು ಹೇಳಿದರು. ಇದುವರೆಗೂ ಅವರು ತಮ್ಮ ಹತ್ತಿರ ಬರುವಂತಹ ಧೈರ್ಯ ಮಾಡಲಿಲ್ಲ ಎಂದರೆ, ಹಣ ಬಲ ಇರುವವರು ಈ ರಾಜ್ಯದಲ್ಲಿ ಏನು ಬೇಕಾದರೂ ಮಾಡುವ ಸಾಧ್ಯತೆ ಇದೆಯೆಂದು ಗೊತ್ತಾಗುತ್ತದೆ. ಇದು ಕೇವಲ ಉದಾಹರಣೆಯನ್ನು ಮಾತ್ರ. ತಮ್ಮ ಕಾಲದಲ್ಲಿ ಇಂತಹ ಅನ್ಯಾಯಗಳನ್ನು ತಡೆಗಟ್ಟುವ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕೆಂದು ಹೇಳುತ್ತಾ, ಮತ್ತೊಮ್ಮೆ ಸನ್ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಂಡು, ದಯಮಾಡಿ, ನಿಮ್ಮ ಅಧಿಕಾರಿಗಳನ್ನು ಈ ರೀತಿ ದುರುಪಯೋಗ ಮಾಡಿಕೊಳ್ಳುವುದಕ್ಕೆ ಬಿಡಬೇಡಿ. ಇನ್ನು ಸನ್ಮಾನ್ಯ ಪುಷ್ಪಾವತಿಯವರು ಸಚಿವರಾಗಿದ್ದಾರೆ. ಬಹುಶಃ ಅವರಿನ್ನೂ ಹೊಸಬರು ಇದ್ದಾರೆ, ಅವರು ತಮ್ಮ ಕೆಲಸಕಾರ್ಯಗಳಲ್ಲಿ ಹೆಚ್ಚಿನ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಅವರ ಹೊಸತನವನ್ನು ಉಪಯೋಗ ಮಾಡಿಕೊಂಡು, ನಿಮ್ಮ ಅಧಿಕಾರಿಗಳು ನಾವು ಏನು ಮಾಡಿದರೂ ನಡೆಯುತ್ತದೆಂದು ತಿಳಿದುಕೊಳ್ಳುತ್ತಾರೆ. ಗರ್ಭಿಣಿ ಸ್ತ್ರೀಯರ ಬಗ್ಗೆ ಕೊಡುವಂತಹ ಮಾಹಿತಿ, ಇದು ಸುಳ್ಳು ಮಾಹಿತಿ ಎಂದು ಹೇಳುತ್ತೇನೆ. ದಯಮಾಡಿ ಈ ರಾಜ್ಯದಲ್ಲಿ ನಡೆಯುತ್ತಿರುವಂತಹ ಹಾಸ್ಟಲುಗಳನ್ನು ಸರಿ ಮಾಡಿ, ತಾಲ್ಲೂಕು ಮಟ್ಟದಲ್ಲಿ ಸಮಿತಿ

ಮಾಡಿ, ಆಗಾಗ ವಿಸಿಟ್ ಮಾಡಿ, ರಿಪೋರ್ಟ್ ಕೊಡುವಂತಹ ಯೋಜನೆ ಮಾಡಬೇಕು. ಪರಿಶಿಷ್ಟ ವರ್ಗದ ಜನಗಳ ಮನೆಗಳು, ಗುಡಿಸಲುಗಳು ಬೆಂಕಿ ಅನಾಹುತದಿಂದ ಬೆಂದು ಹೋದರೆ, ಜಿಲ್ಲಾಧಿಕಾರಿಗಳೇ ತಕ್ಷಣ, ಅಂತಹವರಿಗೆ ಒಂದು ಜನತಾ ಮನೆಯನ್ನು ಮಂಜೂರ್ಮಾಡುವಂತಹ ಅಧಿಕಾರವನ್ನು ಕೊಡಬೇಕು. ಅದಕ್ಕೆ ಬೇಕಾದ ಹಣವನ್ನು ಕೊಡಬೇಕು. ಕಳೆದ ಎರಡು ವರ್ಷಗಳಿಂದ ಹೆರಿಗೆ ಭತ್ಯೆ ಗ್ರಾಮಾಂತರ ಪ್ರದೇಶದವರಿಗೆ ಕೊಟ್ಟಿದ್ದೀರಿ. ನಗರ ಪ್ರದೇಶದಲ್ಲಿ ಕೂಲಿ ಕಾರ್ಮಿಕರಿಗೆ ಈ ಸೌಲಭ್ಯ ಸಿಕ್ಕಿಲ್ಲ, ಅವರಿಗೂ ಇದು ಸಿಗುವ ವ್ಯವಸ್ಥೆ ಮಾಡಬೇಕು. ಅಂಗನವಾಡಿ ಕಾರ್ಯಕರ್ತರು ಪ್ರಾಮಾಣಿಕ ಸೇವೆಯನ್ನು ಮಾಡುತ್ತಿದ್ದಾರೆ. ಅಲ್ಲಿ ಕೆಲಸ ಮಾಡುವವರು ಬಡವರ ಮನೆತನದಿಂದ ಬಂದಿರತಕ್ಕಂಥವರು. ಅವರಿಗೆ ಕೇವಲ ೨೫೦ ರೂಪಾಯಿಗಳನ್ನು ಕೊಡುತ್ತಿರುವುದು ಸಾಲದು ದಯಮಾಡಿ ೫೦೦ ರೂಪಾಯಿಗಳಿಗೆ ಏರಿಸುವ ಪ್ರಯತ್ನ ಮಾಡಿ. ಇನ್ನು ವಿಧವಾ ವೇತನ ವೃದ್ಧಾಪ್ಯ ವೇತನಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದಾಗ, ಜಾಸ್ತಿ ಕೊಡಿ ಎಂದು ಕೇಳುವುದು ಹೇಗೆ? ಈಗ ಹಾಲಿ ಕೊಡುತ್ತಿರುವ ೫೦ ರೂಪಾಯಿಯನ್ನು ೧೦೦ ರೂಪಾಯಿಗಳಿಗೆ ಏರಿಸುವ ಪ್ರಯತ್ನ ಮಾಡಬೇಕು. ಈ ಸಂದರ್ಭದಲ್ಲಿ ಒಂದೆರಡು ಅಂಶಗಳನ್ನು ವಿರೋಧ ಪಕ್ಷದವರು ಹೇಳಿದ್ದುದು ಸರಿ ಎಂದು ತಮಗೆ ಕಂಡುಬಂದರೆ ಘೋಷಣೆ ಮಾಡುವಂತಹ ಸಾಹಸವನ್ನು ಮಾಡಬೇಕು ಎಂದು ಹೇಳಿ ವಿನಂತಿ ಮಾಡಿಕೊಂಡು, ನಿಮ್ಮ ಅಧಿಕಾರಿಗಳು ಅಚ್ಚುಕಟ್ಟಾಗಿ, ಪ್ರಾಮಾಣಿಕವಾಗಿ ಕೆಲಸ ಮಾಡುವ ಕಡೆಗೆ ತಾವು ಗಮನಕೊಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

೬-೦೦ ಪಿ.ಎಂ.

ಅಧ್ಯಕ್ಷರು.—ಧರ್ಮಸಿಂಗ್‌ರವರೇ ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಈಗಾಗಲೇ ೬ ಗಂಟೆಯಾಗಿದೆ.

ಅಧ್ಯಕ್ಷರು.—ತಾವು ಕೂಡಿರಿ, ಅವರು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನೇ ನಾಳೆ ಕಂಟಿನ್ಯೂ ಮಾಡಿ.

ಅಧ್ಯಕ್ಷರು.—ನೀವು ಬೇಕಾದರೆ ನಾಳೆ ಮಾತನಾಡಿ, ಅವರು ಮಾತನಾಡಲಿ. ನಿನ್ನೆಯ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ವಿರೋಧಪಕ್ಷದ ನಾಯಕರಾದ ಶ್ರೀ ಎಸ್. ಬಂಗಾರಪ್ಪನವರು ಮತ್ತು ಸಭಾನಾಯಕರು ಎಲ್ಲರೂ ಈ ವಿಚಾರದಲ್ಲಿ ಮಾತನಾಡಿದಾಗ ಈ ಡಿಮ್ಯಾಂಡ್ ಅನ್ನು ಇವೊತ್ತೇ ಮುಗಿಸಬೇಕು ಎನ್ನುವ ತೀರ್ಮಾನ ತೆಗೆದುಕೊಂಡಿದ್ದಾರೆ. ಆದುದರಿಂದ ಇದು ಈವೊತ್ತೇ ಮುಗಿಯಬೇಕಾಗಿದೆ. ಶ್ರೀಮಾನ್ ಧರ್ಮಸಿಂಗ್‌ರವರೇ ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ಕೆಲವು ಫ್ಯಾಕ್ಟ್ಸ್ ಹೇಳಬೇಕಾಗುತ್ತದೆ, ಆದುದರಿಂದ ನಮಗೆ ಮಾತನಾಡುವುದಕ್ಕೆ ಸ್ವಲ್ಪ ಟೈಂ ಬೇಕಾಗುತ್ತದೆ.

ಅಧ್ಯಕ್ಷರು.—ಅವಶ್ಯಕತೆ ಬಿದ್ದರೆ ಟೈಂ ಕೊಡೋಣ. ಮೊದಲು ಮಾತನಾಡುವವರು ಇದ್ದರೆ ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ೬ ಗಂಟೆಯಾಗಿದೆ, ನಾಳೆ ಬೆಳಿಗ್ಗೆ ೯ ಗಂಟೆಗೆ ಬೇಕಾದರೆ ಸೇರೋಣ.

ಅಧ್ಯಕ್ಷರು.—ಮಾತನಾಡುವವರು ಮಾತನಾಡಲಿ, ಆಮೇಲೆ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉಳಿದ ಸದಸ್ಯರು ಮಾತನಾಡಲಿ ನಾನು ಬೇಡ ಎನ್ನುವುದಿಲ್ಲ.

ಅಧ್ಯಕ್ಷರು.—ಈ ಬಗ್ಗೆ ಮಾತನಾಡುವವರು ಬಹಳಷ್ಟು ಜನ ಇದ್ದಾರೆ. ಅವರು ಮಾತನಾಡಲಿ, ಅವಶ್ಯ ಬಿದ್ದರೆ ನಾಳೆಯೂ ಸಭೆಯನ್ನು ಮುಂದುವರಿಸೋಣ. ಈಗಾಗಲೇ ನಿಮ್ಮ ಕಡೆ

ಯಾರು ಇದರ ಬಗ್ಗೆ ಮಾತನಾಡಲಿಕ್ಕೆ ೨೦ ನಿಮಿಷ ತೆಗೆದುಕೊಂಡಿದ್ದಾರೆ. ಮಾತನಾಡುವವರು ಮಾತನಾಡಲಿ, ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಡಿಮ್ಯಾಂಡ್ ಅನ್ನು ಇವೊತ್ತೇ ಮುಗಿಸಬೇಕು, ಅನಂತರ ಅಪ್ರೋಪ್ರಿಯೇಷನ್ ಬಿಲ್ ತೆಗೆದುಕೊಳ್ಳಬೇಕು ಎಂದು ಆದರೆ. ಈ ಮಧ್ಯೆ ಬೆಳಿಗ್ಗೆ ಚಕಮುಖಿ ನಡೆಯಿತಲ್ಲಾ ಹಾಗೆ ಈಗಲೂ ಆಗುತ್ತದೆ ಎಂದು ಗೊತ್ತಿರಲಿಲ್ಲವಲ್ಲ. ಅದರ ಬಗ್ಗೆ ಹೆಚ್ಚಿಗೆಟೈಂ ತೆಗೆದುಕೊಂಡಿದ್ದರಿಂದ ಇವೊತ್ತಿನ ಕಾರ್ಯಕಲಾಪಗಳನ್ನು ಅಷ್ಟು ಬೇಗನೆ ಮುಗಿಸುವುದಕ್ಕೆ ಆಗಲಿಲ್ಲ.

(ಗೊಂದಲ)

ಅಧ್ಯಕ್ಷರು.—ತಾವೆಲ್ಲರೂ ಕೂಡಿರಿ, ತಾವು ಇವೊತ್ತು ಮಾತನಾಡಲು ಇಷ್ಟವಿಲ್ಲದೇ ಹೋದರೆ ಮತ್ತೊಬ್ಬರನ್ನು ಕರೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಇವೊತ್ತಿನ ಡಿಮ್ಯಾಂಡ್ ಬಹಳ ಇಂಪಾರ್ಟೆಂಟ್ ಡಿಮಾಂಡ್. ಇದು ಎಸ್.ಸಿ. ಮತ್ತು ಎಸ್.ಟಿ.ಯವರಿಗೆ ಸಂಬಂಧಪಟ್ಟದ್ದು. ಅವರ ಬಗ್ಗೆ ಹೇಳುವುದಕ್ಕೆ ತಾವು ಟೈಂ ಕೊಡಲೇಬೇಕಾಗುತ್ತದೆ.

ಅಧ್ಯಕ್ಷರು.—ಇವೊತ್ತು ಇದರ ಬಗ್ಗೆ ಎಷ್ಟು ಜನ ಮಾತನಾಡುತ್ತಾರೋ ಮಾತನಾಡಲಿ, ಆಮೇಲೆ ಬಾಕಿದನ್ನು ವಿಚಾರ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಡಿಮ್ಯಾಂಡ್ ಅನ್ನು ನಾಳೆ ಒಂದು ದಿವಸ ಎಕ್ಸ್‌ಟೆಂಡ್ ಮಾಡಿ.

ಅಧ್ಯಕ್ಷರು.—ಹಾಗೆ ಎಕ್ಸ್‌ಟೆಂಡ್ ಮಾಡುವುದು ನಾನಲ್ಲ. ಈ ಸಭೆ ನಡೆಯುವುದಕ್ಕೆ ಅಡ್ಡಿ ಬರುವುದು ಸರಿಯಲ್ಲ. ಈಗ ಯಾರು ಮಾತನಾಡಲು ಅಪೇಕ್ಷೆ ಪಡುತ್ತಾರೋ ಅವರು ಮಾತನಾಡಲಿ, ರೆಡಿ ಆಗಿದ್ದವರು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ೭ ಗಂಟೆಯಾಗಿದೆ, ಇದು ಬಹಳ ಇಂಪಾರ್ಟೆಂಟ್ ಡಿಮ್ಯಾಂಡ್. ಅದರ ಬಗ್ಗೆ ನಾವೆಲ್ಲಾ ಮಾತನಾಡಬೇಕಾಗಿದೆ.

ಅಧ್ಯಕ್ಷರು.—ಮೊದಲು ಮಾತನಾಡುವವರು ಮಾತನಾಡಲಿ, ಆಮೇಲೆ ನೋಡೋಣ. ಈ ಬಗ್ಗೆ ಚೀಫ್ ವಿಪ್ ಏನು ಹೇಳುತ್ತಾರೋ ಕೇಳೋಣ.

ಶ್ರೀ ರಾಜವರ್ಧನ್.—ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಇವೊತ್ತಿನ ದಿವಸ ಈ ಡಿಮ್ಯಾಂಡ್ ಎಲ್ಲಾ ಮುಗಿದು, ಅಪ್ರೋಪ್ರಿಯೇಷನ್ ಬಿಲ್ಲೂ ಕೂಡ ಪಾಸ್ ಆಗಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆ ಇಲ್ಲದೇ ಇದನ್ನು ಮುಗಿಸಬೇಕೆನ್ನುವುದಾದರೆ ಇದನ್ನು ವೋಟ್‌ಗೆ ಹಾಕಿಬಿಡಿ, ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ. ಇದು ಮಹತ್ವವಾದ ವಿಷಯ, ಚರ್ಚೆಯಾಗಬಾರದು ಎನ್ನುವ ಹಾಗೆ ಇದ್ದರೆ ಹಾಗೆ ಮಾಡಿ.

ಅಧ್ಯಕ್ಷರು.—ಈ ಸಭೆ ಎಷ್ಟು ಹೊತ್ತಿನವರೆಗೆ ನಡೆಯಬೇಕೆನ್ನುವುದನ್ನು ಆಮೇಲೆ ವಿಚಾರ ಮಾಡೋಣ. ಮಾನ್ಯ ಸದಸ್ಯರು ಮಾತನಾಡುವವರು ಇದ್ದರೆ ಅವರು ಪ್ರಾರಂಭ ಮಾಡಲಿ. ನಿಮ್ಮ ಸಲಹೆಗಳನ್ನು ಆಮೇಲೆ ವಿಚಾರ ಮಾಡೋಣ. ದಯವಿಟ್ಟು ಕೂಡಿರಿ. ಮಾನ್ಯ ಧರ್ಮಸಿಂಗ್‌ರವರೇ ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಅಬ್ಸೆನ್ಸ್‌ನಲ್ಲಿ ಇದನ್ನು ಪಾಸು ಮಾಡಿಕೊಳ್ಳಬೇಕೆನ್ನುವುದಾದರೆ ಮಾಡಿಕೊಳ್ಳಿ.

ಅಧ್ಯಕ್ಷರು.—ಇದರಲ್ಲಿ ನಿಮ್ಮ ಆಬ್ಸೆನ್ಸ್, ಅವರ ಆಬ್ಸೆನ್ಸ್ ಎನ್ನುವ ಪ್ರಶ್ನೆ ಅಲ್ಲ. ಮಾತನಾಡುವವರು ಯಾರಾದರೂ ಇದ್ದರೆ ಅವರು ಮಾತನಾಡಲಿ. ಆಮೇಲೆ ನಿಮ್ಮ ಸಲಹೆಯನ್ನೂ ಕೂಡ ವಿಚಾರ ಮಾಡೋಣ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ, ೭ ಗಂಟೆಯವರೆಗೆ ಇದರ ಡಿಸ್ಕಷನ್ ಇಟ್ಟು ಕೊಳ್ಳೋಣ. ಅನಂತರ ರಿಪ್ಲೈ ಇಟ್ಟುಕೊಂಡು ಅರ್ಧ ಗಂಟೆಯೊಳಗೆ ಮುಗಿಸೋಣ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮತ್ತೆ ನಾಳೆಗೆ ಕುಳಿತುಕೊಳ್ಳೋಣ.

ಅಧ್ಯಕ್ಷರು.—ಹೀಗೆ ಮಾಡುವುದು ಸರಿಯಲ್ಲ. ನಾನು ಆ ಕಡೆಯವರ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು, ಈ ಕಡೆಯವರ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು. ಚೀಫ್ ವಿಪ್ ೭–೭½ ಗಂಟೆಯವರೆಗೆ ಕೂಳಿತುಕೊಳ್ಳೋಣ ಎಂದು ಏನು ಹೇಳಿದರು ಅದುವರೆಗೆ ಮಾತನಾಡುವವರು ಮಾತನಾಡಲಿ, ಆಮೇಲೆ ವಿಚಾರ ಮಾಡೋಣ. ಅವರು ಮಾತನಾಡಲಿಕ್ಕೆ ತಾವೆಲ್ಲಾ ಸಹಕಾರ ಕೊಡಬೇಕು ಎಂದು ಹೇಳುತ್ತೇನೆ. ಮಾನ್ಯ ಧರ್ಮಸಿಂಗ್‌ರವರೇ ತಾವು ಮಾತನಾಡಿ. ಮಾತನಾಡಲು ತಯಾರು ಮಾಡಿಕೊಂಡು ಬಂದಿರುವವರು ಮಾತನಾಡಲಿ. ಇವೊತ್ತು ಡಿಸ್ಕಷನ್ ಮುಗಿಯಲಿ. ರಿಪ್ಲೈ ಬೇಕಾದರೆ ನಾಳೆಗೆ ಹಾಕೋಣ. ಸಧ್ಯಕ್ಕೆ ಈ ಚರ್ಚೆ ಮುಂದುವರಿಯಲಿ. ನಾನು ಈಗಾಗಲೇ ಮಾನ್ಯ ಸದಸ್ಯರನ್ನು ಕರೆದಿದ್ದೇನೆ. ಅವರು ಪ್ರಾರಂಭ ಮಾಡಲಿ. ತಾವೆಲ್ಲಾ ಸಹಕಾರ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಶ್ರೀ ಶಿವಣ್ಣನವರು ಮಾತನಾಡುತ್ತಾರೆ.

ಶ್ರೀ ಪಟಮಕ್ಕಿ ರತ್ನಾಕರ್.—ಈಗ ಶಿವಣ್ಣನವರು ಮಾತನಾಡಲಿ.

ಒಬ್ಬ ಸದಸ್ಯರು.—ಅಧ್ಯಕ್ಷರೇ, ನಾನು ಬೆಳಿಗ್ಗೆಯಿಂದಲೂ ಕುಳಿತಿದ್ದೇನೆ. ಮಾನ್ಯ ಧರ್ಮಸಿಂಗ್‌ರವರು ಮಾತನಾಡಿದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಶ್ರೀಮಾನ್ ಶಿವಣ್ಣನವರೇ ನೀವು ಮಾತನಾಡಿ, ಪ್ರಾರಂಭ ಮಾಡಿ.

† ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಸಭಾಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಮೇಲೆ ಇಂದಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವಾಗ ನಾನು ಈ ಇಲಾಖೆಯ ಬೇಡಿಕೆಗಳನ್ನು ತೀವ್ರವಾಗಿ ವಿರೋಧಿಸುತ್ತೇನೆಂದು ಹೇಳಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇಂಥ ಒಂದು ಮಹತ್ತರನಾದ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾಡ ತಕ್ಕಂಥ ಸಂದರ್ಭದಲ್ಲಿ ನನಗೆ ಕೇವಲ ಕೆಲವೇ ನಿಮಿಷಗಳನ್ನು ಕೊಟ್ಟಿರುವುದು ಬಹಳ ವಿಷಾದವಾಗುತ್ತದೆ. ನಮ್ಮ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಪಟ್ಟಂಥ ಈ ಜನರ ಕಲ್ಯಾಣಕ್ಕಾಗಿ ಅವರ ಅಭಿವೃದ್ಧಿಗಾಗಿ ಯಾವ ಒಂದು ಇಲಾಖೆ ರಚನೆಯಾಗಿದೆಯೋ ಆ ಇಲಾಖೆ ಇಂದು ನಿಷ್ಕ್ರಿಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಜೊತೆಗೆ ಇನ್ನೂ ಒಂದು ವಿಷಯ ಹೇಳುತ್ತೇನೆ. ಅದೇನೆಂದರೆ ಇಂದು ಈ ಇಲಾಖೆ ಏನು ಇದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಗೂ ಹಿಂದುಳಿದ ವರ್ಗದ ಮತ್ತು ಮಕ್ಕಳ ಮಹಿಳೆಯರ ಕಲ್ಯಾಣದ ವಿಚಾರದಲ್ಲಿ ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದೀರೋ ಆ ಯೋಜನೆಗಳೆಲ್ಲಾ ಸ್ವಾತಂತ್ರ್ಯ ನಂತರ ಇದುವರೆವಿಗೂ ಎಷ್ಟರಮಟ್ಟಿಗೆ ಕಾರ್ಯಗತವಾಗಬೇಕಾಗಿತ್ತೋ ಅಷ್ಟರಮಟ್ಟಿಗೆ ಈ ಯೋಜನೆಗಳು ಕಾರ್ಯಗತವಾಗದೇ ಇರುವುದನ್ನು ನೋಡಿದರೆ ನಿಜವಾಗಿಯೂ ತುಂಬಾ ವ್ಯಥೆಯಾಗುತ್ತದೆ. ಇನ್ನೊಂದು ವಿಚಾರ ಏನೆಂದರೆ ಸ್ವಾತಂತ್ರ್ಯನಂತರ ಈ ಜನಗಳ ಕಲ್ಯಾಣಕ್ಕೆ ಈ ಒಂದು ಇಲಾಖೆಯ ಮುಖಾಂತರ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡುವುದನ್ನು ಏನು ಮಾಡುತ್ತಿದ್ದಾರೆ ಅದರಿಂದ ಇವೊತ್ತು ಎಷ್ಟರಮಟ್ಟಿಗೆ ಈ ಜನಗಳ ಕಲ್ಯಾಣವಾಗಿದೆ ಎನ್ನುವುದನ್ನು ಪಟ್ಟಿಮಾಡಿ ನೀವು ಯೋಚನೆ ಮಾಡಿ ಮಾಡಿದ್ದೀರಾ ? ಕೋಟಿಗಟ್ಟಲೆ, ಹಣ ಖರ್ಚು ಮಾಡಿದ್ದರೂ ಕೂಡ ಬೆಟ್ಟದಷ್ಟು ಮಾಡಿದ್ದೇವೆಂದು ಹೇಳಿದರೂ ಕೂಡ ನಿಜವಾಗಿಯೂ ಆ ಜನರ ಕಲ್ಯಾಣವಾಗಿರುವುದು ಸ್ವಲ್ಪ ಮಾತ್ರ. ಮಾನ್ಯ ಅಧ್ಯಕ್ಷರೇ, ಇವೊತ್ತು ಈ ಸಂದರ್ಭದಲ್ಲಿ ಈ ಒಂದು ಇಲಾಖೆ ಇದೆಯೋ ಇಲ್ಲವೋ ಎನ್ನುವ ಒಂದು ಸಂಶಯವೂ ಕೂಡ ನನಗೆ ಉಂಟಾಗಿದೆ. ಈ ಸಂಶಯ ಏತಕ್ಕಾಗುತ್ತದೆ ಎಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಉಚಿತವಾಗಿ ಏನೇನು ನೆರವು ಕೊಡುತ್ತಿದ್ದೇವೆ ಎಂದು ಹೇಳುತ್ತಾರೋ ಅದನ್ನೆಲ್ಲಾ ನಾವು ಪತ್ರಿಕೆಗಳ ಮುಖಾಂತರ, ಮುಖಂಡರುಗಳ ಮುಖಾಂತರ, ಪ್ರಚಾರದ ಮುಖಾಂತರ ಕೇಳುತ್ತಿದ್ದೇವೆ ವಿನಹ ಇದರಿಂದ ನಿಜವಾದ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಲ್ಯಾಣ ಸಾಧನೆ ಅವರಿಗೆ ಆಗದೇ ಇರುವುದು ನೋಡಿ ನನಗೆ ತುಂಬಾ ವ್ಯಥೆಯಾಗುತ್ತದೆ. ಹಿಂದಿನದನ್ನು ಒಂದು ಪಟ್ಟಿ ಮಾಡಿ ಹೇಳಬೇಕಾದರೆ ಹರಿಜನ ಗಿರಿಜನರಿಗೆ ಹಿಂದೆ ನಾವು ಯಾವ ಒಂದು ಪದವನ್ನು ಬಳಸತಕ್ಕಂಥ ಸಂದರ್ಭದಲ್ಲಿ ಎಲ್ಲರಿಗೂ ಸಹ ಒಂದು ರೋಷ ಬರುತ್ತಿತ್ತು. ಅವರನ್ನು ಯಾವುದೋ ಒಂದು ದೃಷ್ಟಿಯಲ್ಲಿ ನೋಡುತ್ತಿದ್ದರು, ಅವರ ವಿಷಯದ ಬಗ್ಗೆ ಏನೋ ಒಂದು ರೀತಿ ಯಾವ ಭಾವನೆ ಬರುತ್ತಿತ್ತು, ಇಂದು ಅವರಿಗಾಗಿ ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡಿ ಏನೋ ಸಾಧನೆ ಮಾಡಿಕೊಳ್ಳಬಹುದು ಎನ್ನುವ ವಿಚಾರ ಇವೊತ್ತಿನ ದಿವಸ ಇದೆ. ಹರಿಜನರು ಎಂದು ಹೆ ಳಿದ ತಕ್ಷಣ ಅಧಿಕಾರಿಗಳಿಗೆ ಏನೋ ಒಂದು ಮನೋಭಾವನೆ ಉಂಟಾಗತಕ್ಕದ್ದು ಏನಿದೆ ಅದನ್ನು ತೊಡೆದುಹಾಕಲು ತಾವು ಕ್ರಮ ಕೈಗೊಳ್ಳಬೇಕು. ಇನ್ನು ರಾಜಕಾರಣಿಗಳಲ್ಲಿ ಹರಿಜನರೆಂದರೆ ವೊ ಟಿನ ಬ್ಯಾಂಕ್ ಎಂಬ ಭಾವನೆ ಹೋಗಿ ಅವರ ಕಷ್ಟ ಕಾರ್ಪಣ್ಯಗಳನ್ನು ಅರಿತುಕೊಳ್ಳುವ ಪ್ರಯತ್ನ ಮಾಡಬೇಕು. ಹರಿಜನ ಗಿರಿಜನರಿಗೆ ಶಾಲಾಕಾಲೇಜುಗಳಲ್ಲಿ ಸಿಗಬೇಕಾದ ಸೀಟುಗಳ ಪ್ರಮಾಣ ಸಿಗುತ್ತಿಲ್ಲ. ಉದ್ಯೋಗದಲ್ಲಿ ಕೂಡ ೧೮ ಪರ್ಸೆಂಟ್ ಇದ್ದದ್ದನ್ನು ೨೫ ಪರ್ಸೆಂಟ್‌ಗೆ ಮಾಡಿದ್ದರೂ ಕೂಡ ಸರಿಯಾಗಿ ಎಲ್ಲಾ ಕಡೆಗಳಲ್ಲೂ ಕೂಡ ಅದು ಪಾಲನೆಯಾಗುತ್ತಿಲ್ಲ. Even ೧೮ ಪರ್ಸೆಂಟ್ ಕೋಟಾ ಕೊಡುವುದರಲ್ಲಿ ರೂಲ್ಸ್ ವಯಲೇಟ್ ಮಾಡಿದ್ದಾರೆ. ಎಲ್ಲೆಲ್ಲಿ ಅನ್ಯಾಯ ಆಗಿದೆಯೋ ಅದನ್ನಾದರೂ ಕೂಡಲೇ ಸರಿಪಡಿಸುವ ಕ್ರಮ ಕೈಗೊಳ್ಳಬೇಕು.

೧೯೮೪–೮೫ರಲ್ಲಿ ಕೊಟ್ಟಿರುವ ಬಜೆಟ್ಟನ್ನು ನೋಡಿದರೆ ವಿದ್ಯಾಭ್ಯಾಸದ ಕಡೆ ಹೆಚ್ಚಿಗೆ ಹಣ ಕೊಟ್ಟಿದ್ದಾರೆಂದು ಅನಿಸುತ್ತದೆ. ಆದರೆ ವಿದ್ಯಾರಂಗದಲ್ಲಿ ಯಾವ ಯಾವುದಕ್ಕೆ ಎಷ್ಟೆಷ್ಟು ಎಂಬುದರ ಅಲೊಕೇಷನ್ ಸರಿಯಾಗಿ ಮಾಡಿಲ್ಲ.

ಇನ್ನು ಧರ್ಮಶಾಲೆಗಳಂತಿರುವ ಹಾಸ್ಟೆಲ್‌ಗಳಲ್ಲಿ ಒಟ್ಟು ಅಟೆಂಡೆನ್ಸ್ ೫೦ ಇದ್ದರೆ ಹಾಜರಾತಿ ಇರುವುದು ಕೇವಲ ೧೫ ಮಾತ್ರ. ಉಳಿದವರು ಬರುವುದೇ ಇಲ್ಲ. ಅವರು ಬರುವ ಹಾಗೆ ಮಾಡಬೇಕು. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲಿಗೆ ಯಾವ ಅಧಿಕಾರಿಗಳೂ ಭೇಟಿ ನೀಡುವುದೇ ಇಲ್ಲ ಆದ್ದರಿಂದ ಅಲ್ಲಿ ಇರುವವರು ರಾಜಮಹಾರಾಜರಾಗಿರುತ್ತಾರೆ. ಅವರು ಆಡಿದ್ದೇ ಆಟದಂತಾಗಿದೆ. ಮಾನ್ಯ ಸಚಿವರು ಎಷ್ಟು ವಿದ್ಯಾರ್ಥಿನಿಲಯಗಳಿಗೆ ಭೇಟಿ ಇತ್ತಿದ್ದಾರೋ ನನಗೆ ಗೊತ್ತಿಲ್ಲ. ತಾವು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಭೇಟಿ ಕೊಡುವ ಕಾರ್ಯಕ್ರಮ ಇಟ್ಟುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವು ದನದ ಕೊಟ್ಟಿಗೆಗಿಂತ ಕೀಳಾಗಿವೆ.

ಈ ನಿಲಯಗಳಲ್ಲಿ ೩ ವರ್ಷಕ್ಕೊಮ್ಮೆ ಹಾಸಿಗೆ ಕೊಡುವ ವ್ಯವಸ್ಥೆ ಇದೆ. ವಿದ್ಯಾರ್ಥಿಗಳು ಒದ್ದಾಡುವ ಹಾಸಿಗೆಗಳು ಎಷ್ಟು ವರ್ಷ ಬಾಳಿಕೆ ಬರಬಹುದು, ನೀವೇ ಹೇಳಿ? ಆದ್ದರಿಂದ ವರ್ಷಕ್ಕೊಮ್ಮೆ ಹಾಸಿಗೆ ಕೊಡುವಂತಹ ವ್ಯವಸ್ಥೆ ಮಾಡಬೇಕು. ತಲಾ ವಿದ್ಯಾರ್ಥಿಗೆ ಹಾಲಿ ಕೊಡುತ್ತಿರುವ ೧ ರೂಪಾಯಿಅನ್ನು ೩ ರೂಪಾಯಿಗೆ ಏರಿಸುವ ಆಜ್ಞೆಯಾಗಬೇಕು. ಅಲ್ಲದೆ ಎಣ್ಣೆ ಸೀಗೇಕಾಯಿಗೆಂದು ೫ ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಅದು ಸಾಲದು. ತಾವು ಕನಿಷ್ಠ ೨೦ ರೂಪಾಯಿಗಳನ್ನಾದರೂ ಕೊಡುವ ವ್ಯವಸ್ಥೆ ಮಾಡಿ.

ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಏನು ಸೌಲಭ್ಯ ಕೊಡುತ್ತಿದ್ದೀರೋ ಅದನ್ನು ಖಾಸಗಿಯವರಿಗೂ ವಿಸ್ತರಿಸಬೇಕು. ಖಾಸಗಿನಿಲಯಗಳಿಗೆ ಅದರ ಅಡಿಗೆಯವರಿಗೆ ಕೇವಲ ೧೦೦ ರೂಪಾಯಿಗಳ ಸಂಬಳ ಎಂದು ಕೊಡುತ್ತಿದ್ದೀರಿ ಆದರೆ ಸರ್ಕಾರಿ ನಿಲಯದ ಅಡಿಗೆಯವನಿಗೆ ೪ನೇ ದರ್ಜೆ ನೌಕರನ ಸಂಬಳ ಸಿಗುತ್ತಿದೆ. ಆದ್ದರಿಂದ ಖಾಸಗಿಯವರಿಗೆ ಕೂಡ ಅಷ್ಟೇ ಸಂಬಳ ಕೊಡುವ ವ್ಯವಸ್ಥೆ ಮಾಡಬೇಕು.

ವಿಶೇಷ ಘಟಕ ಯೋಜನೆಯ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮಾನ್ಯ ಯಡಿಯೂರಪ್ಪನವರು ಹೇಳಿದರು. ಒಂದು ತಾಲ್ಲೂಕಿನಲ್ಲಿ ಯಾವುದಾದರೂ ಎರಡು ಗ್ರಾಮಗಳಲ್ಲಿ ನಾಲ್ಕೈದು ಜನರಿಗೆ ನೆರವು ಕೊಡುವಂಥ ವ್ಯವಸ್ಥೆ ಏನಿದೆ ಅದನ್ನು ಎಲ್ಲರಿಗೂ ಕೊಡುವ ವ್ಯವಸ್ಥೆಯಾಗಬೇಕು. ಈ ನೆರವನ್ನು ವಿವಿಧ ಇಲಾಖೆಗಳ ಮುಖಾಂತರ ಕೊಡುವ ಹಾಲಿ ವ್ಯವಸ್ಥೆಯ ಬದಲಿಗೆ ಅದರ ಒಂದು ಒಟ್ಟಾರೆ ಚಿತ್ರ ಮತ್ತು ಪರಿಣಾಮ ಉಂಟಾಗುತ್ತಲೇ ಇಲ್ಲ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರಾಧಿಕಾರಿಗಳ ಮೂಲಕ ನೆರವನ್ನು ಕೊಡುವುದನ್ನು ತಪ್ಪಿಸಿ ಸಮಾಜ ಕಲ್ಯಾಣ ಇಲಾಖೆಯ ಮೂಲಕವೇ ಕೊಡುವ ವ್ಯವಸ್ಥೆ ಆಗಬೇಕು.

ಈ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿ ವ್ಯಯವಾಗುತ್ತಿದೆ. ಇದನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಅಂಕಿ ಅಂಶಗಳ ವಿವರವನ್ನೂ ತಾವು ಕೊಟ್ಟಿಲ್ಲ. ಅಧಿಕಾರಿಗಳು ನುಂಗುವುದನ್ನು ತಪ್ಪಿಸಲು ಒಂದು ವಿಜಿಲೆನ್ಸ್ ಕಮಿಟಿ ಎಂದು ಮಾಡಿದರೆ ಒಳ್ಳೆಯದು.

ಉದ್ಯೋಗ ಕೊಡತಕ್ಕಂಥ ಮತ್ತು ಪ್ರಮೋಷನ್ ಸಂದರ್ಭಗಳಲ್ಲಿ ಹರಿಜನ ಗಿರಿಜನರಿಗೆ ಆಗುವ ಕಿರುಕುಳದ ಬಗ್ಗೆ ಹಾಗೂ ಅವರು ಅನುಭವಿಸುತ್ತಿರುವ ನೋವಿನ ಬಗ್ಗೆ ಸರ್ಕಾರ ಗಮನಹರಿಸಿ ಅದನ್ನು ನಿಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಇನ್ನು ಫಸ್ಟ್ ರ್‍ಯಾಂಕ್ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ನೇರವಾಗಿ ಉದ್ಯೋಗ ಕೊಡುತ್ತೇವೆ ಎಂದು ಹೇಳಿದ್ದೀರಿ. ಇದರಿಂದ ಹರಿಜನ ಗಿರಿಜನರು ಮತ್ತಷ್ಟು ಭಿನ್ನಭಾವ ಎದುರಿಸಲು ಸಹಾಯ ಆಗುತ್ತದೆ ಅಷ್ಟೇ.

ಮಾನ್ಯ ಅಧ್ಯಕ್ಷರೆ, ಜಿಲ್ಲಾಮಟ್ಟದಲ್ಲಿ ಹರಿಜನ ಗಿರಿಜನರ ಮೇಲೆ ನಡೆಯತಕ್ಕ ದೌರ್ಜನ್ಯಗಳನ್ನು ತಪ್ಪಿಸಬೇಕು ಎಂದು ಒಂದು ನಾಗರೀಕ ಸಂರಕ್ಷಣ ಘಟಕ ಎಂದು ಮಾಡಿದ್ದಾರೆ. ಈ ಅಟಕದ ಔಚಿತ್ಯವಾದರೂ ಏಕೆ ಎಂದು ನನಗೆ ಅರ್ಥವಾಗುವುದಿಲ್ಲ. ದೌರ್ಜನ್ಯಗಳಾದರೆ, ಅಕ್ರಮಗಳು ಆಗಿದ್ದರೆ ಅದನ್ನು ನೇರವಾಗಿ ಪೋಲೀಸರೇ ನೋಡತಕ್ಕ ಸಂದರ್ಭದಲ್ಲಿ ಈ ಘಟಕಗಳು ಯಾವ ಒಂದು ಕೆಲಸವಿಲ್ಲದೆ ನಿಷ್ಪ್ರಯೋಜಕರೀತಿಯಲ್ಲಿವೆ. ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮತ್ತೆ ಜಿಲ್ಲಾಮಟ್ಟದಲ್ಲಿ ಡಿಸ್ಟ್ರಿಕ್ಟ್ ವೆರಿಫಿಕೇಷನ್ ಆಫೀಸರ್ ಹುದ್ದೆ ಇದೆ. ಇದು ಕೇವಲ ಒಂದು ಪೋಸ್ಟ್ ಆಫೀಸ್ ಮಾದರಿಯಲ್ಲಿದೆ. ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗದವರಿಗೆ ಸಾಲಕೊಡಬೇಕು ಎಂದು ಅಧಿಕಾರಿ ಬರೆದರೆ ಬ್ಯಾಂಕ್‌ನವರು ಅವರಿಂದ ರಿಕವರಿ ಕೊಡುವುದಕ್ಕಾಗುವುದಿಲ್ಲ ಎಂದು ತಿರಸ್ಕರಿಸಿದ ಅರ್ಜಿಗಳನ್ನು ನಾವು ನೋಡಿದ್ದೇವೆ. ಇದು ಮಾನ್ಯ ಮಂತ್ರಿಯವರಿಗೂ ಗೊತ್ತಿರಬೇಕು. ನಾನು ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕು ಎಂದು ರೆಡಿಯಾಗಿದ್ದೆ, ಆದರೆ ತಾವು ಹೆಚ್ಚಿನ ಕಾಲಾವಕಾಶ ಕೊಡದೇ ಇರುವುದರಿಂದ ಏನು ಹೇಳಬೇಕು, ಯಾವುದನ್ನು ಬಿಡಬೇಕು ಎಂದು ತಿಳಿಯುತ್ತಿಲ್ಲ. ಇವೊತ್ತು ರಾಷ್ಟ್ರಾದ್ಯಂತ ಮತ್ತು ರಾಜ್ಯಾದ್ಯಂತ ಮೀಸಲಾತಿ ರದ್ದು ಮಾಡಬೇಕು ಎಂದು ಚಳುವಳಿ ನಡೆಯುತ್ತಿದೆ. ಈ ಸಮಾಜದಲ್ಲಿ ಅಸ್ಪೃಶ್ಯರು. ಮೇಲು ಕೀಳು ಎಂಬ ಭಾವನೆ ಎಲ್ಲಿಯವರೆಗೆ ಇರುತ್ತದೆ ಅಲ್ಲಿಯವರೆಗೆ ಮೀಸಲಾತಿ ಇರಬೇಕು ಎಂದು ಬಲವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚಿನ ದಿನಗಳಲ್ಲಿ ಮೀಸಲಾತಿಯ ಬಗ್ಗೆ ನಡೆದಂಥ ಚಳುವಳಿಯ ಹಿನ್ನಲೆ ನೋಡಿದರೆ ಬಹುಶಃ ನಮ್ಮ ಈ ದೇಶದಲ್ಲಿ ಇವೊತ್ತು ತುಳಿತಕ್ಕೆ ಒಳಪಟ್ಟಂಥ ಜನರನ್ನು, ನೊಂದಂಥ ಜನರನ್ನು ಮೇಲೆತ್ತುವುದಕ್ಕೆ ಸರಿಯಾದ ಪ್ರಯತ್ನ ಆಗುತ್ತಾ ಇಲ್ಲ ಎಂದು ಹೇಳಬೇಕಾಗಿದೆ. ನಾವು ನೋಡಿದಂತೆ ಮತ್ತು ಕೇಳಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಕಲ್ಯಾಣಕ್ಕೆ ಸರ್ಕಾರ ಏನಾದರೂ ಮಾಡುವಂಥ ಸಂದರ್ಭದಲ್ಲಿ ಬೇರೆ ಯಾವುದಕ್ಕೂ ಇಲ್ಲದಂಥ ಸಂದರ್ಭದಲ್ಲಿ ನೇರವಾಗಿ ಕೋರ್ಟಿಗೆ ಹೋಗಿ ತಡೆಯಾಜ್ಞೆ ಏನು ತರುತ್ತಾರೋ ಅವರ ಬಗ್ಗೆ ಸರ್ಕಾರ ಭಾರಿ ಗಮನಕೊಟ್ಟು ಬೇಗ ಅವೆಲ್ಲಾ ತೀರ್ಮಾನವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಒಂದೆರಡಲ್ಲ, ನಾನಾ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಜಮೀನು ಪರಭಾರೆ ಮುಂತಾದ ಅನೇಕ ವಿಚಾರಗಳು ಇರಬಹುದು. ಅದನ್ನೆಲ್ಲಾ ತೀರ್ಮಾನ ಮಾಡತಕ್ಕ ಯೋಚನೆ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಹೆಚ್ಚಿನ ವಿಚಾರಗಳು ಪ್ರಸ್ತಾಪ ಮಾಡುವುದಕ್ಕೆ ಇದ್ದರೂ ಸಹ ತಾವು ನಮಗೆ ಅವಕಾಶ ಕೊಡದೇ, ಇದ್ದರೂ ಈಗ ಕೊಟ್ಟಂಥ ಅವಕಾಶಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜೂಗೌಡ (ಹಾನೂರು).—ಸನ್ಮಾನ್ಯ ಸಭಾಧ್ಯಕ್ಷರೆ. ನಾನು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಒಂದು ರಾಜ್ಯದ ಆಡಳಿತದ ಯಶಸ್ಸಿನ ಗುಟ್ಟು ಆ ರಾಜ್ಯದ ಸಮಾಜ ಕಲ್ಯಾಣ ಇಲಾಖೆಯು ಹಮ್ಮಿಕೊಂಡಿರತಕ್ಕಂಥ ಕಾರ್ಯಕ್ರಮಗಳ ಅನುಷ್ಠಾನವನ್ನು ಅವಲಂಬಿಸಿದೆ. ಏಕೆಂದರೆ ಈ ಇಲಾಖೆಯ ವ್ಯಾಪ್ತಿಗೆ ಶೇಕಡ ೧೭ ರಷ್ಟು ಚಿಕ್ಕ ಮಕ್ಕಳು, ಶೇಕಡ ೪೯ ರಷ್ಟು ಮಹಿಳೆಯರು, ಶೇಕಡ ೬ ರಷ್ಟು ಅಂಗವಿಕಲರು, ಮತ್ತು ಶೇಕಡ ೬ ರಷ್ಟು ವಿಧವೆಯರು—ಹೀಗೆ ಶೇಕಡ ೭೮ ರಷ್ಟು ಜನ ಬರುತ್ತಾರೆ. ಆದುದರಿಂದ ಕೇಂದ್ರ ಸರ್ಕಾರದವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ಸಮಾಜ ಕಲ್ಯಾಣ ಇಲಾಖೆ ಎಂದು ಪರಿವರ್ತನೆ ಮಾಡಿದೆ. ಸಮಾಜದ ಎಲ್ಲಾ ಚಿಕ್ಕ ಮಕ್ಕಳು, ಮಹಿಳೆಯರು ಸಮಗ್ರವಾಗಿ, ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುವಂತೆ ಮಾಡಲು ಮತ್ತು ಭಾವೈಕ್ಯತೆಯನ್ನು ಸಾಧಿಸಲು ಈ ಇಲಾಖೆಯಿಂದ ಸಾಧ್ಯವಾಗುತ್ತದೆ ಎನ್ನುವುದು ನನ್ನ ಅನಿಸಿಕೆ. ಹಾಗಾದರೆ ಸಮಾಜ ಕಲ್ಯಾಣ ಇಲಾಖೆಯ ಗುರಿ ಏನು ? ಸಮಾಜದಲ್ಲಿ ದುಸ್ಥಿತಿಯಲ್ಲಿರುವಂಥ ಮಕ್ಕಳಿಗೆ, ಸಮಾಜದಿಂದ ತಿರಸ್ಕರಿಸಲ್ಪಟ್ಟಂಥ ಮಹಿಳೆಯರಿಗೆ ಆಶ್ರಯ ಕೊಟ್ಟು, ತರಬೇತಿ ಕೊಟ್ಟು ಮತ್ತು ಅವರಿಗೆ ವೃತ್ತಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶಿಕ್ಷಣ ಕೊಟ್ಟು ಅವರನ್ನು ಸಮಾಜದಲ್ಲಿ ಉತ್ತಮ ವ್ಯಕ್ತಿಗಳನ್ನಾಗಿ ಮಾಡುವುದು ಈ ಇಲಾಖೆಯ ಗುರಿ. ಅಂತಹ ವ್ಯಕ್ತಿಗಳು ತಮ್ಮ ಕಾಲಿನ ಮೇಲೆ ತಾವು ನಿಂತು ಬಾಳ್ವೆ ಮಾಡುವ ತನಕ ಇಲಾಖೆ ಅವರಿಗೆ ರಕ್ಷಣೆ ಕೊಡಬೇಕಾಗುತ್ತದೆ. ರಿಮ್ಯಾಂಡ್ ಹೋಂಗಳು, ಮಹಿಳಾ ಮಂದಿರಗಳು, ಅಂಗನವಾಡಿಗಳು, ಬಾಲವಾಡಿಗಳು, ಮಹಿಳಾ ಸಮಾಜಗಳನ್ನು ಒಟ್ಟುಗೂಡಿಸಿ ರಾಜ್ಯಗೃಹಗಳನ್ನಾಗಿ ಇಲಾಖೆ ನಡೆಸಿಕೊಂಡು ಬರುತ್ತಿದೆ. ಚಿಲ್ಡ್ರನ್ಸ್ ಅಫೆಂಡರ್ಸ್ ಆಕ್ಟ್ ಪ್ರಕಾರ ಮಕ್ಕಳಿಗೆ ಕಾಯಿದೆ ಆಶ್ರಯದಲ್ಲಿ ನಡೆಯತಕ್ಕಂಥ ಪ್ರಾಮಾಣಿಕ ಶಾಲೆಗಳನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಬೇಕು, ಹೆಣ್ಣು ಮಕ್ಕಳಿಗೆ ಒಂದು, ಗಂಡು ಮಕ್ಕಳಿಗೆ ಒಂದು ಶಾಲೆ ಇರಬೇಕು. ಅಲ್ಲಿ ಕೊಡತಕ್ಕಂಥ ಶಿಕ್ಷಣ ಉತ್ತಮ ಮಟ್ಟದ್ದಾಗಿರಬೇಕು. ಪಬ್ಲಿಕ್ ಶಾಲೆಗಳ ಮಟ್ಟಕ್ಕೆ ಇವು ಬಂದರೆ ಉತ್ತಮ. ಇದು ಆಶ್ರಮ ಶಾಲೆಯಾದ್ದರಿಂದ, ಸರ್ಕಾರ ನಡೆಸುವುದರಿಂದ ಈ ಗುರಿ ಮುಟ್ಟಲಿಕ್ಕೆ ಸಾಧ್ಯವಾಗುತ್ತದೆ. ಕಳೆದ ಎರಡೂವರೆ ವರ್ಷದಿಂದ ಈ ಸರ್ಕಾರ ಇಂತಹ ಒಂದು ಶಾಲೆಯನ್ನೂ ತರಲೇ ಇಲ್ಲ. ಈ ಸೌಲಭ್ಯವನ್ನು ರಾಯಚೂರು, ಉತ್ತರ ಕನ್ನಡ, ತುಮಕೂರು ಜಿಲ್ಲೆಗಳಿಗೆ ವಿಸ್ತರಿಸಬೇಕು. ಪ್ರೊಬೇಷನ್ ಅಫೆಂಡರ್ಸ್ ಆಕ್ಟ್ ಕೇಂದ್ರದ ಕಾನೂನು. ಇದು ರಾಜ್ಯದಲ್ಲಿ ಜಾರಿಯಲ್ಲಿದೆ. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಪ್ರೊಬೇಷನ್ ಅಧಿಕಾರಿಗಳಿದ್ದಾರೆ. ಅವರ ಕೆಲಸ ಸಮರ್ಪಕವಾಗಿ ಆಗುತ್ತಾ ಇಲ್ಲ. ರಾಜ್ಯಮಟ್ಟದಲ್ಲಿ ಸಲಹಾ ಸಮಿತಿ ಇದ್ದು ಅದಕ್ಕೆ ಉಚ್ಚ ನ್ಯಾಯಾಧೀಶರು ಅಧ್ಯಕ್ಷರಾಗಿದ್ದಾರೆ. ಅವರು ಅನೇಕ ಸಲಹೆಗಳನ್ನು ಕೊಟ್ಟಾಗ್ಯೂ ಸಹ ಅದನ್ನು ತಿರಸ್ಕಾರ ಮಾಡಿ, ಕಸದಬುಟ್ಟಿಗೆ ಹಾಕಿದ್ದಾರೆ. ಉಚ್ಚನ್ಯಾಯಾಧೀಶರು ಅಧ್ಯಕ್ಷರಾಗಿರತಕ್ಕ ಸಮಿತಿಯ ಸಭೆಗೆ ಸದಸ್ಯರು, ನಿರ್ದೇಶಕರು ಹಾಜರಾಗಬೇಕು ಎಂದು ಹೇಳಿದರೂ ಇವರು ಹಾಜರಾಗಲಿಲ್ಲ. ಇದರಿಂದ ಉಚ್ಚ ನ್ಯಾಯಾಧೀಶರಿಗೆ ಬೇಜಾರಾಗಿ ಅವರು ಸಭೆಯನ್ನು ಕರೆಯುವ ಹವ್ಯಾಸವನ್ನೇ ಕೈಬಿಟ್ಟರು. ಆದ್ದರಿಂದ ಉಚ್ಚ ನ್ಯಾಯಾಧೀಶರು ಅಧ್ಯಕ್ಷರಾಗಿರತಕ್ಕ ಸಮಿತಿಯ ಸಭೆಗೆ ಹಾಜರಾಗದೇ ಇರತಕ್ಕ ಅಧಿಕಾರಿಗಳನ್ನು, ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರದೇ ಇರತಕ್ಕಂಥ ಅಧಿಕಾರಿಗಳನ್ನು ಸರ್ಕಾರ ತರಾಟೆಗೆ ತೆಗೆದುಕೊಳ್ಳಬೇಕು. ಅಂತಹವರಿಗೆ ಉಗ್ರ ಶಿಕ್ಷೆಯಾದರೆ ಮುಂದೆ ಬರತಕ್ಕವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾರೆ ಎನ್ನುವುದು ನನ್ನ ಅಭಿಪ್ರಾಯ. ಆಮೇಲೆ ಹಾಲು, ಬ್ರೆಡ್, ಯೋಜನೆಯನ್ನು ೧೯೭೧-೭೨ರಲ್ಲಿ ಹಿಂದಿನ ಸರ್ಕಾರ ಜಾರಿಗೆ ತಂದಿತ್ತು. ಆ ಸರ್ಕಾರ ಜನಪ್ರಿಯವಾದ ಈ ಯೋಜನೆಯನ್ನು ನಡೆಸಿಕೊಂಡು ಬಂತು ಈ ಸರ್ಕಾರ ಬಂದ ಮೇಲೆ ಇದನ್ನು ನಿಲ್ಲಿಸಿತು. ಇದಕ್ಕೆ ಬದಲಾಗಿ ಶಾಲೆಗಳಲ್ಲಿ ಕಲಿಯತಕ್ಕ ಮಕ್ಕಳಿಗೆ ಈ ಎನರ್ಜಿ ಫುಡ್‌ನ್ನು ತಯಾರು ಮಾಡಿದರು. ಆಮೇಲೆ ಆಡಳಿತದ ಮಟ್ಟದಲ್ಲಿ ಸರ್ಕಾರದ ನೀತಿಯನ್ನು ಬದಲಾಯಿಸಿ ಪೌಡರ್ ರೂಪದಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದರು. ಜಿಲ್ಲಾಮಟ್ಟದಲ್ಲಿ ಈ ಆಹಾರ ಸರಿ ಇಲ್ಲ ನಿಲ್ಲಿಸಿ, ಎಂದು ಹೇಳಿದರೂ ಕೂಡ ನಿರ್ದೇಶಕರು ಆ ಸಲಹೆಯನ್ನು ಬದಿಗೊತ್ತಿ, ತಮ್ಮ ದರ್ಪದ ಮೇಲೆ ಜನಪ್ರಿಯವಾದ ಈ ಯೋಜನೆಯನ್ನು ಕೈಬಿಟ್ಟಿದ್ದಾರೆ, ಇದು ವಿಷಾದ. ಸ್ವಾಮಿ, ಹಾಲು ಬ್ರೆಡ್ ಯೋಜನೆ ನಿಂತ ಮೇಲೆ ಜನತಾ ಸರ್ಕಾರ ಪುರಸಭೆಗಳ ಮತ್ತು ನಗರಸಭೆಗಳ ಚುನಾವಣೆಯಲ್ಲಿ ಸೋಲನ್ನು ಅನುಭವಿಸಬೇಕಾಯಿತು. ಪುರಸಭೆಗಳ ಮತ್ತು ನಗರಸಭೆಗಳ ಪ್ರದೇಶದಲ್ಲಿ, ಗಿರಿಜನರು ವಾಸಮಾಡತಕ್ಕ ಪ್ರದೇಶದಲ್ಲಿ ಈ ಜನಪ್ರಿಯವಾದ ಯೋಜನೆಯನ್ನು ಕೈಬಿಟ್ಟು ಎನರ್ಜಿ ಫುಡ್‌ನ್ನು ವಿತರಣೆ ಮಾಡಿದ್ದರಿಂದ ಆ ಚುನಾವಣೆಯಲ್ಲಿ ಸೋಲನ್ನು ಅನುಭವಿಸಬೇಕಾದ ಸ್ಥಿತಿ ಬಂತು.ಇ ದು ಕಟ್ಟುಕತೆಯಲ್ಲ. ನಾನು ಸರ್ಕಾರದ ಮೇಲಾಗಲಿ, ಪಕ್ಷದ ಮೇಲಾಗಲೀ ಆರೋಪ ಮಾಡುತ್ತಾ ಇಲ್ಲ, ಇದು ಸತ್ಯ. ಆಮೇಲೆ ಡೆಸ್ಟಿಟ್ಯೂಟ್ ಕಾಟೇಜ್‌ಸ್ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಡೆಸ್ಟಿಟ್ಯೂಟ್ ಕಾಟೇಜ್‌ಗಳನ್ನು ಸುಮಾರು ೮-೧೦ ವರ್ಷಗಳಿಂದ ನಡೆದುಕೊಂಡು ಬರುತ್ತಿವೆ. ಇಲ್ಲಿ ಊಟ, ವಸತಿ ಪಡೆದು ಶಾಲೆಯಲ್ಲಿ ಪಾಠ ಕಲಿಯತಕ್ಕ ಮಕ್ಕಳು ಇವೊತ್ತು ಬೀದಿಪಾಲಾಗಿದ್ದಾರೆ. ಏಕೆಂದರೆ, ಕಳೆದ ಎರಡು ವರ್ಷಗಳಿಂದ ನಿರ್ದೇಶಕರ ಕಚೇರಿಯಿಂದ ಸರಿಯಾಗಿ, ಸಕಾಲಕ್ಕೆ ಹಣ ದೊರೆಯುತ್ತಿಲ್ಲ ಬಹುಶಃ ಈ ವಿಷಯ ಸುಮಾರಾಗಿ ೧೯ನೇ ತಾರೀಖಿನ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದರಿಂದಾಗಿ ಅನೇಕ ಹಾಸ್ಟೆಲ್ಸ್ ಬಂದ್ ಆಗಿದೆ.

೬-೩೦ ಪಿ. ಎಂ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಎರಡು ಸಾವಿರ ಮಕ್ಕಳು ಈ ತೊಂದರೆಗೆ ಒಳಗಾಗಿದ್ದಾರೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅದರಂತೆ ಬಹಳ ಜಿಲ್ಲೆಗಳಲ್ಲಿ ಅನೇಕ ಖಾಸಗೀ ಸಂಸ್ಥೆಗಳು ಮತ್ತು ಅಲ್ಲಿನ ಮಕ್ಕಳೂ ಕೂಡ ತೊಂದರೆಗೆ ಒಳಗಾಗಿದ್ದಾರೆ. ೧೯೮೦-೮೧ನೇ ಸಾಲಿನಲ್ಲಿ ೩೫ ಲಕ್ಷಕ್ಕಿಂತ ಹೆಚ್ಚು ಹಣವನ್ನು ಲಾಸ್ ಮಾಡಿದ್ದಾರೆ. ಇದು ನಿರ್ದೇಶಕರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಉದ್ಧಟತನವಲ್ಲವೇ ? ಇದು ಅಕ್ಷಮ್ಯ ಅಪರಾಧ ಅಲ್ಲವೇ ? ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿದೆಯೇ ? ಇದರಿಂದ ಸರ್ಕಾರಕ್ಕೆ ಅಪವಾದ ಬರುವುದಿಲ್ಲವೇ ? ಇದರ ಬಗ್ಗೆ

ಸರ್ಕಾರ ಒಳಹೊಕ್ಕು ನೋಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ. ಇನ್ನು ಅಂಗನವಾಡಿಗಳ ಬಗ್ಗೆ ಹೇಳಬೇಕಾದರೆ, ಹಳ್ಳಿಗಾಡಿನಲ್ಲಿ ಇದು ವರ ಪ್ರಧಾನವಾಗಿ ಪರಿಣಮಿಸಿದೆ, ಈ ಯೋಜನೆಯ ಸೌಲಭ್ಯ ಪಡೆದುಕೊಳ್ಳದೇ ಇರತಕ್ಕಂತಹ ಹಳ್ಳಿಗಳೇ ಇಲ್ಲ. ಕೇಂದ್ರ ಸರ್ಕಾರ ಈ ಯೋಜನೆಗೆ ಸಹಾಯ ನೀಡತಕ್ಕಂತಹ ಉದ್ದೇಶದಿಂದ ೭೮ ತಾಲ್ಲೂಕುಗಳಲ್ಲಿ ೩೦ ಅಂಗನವಾಡಿಗಳನ್ನು ಜಾರಿಗೆ ತಂದಿತ್ತು. ಆದರೆ, ತಮ್ಮ ಆಡಳಿತ ಅವಧಿಯ ಎರಡೂವರೆ ವರ್ಷದಲ್ಲಿ ಇಂತಹ ಒಂದು ಯೋಜನೆಯನ್ನು ಕೂಡ ವಿಸ್ತರಿಸಲಿಲ್ಲ. ಕೇಂದ್ರದಿಂದ ಕೋಟಾವನ್ನು ಪಡೆದುಕೊಳ್ಳಲಿಕ್ಕೆ ನೀವು ವಿಫಲರಾಗಿದ್ದೀರಿ. ಇದಕ್ಕೆ ಜವಾಬ್ದಾರಿ ಯಾರು ? ಆಗಿನ ಸರ್ಕಾರ ಮಂಜೂರು ಮಾಡಿರತಕ್ಕಂತಹ ೩೦ ಅಂಗನವಾಡಿಗಳನ್ನು ಎಲ್ಲಾ ಹಳ್ಳಿಗಳಿಗೂ ವಿಸ್ತರಿಸಬೇಕೆಂದು ನಾನಾದರೂ ಕೂಡ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ ನಮ್ಮ ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ ವತಿಯಿಂದ ೨೮೦ ಅಂಗನವಾಡಿಗಳು ನಡೆಯುತ್ತಿವೆ. ಒಬ್ಬರು ಸಿ.ಡಿ.ಓ. ಇದ್ದಾರೆ. ೧೦೦ ಕೇಂದ್ರಕ್ಕೆ ಒಬ್ಬ ಸಿ.ಡಿ.ಓ. ಪೋಸ್ಟ್ ಇದ್ದರೂ ಕೂಡ ಕೆಲವು ಕಡೆ ಅದನ್ನು ಭರ್ತಿ ಮಾಡಿಲ್ಲ. ೨೦ ಅಂಗನವಾಡಿಗಳಿಗೆ ಒಬ್ಬ ಮಹಿಳಾ ಸೂಪರ್‌ವೈಸರ್ ಅನ್ನು ನೇಮಕ ಮಾಡಿಲ್ಲ, ಕೇವಲ ೮–೧೦ ಮಾಡಿದ್ದೀರಿ. ಸರ್ಕಾರದವರು ಇದರ ಬಗ್ಗೆ ಯೋಚನೆ ಮಾಡಬೇಕು ಹಾಗೂ ಅಡಿಷನಲ್ ಸಿ.ಡಿ.ಓ. ಪೋಸ್ಟ್ ಅನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂಗನವಾಡಿ ಕಾರ್ಯಕ್ರಮ, ಬಾಲವಾಡಿ ಯೋಜನೆ, ಮಕ್ಕಳ ಮತ್ತು ಮಹಿಳಾ ಕಾರ್ಯಕ್ರಮವಾಗಿರತಕ್ಕಂತಹ ಹೆರಿಗೆ ಭತ್ಯ, ವಿಧವಾ ಭತ್ಯೆ, ತಾಳಿ ಭಾಗ್ಯ ಮುಂತಾದ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತರಬೇಕಾದರೆ, ಪ್ರತಿಯೊಂದು ಹಂತದಲ್ಲೂ ಕೂಡ ಮಹಿಳಾ ಸ್ಥಾನಿಕ ವರ್ಗಗಳಿಗೆ, ಅದನ್ನು ಸೇರಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಜವಾಬ್ದಾರಿಯನ್ನು ಸ್ಥಾನಿಕ ವರ್ಗಗಳಿಗೆ ಸೇರಿಸಿದಾಗ, ಈ ಯೋಜನೆ ಪರಿಪೂರ್ಣವಾಗಿ ಯಶಸ್ವಿ ಯಾಗುತ್ತದೆಂಬ ಸಲಹೆಯನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಅಂಗನವಾಡಿ ಮಹಿಳಾ ಕಾರ್ಯಕರ್ತರ ಜಾಥಾವನ್ನು ನೋಡಿದರೆ, ಅವರ ಬೇಡಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅದು ಕೇವಲ ಆಡಳಿತದ ಕುಂದು ಕೊರತೆಗಳಿಂದೂ, ಹಾಗೂ ನಿರ್ದೇಶಕರ ದರ್ಪ, ಅಧಕ್ಷತೆ, ಭ್ರಷ್ಟಾಚಾರ ಮತ್ತು ಪಕ್ಷಪಾತ ಧೋರಣೆಯೇ ಕಾರಣವೆಂದು ಜಾಥಾ ಎತ್ತಿ ತೋರಿಸುತ್ತದೆ. ಅನುಭವವಿಲ್ಲದ ಕನ್ನಡ ಕಂಡರೆ ಮೂಗು ಮುರಿಯುವ ಮಹಿಳಾ ನಿರ್ದೇಶಕರನ್ನು ಅಲ್ಲಿಂದ ತೆಗೆದು ಹಾಕಬೇಕು. ಮತ್ತು ಹಳಿ ತಪ್ಪಿ ಹೋಗಿರತಕ್ಕಂತಹ ಇಲಾಖೆಯನ್ನು ಸರಿಯಾದ ದಾರಿಗೆ ತರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆ ಕೇವಲ ನಾಲ್ಕೈದು ವರ್ಷದಲ್ಲಿ ಬೀದರ್ ಜಿಲ್ಲೆಯಲ್ಲಿ ಜಾರಿಯಲ್ಲಿದೆ. ಯೂನಿಸೆಫ್, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣದ ವಿಷಯದ ಬಗ್ಗೆ ಹೆಚ್ಚು ಆದ್ಯತೆ ಕೊಟ್ಟು ಇದನ್ನು ಜಾರಿಗೆ ತಂದಿದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಒಂದು ಸೆಲ್ ಅನ್ನು ಮಂಜೂರು ಮಾಡಿದ್ದಾರೆ, ಈ ಸೆಲ್‌ನ ಅಧಿಕಾರ ವರ್ಗದವರ ಸೇವೆಯನ್ನು ಬೀದರ್ ಜಿಲ್ಲೆಗೆ ವರ್ಗಾಯಿಸಬೇಕೆಂದು ಅಲ್ಲಿಯ ಶಾಸಕರು ಅನೇಕ ಸಾರಿ ಕೇಳಿಕೊಂಡಾಗ್ಯೂ ಸಹ ನಿರ್ದೇಶಕರು ಅದಕ್ಕೆ ಮಾನ್ಯತೆ ಕೊಟ್ಟಿಲ್ಲ. ಈಗಾಗಲೇ ಅಲ್ಲಿ ಆಗಬೇಕಾಗಿರತಕ್ಕಂತಹ ಕೆಲಸ ಮತ್ತು ಸಾಧಿಸಬೇಕಾಗಿರತಕ್ಕಂತಹದ್ದು ಕುಂಠಿತವಾಗಿವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಯುನಿಸೆಫ್ ಸಹಾಯದಿಂದ ಒಂದು ವಿಶೇಷ ಘಟಕವನ್ನು ನೇಮಿಸಿದ್ದಾರೆ. ರಾಜ್ಯ ಮಟ್ಟದಲ್ಲಿ ನಡೆಯುತಕ್ಕಂತಹ ಈ ಎಲ್ಲಾ ಕೆಲಸಗಳನ್ನು ಈ ವಿಶೇಷ ಘಟಕಕ್ಕೆ ವಹಿಸಿ, ಈಗಲಾದರೂ ಹಠವನ್ನು ಬಿಟ್ಟು ಈ ಸೆಲ್ ಅನ್ನು ಬೀದರ್ ಜಿಲ್ಲೆಗೆ ವರ್ಗಾಯಿಸಬೇಕೆಂದು ಹೇಳುವುದಕ್ಕೆ ನಾನು ಇಷ್ಟ ಪಡುತ್ತೇನೆ. ಈ ಯೋಜನೆ ಮಂದಗತಿಯಲ್ಲಿ ನಡೆಯುತ್ತಿದ್ದು ಅಲ್ಲಿರತಕ್ಕಂತಹ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಇದರಿಂದ ಪ್ರಯೋಜನವಾಗುವುದಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನೊಂದು ಅತಿ ಮುಖ್ಯವಾಗಿರತಕ್ಕಂತಹ ವಿಷಯವೇನೆಂದರೆ, ಗ್ರಾಮೀಣ ಇಲಾಖೆಯಲ್ಲಿ ಯಾರೂ ನುರಿತವರಿಲ್ಲದೆ, ಅನುಭವ ಪಡೆದಿಲ್ಲವೋ, ಅಂತಹವರ ಕೈಗೆ ಈ ಆಡಳಿತ ಸಿಕ್ಕಿ ಗ್ರಾಮೀಣ ಇಲಾಖೆಯಿಂದ, ಸಮಾಜ ಕಲ್ಯಾಣ ಇಲಾಖೆಗೆ ಬಂದಿರತಕ್ಕಂತಹ ಮಹಿಳಾ ಸಿಬ್ಬಂದಿ ವರ್ಗದವರು ಮತ್ತು ಮುಖ್ಯ ಸೇವಕಿಯರು, ಗ್ರಾಮ ಸೇವಕಿಯರಿಗೆ ಪ್ರತ್ಯೇಕ ಸೀನಿಯಾರಿಟಿ ಮಾಡದೆ, ಬಡ್ತಿ ಕೊಡುವುದಕ್ಕೆ ತೊಂದರೆಯಾಗಿದೆ, ಎಷ್ಟೋ ಜನ ಮುಖ್ಯ ಸೇವಕಿಯರು ಬಿ.ಡಿ.ಓ. ಆಗಿ ಬಡ್ತಿ ಪಡೆಯುತ್ತಿದ್ದು, ಈಗ ಸಮಾಜ ಕಲ್ಯಾಣ ಇಲಾಖೆಗೆ ಬಂದು ತೊಂದರೆಗೆ ಒಳಗಾಗಿದ್ದಾರೆ. ಈ ವಿಷಯದಲ್ಲಿ ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಂಡು, ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಇಲಾಖೆಯ ಆಡಳಿತದ ಬಗ್ಗೆ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ಯಾರು ಈ ಇಲಾಖೆಯಲ್ಲಿ ಅರಿತು ನುರಿತವರು, ತರಬೇತಿ ಹೊಂದಿದ್ದಾರೆ, ಅಂತಹವರ ಕೈಗೆ ಈ ಅಧಿಕಾರವನ್ನು

ಕೊಡದೇ, ಬೇರೆ ಇಲಾಖೆಯಿಂದ ಎರವಲು ಪಡೆದು, ಅಂತಹವರನ್ನು ನಿರ್ದೇಶಕರನ್ನಾಗಿ ಮಾಡುವು ದರಿಂದ ಈ ಯೋಜನೆ ವಿಲಫವಾಗಿದೆಯೆಂದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ದಯವಿಟ್ಟು ಕೇಂದ್ರಸರ್ಕಾರದ ಸೂಚನೆಯಂತೆ ಯಾರು ಈ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳಿದ್ದಾರೆ, ಅವರನ್ನು ನಿರ್ದೇಶಕರನ್ನಾಗಿ ಮಾಡಿದರೆ, ಅವರು ಮಹಿಳಾ ಕಲ್ಯಾಣದ ಬಗ್ಗೆ ಉತ್ತಮವಾದ ಕೆಲಸ ಮಾಡಬಹು ದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ''ತಾಯಿಯೂ ಅಲ್ಲ, ಮಡದಿಯೂ ಅಲ್ಲ,'' ಅಂತಹವರ ಕೈಗೆ ಈ ಇಲಾಖೆ ಸಿಕ್ಕಿ ನರಳುತ್ತಿದೆ. ಯಾರು ಈ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿ ಅತಿ ಹೆಚ್ಚಿನ ಕೆಲಸವನ್ನು ಮಾಡಿಕೊಂಡು ಹೋಗಿರುತ್ತಾರೆ, ಅಂತಹವರನ್ನು ನಿರ್ದೇಶಕರನ್ನಾಗಿ ಮಾಡಿ ದಾಗ, ಇದರ ಆಡಳಿತ ಉನ್ನತ ಮಟ್ಟದಲ್ಲಿ ನಡೆಯುತ್ತದೆಂದು ನನ್ನ ಅಭಿಪ್ರಾಯವಾಗಿದೆ. ಇನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಗಳನ್ನು ಬಡತನದ ರೇಖೆಯಿಂದ ಮೇಲಕ್ಕೆ ಎತ್ತಲು ಕೇಂದ್ರ ಸರ್ಕಾರವು ಸಮಗ್ರ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ವಿಶೇಷ ಘಟಕವೊಂದನ್ನು ಯೋಜನೆ ಮಾಡಿದೆ. ಇದನ್ನು ೧೯೭೯–೮೦ರಲ್ಲಿ ಪ್ರಾರಂಭ ಮಾಡಿದೆ, ಈ ಯೋಜನೆಯಿಂದಾಗಿ, ೫.೩೦ ಲಕ್ಷ ಕುಟುಂಬವನ್ನು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯಲು ಗಮನಹರಿಸಿದ್ದಾರೆ. ೬ನೇ ಯೋಜನೆಯ ಅಂತಿಮ ವರ್ಷದಲ್ಲಿ ೨೮೮.೧೪ ಲಕ್ಷ ರೂಪಾಯಿಗಳು ವೆಚ್ಚವಾಗಿವೆ. ೭ನೇ ಯೋಜನೆ ಯಲ್ಲಿ ೪.೪ ಲಕ್ಷ ಕುಟುಂಬಗಳಿಗೆ ಆರ್ಥಿಕ ಸಹಾಯ ಒದಗಿಸತಕ್ಕಂತಹ ಗುರಿ ಇದೆ. ಅಂದಾಜು ಸುಮಾರು ೭೩೬.೭೯ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದಾಗ್ಯೂ, ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಸುಧಾರಿಸಿದ್ದಾರೆಯೇ ಎನ್ನತಕ್ಕಂತಹ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಂಡಾಗ, ನಾವು ನಿರೀಕ್ಷಿಸಿದಷ್ಟು ಸಮರ್ಪಕವಾಗಿ ಕೆಲಸವಾಗಿಲ್ಲ ವೆಂದು ಘಂಟಾಘೋಷವಾಗಿ ಹೇಳಬೇಕಾಗುತ್ತದೆ. ಈ ಯೋಜನೆ ಯಾವ ಹಂತದಲ್ಲಿ ವಿಫಲವಾಗಿದೆ ಎನ್ನುವುದನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಇಷ್ಟೊಂದು ಹಣವನ್ನು ಖರ್ಚು ಮಾಡಿ ತಾಲ್ಲೂಕು ಮಟ್ಟದಲ್ಲಿ ಕೇವಲ ಒಬ್ಬ ಸೆಕೆಂಡ್ ಡಿವಿಜನ್ ಕ್ಲರ್ಕ್‌ಅನ್ನು ವೆಲ್‌ಫೇರ್ ಇನ್ಸ್‌ಪೆಕ್ಟರ್ ಎಂದು ಕರೆದು ಅವರು ಇಷ್ಟೊಂದು ಹಣವನ್ನು ಖರ್ಚು ಮಾಡಬೇಕೆಂದು ಹೇಳಿದರೆ, ಈ ಕೆಲಸ ಸಾರ್ಥಕವಾಗುತ್ತದೆಯೇ ? ತಾಲ್ಲೂಕು ಮಟ್ಟದಲ್ಲಿ ಬಿ.ಡಿ.ಓ. ಕೈ ಕೆಳಗೆ ಸಮಾಜ ಕಲ್ಯಾಣ ಅಧಿಕಾರಿ ಕೆಲಸ ಮಾಡುವಾಗ, ಖಂಡಿತವಾಗಿ ಈ ಕೆಲಸ ಪರಿಪೂರ್ಣ ಯಶಸ್ವಿಯಾಗಿ ಮಾಡುವುದಕ್ಕಾಗುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ ಎರಡನೇ ದರ್ಜೆಯ ಅಧಿಕಾರಿಯನ್ನು ನೇಮಿಸಿ, ಅಲ್ಲಿ ಕಚೇರಿ ಮತ್ತು ಸಿಬ್ಬಂದಿ ವರ್ಗವನ್ನು ನೇಮಕ ಮಾಡುವ ಮೂಲಕ ಶಾಶ್ವತವಾಗಿ ಈ ಇಲಾಖೆಯನ್ನು ಸ್ಥಾಪನೆ ಮಾಡಬೇಕು ಮತ್ತು ಅವರ ಮುಖಾಂತರವಾಗಿ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವುದು ನನ್ನ ಉದ್ದೇಶವಾಗಿದೆ. ಇಷ್ಟೊಂದು ಕೋಟಿ ಹಣವನ್ನು ಖರ್ಚು ಮಾಡುವಾಗ ಸಿಬ್ಬಂದಿಗೆಂದು ಶೇಕಡ ೧ ಅಥವಾ ೨ರಷ್ಟನ್ನು ಇಡಬಹುದೆಂದು ಕೇಂದ್ರ ಸರ್ಕಾರದವರೂ ಕೂಡ ಹೇಳಿದ್ದಾರೆ. ಕೇವಲ ಸಣ್ಣ ಅಧಿಕಾರಿಯ ಮುಖಾಂತರವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಕಾರ್ಯಗಳನ್ನು ಮಾಡ ಬೇಕೆಂದು ನಿರೀಕ್ಷೆ ಮಾಡಿದರೆ, ತಪ್ಪಾಗುವುದಿಲ್ಲವೇ ? ಯಾವ ಅಧಿಕಾರಿಗಳಿಗೆ ಈ ಯೋಜನೆಯನ್ನು ಯಶಸ್ವಿಯಾಗಿ ಪೂರೈಸಬೇಕೆಂಬ ಕಳಕಳಿ ಇರುತ್ತದೆಯೋ ಅಂತಹ ಅಧಿಕಾರಿಗಳಿಗೆ ಈ ಇಲಾಖೆಯ ಅಧಿಕಾರವನ್ನು ಕೊಡಬೇಕು. ಈ ಇಲಾಖೆಯ ಇಂತಹ ಅಧಿಕಾರಿಗಳು ಮಹಿಳೆಯರಿಗೆ ಮತ್ತು ಮಕ್ಕಳಿಗೆ, ಅಂಗವಿಕಲರಿಗೆ, ಮನೋವಿಕಲರಿಗೆ, ಹಾರ್‌ಫನ್ಸ್ ಮುಂತಾದವರಿಗೆ ಸಿಗುವ ಸೌಲಭ್ಯ ವನ್ನು ತಪ್ಪಿಸಿದ್ದಾರೆಂದು ಖಂಡತುಂಡವಾಗಿ ಅವರ ಬಗ್ಗೆ ಟೀಕೆ ಮಾಡುತ್ತಿದ್ದೇನೆ. ಈ ಮನೋ ಭಾವವನ್ನು ನಿಲ್ಲಿಸಿ ಅಭಿವೃದ್ಧಿ ಕಾರ್ಯಗಳ ಕಡೆಗೆ ಗಮನಹರಿಸಿ ಯಾವ ಜಾಗದಿಂದ ಈ ಯೋಜನೆ ಕಾರ್ಯ ಗತವಾಗಬೇಕೋ, ಆ ಜಾಗದಲ್ಲಿ ಸಮರ್ಥರಾದಂತಹ ದಕ್ಷತೆ ಇರತಕ್ಕಂತಹ ಅಧಿಕಾರಿಗಳನ್ನು ನೇಮಿಸುವ ಮೂಲಕ ಸಮಾಜಕ್ಕೆ ಸೌಲಭ್ಯ ದೊರಕುವ ರೀತಿಯಲ್ಲಿ ಮಾಡಬೇಕೆಂದು ಸಲಹೆ ಕೊಡುತ್ತೇನೆ. ಈ ಯೋಜನೆ ಬಗ್ಗೆ ಇನ್ನೂ ಅನೇಕ ವಿಷಯಗಳನ್ನು ಗಂಟೆಗಟ್ಟಲೆ ಮಾತನಾಡಲು, ನನ್ನ ಹತ್ತಿರ ಮಾಹಿತಿಯಿದ್ದರೂ ಕೂಡ, ಹೆಚ್ಚಿನ ಕಾಲಾವಕಾಶವನ್ನು ಕೊಡದೇ ಇರುವುದರಿಂದ, ಕೊನೆಯದಾಗಿ, ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಕಳೆದ ಸಾರಿ ೧೯೮೪–೮೫ರಲ್ಲಿ ಎಷ್ಟು ಹಣವನ್ನು ಸರ್ಕಾರ ಕೊಟ್ಟಿತ್ತು, ಅಷ್ಟು ಹಣವನ್ನು ೧೯೮೫–೮೬ರಲ್ಲಿ ಕೊಟ್ಟಿಲ್ಲ. ನಾನೂ ಮತ್ತು ನಿರ್ದೇಶಕರು ಅನೇಕ ಹಳ್ಳಿಗಳಿಗೆ ಹೋಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೆಲವು ಕಾರ್ಯಕ್ರಮವನ್ನು ಮಾಡಿಕೊಡುತ್ತೇವೆಂಬ ವಾಗ್ದಾನ ಕೊಟ್ಟಿದ್ದೆವು. ಜನಗಳೂ ಕೂಡ ನಮ್ಮ ಮಾತನ್ನು ನಂಬಿಕೊಂಡರು, ಆ ನಂತರ ನಿರ್ದೇಶಕರು ತಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಕೈ ಎತ್ತಿ ೮ಕೋಟಿ ಕಡಿಮೆಯಿದೆಯೆಂದು ಹೇಳಿದರು. ನಾನು ಆ ಹಳ್ಳಿಯ ಜನರಿಗೆ ಮುಖ ತೋರಿಸಬೇಕೆಂದರೆ ಹೇಗೆ ? ಈ ರೀತಿ ಮಾಡ ತಕ್ಕಂಥಾದ್ದು ಸರಿಯೇ ? ನಿರ್ದೇಶಕರನ್ನು ಕೇಳಿದರೆ ಸರ್ಕಾರ ಹಣ ಕೊಟ್ಟಿಲ್ಲವೆಂದು ಹೇಳುತ್ತಾರೆ. ಹರಿಜನರ ಹಾಸ್ಟೆಲ್‌ಗಳನ್ನು ಮಂಜೂರು ಮಾಡುವುದಕ್ಕಾಗುವುದಿಲ್ಲವೆಂದು ಕೈ ಎತ್ತಿದರು. ಕೇಂದ್ರ

ದಿಂದ ಬರತಕ್ಕಂತಹ ಧನ ಸಹಾಯ ಏನಿದೆ, ಅದರ ಬಗ್ಗೆ ವ್ಯವಸ್ಥೆ ಮಾಡಿ ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕೆಂದು ಕೇಳಿಕೊಂಡು, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರಾದ ಬೀಳಗಿಯವರು ಮಾತನಾಡಬೇಕು.

ಶ್ರೀ ಬೀಳಗಿ.—ಅಧ್ಯಕ್ಷರೆ, ನನಗೆ ಸಮಯ ಹೆಚ್ಚು ಬೇಕಾಗುತ್ತದೆ. ತಾವು ಅವಕಾಶ ಕಡಿಮೆ ಕೊಟ್ಟರೆ ವಿಚಾರ ಪೂರ್ಣ ಹೇಳಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ನನ್ನದೇನೂ ತಕರಾರು ಇಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಮುಗಿಸಬೇಕಾದ್ದು ನನ್ನ ಕರ್ತವ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕರ್ತವ್ಯ ಎಂದು ಹೇಳಿ, ಈ ಡಿಪಾರ್ಟ್‌ಮೆಂಟ್ ನಾವು ಬಗ್ಗೆ ಜಸ್ಟಿಫೈ ಮಾಡದೇ ಹೋದರೆ ಹೇಗೆ ? ಬೆಳಿಗ್ಗೆ ೯ ಗಂಟೆಗೆ ಬಂದು ರಾತ್ರಿ ೯ ಗಂಟೆಯವರೆಗೆ ಸಭೆ ನಡೆಸಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ನಿನ್ನೆಯ ದಿವಸ ಆಗಿದ್ದಂಥ ವಿಚಾರನ್ನು ಹೇಳುತ್ತೇನೆ. ಗುರುವಾರ ಘಟನೆಯಾದ ಬಗ್ಗೆ ರಜೆ ಆದನಂತರ ಸಭಾನಾಯಕರು, ವಿರೋಧಪಕ್ಷದ ನಾಯಕರು, ಎಂ.ಎಸ್. ಕೃಷ್ಣನ್‌ರವರು, ಕೆ.ಎಚ್. ಪಾಟೀಲರು ಎಲ್ಲಾ ಸೇರಿದಾಗ ನಾಳೆ ಎಷ್ಟು ಹೊತ್ತು ಆದರೂ ಅಪ್ರೋಪ್ರಿಯೇಷನ್ ಬಿಲ್ ಮುಗಿಸಬೇಕೆಂದು ತೀರ್ಮಾನ ಆಗಿದೆ. ನನ್ನ ಕರ್ತವ್ಯ ಏನು ಎಂದರೆ ಹಿರಿಯ ಸದಸ್ಯರು ಹೇಳಿದ ಹಾಗೆ ನನ್ನ ಕರ್ತವ್ಯಕ್ಕಾಗಿ ನಾನು ಕುಳಿತಿದ್ದೇನೆ. ಆದ್ದರಿಂದ, ಮಾನ್ಯ ಸದಸ್ಯರು ದಯಮಾಡಿ ಸಹಕಾರ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ನಾವು ಇಲ್ಲಿ ಏನಾದರೂ ಸ್ವಲ್ಪ ಮಾತನಾಡಿಕೊಂಡು ಹೋಗಲಿಕ್ಕೆ ಬಂದಿಲ್ಲ. ಇವೊತ್ತು ಬೆಳಿಗ್ಗೆ ೯ ಗಂಟೆಗೆ ಬಂದಿದ್ದು ಇಲ್ಲಿಯವರೆಗೂ ಕುಳಿತಿದ್ದೇವೆ. ಈಗ ಸಭೆ ಮುಂದುವರಿಸಿ ನಾಳೆ ಬೆಳಿಗ್ಗೆ ೯ ಗಂಟೆಗೆ ಬೇಕಾದರೂ ಸಭೆ ಕರೆಯಿರಿ. ಇನ್ನು ಐದಾರು ಜನ ಸದಸ್ಯರು ಬ್ಯಾಕ್‌ವರ್ಡ್ ಕ್ಲಾಸ್‌ನ ಬಗ್ಗೆ ಮಾತನಾಡುವವರು ಇದ್ದಾರೆ. ಅವರೆಲ್ಲರಿಗೂ ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಇವೊತ್ತು ಎಲ್ಲಾ ಮುಗಿಸಲಿಕ್ಕೆ ಆಗುತ್ತದೆಯೋ, ಇಲ್ಲವೋ ? ಕಡೇಪಕ್ಷ ಇವೊತ್ತು ಡಿಸ್‌ಕಷನ್ ಮುಗಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಮುಗಿಸಲೇ ಬೇಕಾಗಿಲ್ಲ. ಓಟಿಗೆ ಹಾಕಿ ಮುಗಿಸೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ನಾವು ಪ್ರತಿದಿವಸ ಲೇಟ್ ಆಗಿ ಕುಳಿತುಕೊಳ್ಳುತ್ತಿದ್ದೇವೆ. ಇವೊತ್ತು ಏನು ಡಿಮ್ಯಾಂಡ್‌ಗಳು ಇವೆ ಆ ಡಿಮ್ಯಾಂಡ್‌ಗಳ ಬಗ್ಗೆ ಡಿಸ್‌ಕಷನ್ ಆಗಿ ಅದಕ್ಕೆ ಉತ್ತರ ಕೊಟ್ಟು ಅವು ಪಾಸ್ ಆಗಬೇಕೆಂದು ನಿನ್ನೆಯ ದಿವಸ ಒಪ್ಪಿಕೊಂಡು ಇವೊತ್ತು ಬೆಳಿಗ್ಗೆ ೯ ಗಂಟೆಯಿಂದ ಕುಳಿತುಕೊಂಡಿದ್ದೇವೆ. ಟೈಮ್ ಆಗಿದೆ ಎಂದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಸಭಾನಾಯಕರು, ವಿರೋಧಪಕ್ಷದ ನಾಯಕರು. ಎಲ್ಲರೂ ಸೇರಿದಾಗ ಇವೊತ್ತಿಗೆ ಇದು ಮುಗಿಸಬೇಕೆಂದು ತೀರ್ಮಾನವಾಗಿತ್ತು. ಆ ತೀರ್ಮಾನದ ಪ್ರಕಾರ ಹೋಗುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾಳೆ ಡಿಸ್‌ಕಷನ್ ಬೇಡ ಅಂದರೆ, ಬೆಳಿಗ್ಗೆ ೯ ಗಂಟೆಗೆ ಸಭೆ ಸೇರಿಸಿ, ಎರಡು ಗಂಟೆಗಳ ಕಾಲ ಚರ್ಚೆ ನಡೆಯಲಿ ಅನಂತರ ಉತ್ತರ ಕೊಡಬಹುದು. ಇದು ಇಂಪಾರ್‌ಟೆಂಟ್ ಸಬ್ಜೆಕ್ಟ್ ಇದೆ. ಅದ್ದರಿಂದ ನಾನು ರಿಕ್ವೆಸ್ಟ್ ಮಾಡುತ್ತಿದ್ದೇನೆ. ಈಗ ಮಾನ್ಯ ಸಭಾ ನಾಯಕರು ಬಂದಿದ್ದಾರೆ, ಅವರೂ ಕೂಡ ಇದನ್ನು ಒಪ್ಪುತ್ತಾರೆ. ಸೋಷಿಯಲ್ ವೆಲ್‌ಫೇರ್ ಮತ್ತು ಬ್ಯಾಕ್‌ವರ್ಡ್‌ಕ್ಲಾಸಸ್ ಸಬ್ಜೆಕ್ಟ್ ಬಹಳ ಮುಖ್ಯವಾದ ಸಬ್ಜೆಕ್ಟ್‌ಗಳು. ಅದರ ಬಗ್ಗೆ ಇನ್ನೂ ಐದಾರು ಜನ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಆದ್ದರಿಂದ, ನಾಳೆ ಬೆಳಿಗ್ಗೆ ೯ ಗಂಟೆಗೆ ಸಭೆ ಸೇರಿದರೆ ಎರಡು ತಾಸು ಚರ್ಚೆ ಮಾಡಿ ಅನಂತರ ಉತ್ತರ ಕೊಡಬಹುದು.

ಶ್ರೀ ಧರ್ಮಸಿಂಗ್.—ನಾಳೆ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಿ ಕಳುಹಿಸಬಹುದು.

ಶ್ರೀ ಲಕ್ಷ್ಮೀಸಾಗರ್.—ನಿನ್ನೆ ತಾವು ಒಪ್ಪಿಕೊಂಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿನ್ನೆ ಒಪ್ಪಿಕೊಂಡಿದ್ದು ನಿಜ. ಎರಡು ಗಂಟೆಯವರೆಗೆ ರಿಪ್ಲೈ ಆದುದರಿಂದ ತಡವಾಗಿದೆ. ಈಗ ಎಸ್.ಸಿ. ಮತ್ತು ಎಸ್.ಟಿ. ಬಗ್ಗೆ ವಿಚಾರ ಪ್ರಸ್ತಾಪ ಮಾಡಬೇಕಾಗುತ್ತದೆ. ಆದ್ದರಿಂದ, ನಾಳೆ ಬೆಳಿಗ್ಗೆ ೯ ಗಂಟೆಗೆ ಕುಳಿತು ಚರ್ಚೆ ಮಾಡಿದರೆ ಅನಂತರ ಉತ್ತರ ಹೇಳಬಹುದು. ನಾಳೆ ಒಂದು ಗಂಟೆಯೊಳಗೆ ಬಿಲ್ ಪಾಸ್ ಮಾಡಿ ಕಳುಹಿಸಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ನಿನ್ನೆಯು ದಿವಸ ತೀರ್ಮಾನ ಮಾಡಿತ್ತು. ಮೊದಲಿನಿಂದಲೂ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ತೀರ್ಮಾನ ಆಯಿತು ಅದರಂತೆ ಕಾರ್ಯಕ್ರಮ ಇಲ್ಲಿ ನಡೆಯಲಿಲ್ಲ ಕೆಲವು ಸಂದರ್ಭದಲ್ಲಿ ತಡೆ ಆಗುತ್ತದೆ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ, ಮಹತ್ವವಾದಂಥ ವಿಚಾರಗಳು ಇಲ್ಲಿ ಪ್ರಸ್ತಾಪಕ್ಕೆ ಬಂದಾಗ ನಾವು ಲೆಕ್ಕ ಹಾಕಿದ್ದಕ್ಕಿಂತಲೂ ಹೆಚ್ಚು ಸಮಯ ಖರ್ಚಾಗುತ್ತದೆ. ಆದರೆ ಪ್ರತಿ ದಿವಸ ಅದೇ ರೀತಿ ಆಗತಕ್ಕದ್ದು ಸರಿಯಲ್ಲ.

ಶ್ರೀ ಧರ್ಮಸಿಂಗ್.—ಇವೊತ್ತೇ ಕೊನೆಯ ದಿವಸ ಅಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇವೊತ್ತು ಎರಡು ಗಂಟೆಯವರೆಗೆ ಉತ್ತರ ಆಯಿತು. ಅದು ಒಂದು ದೃಷ್ಟಿಯಿಂದ ನಿಜ. ನಾನು ಮಾತು ಮುಗಿಸಿ ಇಲ್ಲಿ ಕುಳಿತುಕೊಂಡಾಗ ೧ ಗಂಟೆ ೩೦ ನಿಮಿಷ ಆಗಿತ್ತು. ನಾನು ಮಾತನಾಡಿದ್ದು ಎಷ್ಟು ? ಬೆಳಿಗ್ಗೆ ೯ ಗಂಟೆಯಿಂದ ೨ ಗಂಟೆಯವರೆಗೆ ಮಾತನಾಡಿದೆನೇನು ? ನಾನು ಮಾತನಾಡಿದ್ದು ಲೆಕ್ಕ ಹಾಕಿದರೆ ೬೦ ನಿಮಿಷಕ್ಕಿಂತಲೂ ಹೆಚ್ಚು ತೆಗೆದುಕೊಂಡಿಲ್ಲ, ಕಡಿಮೆ ತೆಗೆದುಕೊಂಡಿರಬಹುದು. ಇಲ್ಲಿ ಪತ್ರಿಕಾಕರ್ತರು ಏನು ಕುಳಿತುಕೊಂಡಿದ್ದಾರೆ ಅವರು ನನಗೆ ಒಂದು ಮಾತು ಹೇಳಿದರು. ನಾವು ಒಂದು ಲೆಕ್ಕಮಾಡಿ ಇಟ್ಟಿದ್ದೇವೆ, ಸುಮಾರು ೧೫ ನಿಮಿಷದಲ್ಲಿ ತಮಗೆ ೨೨ ಸಾರಿ ಇಂಟರ್‌ಪ್‌ಷನ್ ಆಯಿತು, ಅಷ್ಟು ಮಾತ್ರ ಲೆಕ್ಕಮಾಡಿ ಇಟ್ಟಿದ್ದೇವೆ ಅನಂತರ ಲೆಕ್ಕ ಇಡಲಿಕ್ಕೆ ಆಗಲಿಲ್ಲ ಎಂದು ಹೇಳಿದರು. ಸಮಯ ಹೆಚ್ಚು ಖರ್ಚು ಆಗಿದ್ದರೆ ಏತಕ್ಕೆ ಎಂದು ಹೇಳಬೇಡವೇ. ನಮಗೆ ಇರತಕ್ಕ ತೊಂದರೆ ಹೇಳುತ್ತೇವೆ. ೧೨ನೇ ತಾರೀಖಿನೊಳಗೆ ಇದು ಮುಗಿಯಬೇಕೆಂದು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇವೊತ್ತು ಎಲ್ಲಾ ಡಿಮ್ಯಾಂಡ್ ಮೇಲೆ ಚರ್ಚೆ, ಉತ್ತರ ನಂತರ ಅಪ್ರೋಪ್ರಿಯೇಷನ್ ಬಿಲ್ ಮೇಲೆ ಓಟಿಂಗ್ ಆಗಬೇಕು. ಅಪ್ರೋಪ್ರಿಯೇಷನ್ ಬಿಲ್ ನಾಳೆ ಆ ಮನೆಯಲ್ಲಿ ಬರಬೇಕು. ಕೌನ್ಸಿಲ್‌ನಲ್ಲಿ ಸ್ವಲ್ಪ ತಡ ಮಾಡಿದರೆ, ಅಲ್ಲಿ ಹಿಂದೆ ಮುಂದೆ ಆದರೆ ೧೪ ದಿವಸ ಕ್ಲೀಯರ್ ಅವಧಿಯು ಬೇಕಾಗುತ್ತದೆ. ಅದನ್ನು ಲೆಕ್ಕ ಹಾಕಿಕೊಂಡೇ ತೀರ್ಮಾನ ಮಾಡಿದ್ದೇವೆ, ಇದು ಹೊರತಾಗಿ ಮೂರು ಬಿಲ್ಲುಗಳು ಇವೆ. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಇದೆ. ೧೦ನೇ ತಾರೀಖಿಗೆ ಸಪ್ಲಿಮೆಂಟರಿ ಡಿಮ್ಯಾಂಡ್, ಮೂರು ಬಿಲ್ಲುಗಳು ಪಾಸ್ ಆಗಬೇಕಾಗಿತ್ತು. ಇನ್ನು ೧೧ನೇ ತಾರೀಖು, ೧೨ನೇ ತಾರೀಖು ಇತರೆ ಎಲ್ಲಾ ಮುಗಿಯಬೇಕೆಂದು ತೀರ್ಮಾನವಾಗಿದೆ. ಈ ತೀರ್ಮಾನದ ಪ್ರಕಾರ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆಯವರೆಗೆ ಚರ್ಚೆ ಮಾಡುವುದು, ೧೦ ಗಂಟೆಗೆ ಉತ್ತರ ಪ್ರಾರಂಭ ಮಾಡಿ, ೧೧ ಗಂಟೆಗೆ ಮುಗಿಸೋಣ ಎಂದು ಇಟ್ಟುಕೊಳ್ಳೋಣ. ನಾಳೆ ವಿರೋಧ ಪಕ್ಷದ ನಾಯಕರು ಬಂದು ಇದು ನನಗೆ ಗೊತ್ತಿಲ್ಲ, ಹಿಂದಿನ ತೀರ್ಮಾನ ಏನಾಯಿತು ಎಂದರೆ ನಾವು ಏನು ಮಾಡೋಣ ? ಆ ತರಹದ್ದು ಆಗಿದೆ. ನನ್ನ ಅನುಭವದ ಆಧಾರದ ಮೇಲೆ ಈ ಮಾತನ್ನು ಹೇಳುತ್ತಿದ್ದೇನೆ. ನೀವು ಇಬ್ಬರೂ ಸಂಭಾವಿತರು ಎಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಪ್ರತಿಯೊಂದು ಸ್ಟೇಟ್‌ಮೆಂಟ್ ಹೀಗೆಮಾಡುತ್ತಿದ್ದೀರಿ. ನನಗೆ ಗೊತ್ತುಂಟು, ಬಹಳ ದಿವಸಗಳಿಂದ ಸದನದಲ್ಲಿ ಕುಳಿತು ಕುಳಿತು ಬಹಳ ಬೇಸರ ಬಂದಿದೆ. ನಮ್ಮ ಪಕ್ಷದವರು ಇದರಲ್ಲಿ ಬಹಳ ಜನ ಮಾತನಾಡುವವರು ಇದ್ದರೂ ಕೂಡ, ಅವರಿಗೆ ಅವಕಾಶ ಸಿಕ್ಕಿಲ್ಲ. ಬೆಳಿಗ್ಗೆ ೯ ಗಂಟೆಯಿಂದ ರಾತ್ರಿ ೭, ೮ ಗಂಟೆಯವರೆಗೆ ಕುಳಿತರೆ ಯಾರಿಗೆ ತಾನೇ ಬೇಸರವಾಗುವುದಿಲ್ಲ ? ಒಂದು ಸೂಚನೆಯನ್ನು ತಾವು ಒಪ್ಪುವುದಾದರೆ, ಇವತ್ತು ಇದನ್ನು ಮುಗಿಸೋಣ. ನಾಳೆ ಬೆಳಗ್ಗೆ ೯ ಗಂಟೆಗೆ ಸದನ ಸೇರಿ, ೧೧–೩೦ಕ್ಕೆ ಉತ್ತರ ಸಹಿತ ಚರ್ಚೆಯನ್ನು ಮುಗಿಸಬೇಕು. ೧೨ ಗಂಟೆಯೊಳಗೆ ವೋಟಿಂಗ್ ಕೂಡ ಆಗಿ, ಅಪ್ರೋಪ್ರಿಯೇಷನ್ ಮೇಲೆ ಚರ್ಚೆಯಾಗಿ, ಅದೂ ಕೂಡ ಪಾಸಾಗಬೇಕು. ಇದಕ್ಕೆ ಆ ಕಡೆಯ ಮುಖ್ಯ ಸಚೇತಕರೇ ಸಾಕ್ಷಿ. ಹೆಚ್ಚು ಕಡಿಮೆಯಾದರೆ ಅವರನ್ನು ಹಿಡಿಯುತ್ತೇವೆ. ಇದರ ಜೊತೆಗೆ, ೩ ಬಿಲ್ಲುಗಳೂ ಪಾಸಾಗಬೇಕಾಗಿವೆ. ಒಂದು ಶಾಸಕರ ಸಂಬಳಸಾರಿಗೆಗೆ ಸಂಬಂಧಪಟ್ಟ ಇನ್ನೆರಡು ಸಣ್ಣ ಸಣ್ಣ ಬಿಲ್ಲುಗಳು. ಇದಕ್ಕೆ ಒಪ್ಪಿಕೊಂಡರೆ ನಾಳೆ ಬೆಳಗ್ಗೆ ೯ ಗಂಟೆಗೆ ಸೇರೋಣ. ಯಾವ ರೀತಿಯಲ್ಲೂ ತಾವು ಆತಂಕ ಮಾಡಕೂಡದು.

ಅಧ್ಯಕ್ಷರು.—ಈ ಸೂಚನೆಯನ್ನು ಎರಡೂ ಕಡೆಯ ಪಕ್ಷದವರು ಒಪ್ಪುತ್ತೀರಾ ?

ಶ್ರೀ ಎಂ ಎಸ್. ಪಾಟೀಲ್.—ಆಗಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಮತ್ತೆ ಏನಾದರೂ ವ್ಯತ್ಯಾಸವಾದರೆ ಪ್ರಿವಿಲೇಜ್ ಇಷ್ಯೂ ಮಾಡ ಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಕೊಂಕು ಮಾತುಗಳಿಂದ ಚುಚ್ಚಿ ಚುಚ್ಚಿ ಮಾತನಾಡುವು ದನ್ನು ನಿಲ್ಲಿಸಿದರೆ, ಬೇಗ ಆಗುತ್ತದೆ. ನೀವು ದೊಡ್ಡ ಅಧಿಕಾರದಲ್ಲಿರುವುದರಿಂದ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿರುವುದರಿಂದ ಚುಚ್ಚಿ ಮಾತನಾಡುವುದನ್ನು ಕಡಿಮೆ ಮಾಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಚುಚ್ಚಿಸಿಕೊಂಡವರಿಗೆ ಚುಚ್ಚತಕ್ಕ ಅಧಿಕಾರವಿದೆ, ಪ್ರಾಮಾಣಿಕ ವಾಗಿ ಮಲ್ಲಿಕಾರ್ಜುನ ಖರ್ಗೆಯವರಾಗಲೀ, ಧರ್ಮಸಿಂಗ್‌ರವರಾಗಲೀ ನಾನು ತಪ್ಪು ಮಾತನಾಡಿ ದ್ದೇನೆ ಎಂದು ಹೇಳಲಿ.

ಅಧ್ಯಕ್ಷರು.—ಸಭೆಯು ಈಗ ಎದ್ದು ನಾಳೆ ಬೆಳಗ್ಗೆ ೯ ಗಂಟೆಗೆ ಸಮಾವೇಶಗೊಳ್ಳಲಿದೆ.

(ಸಭೆಯು ರಾತ್ರಿ ೬ ಗಂಟೆ ೪೫ ನಿಮಿಷಕ್ಕೆ ಮುಂದುವರಿದು ನಾಳೆ ಬೆಳಿಗ್ಗೆ ೯ ಗಂಟೆಗೆ ಸಮಾವೇಶ ಗೊಳ್ಳುವುದು)